ಕರ್ನಾಟಕ ಸರ್ಕಾರ

# 2014–15 ರಿಂದ 2016–17ನೇ ಸಾಲಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಸಾಹಿತ್ಯಪರ, ಸಾಂಸ್ಕೃತಿಕಪರ ಮತ್ತು ಕನ್ನಡಪರ ಕಾರ್ಯಕ್ರಮಗಳಿಗೆ ನೀಡಿದ ಪ್ರೋತ್ಸಾಹ ಧನವನ್ನು ಸಂಘಸಂಸ್ಥೆಗಳು ಸದ್ಬಳಕೆ ಮಾಡಿಕೊಂಡಿರುವುದರ ಬಗ್ಗೆ ಮೌಲ್ಯಮಾಪನ

ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ
Karnataka Evalution Authority

ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ

ಕರ್ನಾಟಕ ಸರ್ಕಾರ

ಅಕ್ಟೋಬರ್ –2020

# 2014–15 ರಿಂದ 2016–17ನೇ ಸಾಲಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಸಾಹಿತ್ಯಪರ, ಸಾಂಸ್ಕೃತಿಕಪರ ಮತ್ತು ಕನ್ನಡಪರ ಕಾರ್ಯಕ್ರಮಗಳಿಗೆ ನೀಡಿದ ಪ್ರೋತ್ಸಾಹ ಧನವನ್ನು ಸಂಘಸಂಸ್ಥೆಗಳು ಸದ್ಬಳಕೆ ಮಾಡಿಕೊಂಡಿರುವುದರ ಬಗ್ಗೆ ಮೌಲ್ಯಮಾಪನ

**ಪ್ರಧಾನ ಶೋಧಕರು**
**ಡಾ. ಎಂ. ಸಿದ್ದಪ್ಪ**

**ಹೈದರಾಬಾದ್ ಕರ್ನಾಟಕ ಸೆಂಟರ್ ಫಾರ್ ಅಡ್ವಾನ್ಸ್ಡ್ ಲರ್ನಿಂಗ್,**
**ಕಲಬುರಗಿ**

**ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು**

ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ
Karnataka Evalution Authority

**ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ**
**ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ**
**ಕರ್ನಾಟಕ ಸರ್ಕಾರ**
**ಅಕ್ಟೋಬರ್ –2020**

**© ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ 2020**

**ಪ್ರಕಟಣೆ**

**ಇವರಿಗಾಗಿ,**
ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ,
#542, 5ನೇ ಮಹಡಿ, 2ನೇ ಹಂತ,
ಬಹುಮಹಡಿ ಕಟ್ಟಡ, ಡಾ. ಅಂಬೇಡ್ಕರ್ ವೀಧಿ
ಬೆಂಗಳೂರು–560 001

**ಇವರಿಂದ**
ಹೈದರಾಬಾದ್ ಕರ್ನಾಟಕ ಸೆಂಟರ್ ಫಾರ್ ಅಡ್ವಾನ್ಸ್ಡ್ ಲರ್ನಿಂಗ್ ,
**#10–2–152, ಪರ್ವನ ಕಾಲೋನಿ, 5ನೇ ಮಹಡಿ,**
**ಸಂಗಮೇಶ್ವರ ನಗರ,**
**ಕಲಬುರಗಿ–585 103**

**ಅಕ್ಷರ ಜೋಡಣೆ ಮತ್ತು ಮುದ್ರಣ**
ಎಸ್. ಪಿ. ಸಿ. ಎಂಟರ್‌ಪ್ರೈಸಸ್,
#36, ಎನ್ ಎಸ್ ಐಯಂಗಾರ್ ರಸ್ತೆ,
ಶೇಷಾದ್ರಿಪುರಂ, ಬೆಂಗಳೂರು–560 020
srislm666@gmail.com

# ಮುನ್ನುಡಿ

ಭಾರತದ ಅದ್ವಿತೀಯ ಸಂಸ್ಕೃತಿಗೆ ಕರ್ನಾಟಕದ ಕೊಡುಗೆ ಇತರ ಯಾವ ವಲಯಗಳಿಗೂ ಕಡಿಮೆಯೇನಿಲ್ಲ. ಕರ್ನಾಟಕವು ಶ್ರೀಮಂತ ಸಂಸ್ಕೃತಿಯ ಪರಂಪರೆಯನ್ನು ಹೊಂದಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕರ್ನಾಟಕದಲ್ಲಿನ ಕಲೆ, ಸಾಹಿತ್ಯ, ಮತ್ತು ಸಂಸ್ಕೃತಿಯು ಕನ್ನಡ ಭಾಷೆ, ನಾಡು-ನುಡಿ, ಕಲೆ-ಸಾಹಿತ್ಯ, ಜಾನಪದ ಕಲಾಪ್ರಕಾರಗಳನ್ನ, ಕಲಾವಿದರನ್ನ, ಸಂಗೀತ, ನೃತ್ಯ, ಚಿತ್ರಕಲೆ ಮತ್ತು ಸಂಸ್ಕೃತಿಯನ್ನ ಉಳಿಸಿ ಬೆಳಸಲು ಮತ್ತು ಅವುಗಳ ಸಂವರ್ಧನೆಗೆ ಧನಸಹಾಯವನ್ನು ನೀಡಿ ಪ್ರೋತ್ಸಾಹಿಸುತ್ತಾ ಬಂದಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕಾರ್ಯಕ್ರಮಗಳಿಗೆ ಧನ ಸಹಾಯ ನೀಡುವಾಗ ಸಮಾಜದಲ್ಲಿನ ಎಲ್ಲಾ ವರ್ಗದವರನ್ನು ಪರಿಗಣಿಸುವ ಉದ್ದೇಶದಿಂದ ಸಂಘ-ಸಂಸ್ಥೆಗಳಿಗೆ ಧನಸಹಾಯ ನೀಡುವಾಗ ಮೂರು ಯೋಜನೆಗಳನ್ನು ಹಾಕಿಕೊಂಡಿತು. ಸಾಮಾನ್ಯ ಯೋಜನೆ, ವಿಶೇಷ ಘಟಕ ಯೋಜನೆ, ಮತ್ತು ಗಿರಿಜನ ಉಪಯೋಜನೆ. ಈ ಸಂಘ-ಸಂಸ್ಥೆಗಳು ಇಲಾಖೆಯು ನೀಡಿದ ಪ್ರೋತ್ಸಾಹ ಧನವನ್ನು ಯಾವ ರೀತಿ ಸದ್ಬಳಕೆ ಮಾಡಿಕೊಂಡಿರುತ್ತಾರೆ ಹಾಗು ಜನಸಾಮಾನ್ಯರ ಮೇಲೆ ಇವಿಗಳ ಪ್ರಭಾವ ಕುರಿತು ತಿಳಿದುಕೊಳ್ಳಲು ಹಾಗು ಅನುಷ್ಠಾನದಲ್ಲಿ ಅಗತ್ಯವಿದ್ದಲ್ಲಿ ಬದಲಾವಣೆಗಳ ಬಗ್ಗೆ ತಿಳಿದುಕೊಳ್ಳಲು  ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಮೂಲಕ ಈ ಅಧ್ಯಯನವನ್ನು ತೆಗೆದು ಕೊಳ್ಳಲು ತಿರ್ಮಾನಿಸಿತು. ಈ ಅಧ್ಯಯನವು ಹೈದರಾಬಾದ್ ಕರ್ನಾಟಕ ಸೆಂಟರ್ ಫಾರ್ ಅಡ್ವಾನ್ಸ್ ಲರ್ನಿಂಗ್, ಕಲಬುರಗಿ ಇವರಿಂದ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಮಾರ್ಗದರ್ಶನದಲ್ಲಿ ತೆಗೆದುಕೊಳ್ಳಲಾಗಿದೆ.

ಈ ಅಧ್ಯಯನವು ಪ್ರಾಥಮಿಕ ಮತ್ತು ದ್ವಿತೀಯ ದತ್ತಾಂಶಗಳನ್ನು ಆಧರಿಸಿರುತ್ತದೆ.  ಅಧ್ಯಯನದ ಮಾದರಿಯು 2014 ರಿಂದ 2017 ರ ಕಾಲಾವಧಿಯಲ್ಲಿ ಒಟ್ಟು ಮೂರು ಯೋಜನೆಗಳ ಅಡಿಯಲ್ಲಿ ಧನಸಹಾಯ ಪಡೆದ ರಾಜ್ಯದ ನಾಲ್ಕು ವಲಯಗಳ 20 ಜಿಲ್ಲೆಗಳಲ್ಲಿನ 11 ಕಲಾಪ್ರಕಾರಗಳ ಕ್ಷೇತ್ರದಲ್ಲಿನ 193 ಸಂಘ ಸಂಸ್ಥೆಗಳನ್ನು ಒಳಗೊಂಡಿರುತ್ತದೆ.  ಅಧ್ಯಯನದ ಫಲಿತಗಳಲ್ಲಿ ಪ್ರಮುಖವಾಗಿ ಕಂಡುಬರುವ ಅಂಶಗಳೆಂದರೆ:  ಬಹುಪಾಲು ಸಂಘ ಸಂಸ್ಥೆಗಳು ಹಣವನ್ನು ಇಲಾಖೆಯ ಮಾರ್ಗಸೂಚಿಯ ಅನುಸಾರ ಸದ್ಬಳಕೆ ಮಾಡಿಕೊಂಡಿರುತ್ತಾರೆ, ಕಾರ್ಯಕ್ರಮಗಳ ಸಮರ್ಪಕ ಪ್ರಚಾರ, ಚೆಕ್‌ಗಳ ಮೂಲಕ ಧನಸಹಾಯದ ಪಾವತಿ, ಸಂಘ ಸಂಸ್ಥೆಗಳಿಂದ ಕಲಾವಿದರಿಗೆ ನಗದು ಹಣದ ಮೂಲಕ ಪಾವತಿ, ಜನಪ್ರಿಯ ಕಾರ್ಯಕ್ರಮಗಳ ಆಯೋಜನೆ, ಹಾಗು ಶೇ. 96 ಪ್ರೇಕ್ಷಕರಿಂದ ಸಂಘ ಸಂಸ್ಥೆಗಳು ಕಲೆ ಹಾಗು ಸಂಸ್ಕೃತಿಯ ಉಳುವಿಕೆಗೆ ಶ್ರಮಿಸಿತ್ತಿರುವುದರ ಬಗ್ಗೆ ಪ್ರಮಾಣ ಮತ್ತು ಕಾರ್ಯಕ್ರಮಗಳ ಬಗ್ಗೆ ಮೆಚ್ಚಿಗೆ ಇವುಗಳಾಗಿರುತ್ತವೆ.

ಅಧ್ಯಯನದ ಪ್ರಮುಖ ಶಿಫಾರಸ್ಸುಗಳೆಂದರೆ: ಸಂಘ ಸಂಸ್ಥೆಗಳಿಗೆ ಧನಸಹಾಯವನ್ನು ನೀಡುವಾಗ 1960ರ ಸಹಕಾರ ಕಾಯ್ದೆಯ ಪ್ರಕಾರ ಏಕರೂಪವಾಗಿ ನೋಂದಣಿ ಮಾಡಿಸಿದಂತಹ ಸಂಘ-ಸಂಸ್ಥೆಗಳನ್ನ ಮಾತ್ರ ಪರಿಗಣಿಸಬೇಕು. ಪಾರದರ್ಶಕತೆಯನ್ನ ಅನುಸರಿಸಿ ಕಾರ್ಯಕ್ರಮದ ಮಾನದಂಡದ ಅನುಸಾರವಾಗಿ ಅನುದಾನದ ಬಳಕೆ, ಗ್ರೇಡಿಂಗ್ ಶ್ರೇಣಿಕರಣ ನಿಯಮವನ್ನು ಅನುಸರಿಸುವುದು. ಸಾಮಾನ್ಯ ಯೋಜನೆ, ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಗಳಿಗೆ ನಿಗದಿಯಾದ ಹಣವನ್ನು ಆಯಾ ಯೋಜನೆಯ ಅಡಿಯಲ್ಲಿ ಸಂಬಂಧಿಸಿದ ಸಂಘ ಸಂಸ್ಥೆಗಳಿಗೆ ಮಾತ್ರ ನೀಡುವುದು. ಕಾರ್ಯಕ್ರಮವನ್ನು

ನಡೆಸುವಾಗ ಪ್ರಾದೇಶಿಕ ಸಮಸ್ಯೆಗಳಿಗೆ ಪ್ರಾಮುಖ್ಯತೆ, ನಶಿಸಿ ಹೋಗಿರುವಂತಹ ಕಲೆಗಳನ್ನ ಪುನರ್ಜೀವನಗೊಳಿಸುವುದು, ಕಾರ್ಯಕ್ರಮದ ಸ್ವರೂಪ, ಗಾತ್ರ, ಕ್ರಿಯಾಯೋಜನೆಗನುಗುಣವಾಗಿ ಅನುಧಾನದ ಬಿಡುಗಡೆ, ನಗದು ಹಣ ಪಾವತಿ ನಿಲ್ಲಿಸುವುದು ಮತ್ತು ಆನ್-ಲೈನ್ ವ್ಯವಸ್ಥೆಯನ್ನು ತಾಂತ್ರಿಕವಾಗಿ ಸುಧಾರಿಸುವುದು ಮುಂತಾದವುಗಳಾಗಿರುತ್ತವೆ.

ಈ ಅಧ್ಯಯನದ ಶೋಧನೆಗಳು ಮತ್ತು ಶಿಫಾರಸ್ಸುಗಳು ಭವಿಷ್ಯದಲ್ಲಿ ಈ ಧನಸಹಾಯ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಮೂಲಕ ಕನ್ನಡ ಸಾಹಿತ್ಯ, ಕಲೆ ಮತ್ತು ಸಂಸ್ಕೃತಿಯ ಬೆಳವಣಿಗೆಗೆ ಸರ್ಕಾರ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಉಪಯುಕ್ತವಾಗಿರುತ್ತವೆ ಎಂದು ನಾನು ನಿರೀಕ್ಷಿಸುತ್ತೇನೆ.

ಈ ಅಧ್ಯಯನವು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ / ಪ್ರಧಾನ ಕಾರ್ಯದರ್ಶಿ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಕರ್ನಾಟಕ ಸರ್ಕಾರ ಇವರ ಬೆಂಬಲ ಮತ್ತು ಮಾರ್ಗದರ್ಶನವನ್ನು ಪಡೆದಿರುತ್ತದೆ. ಈ ವರದಿಯನ್ನು 47ನೇ ತಾಂತ್ರಿಕ ಸಮಿತಿ ಸಭೆಯಲ್ಲಿ ಅನುಮೋದಿಸಲಾಗಿರುತ್ತದೆ. ಈ ಅಧ್ಯಯನದ ಕರಡು ವರದಿಯ ಪರಿಶೀಲನೆಯನ್ನು, ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದಿಂದ, ತಾಂತ್ರಿಕ ಸಮಿತಿಯ ಸದಸ್ಯರುಗಳಿಂದ ಮತ್ತು ಓರ್ವ ಸ್ವತಂತ್ರ ಮೌಲ್ಯಮಾಪಕರಿಂದ ನಡೆಸಲಾಗಿದ್ದು, ಈ ವರದಿಯನ್ನು ಸುಧಾರಿಸಲು ಇವರೆಲ್ಲರೂ ಉಪಯುಕ್ತವಾದ ಟಿಪ್ಪಣಿಗಳನ್ನು ಮತ್ತು ಸಲಹೆಗಳನ್ನು ಒದಗಿಸಿರುತ್ತಾರೆ. ಈ ಅಧ್ಯಯನವನ್ನು ಯಶಸ್ವಿಯಾಗಿ ಪೂರ್ಣಗೊಳಿಸಲು ಸಹಾಯವನ್ನು ನೀಡಿದ ಎಲ್ಲರಿಗೂ ನನ್ನ ಕೃತಜ್ಞತೆಗಳು.

Sudarshan G A 1410

ಮುಖ್ಯ ಮೌಲ್ಯಮಾಪನಾಧಿಕಾರಿ

ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ

# ಕೃತಜ್ಞತೆಗಳು

ಕರ್ನಾಟಕ ರಾಜ್ಯದಲ್ಲಿ 2014–15 ರಿಂದ 2016–17ನೇ ಸಾಲಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಸಾಹಿತ್ಯಪರ, ಸಾಂಸ್ಕೃತಿಕಪರ ಮತ್ತು ಕನ್ನಡಪರ ಕಾರ್ಯಕ್ರಮಗಳಿಗೆ ನೀಡಿದ ಪ್ರೋತ್ಸಾಹ ಧನವನ್ನು ಸಂಘಸಂಸ್ಥೆಗಳು ಸದ್ಬಳಕೆ ಮಾಡಿಕೊಂಡಿರುವುದರ ಬಗ್ಗೆ ಕರ್ನಾಟಕದ 13 ಜಿಲ್ಲೆಗಳಿಂದ ಆಯ್ಕೆಯಾದ ಸಂಘ–ಸಂಸ್ಥೆಗಳು ನೀಡಿದ ಅಮೂಲ್ಯ ಮಾಹಿತಿಯಿಂದ ಪಡೆದ ಪ್ರಾಥಮಿಕ ಮತ್ತು ಮಾಧ್ಯಮಿಕ ದತ್ತಾಂಶಗಳ ಸಮರ್ಥ ವಿಶ್ಲೇಷಣೆಯಿಂದ ಈ ಮೌಲ್ಯಮಾಪನ ವರದಿಯನ್ನು ಅಂತಿಮಗೊಳಿಸಲಾಗಿರುತ್ತದೆ.

ಈ ಮೌಲ್ಯಮಾಪನ ಅಧ್ಯಯನವನ್ನು ಪೂರ್ಣಗೊಳಿಸುವಲ್ಲಿ ಡಾ. ಶಾಲಿನಿ ರಜನೀಶ್, ಭಾಆಸೇ, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಶ್ರೀ ಸುದರ್ಶನ್ ಜಿ. ಭಾಅಸೇ, ಮುಖ್ಯ ಮೌಲ್ಯಮಾಪನಾಧಿಕಾರಿ, ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ ಮತ್ತು ಡಾ. ಛಾಯಾ ದೇಗಾಂವ್ಕರ್. ಅಪರ ಮುಖ್ಯ ಮೌಲ್ಯಮಾಪನ ಅಧಿಕಾರಿ, ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ ಇವರೆಲ್ಲರಿಗೂ ಹೈದರಾಬಾದ್ ಕರ್ನಾಟಕ ಸೆಂಟರ್ ಫಾರ್ ಅಡ್ವಾನ್ಸ್‌ಡ್ ಲರ್ನಿಂಗ್ ಸಂಸ್ಥೆಯ ವತಿಯಿಂದ ನಮ್ಮ ಪ್ರಾಮಾಣಿಕ ಧನ್ಯವಾದಗಳು.

ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಶ್ರೀಮತಿ. ಸವಿತಾ ದಯಾನಂದ್, ಆಡಳಿತಾಧಿಕಾರಿ, ಶ್ರೀ ಮಂಜುನಾಥ್, ನಿರ್ದೇಶಕರು, ಶ್ರೀಮತಿ. ಜ್ಯೋತಿ ಜೆನ್ನಿ, ಸಹ ನಿರ್ದೇಶಕರು, ಹಾಗೂ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳು ಮತ್ತು ಸಿಬ್ಬಂದಿಯವರ ನಿರಂತರ ಬೆಂಬಲಕ್ಕಾಗಿ ನಮ್ಮ ಪ್ರಾಮಾಣಿಕ ಧನ್ಯವಾದಗಳು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರು, ಜಂಟಿ ನಿರ್ದೇಶಕರು ಹಾಗೂ ಆಧಿಕಾರಿಗಳಿಗೆ ನಮ್ಮ ಪ್ರಾಮಾಣಿಕ ಧನ್ಯವಾದಗಳು.

ಈ ಅಧ್ಯಯನದ ಪ್ರಧಾನ ಶೋಧಕರಾಗಿ ಡಾ. ಸಿದ್ದಪ್ಪ ಬಿ. ಬೆಳವಟಗಿ, ಇವರು ಈ ವರದಿಯನ್ನು ಸಿದ್ಧಪಡಿಸಿದ್ದಾರೆ. ಮೌಲ್ಯಮಾಪನ ಅಧ್ಯಯನಕ್ಕಾಗಿ ಇವರ ಒಟ್ಟು ಸಮರ್ಪಣೆ ಮತ್ತು ಈ ವರದಿಯನ್ನು ಸಿದ್ಧಪಡಿಸುವಲ್ಲಿ ಇವರ ಪಾಲ್ಗೊಳ್ಳುವಿಕೆಯು ಹೆಚ್ಚು ಪ್ರಶಂಸಿಸಲ್ಪಟ್ಟಿದೆ.

ಹೈದರಾಬಾದ್ ಕರ್ನಾಟಕ ಸೆಂಟರ್ ಫಾರ್ ಅಡ್ವಾನ್ಸ್‌ಡ್ ಲರ್ನಿಂಗ್ ಸಂಸ್ಥೆಯ ನಿರ್ದೇಶಕರಾದ ಶ್ರೀಮತಿ ಅಪರ್ಣಾ ಎಂ. ಕೊಳ್ಳಾ ಇವರು ಈ ಮೌಲ್ಯಮಾಪನ ಅಧ್ಯಯನವನ್ನು ಯಶಸ್ವಿಯಾಗಿ ಪೂರ್ಣಗೊಳಿಸುವಲ್ಲಿ ತಾಂತ್ರಿಕ ಬೆಂಬಲವನ್ನು ನೀಡಿದ ಪ್ರಮುಖ ವ್ಯಕ್ತಿಯಾಗಿದ್ದು, ಯೋಜನೆಯ ಮೌಲ್ಯಮಾಪನವನ್ನು ಕೈಗೊಳ್ಳುವಲ್ಲಿ ಸಹಕರಿಸಿದ ಅವರಿಗೆ ಮತ್ತು ಹೈದರಾಬಾದ್ ಕರ್ನಾಟಕ ಸೆಂಟರ್ ಫಾರ್ ಅಡ್ವಾನ್ಸ್‌ಡ್ ಲರ್ನಿಂಗ್ ಸಂಸ್ಥೆಯ ತಂಡದ ಎಲ್ಲರಿಗೂ ನಮ್ಮ ಪ್ರಾಮಾಣಿಕ ಧನ್ಯವಾದಗಳು.

ಅಧ್ಯಕ್ಷರು
ಹೈದರಾಬಾದ್ ಕರ್ನಾಟಕ ಸೆಂಟರ್ ಫಾರ್
ಅಡ್ವಾನ್ಸ್‌ಡ್ ಲರ್ನಿಂಗ್ ಸಂಸ್ಥೆ, ಕಲಬುರಗಿ

## ಪರಿವಿಡಿ


**ಕಾರ್ಯಕಾರಿ ಸಾರಂಶ ............ 01**

**1. ಪ್ರಸ್ತಾವನೆ ............ 09**

1.0 ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪರಿಚಯ ............ 09

1.1 ಮೌಲ್ಯಮಾಪನ ವಿಷಯ ............ 14

1.2 ಯೋಜನೆಗಳ ಅನುಷ್ಠಾನ ............ 14

**2. ಯೋಜನೆಗಳ ವಿವರಗಳು. ............ 17**

2.0 ಸಾಮಾನ್ಯ ಯೋಜನೆ ............ 17

2.1 ವಿಶೇಷ ಘಟಕ ಯೋಜನೆ ............ 18

2.2 ಗಿರಿಜನ ಉಪಯೋಜನೆ ............ 19

**3. ಕಲಾ ಪ್ರಕಾರಗಳನ್ನು ಕುರಿತು ಚರ್ಚೆ ............ 21**

3.0 ಜಾನಪದ ............ 21

3.1 ನೃತ್ಯ ............ 22

3.2 ನಾಟಕ ............ 22

3.3 ಸಂಗೀತ ............ 23

3.4 ಯಕ್ಷಗಾನ/ಬಯಲಾಟ/ಗೊಂಬೆ ಪ್ರದರ್ಶನ ............ 23

3.5 ಸಾಹಿತ್ಯ ............ 24

3.6 ಚಿತ್ರಕಲೆ ............ 24

3.7 ಸಂಕೀರ್ಣ/ಜಾಗೃತಿ ............ 24

**4. ಮೌಲ್ಯಮಾಪನದ ವಿಷಯಕ್ಕೆ ಸಂಬಂಧಿಸಿದ ಅಧ್ಯಯನ ಕೃತಿಗಳ ಮತ್ತು ವರದಿಗಳ ಸಮೀಕ್ಷೆ............ 25**

**5. ಮೌಲ್ಯಮಾಪನದ ಉದ್ದೇಶಗಳು ............ 29**

**6. ಮೌಲ್ಯಮಾಪನದ ಚೌಕಟ್ಟು ............ 31**

6.0 ಮೌಲ್ಯಮಾಪನದ ಅವಧಿ ............ 31

6.1 ಅನುದಾನದ ಸದ್ಬಳಕೆ ............ 33

6.2 ಮೌಲ್ಯಮಾಪನಕ್ಕೆ ಆಯ್ಕೆಯಾದ ಮಾದರಿ ಜಿಲ್ಲೆಗಳ ವಿವರ ............ 34

**7. ಮೌಲ್ಯಮಾಪನಕ್ಕೆ ಬಳಸಿಕೊಂಡಿರುವ ಸಂಶೋಧನಾ ವಿಧಾನಗಳು ಮತ್ತು ತಂತ್ರಗಳು ............ 35**

7.0 ದತ್ತಾಂಶ ಸಂಗ್ರಹಣಾ ವಿಧಾನ ............ 35

7.1 ದತ್ತಾಂಶ ವಿಶ್ಲೇಷಣಾ ವಿಧಾನ ......................................................................................37

**8. ಮಾದರಿ ಮತ್ತು ಮಾದರಿ ಆಯ್ಕೆ ........................................................................................ 39**

**9. ಕ್ಷೇತ್ರ ಕಾರ್ಯಕ್ಕೆ ಬಳಸಿಕೊಂಡ ಮಾದರಿ ಸಂಖ್ಯೆಗಳ ವಿವರ. ................................................ 43**

9.0 ಮೌಲ್ಯಮಾಪನಕ್ಕೆ ಸಂಬಂಧಿಸಿದ ವ್ಯಕ್ತಿಗಳೊಂದಿಗೆ ಚರ್ಚೆ ..................................................48

9.1 ಅನುಷ್ಠಾನಗೊಳಿಸಿದ ಅಧಿಕಾರಿಗಳೊಂದಿಗೆ ಚರ್ಚೆ .........................................................48

9.2 ಸಂಘ ಸಂಸ್ಥೆಗಳಗೆ ಸಂಬಂಧಿಸಿದ ಅಧಿಕಾರಿಗಳೊಂದಿಗೆ ಚರ್ಚೆ ...............................................48

9.3 ಕಲಾವಿದರೊಂದಿಗೆ ಚರ್ಚೆ ..........................................................................................48

9.4 ಪ್ರೇಕ್ಷಕರೊಂದಿಗೆ ಚರ್ಚೆ ............................................................................................48

**10. ಮೌಲ್ಯಮಾಪನ ಅಧ್ಯಯನದ ಮಿತಿಗಳು ...........................................................................51**

**11. ಕ್ಷೇತ್ರಕಾರ್ಯ ದತ್ತಾಂಶ ವಿಶ್ಲೇಷಣೆ ಮತ್ತು ಚರ್ಚೆ ಹಾಗು ಶೋಧನೆಗಳು ........................................ 53**

11.0 ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧಿಕಾರಿಗಳೊಂದಿಗೆ ಮಾಹಿತಿ ಸಂಗ್ರಹಣೆ.........53

11.1 ಸಂಘ ಸಂಸ್ಥೆಗಳಿಗೆ ಸಂಬಂಧಿಸಿದ ಅಧಿಕಾರಿ ವರ್ಗದವರೊಂದಿಗೆ ಸಂದರ್ಶಿಸಿ ಮಾಹಿತಿ ಸಂಗ್ರಹಿಸಿರುವುದು..........................................................................................57

11.2 ಕಲಾವಿದರೊಂದಿಗೆ ಸಂದರ್ಶಿಸಿ ಮಾಹಿತಿ ಸಂಗ್ರಹಿಸಿರುವುದು .............................................73

11.3 ಪ್ರೇಕ್ಷಕರೊಂದಿಗೆ ಸಂದರ್ಶಿಸಿ ಮಾಹಿತಿ ಸಂಗ್ರಹಿಸಿರುವುದು ..............................................79

**12. ಪ್ರಕರಣ ಅಧ್ಯಯನ ........................................................................................................ 83**

**13. ಅನುಷ್ಠಾನ ಅಧಿಕಾರಿಗಳೊಂದಿಗೆ ಮತ್ತು ಸಂಘ ಸಂಸ್ಥೆಗಳ ಮುಖ್ಯಸ್ಥರೊಂದಿಗೆ ಸಮೂಹ ಚರ್ಚೆ... 89**

13.0 ಅನುಷ್ಠಾನಗೊಳಿಸುವ ಅಧಿಕಾರಿಗಳೊಂದಿಗೆ ಸಮೂಹ ಚರ್ಚೆ ...............................89

13.1 ಸಮೂಹ ಚರ್ಚೆಮಾಡಿದಾಗ ಕಂಡುಬಂದ ಅಂಶಗಳು.......................................... 90

13.2 ಅನುಷ್ಠಾನ ಅಧಿಕಾರಿಗಳ ಪ್ರಕಾರ ಕೆಲವು ಬದಲಾವಣೆಯನ್ನು ಮಾಡಿಕೊಳ್ಳಬೇಕಾಗಿರುವ ಅಂಶಗಳು. ........................................................................................................ 91

13.3 ಸಂಘ–ಸಂಸ್ಥೆಗಳಿಗೆ ಸಂಬಂಧಿಸಿದ ಮುಖ್ಯಸ್ಥರೊಂದಿಗೆ ಸಮೂಹ ಚರ್ಚೆ.................. 92

**14. ಶೋಧನೆಗಳು ........................................................................................................ 95**

14.0 ಅನುಷ್ಠಾನಗೊಳಿಸುವ ಅಧಿಕಾರಿಗಳೊಂದಿಗೆ ಕಂಡುಕೊಂಡ ಶೋಧನೆಗಳು ................95

14.1 ಸಂಘ ಸಂಸ್ಥೆಗಳೊಂದಿಗೆ ಕಂಡುಕೊಂಡ ಶೋಧನೆಗಳು ...........................................95

14.2 ಕಲಾವಿದರೊಂದಿಗೆ ಕಂಡುಕೊಂಡ ಶೋಧನೆಗಳು.................................................. 96

14.3 ಪ್ರೇಕ್ಷಕರೊಂದಿಗೆ ಕಂಡುಕೊಂಡ ಶೋಧನೆಗಳು .................................................... 96

**15. ಶಿಫಾರಸ್ಸುಗಳು ............ 97**

**ಅನುಬಂಧಗಳು**

1. ಮೌಲ್ಯಮಾಪನ ಅಧ್ಯಯನದ ಉಲ್ಲೇಖಿತ ನಿಯಮಗಳು ............ 99

2. ಮೌಲ್ಯಮಾಪನದ ಪ್ರಶ್ನಾವಳಿಗಳು ............ 117

3. ಕಾರ್ಯ ಕ್ಷೇತ್ರದ ಫೋಟೋಗಳು ............ 127

## ಕೋಷ್ಟಕಗಳ ಪಟ್ಟಿ


| ಸಂಖ್ಯೆ | ಕೋಷ್ಟಕಗಳು | ಪುಟ ಸಂಖ್ಯೆ |
|---|---|---|
| 1. | ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ 2014-15 ರಿಂದ 2016-17 ಸಾಲಿನವರೆಗೆ ಸಂಘ ಸಂಸ್ಥೆಗಳಿಗೆ ಬಿಡುಗಡೆಯಾದ ಅನುದಾನದ ವಿವರಣೆ. | 31 |
| 1.1 | ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಮೂರು ವರ್ಗಗಳಿಗೆ 2014-15 ರಿಂದ 2016-17 ರವರೆಗೆ ನೀಡಿರುವ ಅನುದಾನದ ವಿವರ (ಕೋಟಿ ರೂ. ಗಳಲ್ಲಿ ನೀಡಲಾಗಿದೆ) | 32 |
| 2. | ಸಾಮಾನ್ಯ ಯೋಜನೆಯ ಅಡಿಯಲ್ಲಿ ಮಾದರಿ ಆಯ್ಕೆಯಾಗಿ ಪರಿಗಣಿಸಿರುವ ಸಂಘ ಸಂಸ್ಥೆಗಳು. | 39 |
| 3. | ವಿಶೇಷ ಘಟಕದ ಯೋಜನೆಯ ಅಡಿಯಲ್ಲಿ ಮಾದರಿ ಆಯ್ಕೆಯಾಗಿ ಪರಿಗಣಿಸಿರುವ ಸಂಘ ಸಂಸ್ಥೆಗಳು. | 40 |
| 4. | ಗಿರಿಜನ ಉಪಯೋಜನೆಯ ಅಡಿಯಲ್ಲಿ ಮಾದರಿ ಆಯ್ಕೆಯಾಗಿ ಪರಿಗಣಿಸಿರುವ ಸಂಘ ಸಂಸ್ಥೆಗಳು | 40 |
| 5. | ಮೌಲ್ಯಮಾಪಕರಾಗಿ ಕ್ಷೇತ್ರಕಾರ್ಯ ಕೈಗೊಂಡಾಗ ಭೇಟಿ ಮಾಡಿರುವ ಅಧಿಕಾರಿಗಳ ವಿವರ | 43 |
| 6. | ಸಂಘ ಸಂಸ್ಥೆಗಳ ಮಾದರಿ ಸಂಖ್ಯೆಗಳ ವಿವರ | 44 |
| 7. | ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ 2014-15 ರಿಂದ 2016-17ನೇ ಸಾಲಿನವರೆಗೆ ಮೂರು ಯೋಜನೆಗಳ ಅಡಿಯಲ್ಲಿ ಸಂಘ ಸಂಸ್ಥೆಗಳಿಗೆ ಬಿಡುಗಡೆಯಾದ ಅನುದಾನದ ವಿವರ. (ಮಾದರಿ ಸಂಖ್ಯೆಗೆ ಅನುಗುಣವಾಗಿ ನೀಡಲಾಗಿದೆ) | 45 |
| 8. | ಕಲಾವಿದರ ಮಾದರಿ ಸಂಖ್ಯೆಗಳ ವಿವರ | 46 |
| 9. | ಪ್ರೇಕ್ಷಕರ (ಜನರ) ಮಾದರಿ ಸಂಖ್ಯೆಗಳ ವಿವರ | 47 |
| 10. | ಸಂಘ-ಸಂಸ್ಥೆಗಳು ಯಾವ ಅಧಿನಿಯಮದಡಿ ನೋಂದಣಿ ಮಾಡಿಕೊಂಡಿವೆ ಎಂಬುದರ ಬಗ್ಗೆ ವಿವರ | 53 |
| 11. | ಕಾರ್ಯಕ್ರಮ ನಡೆಸಲು ಎಂತಹ ಸಂಘ ಸಂಸ್ಥೆಗಳಿಗೆ ಧನಸಹಾಯವನ್ನು ನೀಡಿರುತ್ತಾರೆ ಎನ್ನುವುದರ ಬಗ್ಗೆ ಮಾಹಿತಿ. | 54 |
| 12. | ಸಂಘ-ಸಂಸ್ಥೆಗಳಿಗೆ ಧನಸಹಾಯವನ್ನು ನೀಡುವಾಗ ಯಾವುದನ್ನು ಪರಿಗಣಿಸುತ್ತಾರೆ ಎನ್ನುವದರ ಬಗ್ಗೆ ಮಾಹಿತಿ. | 55 |
| 13. | ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನೀಡಿದ ಧನಸಹಾಯವನ್ನು ಸಂಘ-ಸಂಸ್ಥೆಗಳು ಹೇಗೆ ಬಳಸುತ್ತವೆ ಎಂಬುದರ ಬಗ್ಗೆ ಮಾಹಿತಿ. | 55 |
| 14. | ಮೂರು ಯೋಜನೆಗಳಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಅಳವಡಿಸಬೇಕಾದ ಹೊಸ ವಿಧಾನಗಳ ಬಗ್ಗೆ ಮಾಹಿತಿ. | 56 |
| 15. | ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ನೀಡಿರುವ ಧನಸಹಾಯವನ್ನು ಸಂಘ ಸಂಸ್ಥೆಗಳು ಹೇಗೆ ಸದ್ಬಳಕೆ ಮಾಡಿಕೊಂಡಿವೆ ಎಂಬುದರ ಬಗ್ಗೆ ಮಾಹಿತಿ. | 57 |
| 16. | ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ನೀಡಿದ ಧನ ಸಹಾಯವನ್ನು ಪಾರದರ್ಶಕವಾಗಿ ಬಳಸಿಕೊಳ್ಳುವಾಗ ಅನುಸರಿಸುವ ನಿಯಮಗಳು | 58 |
| 17. | ಸಂಘ ಸಂಸ್ಥೆಗಳು ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ಕಲಾವಿದರಿಗೆ ಹಣವನ್ನು ಯಾವ ರೀತಿ ವಿತರಿಸಿದ್ದಾರೆ ಎಂಬುದರ ಬಗ್ಗೆ ಮಾಹಿತಿ. | 60 |
| 18. | ಸಂಘ ಸಂಸ್ಥೆಗಳ ಮುಖಾಂತರ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುವ ಉದ್ದೇಶಗಳ ವಿವರ | 62 |

| | | |
|---|---|---|
| 19. | ಸಂಘ ಸಂಸ್ಥೆಗಳು ಆಯೋಜಿಸಿದ್ದ ಕಾರ್ಯಕ್ರಮಗಳು ಮಾಧ್ಯಮಗಳಲ್ಲಿ ಪ್ರಕಟವಾಗಿರುವುದರ ಮಾಹಿತಿ | 63 |
| 20. | ಸಂಘ ಸಂಸ್ಥೆಗಳ ಮೂಲಕ ಆಯೋಜಿಸುವ ಕಾರ್ಯಕ್ರಮಗಳಿಗೆ ಪ್ರೇಕ್ಷಕರನ್ನು ಸೇರಿಸುವ ರೀತಿ. | 65 |
| 21. | ಸಂಘ ಸಂಸ್ಥೆಗಳಿಂದ ಆಯೋಜಿಸುವ ಕಾರ್ಯಕ್ರಮಗಳಿಗೆ ವೇದಿಕೆಗಳನ್ನು ಆಯ್ಕೆ ಮಾಡಿಕೊಳ್ಳುವುದು | 67 |
| 22. | ಸಂಘ ಸಂಸ್ಥೆಗಳ ಹಣವನ್ನು ಸದ್ಬಳಕೆ ಮಾಡಿಕೊಳ್ಳುವುದರ ವಿವರ | 69 |
| 23. | ಹೆಚ್ಚಿನ ಪ್ರೋತ್ಸಾಹ ಪಡೆಯುವ ಕಲಾಪ್ರಕಾರಗಳ ವಿವರ | 71 |
| 24. | ಸಂಘ-ಸಂಸ್ಥೆಗಳು ಕಾರ್ಯಕ್ರಮಗಳಿಗೆ ಕಲಾವಿದರನ್ನು ಆಯ್ಕೆ ಮಾಡಿಕೊಳ್ಳುವುದರ ಬಗ್ಗೆ ಮಾಹಿತಿ. | 74 |
| 25. | ಸಂಘ-ಸಂಸ್ಥೆಗಳು ಕಲಾವಿದರಿಗೆ ಸಂಭಾವನೆ ನೀಡುವುದರ ಕುರಿತು ಮಾಹಿತಿ. | 75 |
| 26. | ಕಾರ್ಯಕ್ರಮದಲ್ಲಿ ಭಾಗವಹಿಸುವ ಕಲಾವಿದರಿಗೆ ಸಂಘ-ಸಂಸ್ಥೆಗಳು ನೀಡುವ ಸೌಲಭ್ಯಗಳ ವಿವರ | 75 |
| 27. | ಕಲಾವಿದರುಗಳು ಕಲೆಯನ್ನು ಸ್ವೀಕರಿಸುವ ಉದ್ದೇಶಗಳು. | 76 |
| 28. | ಸಂಘ ಸಂಸ್ಥೆಗಳ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜೊತೆ ಕಲಾವಿದರ ಸಂಬಂಧ | 77 |
| 29. | ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ನೀಡಿರುವ ಧನಸಹಾಯವನ್ನು ಸಂಘ-ಸಂಸ್ಥೆಗಳು ಸದ್ಬಳಕೆ<br>ಮಾಡಿಕೊಂಡಿರುವ ಕುರಿತು ವಿವಿಧ ವಯಸ್ಸಿನ ಕಲಾವಿದರಿಂದ ಪಡೆದ ಮಾಹಿತಿ | 78 |
| 30. | ಸಂಘ-ಸಂಸ್ಥೆಗಳು ನಡೆಸಿರುವ ಕಾರ್ಯಕ್ರಮಗಳ ಗುಣಮಟ್ಟವನ್ನು ತಿಳಿಯಲು ಪ್ರೇಕ್ಷಕರನ್ನು ವಯಸ್ಸಿನ ಆಧಾರದ ಮೇಲೆ ಪರಿಗಣಿಸಿ, ಪಡೆದ ಮಾಹಿತಿ. | 79 |
| 31. | ಸಂಘ-ಸಂಸ್ಥೆಗಳು ಜಾನಪದ ಕಲೆಯ ಉಳಿವಿಗೆ ಯಾವ ರೀತಿ ಶ್ರಮಿಸುತ್ತಿವೆ ಎನ್ನುವುದರ ಬಗ್ಗೆ ಪ್ರೇಕ್ಷಕರಿಂದ ಪಡೆದುಕೊಂಡ ಮಾಹಿತಿ. | 80 |
| 32. | ಸಂಘ-ಸಂಸ್ಥೆಗಳು ಅನುದಾನವನ್ನು ಕಾರ್ಯಕ್ರಮಗಳಿಗೆ ಸದ್ಬಳಕೆ ಮಾಡಿಕೊಂಡಿರುವುದರ ಬಗ್ಗೆ ಪ್ರೇಕ್ಷಕರಿಂದ ಪಡೆದ ಮಾಹಿತಿ. | 80 |

# ಕಾರ್ಯಕಾರಿ ಸಾರಾಂಶ

## ಪ್ರಸ್ತಾವನೆ

ಕರ್ನಾಟಕ ಸರ್ಕಾರದ ಅಡಿಯಲ್ಲಿ ಸ್ಥಾಪಿತವಾದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕನ್ನಡ ನಾಡಿನಲ್ಲಿನ ಕಲೆ, ಸಂಗೀತ, ಸಾಹಿತ್ಯ, ಜಾನಪದ ಮತ್ತು ಸಂಸ್ಕೃತಿಯನ್ನು ಕುರಿತು ಚಿಂತನೆ ಮಾಡುತ್ತಿದೆ. ಜೊತೆಗೆ ಇವುಗಳನ್ನು ಉಳಿಸಿ ಬೆಳೆಸುವ ಕೆಲಸವನ್ನು ನಿರಂತರವಾಗಿ ಮಾಡುತ್ತಾ ಬಂದಿದೆ. ಹಾಗೆಯೇ ತುಂಬಾ ಕ್ರಿಯಾತ್ಮಕವಾದ ಕಾರ್ಯಕ್ರಮಗಳನ್ನು ನಡೆಸುತ್ತಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಸರ್ಕಾರದಿಂದ ಅನುದಾನವನ್ನು ಪಡೆದು ತನ್ನಲ್ಲಿನ ಸಾಮಾನ್ಯ ಯೋಜನೆ, ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಗಳ ಮೂಲಕ ಕರ್ನಾಟಕದ ಎಲ್ಲಾ ಜಾತಿ ಜನಾಂಗಗಳ ಸಂಘ ಸಂಸ್ಥೆಗಳಿಗೆ ಧನಸಹಾಯವನ್ನು ನೀಡುತ್ತಿದೆ. ನಂತರ ಈ ಇಲಾಖೆಯು ಸಂಘ ಸಂಸ್ಥೆಗಳ ಮುಖಾಂತರ ಸಾಹಿತ್ಯಕ್ಕೆ ಸಂಬಂಧಪಟ್ಟಂತೆ, ಜಾನಪದ ಕಲಾಪ್ರಕಾರಗಳಿಗೆ ಸಂಬಂಧಪಟ್ಟಂತೆ, ಸಂಗೀತ ಮತ್ತು ನೃತ್ಯಕ್ಕೆ ಸಂಬಂಧಪಟ್ಟಂತೆ, ಕನ್ನಡ ನಾಡು–ನುಡಿಗೆ ಸಂಬಂಧ ಪಟ್ಟಂತೆ, ಕಲಾವಿದರಿಗೆ ಸಂಬಂಧಪಟ್ಟಂತೆ ಕಾರ್ಯಕ್ರಮಗಳನ್ನು ನಡೆಸುತ್ತಾ ಬಂದಿದೆ. ಹೀಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಸಂಘ–ಸಂಸ್ಥೆಗಳು ಸಾಮಾನ್ಯ ಯೋಜನೆ, ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯ ಮೂಲಕ 2014–15 ರಿಂದ 2016–17ನೇ ಸಾಲಿನಲ್ಲಿ (ಒಟ್ಟು ಮೂರು ವರ್ಷ) ಧನಸಹಾಯವನ್ನು ಪಡೆದು ಯಾವ ರೀತಿ ಕಾರ್ಯಕ್ರಮಗಳನ್ನು ನಡೆಸಿದ್ದಾರೆ ಮತ್ತು ಆ ಧನಸಹಾಯ ಸರಿಯಾದ ರೀತಿಯಲ್ಲಿ ಸದ್ಬಳಕೆ ಆಗಿದೆಯೇ ಅಥವಾ ಇಲ್ಲವೇ ಎಂಬುದನ್ನು ಕುರಿತು ಇಲ್ಲಿ ಮೌಲ್ಯಮಾಪನ ಮಾಡಲಾಗಿದೆ.

## I. ಈ ವರದಿಯಲ್ಲಿ ಚರ್ಚೆ ಮಾಡಿರುವ ಅಂಶಗಳನ್ನು ಕುರಿತು ಈ ಕೆಳಕಂಡಂತೆ ತಿಳಿಸಲಾಗಿದೆ.

ಮೌಲ್ಯಮಾಪನದ ಪ್ರಾರಂಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಹುಟ್ಟು ಮತ್ತು ಬೆಳವಣಿಗೆಯನ್ನು ಹಾಗು ಅದರ ಸಾಧನೆ ಮತ್ತು ಆ ಇಲಾಖೆಯು ಬೆಳೆದು ಬಂದ ಬಗೆಯನ್ನು ವಿವರಿಸಲಾಗಿದೆ. ಹಾಗೆಯೇ ಆ ಇಲಾಖೆಯು ಅಳವಡಿಸಿಕೊಂಡಿರುವ ಈ ಮೂರು ಯೋಜನೆಗಳನ್ನು ಕುರಿತು ಅವುಗಳ ಉದ್ದೇಶ ಮತ್ತು ಕಾರ್ಯ ವಿಧಾನಗಳ ಬಗ್ಗೆ ವಿವರಿಸಲಾಗಿದೆ. ಅದೇರೀತಿ, ಈ ಮೂರು ಯೋಜನೆಗಳ ಮುಖಾಂತರ ಅನುಕೂಲಗಳನ್ನು ಪಡೆದುಕೊಂಡಿರುವ ಕಲಾ ಪ್ರಕಾರಗಳಾದ ಜಾನಪದ, ನೃತ್ಯ, ನಾಟಕ, ಸಂಗೀತ, ಯಕ್ಷಗಾನ, ಬಯಲಾಟ, ಗೊಂಬೆ ಪ್ರದರ್ಶನ, ಸಾಹಿತ್ಯ, ಚಿತ್ರಕಲೆ, ಸಂಕೀರ್ಣ, ಜಾಗೃತಿ–ಇವುಗಳನ್ನು ಕುರಿತು ಚರ್ಚಿಸಲಾಗಿದೆ.

- ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಒಟ್ಟು ಮೂರು ವರ್ಷದಲ್ಲಿ ರೂ. 62,54,45,000 (ಸುಮಾರು 63 ಕೋಟಿಗಳು) ಗಳನ್ನು ಧನ ಸಹಾಯದ ಹೆಸರಿನಲ್ಲಿ ಕರ್ನಾಟಕದಲ್ಲಿನ ಒಟ್ಟು 3194 ಸಂಘ ಸಂಸ್ಥೆಗಳಿಗೆ ತನ್ನಲ್ಲಿನ ಮೂರು ಯೋಜನೆಗಳ ಮುಖಾಂತರ ಅನುದಾನವನ್ನು ಬಿಡುಗಡೆ

ಮಾಡಿರುತ್ತದೆ. ಆದರೆ ಈ ಸಂಘ ಸಂಸ್ಥೆಗಳು ಕನ್ನಡ ನಾಡಿನಲ್ಲಿ ಕಲೆ ಮತ್ತು ಸಂಸ್ಕೃತಿಯ ಉಳಿವಿಗೆ ಸರಿಯಾದ ರೀತಿಯಲ್ಲಿ ಸದ್ಬಳಕೆ ಮಾಡಿಕೊಂಡಿದ್ದಾರೆಯೇ ಅಥವಾ ಇಲ್ಲವೇ ಎಂಬುದನ್ನು ಪರಿಶೀಲಿಸಲಾಗಿದೆ.

- ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಸಾಮಾನ್ಯ ಯೋಜನೆಯ ಅಡಿಯಲ್ಲಿ ಸಾಮಾನ್ಯ ವರ್ಗದ ಸಂಘ ಸಂಸ್ಥೆಗಳಿಗೆ ಮತ್ತು ಹಿಂದುಳಿದ ವರ್ಗಗಳ ಸಂಘ ಸಂಸ್ಥೆಗಳಿಗೆ, ವಿಶೇಷ ಘಟಕದ ಯೋಜನೆಯ ಅಡಿಯಲ್ಲಿ ಪರಿಶಿಷ್ಟ ಜಾತಿಯ ಸಂಘ ಸಂಸ್ಥೆಗಳಿಗೆ ಹಾಗು ಗಿರಿಜನ ಉಪಯೋಜನೆಯ ಅಡಿಯಲ್ಲಿ ಪರಿಶಿಷ್ಟ ವರ್ಗದ ಸಂಘ ಸಂಸ್ಥೆಗಳಿಗೆ ಅನುದಾನವನ್ನು ನೀಡಿ ಎಲ್ಲಾ ವರ್ಗದಲ್ಲಿನ ಕಲೆ ಮತ್ತು ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಕೆಲಸವನ್ನು ಮಾಡಿರುವುದರ ಬಗ್ಗೆ ದಾಖಲಿಸಲಾಗಿದೆ.
- ಮೌಲ್ಯಮಾಪನದ ಉದ್ದೇಶವನ್ನು ಕುರಿತು ವಿವರಿಸಲಾಗಿದೆ. ಹಾಗೆಯೇ ಮೌಲ್ಯಮಾಪನಕ್ಕೆ ಒಳಗಾಗಿರುವ ಒಟ್ಟು 3194 ಸಂಘ ಸಂಸ್ಥೆಗಳಿಗೆ 2014-15 ರಿಂದ 2016-17ರವರೆಗೆ ರೂ. 62,54,45,000 ಗಳನ್ನು ಇಲ್ಲಿನ ಮೂರು ಯೋಜನೆಗಳ ಅಡಿಯಲ್ಲಿ ವಾರ್ಷಿಕವಾಗಿ ಯಾವ ಪ್ರಮಾಣದಲ್ಲಿ ಅನುದಾನವನ್ನು ನೀಡಿದ್ದಾರೆ ಎಂಬುದನ್ನು ಕೋಷ್ಟಕದ ಮೂಲಕ ಕೊಡಲಾಗಿದೆ. ಜೊತೆಗೆ ಕೋಟಿ ರೂ ಗಳಲ್ಲಿ ಶೇಕಡಾವಾರು ಹಂಚಿಕೆಯಾಗಿರುವುದನ್ನು ಕೋಷ್ಟಕದಲ್ಲಿ ತಿಳಿಸಲಾಗಿದೆ. ನಂತರ ಅನುದಾನದ ಸದ್ಬಳಕೆಯ ಪರಿಕಲ್ಪನೆಯ ವಿವಿಧ ಆಯಾಮಗಳನ್ನು ಮೌಲ್ಯಮಾಪನದ ಉದ್ದೇಶಗಳ ಹಿನ್ನೆಲೆಯಲ್ಲಿ ಸೂಕ್ಷ್ಮವಾಗಿ ವಿವರಿಸಲಾಗಿದೆ.
- ಈ ಮೌಲ್ಯಮಾಪನಕ್ಕೆ ಪೂರಕವಾಗಿ ಯಾವುದೇ ವರದಿಗಳು ಬಂದಿರುವುದಿಲ್ಲ. ಆದರೆ ಇದೇ ಪರಿಕಲ್ಪನೆಯಲ್ಲಿ ಬೇರೆ ಬೇರೆ ವಿಷಯಗಳಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮೇಲೆ ಬಂದಿರುವಂತಹ ಮೌಲ್ಯಮಾಪನದ ವರದಿಯನ್ನು ಸಾಹಿತ್ಯ ವಿಮರ್ಶೆಯ ಹೆಸರಿನಲ್ಲಿ ಬಳಸಿಕೊಂಡು ಇಲ್ಲಿ ಚರ್ಚೆ ಮಾಡಲಾಗಿದೆ.

## II. ಮೌಲ್ಯಮಾಪನಕ್ಕೆ ಬಳಸಿಕೊಂಡಿರುವ ಸಂಶೋಧನಾ ವಿಧಾನಗಳು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ತನ್ನಲ್ಲಿರುವ ಸಾಮಾನ್ಯ ಯೋಜನೆ, ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯ ಮುಖಾಂತರ ಕರ್ನಾಟಕದಲ್ಲಿನ ಸಂಘ ಸಂಸ್ಥೆಗಳಿಗೆ ಕಲೆ, ಸಾಹಿತ್ಯ, ಸಂಸ್ಕೃತಿ ಮತ್ತು ಜಾನಪದ ಕಲಾ ಪ್ರಕಾರಗಳನ್ನು ಉಳಿಸಿ ಬೆಳೆಸುವುದಕ್ಕಾಗಿ ಧನಸಹಾಯವನ್ನು ನೀಡಿದೆ. ಈ ಧನಸಹಾಯವು ಸರಿಯಾದ ರೀತಿಯಲ್ಲಿ ಸದ್ಬಳಕೆಯಾಗಿದೆಯೇ ಅಥವಾ ಇಲ್ಲವೇ ಎಂಬುದನ್ನು ಮೌಲ್ಯಮಾಪನ ಮಾಡಿ ವರದಿ ತಯಾರಿಸುವುದಕ್ಕಾಗಿ ಕೆಲವು ಸಂಶೋಧನಾ ವಿಧಾನಗಳನ್ನು ಇಲ್ಲಿ ಬಳಸಿಕೊಳ್ಳಲಾಗಿದೆ.

ಮೌಲ್ಯಮಾಪನಕ್ಕೆ ತುಂಬಾ ಅಗತ್ಯವಾಗಿ ಬೇಕಾಗಿರುವಂತಹ ಸಂಶೋಧನಾ ವಿಧಾನಗಳಲ್ಲಿ ಪ್ರಾಥಮಿಕ ಮೂಲ ಮತ್ತು ಮಾಧ್ಯಮಿಕ ಮೂಲಗಳನ್ನು ಪ್ರಮುಖವಾಗಿ ಬಳಸಿಕೊಳ್ಳಲಾಗಿದೆ.

- ಪ್ರಾಥಮಿಕ ಮೂಲದಲ್ಲಿ ದತ್ತಾಂಶ ಸಂಗ್ರಹಣೆ ಮಾಡಲು ಮುಖ್ಯವಾಗಿ ಪ್ರಶ್ನಾವಳಿ ಮತ್ತು ಸಂದರ್ಶನ ವಿಧಾನಗಳನ್ನು ಪರಿಗಣಿಸಲಾಗಿದೆ. ದತ್ತಾಂಶ ಸಂಗ್ರಹಿಸಲು ಇಲ್ಲಿ ಪ್ರಧಾನವಾಗಿ ಪ್ರಶ್ನಾವಳಿ ವಿಧಾನ ಮತ್ತು ಸಂದರ್ಶನ ವಿಧಾನ ಹೆಚ್ಚು ಸಹಕಾರಿಯಾಗಿವೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧಿಕಾರಿಗಳನ್ನು, ಸಂಘ ಸಂಸ್ಥೆಗಳ ಮುಖಂಡರನ್ನು, ಕಲಾವಿದರನ್ನು ಮತ್ತು ಪ್ರೇಕ್ಷಕರನ್ನು ಭೇಟಿ ಮಾಡಿ ಮಾಹಿತಿ ಸಂಗ್ರಹಿಸಲು ಈ ಎರಡು ವಿಧಾನಗಳನ್ನು ಬಳಸಿಕೊಳ್ಳಲಾಗಿದೆ.

- ಮಾಧ್ಯಮಿಕ ಮೂಲದಲ್ಲಿ ಈಗಾಗಲೇ ಈ ವಿಷಯಕ್ಕೆ ಪೂರಕವಾಗಿ ಪ್ರಕಟವಾಗಿರುವ ಕೃತಿಗಳನ್ನು ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವೆಬ್‌ಸೈಟ್‌ನಲ್ಲಿ ದಾಖಲಾಗಿರುವ ಮಾಹಿತಿಗಳನ್ನು ಮೌಲ್ಯಮಾಪನದ ಸಂದರ್ಭದಲ್ಲಿ ಉಪಯೋಗಿಸಿಕೊಳ್ಳಲಾಗಿದೆ. ಹಾಗೆಯೇ ವರದಿಯನ್ನು ತಯಾರಿಸುವಾಗ ವಿವರಣಾತ್ಮಕ, ವಿಶ್ಲೇಷಣಾತ್ಮಕ, ಗುಣಾತ್ಮಕ, ಪರಿಮಾಣಾತ್ಮಕ ಮತ್ತು ಸಂಖ್ಯಾಶಾಸ್ತ್ರ ವಿಧಾನಗಳನ್ನು ಸಂದರ್ಭೋಚಿತವಾಗಿ ಬಳಸಿಕೊಳ್ಳಲಾಗಿದೆ.

## III. ಮೌಲ್ಯಮಾಪನಕ್ಕೆ ಪರಿಗಣಿಸಿರುವ ಮಾದರಿ ಆಯ್ಕೆಯ ವಿವರ

ಕರ್ನಾಟಕದಲ್ಲಿರುವ ಒಟ್ಟು 30 ಜಿಲ್ಲೆಗಳನ್ನು 4 ವಲಯಗಳನ್ನಾಗಿ ವಿಭಾಗ ಮಾಡಲಾಗಿದೆ. ಆ 4 ವಲಯಗಳು ಯಾವುವೆಂದರೆ, ಕಲ್ಬುರ್ಗಿ ವಲಯ, ಬೆಳಗಾವಿ ವಲಯ, ಬೆಂಗಳೂರು ವಲಯ ಮತ್ತು ಮೈಸೂರು ವಲಯಗಳೆಂದು ವಿಂಗಡಿಸಲಾಗಿದೆ. ಈ ರೀತಿ ವಿಭಾಗವಾಗಿರುವ ಪ್ರತಿಯೊಂದು ವಲಯದಿಂದ ಮಾದರಿ ಆಯ್ಕೆಯಾಗಿ ಮೊದಲಿಗೆ, ಸಾಮಾನ್ಯ ಯೋಜನೆಯ ಅಡಿಯಲ್ಲಿ ಹೆಚ್ಚು ಸಂಘ-ಸಂಸ್ಥೆಗಳನ್ನು ಹೊಂದಿರುವ 1 ಜಿಲ್ಲೆಯನ್ನು, ಅತೀ ಕಡಿಮೆ ಸಂಘ-ಸಂಸ್ಥೆಗಳನ್ನು ಹೊಂದಿರುವ 1 ಜಿಲ್ಲೆಯನ್ನು, ಒಟ್ಟು 1 ವಲಯದಿಂದ 2 ಜಿಲ್ಲೆಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಹೀಗೆ 4 ವಲಯದಿಂದ 8 ಜಿಲ್ಲೆಗಳನ್ನು (1x2x4=8) ಸಾಮಾನ್ಯ ಯೋಜನೆಯ ಅಡಿಯಲ್ಲಿ ಆಯ್ಕೆ ಮಾಡಿಕೊಂಡರೆ, ಇನ್ನು ವಿಶೇಷ ಘಟಕ ಯೋಜನೆ ಹಾಗು ಗಿರಿಜನ ಉಪಯೋಜನೆಯ ಅಡಿಯಲ್ಲಿ ಪ್ರತಿಯೊಂದು ವಲಯದಿಂದ 3 ಜಿಲ್ಲೆಗಳನ್ನು ಪರಿಗಣಿಸಲಾಗಿದೆ. ಇಲ್ಲಿ ಎಲ್ಲಾ ಕಲಾ ಪ್ರಕಾರಗಳಿಗೆ ಪ್ರಾತಿನಿಧ್ಯ ಬಾರದ ಕಾರಣ ತಲಾ 3 ಜಿಲ್ಲೆಗಳನ್ನು ವಲಯವಾರು ಆಯ್ಕೆ ಮಾಡಿಕೊಳ್ಳಲಾಗಿದೆ ಅಂದರೆ, ಒಟ್ಟು 4 ವಲಯದಿಂದ 12 ಜಿಲ್ಲೆಗಳನ್ನು (3x4=12) ಆಯ್ಕೆ ಮಾಡಲಾಗಿದೆ. ಈ ಮೂರು ಯೋಜನೆಗಳ ಅಡಿಯಲ್ಲಿ ಒಟ್ಟು 20 ಜಿಲ್ಲೆಗಳನ್ನು ಮೌಲ್ಯಮಾಪನಕ್ಕೆ ಬಳಸಿಕೊಳ್ಳಲಾಗಿದೆ.

- ಮಾದರಿ ಆಯ್ಕೆಯ ಪ್ರಕಾರ ಪರಿಗಣಿತವಾಗಿರುವ 20 ಜಿಲ್ಲೆಗಳಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಒಟ್ಟು 26 ಜನ ಅಧಿಕಾರಿಗಳನ್ನು, 191 ಸಂಘ ಸಂಸ್ಥೆಗಳನ್ನು,

11 ಕಲಾಪ್ರಕಾರಗಳನ್ನು, 382 ಕಲಾವಿದರನ್ನು, 382 ಪ್ರೇಕ್ಷಕರನ್ನು ಮಾದರಿ ಆಯ್ಕೆಯಾಗಿ ಮಾಡಿಕೊಳ್ಳಲಾಗಿದೆ.

- ಕ್ಷೇತ್ರಕಾರ್ಯ ಮಾಡುವಾಗ ಅಧಿಕಾರಿಗಳೊಂದಿಗೆ, ಸಂಘ ಸಂಸ್ಥೆಗಳ ಅಧಿಕಾರಿಗಳೊಂದಿಗೆ, ಕಲಾವಿದರೊಂದಿಗೆ ಮತ್ತು ಪ್ರೇಕ್ಷಕರೊಂದಿಗೆ, ವಿಷಯಧಾರಿತ ಅಂಶಗಳ ಮೇಲೆ ಮಾಹಿತಿ ಪಡೆದು ಮೌಲ್ಯಮಾಪನದ ಸಂದರ್ಭದಲ್ಲಿ ಚರ್ಚಿಸಲಾಗಿದೆ.
- ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಬಿಡುಗಡೆಯಾದ ಅನುದಾನವು ಸರಿಯಾದ ರೀತಿಯಲ್ಲಿ ಸದ್ಬಳಕೆಯಾಗಿದೆಯೇ ಅಥವಾ ಇಲ್ಲವೇ ಎಂಬುದನ್ನು ಉದ್ದೇಶಿಸಿ ಕ್ಷೇತ್ರಕಾರ್ಯದ ಮೂಲಕ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧಿಕಾರಿಗಳೊಂದಿಗೆ, ಸಂಘ ಸಂಸ್ಥೆಗಳ ಅಧಿಕಾರಿಗಳೊಂದಿಗೆ, ಕಲಾವಿದರೊಂದಿಗೆ, ಪ್ರೇಕ್ಷಕರೊಂದಿಗೆ ಪಡೆದಂತಹ ಪ್ರತಿಯೊಂದು ಮಾಹಿತಿಯನ್ನು ಕೋಷ್ಟಕಗಳ ಮೂಲಕ ಶೇಕಡಾವಾರು ಲೆಕ್ಕಹಾಕಿ ವಿಶ್ಲೇಷಣೆ ಮಾಡಲಾಗಿದೆ. ಹಾಗೆಯೇ ವಿಶೇಷವಾಗಿ ಕಂಡು ಬಂದಿರುವ ಸಂಘ ಸಂಸ್ಥೆಗಳನ್ನು ಪ್ರಕರಣ ಅಧ್ಯಯನ ಮಾಡಲಾಗಿದೆ.
- ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧಿಕಾರಿಗಳಲ್ಲಿ ಈ ಮೂರು ಯೋಜನೆಗಳನ್ನು ಅನುಷ್ಠಾನಗೊಳಿಸಿದ ಅಧಿಕಾರಿಗಳೊಂದಿಗೆ, ಕಲಾವಿದರೊಂದಿಗೆ, ಸಂಘ ಸಂಸ್ಥೆಗಳನ್ನು ಸ್ಥಾಪನೆ ಮಾಡಿದ ಅಧಿಕಾರಿಗಳೊಂದಿಗೆ ಹಾಗೂ ಪ್ರೇಕ್ಷಕರೊಂದಿಗೆ ಯೋಜನೆಗಳ ಕಾರ್ಯಕ್ರಮಗಳ ಬಗ್ಗೆ, ಧನಸಹಾಯದ ವಿತರಣೆಯ ಬಗ್ಗೆ, ಸಾಧಕ–ಬಾಧಕಗಳ ಬಗ್ಗೆ, ಕುಂದು ಕೊರತೆಗಳ ಬಗ್ಗೆ, ಯೋಜನೆಗಳ ಗುಣಮಟ್ಟದ ಬಗ್ಗೆ ಮತ್ತು ಇನ್ನು ಹತ್ತು ಹಲವು ಅಂಶಗಳನ್ನು ಪರಿಗಣಿಸಿ ಸಮೂಹ ಚರ್ಚೆ ಮಾಡಲಾಗಿರುತ್ತದೆ. ಸಮೂಹದೊಂದಿಗೆ ಚರ್ಚೆ ಮಾಡಿದ ನಂತರ ಕಂಡು ಬಂದ ಅಂಶಗಳನ್ನು ವರದಿಯಲ್ಲಿ ವಿವರವಾಗಿ ಚರ್ಚಿಸಲಾಗಿದೆ.
- ಈ ಮೂರು ಯೋಜನೆಗಳ ಮೂಲಕ ಕಂಡುಕೊಂಡ ಶೋಧನೆಗಳನ್ನು ತಿಳಿಸಲಾಗಿದೆ. ಅಂದರೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧಿಕಾರಿಗಳೊಂದಿಗೆ, ಸಂಘ ಸಂಸ್ಥೆಗಳ ಅಧಿಕಾರಿಗಳೊಂದಿಗೆ, ಕಲಾವಿದರೊಂದಿಗೆ, ಪ್ರೇಕ್ಷಕರೊಂದಿಗೆ ಪಡೆದುಕೊಂಡ ಮಾಹಿತಿಯ ಆಧಾರದ ಮೇಲೆ ಇಲ್ಲಿ ಕಂಡು ಬಂದ ಶೋಧನೆಗಳನ್ನು ತಿಳಿಸಲಾಗಿದೆ. ನಂತರ ಈ ಮೌಲ್ಯಮಾಪನದಿಂದ ಹೊರಬಂದ ಶಿಫಾರಸ್ಸುಗಳನ್ನು ಚರ್ಚಿಸಲಾಗಿದೆ. ಶಿಫಾರಸ್ಸುಗಳಲ್ಲಿ ಈ ಯೋಜನೆಯ ಆವಿಷ್ಕಾರ ಮತ್ತು ಈ ಯೋಜನೆಯಲ್ಲಿನ ಅಂಶಗಳನ್ನು ಪರಿಷ್ಕರಿಸುವುದರ ಬಗ್ಗೆ ವಿವರಿಸಲಾಗಿದೆ. ಅದೇರೀತಿ ಈ ಕಾರ್ಯಕಾರಿ ಸಾರಂಶದಲ್ಲಿ ಇಡೀ ಯೋಜನೆಯ ಮೌಲ್ಯಮಾಪನದಲ್ಲಿ ವಸ್ತುನಿಷ್ಠವಾಗಿ ಮತ್ತು ನಿಷ್ಪಕ್ಷಪಾತವಾಗಿ ಕೈಗೊಂಡ ಅಂಶಗಳ ಬಗ್ಗೆ ಸೂಕ್ಷ್ಮವಾಗಿ ತಿಳಿಸಲಾಗಿದೆ.

## IV. ಶೋಧನೆಗಳು

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಸಾಮಾನ್ಯ ಯೋಜನೆ, ವಿಶೇಷ ಘಟಕ ಮತ್ತು ಗಿರಿಜನ ಉಪಯೋಜನೆ ಎನ್ನುವ ಮೂರು ಘಟಕಗಳ ಮುಖಾಂತರ ಸಾಹಿತ್ಯಪರ, ಸಾಂಸ್ಕೃತಿಕಪರ ಮತ್ತು ಕನ್ನಡಪರ ಕಾರ್ಯಕ್ರಮಗಳಿಗೆ ನೀಡಿದ ಪ್ರೋತ್ಸಾಹ ಧನವನ್ನು ಸಂಘ-ಸಂಸ್ಥೆಗಳು ಸದ್ಬಳಕೆ ಮಾಡಿಕೊಂಡಿರುವುದರ ಬಗ್ಗೆ ಮೌಲ್ಯಮಾಪನ ಮಾಡಿದಾಗ ಕಂಡುಬಂದ ಪ್ರಮುಖ ಶೋಧನೆಗಳು.

➢ **ಅನುಷ್ಠಾನಗೊಳಿಸುವ ಅಧಿಕಾರಿಗಳಿಂದ ಹೊರಬಂದ ಶೋಧನೆಗಳು.**

1. ಶೇ 88.5 ರಷ್ಟು ಅಧಿಕಾರಿಗಳು ಕಲೆ, ಸಾಹಿತ್ಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸುವಂತಹ ಸಂಘ- ಸಂಸ್ಥೆಗಳಿಗೆ ಧನಸಹಾಯ ಮಾಡಿರುತ್ತಾರೆ.
2. ಶೇ 80.8 ರಷ್ಟು ಅಧಿಕಾರಿಗಳು ಕರ್ನಾಟಕ ಸಹಕಾರ-ಸಂಘಗಳ 1960ರ ಅಧಿನಿಯಮದ ಅಡಿ ನೋಂದಣೆ ಮಾಡಿಕೊಂಡ ಸಂಘ ಸಂಸ್ಥೆಗಳಿಗೆ ಧನಸಹಾಯ ನೀಡಿರುತ್ತಾರೆ.
3. ಶೇ 69.2 ರಷ್ಟು ಸಂಘ-ಸಂಸ್ಥೆಗಳು ಒಳ್ಳೆಯ ಕಾರ್ಯಕ್ರಮಗಳನ್ನು ಮಾಡಿರುವುದರ ಬಗ್ಗೆ ಅಧಿಕಾರಿಗಳು ತಿಳಿಸಿರುತ್ತಾರೆ.
4. ಶೇ 61.5 ರಷ್ಟು ಅಧಿಕಾರಿಗಳು ಲೆಕ್ಕಪರಿಶೋಧಕರ ವರದಿಯ ಆಧಾರದ ಮೇಲೆ ಸಂಘ ಸಂಸ್ಥೆಗಳು ಸದ್ಬಳಕೆ ಮಾಡಿಕೊಂಡಿರುವುದರ ಬಗ್ಗೆ ಪತ್ತೆ ಮಾಡಿರುತ್ತಾರೆ.
5. ಶೇ 53.8 ರಷ್ಟು ಅಧಿಕಾರಿಗಳು ಜಾನಪದ ಕಲಾ ಪ್ರಕಾರಗಳಿಗೆ ಹೆಚ್ಚಿನ ಆದ್ಯತೆ ಕೊಟ್ಟಿರುತ್ತಾರೆ.
6. ಶೇ 50 ರಷ್ಟು ಸಂಘ ಸಂಸ್ಥೆಗಳು ಚೆಕ್ ಮೂಲಕ ಹಣವನ್ನು ಬಳಸಿರುವುದರ ಬಗ್ಗೆ ಅಧಿಕಾರಿಗಳು ತಿಳಿಸಿರುತ್ತಾರೆ.

➢ **ಸಂಘ ಸಂಸ್ಥೆಗಳ ಮೂಲಕ ಹೊರಬಂದ ಶೋಧನೆಗಳು.**

1. ಶೇ 92.7 ರಷ್ಟು ಸಂಘ ಸಂಸ್ಥೆಗಳು ನಡೆಸಿರುವ ಕಾರ್ಯಕ್ರಮಗಳು ಪತ್ರಿಕೆಗಳಲ್ಲಿ ಪ್ರಕಟವಾಗಿರುತ್ತವೆ.
2. ಶೇ 87.6 ರಷ್ಟು ಸಂಘ ಸಂಸ್ಥೆಗಳು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ನೀಡಿರುವ ಜಾಹಿರಾತಿನ ಮಾರ್ಗಸೂಚಿಯಲ್ಲಿನ ನಿಯಮಗಳ ಪ್ರಕಾರ ಹಣವನ್ನು ಬಳಸಿಕೊಂಡಿರುತ್ತವೆ.
3. ಶೇ 86.0 ರಷ್ಟು ಸಂಘ ಸಂಸ್ಥೆಗಳು ಕಲೆ ಮತ್ತು ಸಂಸ್ಕೃತಿಯ ಉಳಿವಿಗಾಗಿ ಶ್ರಮಿಸಿರುತ್ತವೆ.
4. ಶೇ 72 ರಷ್ಟು ಸಂಘ ಸಂಸ್ಥೆಗಳು ಕಲಾವಿದರಿಗೆ ನಗದು ಮುಖಾಂತರ ಹಣವನ್ನು ನೀಡಿರುತ್ತವೆ.
5. ಶೇ 69.9 ರಷ್ಟು ಸಂಘ ಸಂಸ್ಥೆಗಳು ಜನಪ್ರಿಯ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುವುದರ ಮೂಲಕ ಸದ್ಬಳಕೆ ಮಾಡಿಕೊಂಡಿರುತ್ತವೆ.

6. ಶೇ 30.05 ರಷ್ಟು ಸಂಘ ಸಂಸ್ಥೆಗಳು ಜಾನಪದ ಕಲಾಪ್ರಕಾರಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡಿರುತ್ತವೆ.

## ➢ ಕಲಾವಿದರ ಮೂಲಕ ಹೊರಬಂದ ಶೋಧನೆಗಳು

1. ಶೇ 92 ರಷ್ಟು ಜನ ಕಲಾವಿದರು ಊಟ-ವಸತಿ ಸೌಲಭ್ಯ ನೀಡಿರುತ್ತಾರೆ.
2. ಶೇ 88.9 ರಷ್ಟು ಜನ ಕಲಾವಿದರು ಹೇಳುವ ಪ್ರಕಾರ ಸಂಘ ಸಂಸ್ಥೆಗಳು ಕಾರ್ಯಕ್ರಮಗಳನ್ನು ಅರ್ಥಪೂರ್ಣವಾಗಿ ಯಶಸ್ವಿಗೊಳಿಸುವುದರ ಮೂಲಕ ಸದ್ಬಳಕೆ ಮಾಡಿಕೊಂಡಿರುತ್ತಾರೆ.
3. ಶೇ 88.4 ರಷ್ಟು ಜನ ಕಲಾವಿದರು ಕಲೆಯ ಉಳಿವಿಗಾಗಿ ಕಲೆಯನ್ನು ಸ್ವೀಕರಿಸಿರುತ್ತಾರೆ.
4. ಶೇ 68.7 ರಷ್ಟು ಜನ ಕಲಾವಿದರು ಹೇಳುವ ಪ್ರಕಾರ ಸಂಘ ಸಂಸ್ಥೆಗಳು ನಗದು ರೂಪದಲ್ಲಿ ಸಂಭಾವನೆ ನೀಡಿರುತ್ತಾರೆ.
5. ಶೇ 57.6 ರಷ್ಟು ಕಲಾವಿದರು ನಮ್ಮಲ್ಲಿರುವ ಕಲೆಯನ್ನು ಮೆಚ್ಚಿಕೊಂಡು ಸಂಘ ಸಂಸ್ಥೆಗಳು ನಮ್ಮನ್ನು ಆಯ್ಕೆ ಮಾಡುತ್ತವೆ.

## ➢ ಪ್ರೇಕ್ಷಕರ ಮೂಲಕ ಹೊರಬಂದ ಶೋಧನೆಗಳು

1. ಶೇ 96.7 ರಷ್ಟು ಪ್ರೇಕ್ಷಕರ ಪ್ರಕಾರ ಸಂಘ ಸಂಸ್ಥೆಗಳು ಅನುದಾನವನ್ನು ಸದ್ಬಳಕೆ ಮಾಡಿಕೊಂಡಿರುತ್ತವೆ.
2. ಶೇ 95.2 ರಷ್ಟು ಪ್ರೇಕ್ಷಕರ ಪ್ರಕಾರ ಸಂಘ ಸಂಸ್ಥೆಗಳು ಆಕರ್ಷಕವಾದ ಕಾರ್ಯಕ್ರಮಗಳನ್ನು ಮಾಡಿರುತ್ತವೆ.
3. ಶೇ 93.4 ರಷ್ಟು ಪ್ರೇಕ್ಷಕರ ಪ್ರಕಾರ ಸಂಘ-ಸಂಸ್ಥೆಗಳು ಕಲೆಯ ಉಳಿವಿಗಾಗಿ ಶ್ರಮಿಸಿರುತ್ತವೆ.

# V. ಶಿಫಾರಸ್ಸುಗಳು

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಸಾಮಾನ್ಯ ಯೋಜನೆ, ವಿಶೇಷ ಘಟಕ ಮತ್ತು ಗಿರಿಜನ ಉಪಯೋಜನೆ ಎನ್ನುವ ಮೂರು ಘಟಕಗಳ ಮುಖಾಂತರ ಸಾಹಿತ್ಯಪರ, ಸಾಂಸ್ಕೃತಿಕಪರ ಮತ್ತು ಕನ್ನಡಪರ ಕಾರ್ಯಕ್ರಮಗಳಿಗೆ ನೀಡಿದ ಪ್ರೋತ್ಸಾಹ ಧನವನ್ನು ಸಂಘ-ಸಂಸ್ಥೆಗಳು ಸದ್ಬಳಕೆ ಮಾಡಿಕೊಂಡಿರುವುದರ ಬಗ್ಗೆ ಮೌಲ್ಯಮಾಪನ ಮಾಡಿದಾಗ ಕಂಡುಬಂದ ಶಿಪಾರಸ್ಸುಗಳು ಈ ಕೆಳಗಿನಂತಿವೆ.

1. ಶುದ್ಧ ಸಾಂಸ್ಕೃತಿಕ/ಸಾಹಿತ್ಯಿಕ ಉದ್ದೇಶಕ್ಕಾಗಿ ಸ್ಥಾಪಿತವಾಗಿ ಸಕ್ರಿಯವಾಗಿ ತೊಡಗಿಕೊಂಡಿರುವ ಸಂಘ ಸಂಸ್ಥೆಗಳನ್ನು ಮಾತ್ರ ಧನಸಹಾಯಕ್ಕಾಗಿ ಪರಿಗಣಿಸಬೇಕು.
2. ಪ್ರತಿ ಆರ್ಥಿಕ ವರ್ಷದ ಪ್ರಾರಂಭದಲ್ಲಿಯೇ ಸಂಘ-ಸಂಸ್ಥೆಗಳಿಗೆ ಅನುದಾನವನ್ನು ಮಂಜೂರು ಮಾಡುವುದು.

3. 1960 ರ ಸಹಕಾರ ಕಾಯ್ದೆಯ ಪ್ರಕಾರ ಏಕರೂಪವಾಗಿ ನೋಂದಣಿ ಮಾಡಿಸಿದಂತಹ ಸಂಘ–ಸಂಸ್ಥೆಗಳನ್ನು ಅನದಾನ ನೀಡುವಾಗ ಮಾತ್ರ ಪರಿಗಣಿಸಬೇಕು.
4. ಸಂಘ ಸಂಸ್ಥೆಗಳು ಹಿಂದಿನ ವರ್ಷದಲ್ಲಿ ಏರ್ಪಡಿಸಿದ ಕಾರ್ಯಕ್ರಮಗಳ ಗುಣಮಟ್ಟವನ್ನು ಪರಿಗಣಿಸಿ ಧನಸಹಾಯವನ್ನು ನಿಗದಿ ಪಡಿಸುವುದು.
5. ಸಂಘ ಸಂಸ್ಥೆಗಳು ನಡೆಸುವ ಸಾಂಸ್ಕೃತಿಕ ಚಟುವಟಿಕೆಗಳ ಸಂಘಟನಾ ವೆಚ್ಚ, ಸಂಭಾವನೆ ವೆಚ್ಚಗಳನ್ನು ರೂ.5000/–ಗಳ ಮೇಲ್ಪಟ್ಟು ಪಾವತಿಸುವ ಮೊತ್ತವನ್ನು ಆರ್.ಟಿ.ಜಿ.ಎಸ್/ ಎನ್.ಇ.ಎಫ್.ಟಿ ಮೂಲಕ ಕಡ್ಡಾಯವಾಗಿ ಮಾಡಬೇಕು.
6. ಸಾಮಾನ್ಯ ಯೋಜನೆ, ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಗಳಿಗೆ ನಿಗದಿಯಾದ ಹಣವನ್ನು ಆಯಾ ಯೋಜನೆಯ ಅಡಿಯಲ್ಲಿ ಸಂಬಂಧಿಸಿದ ಸಂಘ ಸಂಸ್ಥೆಗಳಿಗೆ ಮಾತ್ರ ನಿಯಮನುಸಾರ ಬಳಕೆ ಮಾಡಬೇಕು.
7. ಸಂಘ–ಸಂಸ್ಥೆಗಳು ಕಾರ್ಯಕ್ರಮಗಳನ್ನು ನಡೆಸುವಾಗ ಸಾಮಾಜಿಕ ಸಮಸ್ಯೆಗಳ ಕಡೆ ಗಮನ ಕೊಡಬೇಕು
8. ನಶಿಸಿ ಹೋಗುತ್ತಿರುವ ಕಲಾಪ್ರಕಾರಗಳ ಮೇಲೆ ಬೆಳಕು ಚೆಲ್ಲಬೇಕು.
9. ಪ್ರತಿ ಸಂಘ ಸಂಸ್ಥೆಗಳಿಗೆ ಮಾರ್ಗಸೂಚಿಗೆ ಅನುಗುಣವಾಗಿ ಅನುದಾನ ನೀಡುವುದು.
10. ಆನ್–ಲೈನ್ ಮೂಲಕ ಸಂಘ ಸಂಸ್ಥೆಗಳಿಗೆ ಅನುದಾನಕ್ಕಾಗಿ ಅರ್ಜಿ ಸಲ್ಲಿಸುವಾಗ ಉಂಟಾಗುವ ತಾಂತ್ರಿಕ ದೋಷವನ್ನು ಸರಿಪಡಿಸಬೇಕು.

ಸಂಘ ಸಂಸ್ಥೆಗಳು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮುಖಾಂತರ ಧನಸಹಾಯವನ್ನು ಪಡೆದುಕೊಂಡು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುವಾಗ ಹಣವನ್ನು ಹೇಗೆ ಸದ್ಬಳಕೆ ಮಾಡಿಕೊಂಡಿವೆ ಎಂಬುದರ ಬಗ್ಗೆ ಮೌಲ್ಯಮಾಪನ ಮಾಡಿ ವರದಿಯನ್ನು ಸಿದ್ಧಪಡಿಸಿದಾಗ ಕಂಡುಬಂದ ಅಂಶಗಳನ್ನು ಸಂಕ್ಷಿಪ್ತವಾಗಿ ಕಾರ್ಯಕಾರಿ ಸಾರಂಶದಲ್ಲಿ ಈ ಮೇಲ್ಕಂಡಂತೆ ತಿಳಿಸಲಾಗಿದೆ.

# ಪ್ರಸ್ತಾವನೆ

ಕರ್ನಾಟಕದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ತನ್ನದೆ ಆದ ಅಸ್ತಿತ್ವವನ್ನು ಹೊಂದಿ ಬೆಳೆಯುತ್ತಿದೆ. ಇದು ಕರ್ನಾಟಕದಲ್ಲಿನ ಕಲೆ, ಸಾಹಿತ್ಯ, ಸಂಸ್ಕೃತಿ, ನಾಡು–ನುಡಿ, ಸಂಗೀತ, ನೃತ್ಯ ಮತ್ತು ಕಲಾಪ್ರಕಾರಗಳನ್ನು ಉಳಿಸಿ ಬೆಳೆಸುವಲ್ಲಿ ಶ್ರಮಿಸುತ್ತಿದೆ. ಕವಿಗಳನ್ನು, ಕಲಾವಿದರನ್ನು, ಶಿಲ್ಪಿಗಳನ್ನು, ಸಂಗೀತಗಾರರನ್ನು, ಬರಹಗಾರರನ್ನು, ಗುರುತಿಸಿ ಅವರನ್ನು ಸಮಾಜಕ್ಕೆ ಪರಿಚಯಿಸುವ ಕೆಲಸವನ್ನು ಮಾಡುತ್ತಿದೆ. ಕನ್ನಡ ಭಾಷೆಯ ಉಳಿವಿಗೆ ಮತ್ತು ಅದರ ಅಭಿವೃದ್ದಿಗೆ ನಿರಂತರವಾಗಿ ಧ್ವನಿ ಎತ್ತುತ್ತಿದೆ. ಜೊತೆಗೆ ಗಡಿನಾಡಿನ ಸಮಸ್ಯೆಗಳನ್ನು ಕುರಿತು ಚರ್ಚೆ ಮಾಡುತ್ತಾ ಬಂದಿದೆ. ಈ ಹಿನ್ನೆಲೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಕರ್ನಾಟಕದಲ್ಲಿ ದೊಡ್ಡ ಹೆಸರು ಇದೆ. ಹಾಗಾಗಿ ಈ ಇಲಾಖೆಯ ಹುಟ್ಟು ಮತ್ತು ಬೆಳವಣಿಗೆಯನ್ನು ಹಾಗು ಇದರ ಇತಿವೃತ್ತವನ್ನು ಸೂಕ್ಷ್ಮವಾಗಿ ಇಲ್ಲಿ ತಿಳಿಸಿಕೊಡಲಾಗುವುದು.

## 1.0 ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪರಿಚಯ

ಭಾರತ ಸ್ವಾತಂತ್ರ ಪಡೆದು ತನ್ನದೇ ಆದ ಸಂವಿಧಾನ ರಚನೆ ಮಾಡಿಕೊಂಡ ನಂತರ ಅದು ಭಾಷಾವಾರು ಪ್ರಾಂತ್ಯಗಳನ್ನು ರಚನೆಮಾಡಿತು. ಹಾಗಾಗಿ ಕರ್ನಾಟಕವು ಪ್ರತ್ಯೇಕ ರಾಜ್ಯವಾಗಿ ಗುರುತಿಸಿಕೊಂಡು ನಂತರ ಮೈಸೂರು ರಾಜ್ಯವಾಗಿ ರಚನೆಯಾಯಿತು. ಅಂದಿನ ಮುಖ್ಯಮಂತ್ರಿಗಳಾದ ದಿವಂಗತ, ಕೆಂಗಲ್ ಹನುಮಂತಯ್ಯ ಅವರು ಕನ್ನಡಿಗರ ನಾಡು–ನುಡಿ, ಸಂಸ್ಕೃತಿ–ಸಾಹಿತ್ಯ ಕಲೆಗಳನ್ನು ಕೇಂದ್ರೀಕರಿಸಿ ಅವುಗಳ ಸಂರಕ್ಷಣೆ ಮತ್ತು ಸಂವರ್ಧನೆಗೆ ಪ್ರತ್ಯೇಕವಾದ ಇಲಾಖೆಯನ್ನು ಸ್ಥಾಪಿಸಬೇಕೆಂದು ಆಲೋಚನೆ ಮಾಡಿದರು. ತರುವಾಯ 1951 ರಲ್ಲಿ ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆಯನ್ನು ಸ್ಥಾಪಿಸಿದರು. ಈ ಇಲಾಖೆಯ ಮೊದಲ ನಿರ್ದೇಶಕರಾಗಿ ಪ್ರಸಿದ್ಧ ವಿದ್ವಾಂಸರಾದ ಸಿ.ಕೆ ವೆಂಕಟರಾಮಯ್ಯನವರು ಆಯ್ಕೆಯಾದರು. ಇವರು ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆಗೆ ಭದ್ರ ಬುನಾದಿಯನ್ನು ಹಾಕಿದರು. ಇಲಾಖೆಯನ್ನು ಕಟ್ಟಿ ಬೆಳೆಸಿದರು. ಇವರ ನಂತರ ಪ್ರೊ. ಎ. ಎನ್. ಮೂರ್ತಿರಾವ್ ಅವರು ಇಲಾಖೆಯ ಜವಾಬ್ದಾರಿಯನ್ನು ತೆಗೆದುಕೊಂಡರು. ಇವರು ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಅಭಿವೃದ್ಧಿಗೊಳಿಸುವಲ್ಲಿ ಶ್ರಮಿಸಿದರು. ಜೊತೆಗೆ ರಾಜ್ಯದ ಸಾಂಸ್ಕೃತಿಕ ಪರಂಪರೆಯ ಸಂರಕ್ಷಣೆಗೆ ಭದ್ರವಾದ ಬುನಾದಿಯನ್ನು ಹಾಕಿಕೊಟ್ಟರು. ತದನಂತರ ಶ್ರೀ.ಕೆ.ಎಸ್.ಧರಣೇಂದ್ರಯ್ಯ ಅವರು ಇಲಾಖೆಯನ್ನು ಮುನ್ನಡೆಸಿದರು. ಇವರ ಕಾಲದಲ್ಲಿಯೂ ಇಲಾಖೆಯು ಅಭಿವೃದ್ಧಿಯನ್ನು ಕಂಡುಕೊಂಡಿತು.

ಮುಂದೆ ಕರ್ನಾಟಕ ಸರ್ಕಾರವು 1963ರಲ್ಲಿ 'ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ' ಇಲಾಖೆಯನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯ ಒಂದು ಶಾಖೆಯನ್ನಾಗಿ ರೂಪಿಸಿತು. ಅಲ್ಲಿಯು ಈ ಇಲಾಖೆಯು ಕನ್ನಡ ನಾಡಿನ ಸಾಹಿತ್ಯ ಮತ್ತು ಸಂಸ್ಕೃತಿಯ ಪರ ಚಿಂತನೆ ಮಾಡಿತು. ತದನಂತರ ಪುನಃ ಈ ಇಲಾಖೆಯನ್ನು 1968 ರಲ್ಲಿ ಪಠ್ಯಪುಸ್ತಕ ನಿರ್ದೇಶನಾಲಯಕ್ಕೆ ವರ್ಗಾಯಿಸಲಾಯಿತು. ಈ ಇಲಾಖೆಯ ಅಡಿಯಲ್ಲಿ ಸಾಹಿತ್ಯ ಮತ್ತು

ಸಂಸ್ಕೃತಿ ಅಭಿವೃದ್ಧಿ ಇಲಾಖೆಯು ಕನ್ನಡ ಭಾಷೆ, ಸಂಸ್ಕೃತಿ ಹಾಗು ನಾಡು–ನುಡಿಯ ಸಂರಕ್ಷಣೆ ಮಾಡುವಲ್ಲಿ ಸಕ್ರಿಯವಾಗಿ ತೊಡಗಿಕೊಂಡಿತು.

ಕರ್ನಾಟಕ ಸರ್ಕಾರ ಕನ್ನಡ ಭಾಷೆ–ಸಂಸ್ಕೃತಿಯ ಅಭಿವೃದ್ಧಿಗಾಗಿ ಪ್ರತ್ಯೇಕ ಇಲಾಖೆಯನ್ನು ಆರಂಭಿಸಬೇಕು ಎನ್ನುವ ಗುರಿಯನ್ನು ಇಟ್ಟುಕೊಂಡು ಯೋಚಿಸತೊಡಗಿತು. ಆ ಸಮಯಕ್ಕೆ ರಾಜ್ಯದಲ್ಲಿ ಅಸ್ತಿತ್ವಕ್ಕೆ ಬಂದಿದ್ದ ಕರ್ನಾಟಕ ಸಂಗೀತ ಮತ್ತು ನೃತ್ಯ ಅಕಾಡೆಮಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಹಾಗೂ ಲಲಿತ ಕಲಾ ಅಕಾಡೆಮಿಗಳು ಸ್ಥಾಪನೆಯಾಗಿ ಸಾಂಸ್ಕೃತಿಕವಾಗಿ ಕ್ರೀಯಾಶೀಲವಾಗಿ ಕಾರ್ಯನಿರ್ವಹಿಸುತ್ತಿದ್ದವು. ಇದನ್ನು ಗಮನಿಸಿದ ಕರ್ನಾಟಕ ಸರ್ಕಾರ ಈ ಎಲ್ಲಾ ಅಕಾಡೆಮಿಗಳನ್ನು ಒಂದು ಕಡೆ ತಂದು ಏಕರೂಪತೆಯನ್ನು ಸೃಷ್ಟಿ ಮಾಡಲು ಆಲೋಚನೆ ಮಾಡಿತು.

ಈ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರವು 1977 ರಲ್ಲಿ ಸಾಹಿತ್ಯ ಮತ್ತು ಸಾಂಸ್ಕೃತಿಕ ವ್ಯವಹಾರಗಳ ನಿರ್ದೇಶನಾಲಯವನ್ನು ಸರ್ಕಾರದ ಮಟ್ಟದಲ್ಲಿ ಶಿಕ್ಷಣ ಮತ್ತು ಯುವಜನ ಸೇವಾ ಇಲಾಖೆಯ ಅಧೀನದಲ್ಲಿ ಸ್ಥಾಪಿಸಿತು. ಹೀಗೆ ಸ್ಥಾಪನೆಯಾದ ಸಾಹಿತ್ಯ ಮತ್ತು ಸಾಂಸ್ಕೃತಿಕ ವ್ಯವಹಾರಗಳ ನಿರ್ದೇಶನಾಲಯವು ಚೆನ್ನಾಗಿ ಬೆಳೆಯಿತು. ಆಮೇಲೆ ಈ ನಿರ್ದೇಶನಾಲಯವು ಕನ್ನಡ ಸಾಹಿತ್ಯ–ಸಂಸ್ಕೃತಿ–ಕಲೆಗಳ ಅಭಿವೃದ್ಧಿ ಮತ್ತು ಸಂರಕ್ಷಣೆಯ ಕಡೆ ಗಮನಕೊಡುತ್ತಾ ಅವುಗಳ ಉಳಿವಿಗೆ ಹೆಚ್ಚು ಶ್ರಮಿಸಿತು. ಕ್ರಮೇಣ ಇದು ತನ್ನ ವ್ಯಾಪ್ತಿಯನ್ನು ವಿವಿಧ ಕಡೆ ವಿಸ್ತರಿಸಿಕೊಂಡಿತು. ತದನಂತರ ಇದು ಕರ್ನಾಟಕದ ಭವ್ಯ ಪರಂಪರೆಯನ್ನು ಪ್ರತಿಬಿಂಬಿಸುವಂತಹ ಅನೇಕ ಕಲಾಪ್ರಕಾರಗಳನ್ನು ಗುರುತಿಸಿ ಉಳಿಸಿ–ಬೆಳೆಸುವ ಪ್ರಯತ್ನ ಮಾಡಿತು. ರಾಜ್ಯ ಮಟ್ಟದಲ್ಲಿ ಸ್ಥಳೀಯ ಕಲಾ ಪ್ರಕಾರಗಳಿಗೆ, ಜಾನಪದ ಸಂಸ್ಕೃತಿಗೆ ಹೆಚ್ಚು ಒತ್ತು ಕೊಟ್ಟಿತು. ಸ್ಥಳೀಯ ಪ್ರತಿಭೆಗಳ ಪ್ರದರ್ಶನಕ್ಕೆ ಹೆಚ್ಚು ಆಸಕ್ತಿ ತೋರಿಸಿತು. ಈ ಇಲಾಖೆಯು ಸಾಂಸ್ಕೃತಿಕ ಪುನರ್‌ಜೀವನಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಿತು. ಅದರಲ್ಲೂ ವಿಶೇಷವಾಗಿ ಗ್ರಾಮೀಣ ಪ್ರದೇಶದ ಜಾನಪದ ಕಲಾವಿದರನ್ನು ಗುರುತಿಸಿ ಅವರಿಂದ ಕಲೆಗಳು ಪ್ರದರ್ಶನಗೊಳ್ಳಲು ಹೆಚ್ಚಿನ ಒಲವು ತೋರಿಸಿದರು. ವಿದ್ಯಾರ್ಥಿಗಳು ಮತ್ತು ಎಲ್ಲಾ ವರ್ಗದ ಜನತೆಯನ್ನು ಕಲೆ ಮತ್ತು ಸಂಸ್ಕೃತಿಯ ಹಿನ್ನೆಲೆಯಲ್ಲಿ ಒಟ್ಟು ಗೂಡಿಸುವ ಪ್ರಯತ್ನವನ್ನು ಈ ನಿರ್ದೇಶನಾಲಯವು ಮಾಡಿತು. ದೇಶದಾದ್ಯಂತ ಆಗುತ್ತಿರುವ ಬದಲಾವಣೆಯನ್ನು ಗಮನದಲ್ಲಿಟ್ಟುಕೊಂಡು ಈಗಾಗಲೇ ಕನ್ನಡ ಭಾಷೆಯ ಅಭಿವೃದ್ಧಿ ಮತ್ತು ಆಡಳಿತ ಕನ್ನಡದ ಜಾರಿಗಾಗಿ ನಿಯೋಜಿತವಾಗಿದ್ದ ಭಾಷಾ ಮತ್ತು ಕನ್ನಡ ಅಭಿವೃದ್ಧಿ ಇಲಾಖೆಯನ್ನು ಸಾಹಿತ್ಯ ಮತ್ತು ಸಾಂಸ್ಕೃತಿಕ ವ್ಯವಹಾರಗಳ ನಿರ್ದೇಶನಾಲಯಕ್ಕೆ ವರ್ಗಾಯಿಸಿ ಅದನ್ನು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯವೆಂದು ಮರುನಾಮಕರಣ ಮಾಡಿ 1977ರ ಆಗಸ್ಟ್ 31ರಂದು ಜಾರಿಗೆ ತರಲಾಯಿತು. ಹೀಗೆ ಜಾರಿಗೆ ಬಂದ ಈ ನಿರ್ದೇಶನಾಲಯವು 1985 ರಲ್ಲಿ ಪುನಃ ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವಾ ಇಲಾಖೆಯ ಅಧೀನಕ್ಕೊಳಪಟ್ಟಿತು.

ಕಾಲಕ್ರಮೇಣ ಕನ್ನಡ ಮತ್ತು ಸಂಸ್ಕೃತಿ ವಿಷಯಗಳಿಗೆ ಸಂಬಂಧಪಟ್ಟಂತೆ ಪ್ರತ್ಯೇಕ ಸಚಿವಾಲಯದ ಅಗತ್ಯವಿದೆ ಎನ್ನುವ ವಿಷಯ ಕೇಳಿಬಂದಾಗ ಸರ್ಕಾರದ ಮಟ್ಟದಲ್ಲಿ ದೊಡ್ಡ ಚರ್ಚೆಯಾಗಿ 1993ರಲ್ಲಿ ಪ್ರತ್ಯೇಕ

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವಾಲಯವು ಹುಟ್ಟಿಕೊಂಡಿತು. ಈ ರೀತಿ 1993 ರಲ್ಲಿ ಪ್ರತ್ಯೇಕ ಸಚಿವಾಲಯವಾಗಿ ಹುಟ್ಟಿಕೊಂಡ ಕನ್ನಡ ಮತ್ತು ಸಂಸ್ಕೃತಿ ಸಚಿವಾಲಯವು ಇಂದು ದೊಡ್ಡ ಪ್ರಮಾಣದಲ್ಲಿ ಬೆಳೆದು ತನ್ನ ಕಾರ್ಯಚಟುವಟಿಕೆಗಳನ್ನು ವ್ಯಾಪಕವಾಗಿ ಬೆಳೆಸಿಕೊಂಡಿದೆ. ಇಂದು ಪ್ರತಿಯೊಂದು ಜಿಲ್ಲೆಯಲ್ಲಿ ತನ್ನ ಕಛೇರಿಗಳನ್ನು ಒಳಗೊಂಡಿದ್ದು ಗ್ರಾಮ ಮಟ್ಟದಿಂದ ರಾಜಧಾನಿ ಮಟ್ಟದವರೆಗೂ ತನ್ನ ಕಾರ್ಯ ಚಟುವಟಿಕೆಗಳನ್ನು ನಡೆಸುತ್ತಿದೆ. ಈ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯವು ಸಂಗೀತ, ನೃತ್ಯ, ಚಿತ್ರಕಲೆ, ನಾಟಕ, ಯಕ್ಷಗಾನ, ಬಯಲಾಟ, ತೊಗಲು ಗೊಂಬೆಯಾಟ, ಜಾನಪದ ಕಲೆ, ಸಾಹಿತ್ಯ ಮತ್ತು ಇನ್ನು ಮುಂತಾದ ಹತ್ತಾರು ಕಲಾಪ್ರಕಾರಗಳ ಸಂರಕ್ಷಣೆಗೆ ಮತ್ತು ಬೆಳವಣಿಗೆಗೆ ಹೆಚ್ಚಿನ ಆಸಕ್ತಿ ಹೊಂದಿರುತ್ತದೆ.

ಈ ಇಲಾಖೆಯು ಕನ್ನಡ ಭಾಷೆ–ಜಲ–ನಾಡು–ನುಡಿ, ಗಡಿನಾಡು ಸಮಸ್ಯೆಗಳ ಪರ ಚಿಂತನೆ ಮಾಡಿ ಅವುಗಳ ಉಳಿವಿಗೆ ಹೆಚ್ಚು ದುಡಿಯುತ್ತಿದೆ. ಈ ಇಲಾಖೆಯು ನಮ್ಮ ಸಾಂಸ್ಕೃತಿಕ ಪರಂಪರೆಯಲ್ಲಿನ ಮೂಲ ಕಲಾ ಪ್ರಕಾರಗಳನ್ನು, ಕಲಾವಿದರನ್ನು, ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಸಂರಕ್ಷಿಸುವುದಕ್ಕಾಗಿ ಸತತವಾದ ಹೋರಾಟವನ್ನು ಮಾಡುತ್ತಾ ಬಂದಿದೆ.

ಪ್ರಸ್ತುತ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ತನ್ನ ನಿರ್ದೇಶನಾಲಯದ ಮಾರ್ಗದರ್ಶನದ ಪ್ರಕಾರ ಸಾಕಷ್ಟು ಯೋಜನೆಗಳನ್ನು, ಕಾರ್ಯಕ್ರಮಗಳನ್ನು ಹಾಕಿಕೊಂಡು ಕಾರ್ಯನಿರ್ವಹಿಸುತ್ತಾ ಬಂದಿದೆ. ಕನ್ನಡ ಅಭಿವೃದ್ಧಿಯ ಹೆಸರಿನಲ್ಲಿ ಕನ್ನಡವನ್ನು ಆಡಳಿತದ ಎಲ್ಲಾ ಹಂತಗಳಲ್ಲೂ ಬಳಕೆಗೆ ತರಲು ವಿವಿಧ ಯೋಜನೆಗಳನ್ನು ಹಾಕಿಕೊಂಡಿದೆ. ಆ ಯೋಜನೆಗಳ ಮುಖಾಂತರ ಆಡಳಿತ ಕ್ಷೇತ್ರಗಳಲ್ಲಿ ಕನ್ನಡವನ್ನು ಓದಲು–ಬರೆಯಲು ಬರದೇ ಇರುವ ಕನ್ನಡೇತರ ಸಿಬ್ಬಂದಿವರ್ಗಕ್ಕೆ ಕನ್ನಡವನ್ನು ಕಲಿಸಿ ಬರೆಯಿಸುವ ಕಾರ್ಯಕ್ರಮವನ್ನು ಹಾಕಿಕೊಂಡಿದೆ. ಅವರಿಗೆ ತರಬೇತಿಯನ್ನು ಕೊಟ್ಟು ಕನ್ನಡವನ್ನು ಕಲಿಸುವ ಪ್ರಯತ್ನವನ್ನು ಮಾಡುತ್ತಿದೆ.

ಹಾಗೆಯೇ ನ್ಯಾಯಾಂಗ ಇಲಾಖೆ, ಬ್ಯಾಂಕಿಂಗ್ ಕ್ಷೇತ್ರ, ಮಹಾಲೇಖಪಾಲಕರ ಕಛೇರಿ ಸಿಬ್ಬಂದಿಗಳಿಗೆ ಅಗತ್ಯವಾಗಿ ಪ್ರತಿದಿನ ತಮ್ಮ ದಿನನಿತ್ಯದ ಕಾರ್ಯಕ್ಷೇತ್ರಗಳಲ್ಲಿ ಕನ್ನಡ ಬಳಸುವ ಕಾರಣಕ್ಕಾಗಿ ತರಬೇತಿಗಳನ್ನು ಕೊಡುತ್ತಿದೆ. ಅದೇ ರೀತಿ ಅಂಚೆ ಮೂಲಕ ಕನ್ನಡವನ್ನು ಕಲಿಸುವ ಕೆಲಸ ಮಾಡುತ್ತಿದೆ. ಅದರಲ್ಲೂ ವಿಶೇಷವಾಗಿ ಈ ಇಲಾಖೆಯು ಕೇಂದ್ರ ಸರ್ಕಾರಿ ನೌಕರರಿಗೆ ಕನ್ನಡವನ್ನು ಕಲಿಸುತ್ತಿದೆ.

ಮುಖ್ಯವಾಗಿ ಕನ್ನಡ ಬಾರದವರಿಗೆ ಕನ್ನಡ ಕಲಿಕೆ, ತನ್ನ ಇಲಾಖೆಯ ಅಧೀನ ಕಛೇರಿಯಲ್ಲಿನ ಸಿಬ್ಬಂದಿಗಳಿಗೆ ಕಂಪ್ಯೂಟರ್ ಕಲಿಸುವುದನ್ನು ಇಲಾಖೆ ಮಾಡುತ್ತಿದೆ. ಹಾಗೆಯೇ ಕಛೇರಿಗಳ ದೈನಂದಿನ ವ್ಯವಹಾರದಲ್ಲಿ ಕನ್ನಡ ಬಳಕೆಗೆ ಹೆಚ್ಚು ಅನುಕೂಲವಾಗುವಂತೆ ಮಾದರಿ ಕಛೇರಿ ಕೈಪಿಡಿ, ಆಡಳಿತ ಪದಕೋಶ ಎನ್ನುವ ಕೃತಿಗಳನ್ನು ಹೊರತಂದು ಸಂಬಂಧಿಸಿದವರಿಗೆ ನೀಡಲಾಗಿದೆ. ಹಾಗೆಯೇ ಕನ್ನಡವನ್ನು ಕನ್ನಡ ಬಾರದ ಬುದ್ಧಿವಂತ ಮಕ್ಕಳಿಗೆ ಕಲಿಸಿಕೊಡುವಂತಹ ಮಾಡುತ್ತಿದೆ. ಜೊತೆಗೆ ಬೋಧಕರಿಗೆ ಕಾರ್ಯಗಾರಗಳನ್ನು ಏರ್ಪಡಿಸಿ ಅರಿವು ಮೂಡಿಸುವ ಕೆಲಸವನ್ನು ಮಾಡುತ್ತಾ ಇದೆ.

'ಕನ್ನಡದ ಕಣ್ಮಣಿ' ಹೆಸರಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಆಕಾಶವಾಣಿಯ ಸಹಯೋಗದೊಂದಿಗೆ ಕನ್ನಡದ ಪ್ರಾಚೀನ ಕವಿಗಳಿಂದ ಹಿಡಿದು ಆಧುನಿಕ ಯುಗದ ಕವಿಗಳವರೆಗೆ ಪರಿಚಯಿಸುವ ಕೆಲಸವನ್ನು ಮಾಡುತ್ತಾ ಇದೆ. ಜೊತೆಗೆ 'ಮನೆಯಂಗಳದ ಮಾತುಕತೆ'ಯ ಮೂಲಕ ನಡೆದ ಕಾರ್ಯಕ್ರಮಗಳನ್ನು ಆಕಾಶವಾಣಿಯ ಮೂಲಕ ಕರ್ನಾಟಕದ ಜನತೆಗೆ ತೋರಿಸುವ ಕೆಲಸವನ್ನು ಮಾಡುತ್ತಿದೆ. ಹಾಗೆಯೇ ಮನೆಯಂಗಳದ ಮಾತುಕತೆಯ ಧ್ವನಿಮುದ್ರಿಕೆಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಹೊರತಂದಿರುತ್ತದೆ. ನಂತರ ಅಖಿಲ ಭಾರತ ಭಾಷಾ ಸೌಹಾರ್ದ ಕಾರ್ಯಕ್ರಮಗಳನ್ನು ಇಲಾಖೆಯು ನಡೆಸುತ್ತಿದೆ. ಕನ್ನಡದ ಬರಹಗಾರರನ್ನು ಮತ್ತು ಅವರ ಸೇವೆಯನ್ನು ಮೆಚ್ಚಿ ಅವರುಗಳಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಗೌರವಾನ್ವಿತ ಪ್ರಶಸ್ತಿಯನ್ನು ನೀಡುತ್ತಾ ಬಂದಿದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಸಾಹಿತಿಗಳಿಗೆ, ನಟರಿಗೆ, ಕಲಾವಿದರಿಗೆ, ಶಿಲ್ಪಕಾರರಿಗೆ, ನೃತ್ಯಗಾರರಿಗೆ, ಸಂಗೀತಗಾರರಿಗೆ ಪ್ರತಿವರ್ಷ ಪ್ರಶಸ್ತಿಗಳನ್ನು ನೀಡುತ್ತಿದೆ. ಅಂದರೆ ನಿಜಗುಣ ಪುರಂದರ ಪ್ರಶಸ್ತಿಯನ್ನು ಸಂಗೀತಗಾರರಿಗೆ, ಡಾ.ಗುಬ್ಬಿ ವೀರಣ್ಣ ಪ್ರಶಸ್ತಿಯನ್ನು ವೃತ್ತಿ ರಂಗಭೂಮಿ ಕಲಾವಿದರಿಗೆ, ವರ್ಣಶಿಲ್ಪಿ ವೆಂಕಟಪ್ಪ ಪ್ರಶಸ್ತಿಯನ್ನು ಚಿತ್ರ ಕಲಾವಿದರಿಗೆ, ಜಾನಪದಶ್ರೀ ಪ್ರಶಸ್ತಿಯನ್ನು ಜಾನಪದ ಕಲಾವಿದರಿಗೆ, ಶಾಂತಲಾ ನಾಟ್ಯ ಪ್ರಶಸ್ತಿಯನ್ನು ನೃತ್ಯ ಕಲಾವಿದರಿಗೆ, ಜಕಣಾಚಾರಿ ಪ್ರಶಸ್ತಿಯನ್ನು ಶಿಲ್ಪ ಕಲಾವಿದರಿಗೆ, ಸಂತಶಿಶುನಾಳ ಷರೀಫ ಪ್ರಶಸ್ತಿಯನ್ನು ಸುಗಮ ಸಂಗೀತ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದವರಿಗೆ, ಕುಮಾರವ್ಯಾಸ ಪ್ರಶಸ್ತಿಯನ್ನು ಗಮಕ ಕಲಾವಿದರಿಗೆ, ಪಂಪ ಪ್ರಶಸ್ತಿಯನ್ನು ಸಾಹಿತ್ಯ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದವರಿಗೆ, ಪ್ರೊ.ಕೆ.ಜಿ.ಕುಂದಣಗಾರ ಗಡಿನಾಡ ಸಾಹಿತ್ಯ ಪ್ರಶಸ್ತಿಯನ್ನು ಗಡಿನಾಡಿನ ಸಾಹಿತಿಗಳಿಗೆ, ದಾನ ಚಿಂತಾಮಣಿ ಅತ್ತಿಮಬ್ಬೆ ಪ್ರಶಸ್ತಿಯನ್ನು ಮಹಿಳಾ ಸಾಹಿತಿಗಳಿಗೆ, ಸಂಗೊಳ್ಳಿರಾಯಣ್ಣ ಪ್ರಶಸ್ತಿಯನ್ನು ಕನ್ನಡ ನಾಡಿನ ನೆಲ, ಜಲ, ಭಾಷೆ, ಸಂಸ್ಕೃತಿಗಾಗಿ ಹೋರಾಡಿದವರಿಗೆ, ಬಿ.ವಿ.ಕಾರಂತ ಪ್ರಶಸ್ತಿಯನ್ನು ಹವ್ಯಾಸಿ ರಂಗಭೂಮಿ ಕಲಾವಿದರಿಗೆ, ಕನಕಶ್ರೀ ಪ್ರಶಸ್ತಿಯನ್ನು ಕನಕದಾಸರ ಸಾಹಿತ್ಯದ ಮೇಲೆ ಸೇವೆ ಸಲ್ಲಿಸಿದ ಕಲಾವಿದರಿಗೆ, ಕರ್ನಾಟಕ ರತ್ನ ಪ್ರಶಸ್ತಿಯನ್ನು ಸಾಂಸ್ಕೃತಿಕ, ವೈಜ್ಞಾನಿಕ, ಮಾನವಿಕ, ಸಾಮಾಜಿಕ ಹಾಗೂ ಆರ್ಥಿಕ ಕ್ಷೇತ್ರಗಳಲ್ಲಿ ಅತ್ಯಂತ ಗಣನೀಯ ಸೇವೆಯನ್ನು ಸಲ್ಲಿಸಿರುವ ಗಣ್ಯರಿಗೆ, ರಾಜ್ಯ ಸಂಗೀತ ವಿದ್ವಾನ್ ಗೌರವ ಪ್ರಶಸ್ತಿಯನ್ನು ಸಂಗೀತ ವಿದ್ವಾಂಸರಿಗೆ ನೀಡುತ್ತಿದೆ. ಹಾಗೂ ನಾಡಿನ ಏಳಿಗೆಗಾಗಿ ವಿವಿಧ ಕ್ಷೇತ್ರಗಳಿಗೆ ಗಣನೀಯ ಸೇವೆ ಸಲ್ಲಿಸಿರುವ ಗಣ್ಯ ವ್ಯಕ್ತಿಗಳಿಗೆ/ಸಂಸ್ಥೆಗಳಿಗೆ ಕನ್ನಡ ರಾಜ್ಯೋತ್ಸವದ ಅಂಗವಾಗಿ ಪ್ರತಿವರ್ಷ ನವೆಂಬರ್ 1 ರಂದು ಕರ್ನಾಟಕ ಸರ್ಕಾರವು ಕನ್ನಡ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ.

ಈ ಪ್ರಶಸ್ತಿಗಳ ಜೊತೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ರಾಷ್ಟ್ರೀಯ ಪ್ರಶಸ್ತಿಗಳನ್ನು ಕೊಡುತ್ತಾ ಬಂದಿದೆ. ಕರ್ನಾಟಕ ಮತ್ತು ಹಿಂದೂಸ್ತಾನಿ ಸಂಗೀತ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ರಾಷ್ಟ್ರ ಮಟ್ಟದ ಹಿರಿಯ ಕಲಾವಿದರಿಗೆ ಟಿ. ಚೌಡಯ್ಯ ರಾಷ್ಟ್ರೀಯ ಪ್ರಶಸ್ತಿಯನ್ನು ನೀಡಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಗೌರವಿಸುತ್ತಾ ಬಂದಿದೆ. ಅದೇ ರೀತಿ ಸರ್ವಧರ್ಮ ಸಮಾನತೆಗಾಗಿ ದುಡಿದ ವ್ಯಕ್ತಿಗಳಿಗೆ ಮತ್ತು ಸಂಸ್ಥೆಗಳಿಗೆ

ಬಸವ ಪುರಸ್ಕಾರ ರಾಷ್ಟ್ರೀಯ ಪ್ರಶಸ್ತಿಯನ್ನು ನೀಡಿ ಗೌರವಿಸುತ್ತಿದೆ. ಒಟ್ಟಾರೆಯಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು 15 ರಾಜ್ಯ ಮಟ್ಟದ ಪ್ರಶಸ್ತಿಗಳನ್ನು ಮತ್ತು 2 ರಾಷ್ಟ್ರಮಟ್ಟದ ಪ್ರಶಸ್ತಿಗಳನ್ನು ಸಂಬಂಧಿಸಿದ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದವರಿಗೆ ನೀಡುತ್ತಾ ಬಂದಿದೆ. ಇವುಗಳ ಜೊತೆಗೆ ರಾಷ್ಟ್ರಕವಿ ಪ್ರಶಸ್ತಿಯನ್ನು ಖ್ಯಾತ ಕವಿಗಳಾದ ಮಂಜೇಶ್ವರ ಗೋವಿಂದ ಪೈ, ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪ (ಕುವೆಂಪು) ಮತ್ತು ಡಾ.ಜಿ.ಎಸ್.ಶಿವರುದ್ರಪ್ಪ ಅವರಿಗೆ ನೀಡಿರುತ್ತದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಸಾಂಸ್ಕೃತಿಕ ರಂಗಮಂದಿರಗಳನ್ನು ಜಿಲ್ಲಾ ಮಟ್ಟದಲ್ಲಿ ಕಟ್ಟಿಸಿರುತ್ತದೆ. ಹಾಗೆಯೇ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಜಯಂತಿಗಳ ಆಚರಣೆಯನ್ನು, ಜಿಲ್ಲಾ ಉತ್ಸವಗಳನ್ನು ಮಾಡುತ್ತಾ ಬಂದಿದೆ. ಹೀಗೆ ಸಾಂಸ್ಕೃತಿಕವಾಗಿ ಅನೇಕ ಕಾರ್ಯಕ್ರಮಗಳನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ನಡೆಸುತ್ತಿದೆ. ಇದರ ಜೊತೆಗೆ ಸಾಹಿತ್ಯಿಕವಾಗಿ ಪ್ರಕಟಿತಗೊಂಡ ಗ್ರಂಥಗಳಿಗೆ ಧನ ಸಹಾಯವನ್ನು ನೀಡುತ್ತಾ ಬಂದಿದೆ. ಅದೇ ರೀತಿ ಪಿ.ಹೆಚ್.ಡಿ ಮಹಾಪ್ರಬಂಧಗಳ ಹಸ್ತಪ್ರತಿ ಮುದ್ರಣಕ್ಕೆ ಮತ್ತು ಎಂ.ಫಿಲ್ ಪ್ರೌಢಪ್ರಬಂಧಗಳ ಹಸ್ತಪ್ರತಿ ಮುದ್ರಣಕ್ಕೆ ಧನ ಸಹಾಯ ನೀಡುತ್ತಿದೆ. ಕಷ್ಟದಲ್ಲಿ ಜೀವಿಸುತ್ತಿರುವ ಜಾನಪದ ಕಲಾವಿದರಿಗೆ ಮಾಶಾಸನವನ್ನು ನೀಡಲಾಗುತ್ತಿದೆ. ಜೊತೆಗೆ ಜಾನಪದ ಕಲಾವಿದರಿಗೆ ವಾದ್ಯಪರಿಕರ, ವೇಷಭೂಷಣಗಳನ್ನು ಖರೀದಿಸುವುದಕ್ಕೆ ಧನ ಸಹಾಯ ನೀಡುತ್ತಾ ಬಂದಿದೆ. ಹಾಗೂ ಚಿತ್ರ ಮತ್ತು ಚಿತ್ರಕಲಾ ಪ್ರದರ್ಶನಕ್ಕೆ ಕಲಾವಿದರಿಗೆ ಧನಸಹಾಯವನ್ನು ನೀಡುತ್ತಿದೆ. ಹೀಗೆ ಇನ್ನೂ ಹಲವು ಕಾರ್ಯಕ್ರಮಗಳಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಧನಸಹಾಯವನ್ನು ನೀಡುತ್ತಾ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ತುಂಬಾ ಕ್ರಿಯಾಶೀಲವಾಗಿ ಕರ್ನಾಟಕದಲ್ಲಿ ತನ್ನ ಕಾರ್ಯವನ್ನು ನಿರ್ವಹಿಸುತ್ತದೆ.

ಹೀಗೆ ನಿರಂತರವಾಗಿ ಕನ್ನಡ ಮತ್ತು ಸಂಸ್ಕೃತಿ ಸಚಿವಾಲಯವು ಕನ್ನಡ ನಾಡು-ನುಡಿ, ಸಂಸ್ಕೃತಿ, ಕಲೆ, ಸಾಹಿತ್ಯ, ಸಂಗೀತ, ನೃತ್ಯ, ಜಾನಪದ ಕಲೆಗಳಿಗೆ ಹೆಚ್ಚು ಪ್ರೋತ್ಸಾಹ ನೀಡಿ ಅವುಗಳ ಕ್ರಿಯಾಶೀಲತೆಗೆ, ಉಳಿವಿಗೆ ಮತ್ತು ಸಂವರ್ದನೆಗೆ ಹೆಚ್ಚಿನ ಒಲವು ತೋರಿಸಿರುತ್ತದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು 1993 ರಿಂದ ನಿರಂತರವಾಗಿ ಸರ್ಕಾರದ ಅನುದಾನವನ್ನು ಪಡೆದು ಈ ರೀತಿಯ ಕಾರ್ಯಕ್ರಮಗಳನ್ನು ಪ್ರತಿವರ್ಷ ಆಚರಿಸುತ್ತಾ ಬಂದಿರುತ್ತದೆ.

## 1.1 ಮೌಲ್ಯಮಾಪನ ವಿಷಯ

ಕರ್ನಾಟಕ ಸರ್ಕಾರದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು 2014–15 ರಿಂದ 2016–17ನೇ ಸಾಲಿನಲ್ಲಿ (ಒಟ್ಟು ಮೂರು ವರ್ಷ) ಸಾಮಾನ್ಯ ಯೋಜನೆ, ವಿಶೇಷ ಘಟಕ ಯೋಜನೆ, ಗಿರಿಜನ ಉಪಯೋಜನೆಗಳ ಮೂಲಕ ಸಂಘ–ಸಂಸ್ಥೆಗಳಿಗೆ ಪ್ರತಿವರ್ಷ ಧನಸಹಾಯವನ್ನು ನೀಡುತ್ತಾ ಬಂದಿದೆ. ಈ ಸಂಘ–ಸಂಸ್ಥೆಗಳು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ನೀಡಿದ ಪ್ರೋತ್ಸಾಹ ಧನವನ್ನು ಪಡೆದು ಸಾಹಿತ್ಯಪರ, ಸಾಂಸ್ಕೃತಿಕಪರ ಮತ್ತು ಕನ್ನಡಪರ ಕಾರ್ಯಕ್ರಮಗಳಿಗೆ ಯಾವ ರೀತಿ ಸದ್ಬಳಕೆ ಮಾಡಿಕೊಂಡಿರುತ್ತವೆ ಎಂಬುದನ್ನು ಕುರಿತು ಅಧ್ಯಯನ ಮಾಡುವುದೇ ಇಲ್ಲಿನ ಮೌಲ್ಯಮಾಪನದ ವಿಷಯವಾಗಿದೆ.

## 1.2 ಯೋಜನೆಗಳ ಅನುಷ್ಠಾನ:

ಕರ್ನಾಟಕವು ಸಾಂಸ್ಕೃತಿಕವಾಗಿ ತುಂಬಾ ವೈವಿಧ್ಯಮಯವಾದ ಕಲಾ ಶ್ರೀಮಂತಿಕೆಯನ್ನು ಹೊಂದಿ ದೇಶಿ ಸಂಸ್ಕೃತಿಯನ್ನು ಮೈಗೂಡಿಸಿಕೊಂಡಿದೆ. ಕರ್ನಾಟಕದ ಸಾಂಸ್ಕೃತಿಕ ಲೋಕದಲ್ಲಿ ಜಾನಪದ ಕಲಾಪ್ರಕಾರಗಳು ತಮ್ಮದೇ ಆದ ಅಸ್ತಿತ್ವವನ್ನು ಉಳಿಸಿಕೊಂಡು ನಮ್ಮ ಸಂಸ್ಕೃತಿಯನ್ನು ಬೆಳೆಸಿವೆ. ಆದ್ದರಿಂದಲೇ ಕರ್ನಾಟಕದಲ್ಲಿ ಅನೇಕ ಕಲಾ ಪ್ರಕಾರಗಳು ಪ್ರಾದೇಶಿಕವಾಗಿ ಬಳಕೆಯಲ್ಲಿವೆ. ಕರ್ನಾಟಕವು ನೃತ್ಯ, ಸಂಗೀತ, ನಾಟಕ, ಚಿತ್ರಕಲೆ, ಯಕ್ಷಗಾನ, ಬಯಲಾಟ, ತೊಗಲು ಗೊಂಬೆಯಾಟ, ಜಾನಪದ ಕಲೆಗಳು, ಸಾಹಿತ್ಯ ಮತ್ತು ಇನ್ನು ಹಲವು ಸಾಂಸ್ಕೃತಿಕ ಪ್ರಕಾರಗಳನ್ನು ಹೊಂದಿ ವಿವಿಧತೆಯಲ್ಲಿ ಏಕತೆಯನ್ನು ಮೆರೆದಿರುತ್ತದೆ, ಹೀಗೆ ಜೀವಂತವಾಗಿ ಉಸಿರಾಡುತ್ತಿರುವ ಇಂತಹ ಸಂಸ್ಕೃತಿಯನ್ನು ಉಳಿಸಿ ಬೆಳೆಸುವುದಕ್ಕಾಗಿಯೇ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಸಾಮಾನ್ಯ ಯೋಜನೆ, ವಿಶೇಷ ಘಟಕ ಯೋಜನೆ, ಗಿರಿಜನ ಉಪಯೋಜನೆ ಎಂಬ ಮೂರು ಯೋಜನೆಗಳನ್ನು ಅನುಷ್ಠಾನಗೊಳಿಸಿರುತ್ತದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಸಾಮಾನ್ಯ ಯೋಜನೆ, ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆ ಎನ್ನುವ ಈ ಮೂರು ಯೋಜನೆಗಳಿಂದ ಸಂಘ–ಸಂಸ್ಥೆಗಳಿಗೆ ಧನಸಹಾಯ ನೀಡಿ ಆ ಸಂಸ್ಥೆಗಳ ಮೂಲಕ ಕನ್ನಡ ನಾಡಿನ ಭಾಷೆ ಮತ್ತು ಸಂಸ್ಕೃತಿಯನ್ನು ರಕ್ಷಿಸುವ ಮತ್ತು ಬೆಳೆಸುವ ಕೆಲಸವನ್ನು ಮಾಡುತ್ತಿದೆ. ವಾಸ್ತವವಾಗಿ ಈ ಮೂರು ಯೋಜನೆಗಳ ಉದ್ದೇಶ ಒಂದೇ ಆಗಿರುತ್ತದೆ. ಹಾಗಾಗಿ ಈ ಯೋಜನೆಗಳು ಸಾಹಿತ್ಯ, ಕಲೆ, ಸಂಗೀತ, ನೃತ್ಯ, ಚಿತ್ರಕಲೆ, ನಾಟಕಗಳನ್ನು ಉಳಿಸಿ ಬೆಳೆಸುವ ಕೆಲಸವನ್ನು ಮಾಡುತ್ತವೆ. ಜೊತೆಗೆ ಜಾನಪದ ಕಲಾ ಪ್ರಕಾರಗಳಾದ ಕಂಸಾಳೆ, ಪೂಜಾಕುಣಿತ, ಪಟಕುಣಿತ, ವೀರಗಾಸೆ, ಡೊಳ್ಳುಕುಣಿತ, ನಗಾರಿ, ತಮಟೆವಾದನ, ಚಂಡೆವಾದನ, ಸೋಮನಕುಣಿತ, ಕೊರಗರ ಡೋಲು, ಗೊರವರ ನೃತ್ಯ, ಕರಡಿ ಮಜಲು, ಜಗ್ಗಲಿಗೆ, ಕೋಲಾಟ, ಹೆಜ್ಜೆಮೇಳ, ಹುಲಿವೇಷ, ಗಾರುಡಿಗೊಂಬೆ, ಕಹಳೆ, ಉರುಮೆ ಇವೆಲ್ಲಾ ಜನಪದ ಕಲಾಪ್ರಕಾರಗಳಾಗಿವೆ. ಈ ಪ್ರಕಾರಗಳು ಜನಪದ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತವೆ. ಈ ಪ್ರಕಾರಗಳು ಹಬ್ಬ–ಹರಿದಿನ, ಜಾತ್ರೆ–ಉತ್ಸವ, ಊರಹಬ್ಬ, ನಾಡಹಬ್ಬ ಇನ್ನೂ ಮುಂತಾದ ಕಾರ್ಯಕ್ರಮಗಳಲ್ಲಿ

ಪ್ರದರ್ಶನಗೊಂಡು ದೇಸಿಯತೆಯನ್ನು ಪ್ರತಿಬಿಂಬಿಸುತ್ತವೆ. ಆದ್ದರಿಂದ ಇವುಗಳ ಉಳಿವಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಶ್ರಮಿಸುತ್ತಿದೆ. ಅದೇರೀತಿ ಗೀಗಿಪದ, ಸೋಬಾನೆಪದ, ಭಜನೆಪದ, ತತ್ವಪದ, ನೀಲಗಾರರ ಹಾಡುಗಳು, ಮಂಟೇಸ್ವಾಮಿ ಮತ್ತು ಜುಂಜಪ್ಪ ಅವರ ಮೇಲಿನ ಹಾಡುಗಳು, ಬುರ್ರಾ ಕಥನಗಳು, ಲಾವಣಿಗಳು ಹಾಗು ಇನ್ನೂ ಮುಂತಾದ ಜಾನಪದ ಹಾಡುಗಳ ಮುಖಾಂತರ ಜಾನಪದ ಸಂಸ್ಕೃತಿಯನ್ನು ಉಳಿಸುವ ಕೆಲಸವನ್ನು ಜಾನಪದ ಹಾಡುಗಾರರು ಮತ್ತು ಕಲಾವಿದರು ಮಾಡುತ್ತಾ ಬಂದಿದ್ದಾರೆ.

ಈ ರೀತಿಯಾಗಿ ಜಾನಪದ ಕ್ಷೇತ್ರವು ಕನ್ನಡ ನಾಡಿನಲ್ಲಿ ತುಂಬಾ ವ್ಯಾಪಕವಾಗಿ ಬೆಳೆದು ಬಂದಿದೆ. ಇಡೀ ಕರ್ನಾಟಕದುದ್ದಕ್ಕೂ ಈ ಕ್ಷೇತ್ರವು ತುಂಬಾ ವಿಭಿನ್ನವಾಗಿ ಕಾಣುವುದರಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಇವುಗಳ ಉಳಿವಿಗೆ ತನ್ನಲ್ಲಿನ ಮೂರು ಯೋಜನೆಗಳ ಮೂಲಕ ಸಂಬಂಧಿಸಿದ ಕಲಾವಿದರಿಗೆ ಸಂಘ–ಸಂಸ್ಥೆಗಳ ಮುಖಾಂತರ ಧನಸಹಾಯವನ್ನು ಮಾಡುತ್ತಿದೆ. ಹಾಗಾಗಿ ಇಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಈ ಜಾನಪದ ಸಂಸ್ಕೃತಿ, ಕಲೆ, ಸಾಹಿತ್ಯವನ್ನು ಸಂರಕ್ಷಿಸುವುದಕ್ಕಾಗಿ ಹಾಗು ನಿರ್ವಹಿಸುವುದಕ್ಕಾಗಿ ಶ್ರಮಿಸುತ್ತಿದೆ.

ಸರ್ಕಾರವು ಕನ್ನಡ ಮತ್ತು ಸಂಸ್ಕೃತಿ ಸಚಿವಾಲಯದ ಮೂಲಕ ಸಾಹಿತ್ಯ, ಸಂಸ್ಕೃತಿ, ಕಲೆ, ಸಂಗೀತ, ನೃತ್ಯ, ಜಾನಪದ ಕಲಾ ಪ್ರಕಾರಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡಿದೆ. ನಂತರ ಈ ಇಲಾಖೆಯು ನಾಡು ನುಡಿಯ ಏಳಿಗೆಗೆ ಸಂರಕ್ಷಣೆಗೆ ಹಾಗೂ ಸಂವರ್ಧನೆಗೆ ಹೆಚ್ಚಿನ ಬೆಂಬಲ ನೀಡಿ ಸಹಕರಿಸಿರುತ್ತದೆ. ಆದರೆ ಸರ್ಕಾರದ ಮಟ್ಟದಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಧನಸಹಾಯ ನೀಡಿದರೂ ಅದು ಎಲ್ಲಾ ವರ್ಗದವರಿಗೆ ತಲುಪುವುದಿಲ್ಲ. ಅದು ಒಂದೇ ವರ್ಗಕ್ಕೆ ಮಾತ್ರ ದೊರೆಯುತ್ತದೆ. ಪ್ರತಿಯೊಂದು ಕಾರ್ಯಕ್ರಮಗಳಲ್ಲಿ ಯಾರು ಇಲಾಖೆಯೊಂದಿಗೆ ಪರಿಚಯವನ್ನು ಇಟ್ಟುಕೊಂಡಿರುತ್ತಾರೋ ಅಂತಹವರು ಧನಸಹಾಯವನ್ನು ಪಡೆದುಕೊಳ್ಳುತ್ತಾರೆ. ಅದರಲ್ಲೂ ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ ಸರಿಯಾದ ರೀತಿಯಲ್ಲಿ ಅನುದಾನ ಕೈ ಸೇರುತ್ತಿಲ್ಲ ಎಂಬ ದೊಡ್ಡ ಕೂಗು ಕರ್ನಾಟಕದಾದ್ಯಂತ ಕೇಳಿ ಬಂದಿತು. ಅದರಲ್ಲೂ ಅಧಿಕಾರಿಗಳು ಸರ್ಕಾರದ ಅನುದಾನವನ್ನು ಬಿಡುಗಡೆ ಮಾಡಬೇಕಾದರೆ ಎಲ್ಲಾ ಜನಾಂಗ ಮತ್ತು ಜಾತಿಗಳನ್ನು ಪರಿಗಣಿಸುವುದಿಲ್ಲ ಎನ್ನುವ ಮಾಹಿತಿ ಸಂಬಂಧಿಸಿದ ಉನ್ನತ ಅಧಿಕಾರಿಗಳ ಗಮನಕ್ಕೆ ಬಂದಿತು. ಈ ಹಿನ್ನೆಲೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಉನ್ನತ ಮಟ್ಟದಲ್ಲಿ ಸಭೆ ಏರ್ಪಡಿಸಿ ಎಲ್ಲಾ ಜನಾಂಗದವರಿಗೆ ಇಲಾಖೆಯ ಕಾರ್ಯಕ್ರಮಗಳನ್ನು ತಲುಪಿಸಬೇಕು ಎಂದು ತೀರ್ಮಾನಿಸಿತು. ಜೊತೆಗೆ ಧನಸಹಾಯವನ್ನು ಅವರವರ ಜಾತಿಗಳಲ್ಲಿಯೇ ಸ್ಥಾಪನೆಯಾಗಿ ಕ್ರಿಯಾಶೀಲವಾಗಿ ಕಾರ್ಯನಿರ್ವಹಿಸುತ್ತಿರುವ ಸಂಘ–ಸಂಸ್ಥೆಗಳಿಗೆ ನೀಡಬೇಕು ಎನ್ನುವ ತೀರ್ಮಾನವನ್ನು ತೆಗೆದುಕೊಂಡಿತು.

ನಂತರ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ತನ್ನ ಇಲಾಖೆಯ ಅಡಿಯಲ್ಲಿ ನಡೆಸುವ ಕಾರ್ಯಕ್ರಮಗಳಿಗೆ ಧನ ಸಹಾಯ ನೀಡುವಾಗ ಸಮಾಜದಲ್ಲಿನ ಎಲ್ಲಾ ವರ್ಗದವರನ್ನು ಪರಿಗಣಿಸಬೇಕೆಂದು ತಿರ್ಮಾನಿಸಿತು. ಆದ್ದರಿಂದಲೇ ಈ ಇಲಾಖೆಯು ಸಂಘ–ಸಂಸ್ಥೆಗಳಿಗೆ ಧನಸಹಾಯವನ್ನು ನೀಡುವುದಕ್ಕಾಗಿ

ಸಾಮಾನ್ಯ ಯೋಜನೆ, ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆ ಎನ್ನುವ ಮೂರು ಯೋಜನೆಗಳನ್ನು ಪ್ರಾರಂಭಿಸಿತು.

ಮೀಸಲಾತಿಯ ನಿಯಮಾನುಸಾರ ಕರ್ನಾಟಕ ಸರ್ಕಾರದಲ್ಲಿನ ಕೆಲವು ಇಲಾಖೆಗಳು ಈಗಾಗಲೇ ತಾವು ರೂಪಿಸಿಕೊಂಡಿರುವ ಯೋಜನೆಯಡಿಯಲ್ಲಿ ಎಲ್ಲಾ ವರ್ಗದವರಿಗೂ ಸಮಾನ ಅವಕಾಶಗಳನ್ನು ಮಾಡಿಕೊಟ್ಟು ಅವರುಗಳಿಗೆ ಧನಸಹಾಯವನ್ನು ನೀಡುವಂತೆ ಮಾಡಿರುತ್ತವೆ. ಅದೇರೀತಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಸಾಮಾನ್ಯ ಘಟಕ ಯೋಜನೆಯಡಿಯಲ್ಲಿ ಸಾಮಾನ್ಯ ವರ್ಗದ ಜನರು ಮತ್ತು ಹಿಂದುಳಿದ ವರ್ಗದ ಜನರು ಹಾಗು ಅವರುಗಳ ಸಂಘ ಸಂಸ್ಥೆಗಳಿಗೆ ಧನಸಹಾಯವನ್ನು ನೀಡಿದರೆ, ವಿಶೇಷ ಘಟಕದಡಿಯಲ್ಲಿ ಪರಿಶಿಷ್ಟ ಜಾತಿಯ ಜನರು ಮತ್ತು ಅವರ ಸಂಘ ಸಂಸ್ಥೆಗಳಿಗೆ ಧನಸಹಾಯವನ್ನು ನೀಡಿರುತ್ತಾರೆ. ಹಾಗೆಯೇ ಗಿರಿಜನ ಉಪಯೋಜನೆಯ ಅಡಿಯಲ್ಲಿ ಪರಿಶಿಷ್ಟ ವರ್ಗದ ಜನರು ಮತ್ತು ಅವರ ಸಂಘ ಸಂಸ್ಥೆಗಳಿಗೆ ಧನಸಹಾಯವನ್ನು ನೀಡಲಾಗಿರುತ್ತದೆ.

ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯವು ಒಂದು ವರ್ಷದ ಅನುದಾನವನ್ನು ಬಳಸಿಕೊಂಡು ಕ್ರಿಯಾಯೋಜನೆಗೆ ಅನುಗುಣವಾಗಿ ಅನೇಕ ಕಾರ್ಯಕ್ರಮಗಳನ್ನು ನಡೆಸಿರುತ್ತದೆ. ಜೊತೆಗೆ ತನ್ನ ಇಲಾಖೆಯ ಕಾರ್ಯಕ್ರಮಗಳಲ್ಲಿನ ಒಂದು ಭಾಗವಾಗಿ ಈ ಮೂರು ಯೋಜನೆಗಳ ಕಾರ್ಯಕ್ರಮಗಳನ್ನು ನಡೆಸುತ್ತಾ ಬಂದಿದೆ. ತಮ್ಮ ಇಲಾಖೆಯ ಅಡಿಯಲ್ಲಿ ಎಲ್ಲಾ ವರ್ಗದ ಮತ್ತು ಜನಾಂಗದ ಜನರಿಗೆ ಈ ಯೋಜನೆಗಳ ಲಾಭ ದೊರೆಯಬೇಕು ಎನ್ನುವ ಆಶಯವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇಟ್ಟುಕೊಂಡಿದೆ. ಇಂತಹ ವಿಚಾರದಲ್ಲಿ ಈ ಇಲಾಖೆಯು ಒಳ್ಳೆಯ ಕೆಲಸ ಕಾರ್ಯಗಳನ್ನು ಮಾಡುತ್ತಿದೆ.

# ಯೋಜನೆಗಳ ವಿವರಗಳು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕಲೆ, ಸಂಸ್ಕೃತಿ, ಸಂಗೀತ, ನೃತ್ಯ, ಸಾಹಿತ್ಯ ಮತ್ತು ಜಾನಪದ ಕಲಾಪ್ರಕಾರಗಳನ್ನು ಉಳಿಸಿ ಬೆಳೆಸುವ ಸಲುವಾಗಿ ತನ್ನ ಅಧೀನದಲ್ಲಿನ ಯೋಜನೆಗಳ ಮುಖಾಂತರ ಕರ್ನಾಟಕದ ಎಲ್ಲಾ ಭಾಗಗಳಲ್ಲಿನ ಸಂಘ ಸಂಸ್ಥೆಗಳಿಗೆ ಧನಸಹಾಯವನ್ನು ನೀಡುತ್ತಿದೆ. ಆದ್ದರಿಂದ ಇಲ್ಲಿನ ಯೋಜನೆಗಳ ಸ್ವರೂಪ ಮತ್ತು ಉದ್ದೇಶಗಳನ್ನು ಕುರಿತು ಇಲ್ಲಿ ಚರ್ಚಿಸಲಾಗಿದೆ.

## 2.0 ಸಾಮಾನ್ಯ ಯೋಜನೆ

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಈ ಸಾಮಾನ್ಯ ಯೋಜನೆಯ ಅಡಿಯಲ್ಲಿ ಸಾಮಾನ್ಯ ವರ್ಗದ ಮತ್ತು ಹಿಂದುಳಿದ ವರ್ಗದ ಸಂಘ ಸಂಸ್ಥೆಗಳನ್ನು ಪರಿಗಣಿಸಿ ಧನಸಹಾಯವನ್ನು ನೀಡುತ್ತಿದೆ. ಈ ಸಾಮಾನ್ಯ ಯೋಜನೆಯು ಜಾನಪದ, ನೃತ್ಯ, ಸಂಗೀತ, ಸಾಹಿತ್ಯ, ಯಕ್ಷಗಾನ, ಬಯಲಾಟ, ತೊಗಲುಗೊಂಬೆಯಾಟ, ವಿಚಾರಸಂಕಿರಣ, ಚಿತ್ರಕಲೆ, ನಾಟಕ ಇನ್ನೂ ಮುಂತಾದ ಕಲಾಪ್ರಕಾರಗಳ ಸಂರಕ್ಷಣೆ ಮತ್ತು ಸಂವರ್ದನೆಗೆ ಸಹಾಯ ಮಾಡುತ್ತಿದೆ. ಹಾಗೆಯೇ ಆ ಕಲಾ ಪ್ರಕಾರಗಳನ್ನು ಜೀವಂತಿಕೆಯಿಂದ ಮುನ್ನಡೆಸುವಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಪ್ರಮುಖ ಪಾತ್ರ ವಹಿಸಿರುತ್ತದೆ. ಆದ್ದರಿಂದ ಕರ್ನಾಟಕದಲ್ಲಿನ ಸಾಮಾನ್ಯ ವರ್ಗದ ಮತ್ತು ಹಿಂದುಳಿದ ವರ್ಗದ ಸಂಘ ಸಂಸ್ಥೆಗಳು ತಮ್ಮಲ್ಲಿನ ಕಲೆ ಮತ್ತು ಸಂಸ್ಕೃತಿಯನ್ನು ಉಳಿಸಿ ಬೆಳೆಸುವುದಕ್ಕಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಧನಸಹಾಯವನ್ನು ಪಡೆದುಕೊಳ್ಳುತ್ತಿವೆ. ಈ ರೀತಿ ಧನಸಹಾಯವನ್ನು ಪಡೆದುಕೊಂಡ ಸಂಘ ಸಂಸ್ಥೆಗಳು ತಮ್ಮ ತಮ್ಮ ಸಮುದಾಯ ಮತ್ತು ಜಾತಿ–ಜನಾಂಗಗಳಲ್ಲಿನ ಕಲಾವಿದರು ಹಾಗು ಅಲ್ಲಿನ ಕಲೆಗಳನ್ನು ಉಳಿಸಿ ಬೆಳೆಸಿ ಆ ಕಲೆಗಳಿಗೆ ಶಕ್ತಿಯನ್ನು ತುಂಬಿ ನಿರಂತರವಾಗಿ ಕ್ರಿಯಾಶೀಲವಾಗಿರುವಂತೆ ಮಾಡಲು ಈ ಯೋಜನೆಯು ಅನುಕೂಲ ಮಾಡಿಕೊಟ್ಟಿರುತ್ತದೆ. ಹಾಗಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಸಾಮಾನ್ಯ ವರ್ಗದ ಯೋಜನೆಯ ಅಡಿಯಲ್ಲಿ ಕಲೆ, ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಅಭಿವೃದ್ಧಿಗೊಳಿಸುವ ಕಾರ್ಯವನ್ನು ಮಾಡುತ್ತಿದೆ. ಈ ಇಲಾಖೆಯು ಇಡೀ ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿನ ಸಂಘ–ಸಂಸ್ಥೆಗಳನ್ನು ಪರಿಗಣಿಸಿ ಧನಸಹಾಯವನ್ನು ನೀಡುತ್ತಿದೆ.

### 2.0.1 ಸಾಮಾನ್ಯ ಯೋಜನೆಯ ಉದ್ದೇಶಗಳು

- ಸಂಘ ಸಂಸ್ಥೆಗಳ ಮೂಲಕ ಆ ಸಮುದಾಯಗಳಲ್ಲಿನ ಕಲೆ, ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಉಳಿಸಿ ಬೆಳೆಸುವುದು.
- ಕಲಾವಿದರುಗಳನ್ನು ಮತ್ತು ಜಾನಪದ ಕಲೆಗಳನ್ನು ಸಮಾಜದಲ್ಲಿ ಮುಖ್ಯವಾಹಿನಿಗೆ ತಂದು ಅವುಗಳನ್ನು ಪರಿಚಯಿಸಿ ಸಂರಕ್ಷಿಸುವುದು.
- ಜಾನಪದ ಕಲಾಪ್ರಕಾರಗಳನ್ನು, ಜಾನಪದ ಸಂಸ್ಕೃತಿಯನ್ನು ಪ್ರದರ್ಶನ ಮಾಡುವುದರಿಂದ ಅವುಗಳು ನಮ್ಮ ಸಮಾಜದಲ್ಲಿ ಚಿರಸ್ಥಾಯಿಯಾಗಿ ಉಳಿಯುವಂತೆ ಮಾಡುವುದು.

- ಜಾನಪದ ಸಂಸ್ಕೃತಿಯನ್ನು ಪ್ರತಿಬಿಂಬಿಸುವಂತಹ ಪರಿಕರಗಳನ್ನು, ವೇಷಭೂಷಣಗಳನ್ನು, ಅಲಂಕಾರ ಸಾಮಾಗ್ರಿಗಳನ್ನು ಮತ್ತು ಸಾಂಪ್ರದಾಯಿಕವಾಗಿ ಬಂದಿರುವ ಜಾನಪದ ವಸ್ತುಗಳನ್ನು ಸಂಘ-ಸಂಸ್ಥೆಗಳ ಮೂಲಕ ಗುರುತಿಸಿ ಅವುಗಳನ್ನು ಕಾಪಾಡುವುದು.
- ಪ್ರಾದೇಶಿಕವಾಗಿ ತುಂಬಾ ಭಿನ್ನವಾಗಿ ಕಂಡುಬರುವ ಸಂಸ್ಕೃತಿ, ಭಾಷೆ, ಕಲೆ ಮತ್ತು ಕಲಾವಿದರುಗಳನ್ನು ಸೂಕ್ಷ್ಮವಾಗಿ ಗಮನಿಸಿ ಅವುಗಳನ್ನು ರಕ್ಷಿಸುವುದು.
- ಸಾಮಾನ್ಯ ಯೋಜನೆಯ ಅಡಿಯಲ್ಲಿ ಬರುವ ಸಂಘ-ಸಂಸ್ಥೆಗಳನ್ನು ಸಾಮಾಜಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಮುಖ್ಯವಾಹಿನಿಯಲ್ಲಿ ಬರುವಂತೆ ಮಾಡುವುದು.

## 2.1 ವಿಶೇಷ ಘಟಕ ಯೋಜನೆ

ಈ ವಿಶೇಷ ಘಟಕ ಯೋಜನೆಯು ಸಮಾಜದಲ್ಲಿ ಶೋಷಣೆಗೆ ಒಳಗಾದ, ತುಳಿತಕ್ಕೆ ಒಳಗಾದ ಮತ್ತು ನಿರ್ಲಕ್ಷಿತ ಸಮುದಾಯಗಳಲ್ಲಿನ ಜನರು ಪರಿಶಿಷ್ಟ ಜಾತಿಯ ಹೆಸರಿನಲ್ಲಿ ಪ್ರಾರಂಭಿಸಿಕೊಂಡಿರುವ ಸಂಘ-ಸಂಸ್ಥೆಗಳಿಗೆ ಧನ ಸಹಾಯವನ್ನು ನೀಡುವುದಕ್ಕಾಗಿಯೇ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಈ ವಿಶೇಷ ಘಟಕ ಯೋಜನೆಯನ್ನು ಪ್ರಾರಂಭಿಸಿದೆ. ದಲಿತ ಸಂಸ್ಕೃತಿಯಲ್ಲಿ ವಿಭಿನ್ನವಾದ ಕಲೆ, ಸಾಹಿತ್ಯ, ಸಂಸ್ಕೃತಿ ಮತ್ತು ಕಲಾವಿದರು ಕಂಡುಬರುತ್ತಾರೆ. ಹಾಗಾಗಿ ಅಲ್ಲಿನ ವಿಶಿಷ್ಟವಾದ ಕಲೆ-ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಉಳಿಸಿ ಬೆಳೆಸುವುದಕ್ಕಾಗಿಯೇ ಕರ್ನಾಟಕ ಸರ್ಕಾರವು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮುಖಾಂತರ ಅವರುಗಳಿಗೆ ಒಂದು ಪ್ರತ್ಯೇಕ ವಿಶೇಷ ಘಟಕ ಯೋಜನೆಯನ್ನು ಸ್ಥಾಪಿಸಿ ಅದರ ಮೂಲಕ ಧನಸಹಾಯವನ್ನು ನೀಡುತ್ತಾ ಬಂದಿದೆ.

### 2.1.1 ವಿಶೇಷ ಘಟಕದ ಯೋಜನೆಯ ಉದ್ದೇಶಗಳು

- ದಲಿತ ಸಂಸ್ಕೃತಿಯಲ್ಲಿನ ಕಲೆ, ಸಂಸ್ಕೃತಿ ಮತ್ತು ಸಾಹಿತ್ಯವನ್ನು ಉಳಿಸಿ ಬೆಳೆಸುವುದು.
- ಪ್ರಾದೇಶಿಕವಾಗಿ ತುಂಬಾ ಭಿನ್ನವಾಗಿ ಕಂಡು ಬರುವ ಜಾನಪದ ಸಂಸ್ಕೃತಿ ಮತ್ತು ಕಲಾ ಪ್ರಕಾರಗಳನ್ನು ಸಂಘ-ಸಂಸ್ಥೆಗಳ ಮುಖಾಂತರ ಉಳಿಸಿ ಬೆಳೆಸಿ ಅವುಗಳನ್ನು ಮುಂದಿನ ತಲೆಮಾರಿಗೆ ಕೊಂಡೊಯ್ಯಲು ಪ್ರಯತ್ನಿಸುವುದು.
- ದಲಿತ ಸಮುದಾಯಗಳಲ್ಲಿ ಹುಟ್ಟಿ ಬೆಳೆದು ಬಂದ ಕಲಾವಿದರು ಸ್ಥಾಪಿಸಿದ ಸಂಘ ಸಂಸ್ಥೆಗಳು ಮತ್ತು ಆ ಜನಾಂಗದ ಜನರು ಸ್ಥಾಪಿಸಿಕೊಂಡ ಸಂಘ-ಸಂಸ್ಥೆಗಳು ಆರ್ಥಿಕವಾಗಿ ತುಂಬಾ ಹಿಂದುಳಿದಿರುತ್ತವೆ. ಹಾಗಾಗಿ ಇಂತಹ ಸಂಘ ಸಂಸ್ಥೆಗಳನ್ನು ಸಬಲೀಕರಣಗೊಳಿಸುವುದು.
- ವಿಶೇಷ ಘಟಕ ಯೋಜನೆಯು ದಲಿತರಲ್ಲಿನ ಕಲೆ ಮತ್ತು ಸಂಸ್ಕೃತಿಯನ್ನು, ಸಾಹಿತ್ಯ ಮತ್ತು ಜಾನಪದ ಪ್ರಕಾರಗಳನ್ನು ಹಾಗು ಅಲ್ಲಿನ ಕಲಾವಿದರ ಜೀವನ ಕ್ರಮವನ್ನು ಸುಧಾರಿಸುವಲ್ಲಿ ಪ್ರಮುಖ ಉದ್ದೇಶವನ್ನು ಇಟ್ಟುಕೊಂಡಿದೆ.

- ಈ ಸಮುದಾಯಗಳಲ್ಲಿನ ಕಲಾವಿದರಿಂದ ನೇರವಾಗಿ ಕಲೆಗಳನ್ನು ಪ್ರದರ್ಶಿಸುವುದು ಮತ್ತು ಆ ಕಲೆಗಳನ್ನು ಮುಖ್ಯವಾಹಿನಿಗೆ ತಂದು ಅವುಗಳನ್ನು ಖಾಯಂ ಆಗಿ ಉಳಿಸುವ ಉದ್ದೇಶವನ್ನು ಇಟ್ಟುಕೊಂಡಿದೆ.
- ಪರಿಶಿಷ್ಟ ಜಾತಿಯ ಜನರು ಕರ್ನಾಟಕದ ಉದ್ದಕ್ಕೂ ವಾಸವಾಗಿದ್ದಾರೆ. ಅವರಲ್ಲಿ ಪ್ರಾದೇಶಿಕವಾಗಿ ಅನೇಕ ಕಲಾ ಪ್ರಕಾರಗಳು ಜೀವಂತವಾಗಿವೆ. ಹಾಗಾಗಿ ಪ್ರಾದೇಶಿಕವಾಗಿ ಭಿನ್ನವಾಗಿ ಕಂಡುಬರುವ ಕಲೆಗಳನ್ನು ಅವರಿಂದ ಪ್ರದರ್ಶಿಸಿ ಅವುಗಳನ್ನು ಸಂಸ್ಕೃತಿಯಲ್ಲಿ ಉಳಿಸಿ ಬೆಳೆಸುವಂತಹ ಉದ್ದೇಶವನ್ನು ಇಟ್ಟುಕೊಂಡಿದೆ.
- ಪರಿಶಿಷ್ಟ ಜಾತಿಯ ಸಂಸ್ಕೃತಿಯೊಳಗಿನ ಕಲಾ ಸಂಸ್ಕೃತಿಯನ್ನು ಸಂರಕ್ಷಣೆ ಮಾಡುವ ಮತ್ತು ಸಂವರ್ಧಿಸುವ ಉದ್ದೇಶವನ್ನು ಇಟ್ಟುಕೊಂಡಿದೆ.

## 2.2 ಗಿರಿಜನ ಉಪಯೋಜನೆ.

ಕರ್ನಾಟಕ ಸರ್ಕಾರವು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮೂಲಕ ಗಿರಿಜನರಿಗೆ ಮತ್ತು ಅವರ ಸಂಸ್ಕೃತಿಗೆ ಪ್ರಾತಿನಿಧ್ಯ ನೀಡಲು ಈ ಯೋಜನೆಗಳ ಮೂಲಕ ಧನ ಸಹಾಯವನ್ನು ಸಂಘ ಸಂಸ್ಥೆಗಳಿಗೆ ನೀಡಿ ಆ ಸಂಘ ಸಂಸ್ಥೆಗಳ ಮುಖಾಂತರ ಕಲೆ ಮತ್ತು ಸಂಸ್ಕೃತಿಯನ್ನು ಸಂರಕ್ಷಿಸುತ್ತದೆ.

ಬುಡಕಟ್ಟು ಜನಾಂಗದ ಸಂಸ್ಕೃತಿಯಲ್ಲಿನ ಕಲೆ, ಸಾಹಿತ್ಯ, ಸಂಸ್ಕೃತಿ ಮತ್ತು ಜಾನಪದ ಕಲಾಪ್ರಕಾರಗಳು ತುಂಬಾ ವೈಶಿಷ್ಟತೆ ಮತ್ತು ವೈವಿಧ್ಯತೆಯನ್ನು ಹೊಂದಿವೆ. ಆದ್ದರಿಂದ ಅವುಗಳನ್ನು ಗುರುತಿಸಿ ಮುಖ್ಯವಾಹಿನಿಗೆ ತರುವ ಉದ್ದೇಶವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಇಟ್ಟುಕೊಂಡಿದೆ. ಕರ್ನಾಟಕದಲ್ಲಿ ಪ್ರಾದೇಶಿಕವಾಗಿ ತುಂಬಾ ವಿಭಿನ್ನವಾಗಿ ಕಂಡುಬರುವ ಗಿರಿಜನರ (ಪರಿಶಿಷ್ಟ ವರ್ಗದ) ಕಲೆ ಮತ್ತು ಸಂಸ್ಕೃತಿಯನ್ನು ರಕ್ಷಣೆ ಮಾಡುವ ಮತ್ತು ಸದೃಢಗೊಳಿಸುವ ಕೆಲಸವನ್ನು ಇಲ್ಲಿ ಮಾಡಲಾಗುತ್ತಿದೆ.

### 2.2.1 ಗಿರಿಜನ ಉಪಯೋಜನೆಯ ಉದ್ದೇಶಗಳು.

- ಬುಡಕಟ್ಟು ಜನಾಂಗದಲ್ಲಿನ ಕಲಾವಿದರನ್ನು ಪತ್ತೆಹಚ್ಚಿ ಅವರಲ್ಲಿನ ಕಲೆ ಮತ್ತು ಸಾಹಿತ್ಯವನ್ನು ಗುರುತಿಸಿ ಅವುಗಳಿಗೆ ಸಮಾಜದಲ್ಲಿ ಒಂದು ಗೌರವಯುತವಾದ ಸ್ಥಾನಮಾನವನ್ನು ಕೊಡುವುದು.
- ಈ ಜನಾಂಗದವರಲ್ಲಿನ ಸಂಘ-ಸಂಸ್ಥೆಗಳಿಗೆ ಧನಸಹಾಯ ಮಾಡಿ ಆ ಸಂಘ ಸಂಸ್ಥೆಯ ಮೂಲಕ ಗಿರಿಜನರ ಸಂಸ್ಕೃತಿ ಮತ್ತು ಕಲೆಯನ್ನು ಉಳಿಸಿ ಬೆಳೆಸುವುದು.
- ಈ ಜನಾಂಗದ ಸಂಸ್ಕೃತಿಯಲ್ಲಿನ ಭಾಷೆ-ಕಲೆ-ಸಾಹಿತ್ಯವನ್ನು-ಸಂಘ ಸಂಸ್ಥೆಗಳ ಮೂಲಕ ಪರಿಚಯಿಸುವುದು.
- ಬುಡಕಟ್ಟು ಜನಾಂಗದ ಸಂಸ್ಕೃತಿ ಮತ್ತು ಕಲೆಗಳನ್ನು ಮುಂದಿನ ತಲೆಮಾರಿನವರಿಗೆ ಕೊಂಡೊಯ್ಯುವಂತಹ ಕೆಲಸ ಮಾಡುವುದು.

- ಕರ್ನಾಟಕದ ಕರಾವಳಿ ಭಾಗ, ಬಯಲು ಸೀಮೆ, ಗುಡ್ಡಗಾಡು ಪ್ರದೇಶಗಳಲ್ಲಿ ವಾಸಿಸುವ ಬುಡಕಟ್ಟು ಜನರು ವಿಭಿನ್ನವಾದ ಕಲೆ ಮತ್ತು ಸಂಸ್ಕೃತಿಯನ್ನು ಹೊಂದಿದ್ದಾರೆ. ಹಾಗಾಗಿ ಆ ಕಲೆ ಮತ್ತು ಸಂಸ್ಕೃತಿಯನ್ನು ಸಂರಕ್ಷಿಸುವುದು.

ಕರ್ನಾಟಕ ಸರ್ಕಾರದಲ್ಲಿನ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಎಲ್ಲಾ ಜಾತಿ–ಜನಾಂಗದ ಸಂಘ ಸಂಸ್ಥೆಗಳಿಗೆ ಆರ್ಥಿಕ ಸಹಾಯ ಸಮಾನವಾಗಿ ಹಂಚಿಕೆಯಾಗಬೇಕು ಎಂದು ತಿರ್ಮಾನಿಸಿ ಮೇಲಿನ ಮೂರು ಯೋಜನೆಗಳನ್ನು ಪ್ರಾರಂಭಿಸಿತು. ಈ ಮೂರು ಯೋಜನೆಗಳು ತುಂಬಾ ಪರಿಣಾಮಕಾರಿಯಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿ ಗುರುತಿಸಿಕೊಂಡಿರುತ್ತವೆ. ಈ ಯೋಜನೆಗಳು ಕನ್ನಡ ನಾಡಿನ ಕಲೆ, ಸಾಹಿತ್ಯ, ಸಂಸ್ಕೃತಿ, ಸಂಗೀತ, ನೃತ್ಯ, ಜಾನಪದ ಸಂಸ್ಕೃತಿಯನ್ನು ಉಳಿಸಿ ಬೆಳೆಸುವಲ್ಲಿ ಪ್ರಧಾನ ಪಾತ್ರವನ್ನು ವಹಿಸಿರುತ್ತವೆ. ಆದ್ದರಿಂದಲೇ ಇಲ್ಲಿ ಅವುಗಳ ಉದ್ದೇಶಗಳನ್ನು ಚರ್ಚಿಸಲಾಗಿರುತ್ತದೆ.

## 2.2.2 ಗಿರಿಜನರ ಕಲಾ ಸಂಸ್ಕೃತಿಯ ವಿಶೇಷತೆ

ಗಿರಿಜನರ ಕಲಾ ಸಂಸ್ಕೃತಿಯು ಎಲ್ಲಾ ಸಂಸ್ಕೃತಿಗಿಂತ ಭಿನ್ನವಾಗಿದೆ. ಮೂಲತಃ ಬುಡಕಟ್ಟು ಜನಾಂಗದವರಾದ ಇವರು ಕರ್ನಾಟಕದ ಅರಣ್ಯ ಪ್ರದೇಶಗಳಲ್ಲಿ, ಗುಡ್ಡಗಾಡು ಪ್ರದೇಶಗಳಲ್ಲಿ, ಕರಾವಳಿ ತೀರದ ಕೆಲವು ಭಾಗಗಳಲ್ಲಿ ಮತ್ತು ಬಯಲು ಸೀಮೆಗಳಲ್ಲಿ ವಾಸಿಸುತ್ತಿದ್ದಾರೆ. ಇವರುಗಳು ತಮ್ಮ ತಮ್ಮ ಬುಡಕಟ್ಟಿನ ಪರಿಸರದಲ್ಲಿ ತಮ್ಮದೇ ಆದ ಕಲೆ ಮತ್ತು ಸಂಸ್ಕೃತಿಯನ್ನು ಹೊಂದಿರುತ್ತಾರೆ. ಕರಾವಳಿ ಭಾಗದಲ್ಲಿನ ಕೊರಗರು ದಕ್ಷಿಣ ಕನ್ನಡ, ಉಡುಪಿ, ಕಾಸರಗೋಡು, ಶಿವಮೊಗ್ಗ ಇನ್ನು ಮುಂತಾದ ಕಡೆ ವಾಸವಾಗಿರುತ್ತಾರೆ. ಇಲ್ಲಿನ ಬುಡಕಟ್ಟಿನ ಜನಾಂಗದವರಾದ ಕೊರಗರು 'ಕಂಬಳ' ಹಬ್ಬದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಡೊಳ್ಳು, ಡೋಲುಗಳನ್ನು ನುಡಿಸುತ್ತಾರೆ. ತುಳುನಾಡಿನಲ್ಲಿ ಕೊರಗರು ಡೊಳ್ಳು ಬಾರಿಸುವುದರಲ್ಲಿ ವಿಶೇಷವಾಗಿ ಕಂಡುಬರುತ್ತಾರೆ. ಹಾಗೆಯೇ ಇವರು ಕೊಳಲು ನುಡಿಸುತ್ತಾರೆ. ಜೊತೆಗೆ ಪುರುಷ ಮತ್ತು ಮಹಿಳೆಯರಿಬ್ಬರು ನೃತ್ಯಗಳನ್ನು ಮಾಡುತ್ತಾರೆ. ಈ 'ಕೊರವ' ಎಂಬ ಬುಡಕಟ್ಟು ಜನಾಂಗದಲ್ಲಿ 'ಭೂಮಿ ಹಬ್ಬ' ತುಂಬಾ ಜನಪ್ರಿಯ ಹಬ್ಬವಾಗಿದೆ. ಈ ಹಬ್ಬದಲ್ಲಿ ಮಹಿಳೆ ಪುರುಷರಿಬ್ಬರು ನೃತ್ಯವನ್ನು ಮಾಡುತ್ತಾರೆ. ಹಾಡುಗಳನ್ನು ಹೇಳುತ್ತಾರೆ. ಅದೇರೀತಿ ಚಾಮರಾಜ ನಗರ ಜಿಲ್ಲೆಯಲ್ಲಿನ ಬಿಳಿಗಿರಿರಂಗನ ಬೆಟ್ಟದಲ್ಲಿನ ಸೋಲಿಗರು 'ರೊಟ್ಟಿಹಬ್ಬ'ವನ್ನು ವಿಶೇಷವಾಗಿ ಆಚರಿಸುತ್ತಾರೆ. ಇದು ಊರುಹಬ್ಬವೆಂದು ಹೆಚ್ಚು ಪ್ರಸಿದ್ಧಿಯಾಗಿದೆ. ಈ ಸೋಲಿಗ ಬುಡಕಟ್ಟು ಜನಾಂಗದವರು 'ರೊಟ್ಟಿಹಬ್ಬ'ದಲ್ಲಿ ಸಾಂಸ್ಕೃತಿಕ ಹಾಡುಗಳನ್ನು, ನೃತ್ಯಗಳನ್ನು, ಪ್ರಕೃತಿಯಲ್ಲಿನ ಪಂಚಭೂತಗಳನ್ನು ಕೊಂಡಾಡುತ್ತಾರೆ. ದುಡಿಕುಣಿತ, ಬುಡಕಟ್ಟು ನೃತ್ಯ, ಬೆಟ್ಟಕುರುಬರ ನೃತ್ಯ, ಕರಡಿಕುಣಿತ, ಬೇಡರ ನೃತ್ಯ ಇನ್ನು ಮುಂತಾದುವುಗಳನ್ನು ಇಲ್ಲಿ ನೋಡಬಹುದಾಗಿದೆ. ಹಕ್ಕಿಪಿಕ್ಕಿಯರು, ಹಸಲರು, ಇರುಳರು, ಜೇನುಕುರುಬ, ಕಾಡುಕುರುಬ, ಕಣಿಯನ್, ಬೇಡ, ವಾಲ್ಮೀಕಿ, ಮ್ಯಾಸಬೇಡರು, ಮಲೈಕುಡಿಗಳು, ಇನ್ನು ಮುಂತಾದ ಬುಡಕಟ್ಟು ಜನಾಂಗದವರಲ್ಲಿ ಅವರದೇ ಆದ ಕಲಾ ಸಂಸ್ಕೃತಿಯನ್ನು ನೋಡಬಹುದಾಗಿದೆ.

# ಕಲಾಪ್ರಕಾರಗಳನ್ನು ಕುರಿತು ಚರ್ಚೆ

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಸಂಘ–ಸಂಸ್ಥೆಗಳಿಗೆ ಧನಸಹಾಯವನ್ನು ಮೇಲಿನ ಮೂರು ಯೋಜನೆಗಳ ಮೂಲಕ ನೀಡಿ, ಆ ಸಂಘ–ಸಂಸ್ಥೆಗಳ ಅಡಿಯಲ್ಲಿ ಈ ಕೆಳಗಿನ ಕಲಾಪ್ರಕಾರಗಳ ಉಳಿವಿಗಾಗಿ ಶ್ರಮಿಸುತ್ತಿದೆ. ಆದ್ದರಿಂದ ಇಲ್ಲಿ ಕಲಾಪ್ರಕಾರಗಳನ್ನು ಕುರಿತು ಚರ್ಚಿಸಲಾಗಿದೆ.

## 3.0 ಜಾನಪದ ;

ಜಾನಪದ ಸಂಸ್ಕೃತಿಯು ಗ್ರಾಮೀಣ ಪ್ರದೇಶದಲ್ಲಿ ಹಾಸುಹೊಕ್ಕಾಗಿದೆ. ಹಳ್ಳಿಗಳಲ್ಲಿನ ಹಬ್ಬ–ಹರಿದಿನ–ಜಾತ್ರೆ–ಉತ್ಸವಗಳಲ್ಲಿ ಜಾನಪದ ಸಂಸ್ಕೃತಿಯು ಪ್ರಧಾನವಾಗಿ ಕಂಡುಬರುತ್ತದೆ. ಇದು ಹಲವಾರು ಜಾತಿ–ಜನಾಂಗ ಮತ್ತು ಧರ್ಮಗಳ ಬೀಡಾಗಿದೆ. ಪ್ರಾದೇಶಿಕವಾಗಿ ವಿಭಿನ್ನವಾಗಿ ಕಂಡುಬರುವ ಜಾನಪದ ಸಂಸ್ಕೃತಿಯು ಭಿನ್ನ–ಭಿನ್ನವಾದ ಕಲಾಪ್ರಕಾರಗಳನ್ನು ಜಾನಪದ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಮೈಗೂಡಿಸಿಕೊಂಡು ತನ್ನದೇ ಆದ ಅಸ್ತಿತ್ವವನ್ನು ಉಳಿಸಿಕೊಂಡಿದೆ.

ಸಾಮಾನ್ಯ ವರ್ಗದವರು, ದಲಿತರು, ಪರಿಶಿಷ್ಟ ವರ್ಗದವರು, ಹಿಂದುಳಿದ ವರ್ಗದವರು, ಅಲ್ಪಸಂಖ್ಯಾತರು ಇನ್ನು ಇತ್ಯಾದಿ ವರ್ಗದವರು ಕರ್ನಾಟಕದ ಸಾಂಸ್ಕೃತಿಕ ವಲಯದಲ್ಲಿ ಕಂಡುಬರುತ್ತಾರೆ. ಇಂದು ಎಲ್ಲಾ ವರ್ಗದ ಜನರಲ್ಲಿ ಜಾನಪದ ಸಂಸ್ಕೃತಿಯು ಉಸಿರಾಡುತ್ತಿದೆ. ಜಾತಿ–ಕುಲ–ಜನಾಂಗ ಸೂಚಕವಾಗಿ ಜಾನಪದ ಕಲಾ ಪ್ರಕಾರಗಳು ಗ್ರಾಮೀಣ ಪ್ರದೇಶದಲ್ಲಿ ಹೆಚ್ಚು ಬಳಕೆಯಲ್ಲಿವೆ. ಆದ್ದರಿಂದ ಯಾವುದೇ ಜಾನಪದ ಕಲಾ ಪ್ರಕಾರವು ಅಲ್ಲಿನ ಜನರ ಮನೋಧರ್ಮ ಮತ್ತು ಸ್ಥಿತಿಗತಿಗಳ ಮೇಲೆ ನಿಂತಿರುತ್ತದೆ. ಹಾಗಾಗಿ ಇಲ್ಲಿ ಪ್ರತಿಯೊಂದು ಕಲಾ ಪ್ರಕಾರಗಳನ್ನು ಕುರಿತು ವಿವರಿಸಲಾಗುವುದು. ಕಂಸಾಳೆ, ಡೊಳ್ಳುಕುಣಿತ, ಸುಗ್ಗಿಕುಣಿತ, ಹುಲಿಕುಣಿತ, ಸೋಮನಕುಣಿತ, ಕೊರಗರ ಡೋಲು, ಪಟಕುಣಿತ, ಮಹಿಳಾ ವೀರಗಾಸೆ, ಕೋಲಾಟ, ಜಾನಪದ ನೃತ್ಯ, ಲಂಬಾಣಿ ನೃತ್ಯ, ಕರಡಿ ಮಜಲು, ಜಗ್ಗಲಗೆ, ಹೆಜ್ಜೆಮೇಳ, ಕರಡಿಮಜಲು, ಹಗಲುವೇಷ, ಕೋಲಾಟ, ಚಂಡೆವಾದನ, ತಮಟೆವಾದನ, ನಗಾರಿ ಇನ್ನು ಮುಂತಾದ ಕುಣಿತಗಳನ್ನು ನೋಡಬಹುದು. ಈ ಎಲ್ಲಾ ಜಾನಪದ ಪ್ರಕಾರಗಳನ್ನು ಸಮಾಜದಲ್ಲಿನ ಎಲ್ಲಾ ಜನರು ನೋಡಿ ಆನಂದಿಸುತ್ತಾರೆ. ಪ್ರತಿಯೊಂದು ಜಾತಿಗಳಲ್ಲಿಯು ಇಂತಹ ಕಲಾ ಪ್ರಕಾರಗಳನ್ನು ನೋಡುತ್ತೇವೆ.

ಹಾಗೆಯೇ ನೀಲಗಾರರ ಪದ(ಹಾಡು)ಗಳು, ಗೀಗೀ ಪದಗಳು, ಜಾನಪದ ಗೀತೆಗಳು, ಭಜನೆ ಪದಗಳು, ತತ್ತ್ವಪದಗಳು, ಚೌಡಕಿ ಪದಗಳು, ಸಾಂಪ್ರದಾಯಿಕ ಪದಗಳು, ಸೋಬಾನೆಪದಗಳು, ಜಾನಪದ ಕಾವ್ಯಗಳು, ಜಾನಪದ ಕಥೆಗಳು, ಲಾವಣಿಗಳು, ಒಗಟುಗಳು, ಗಾದೆಗಳು ಇವುಗಳೆಲ್ಲವೂ ಜಾನಪದ ಪ್ರಕಾರಗಳಲ್ಲಿ ಕಂಡು ಬರುತ್ತವೆ.

ತುಂಬಾ ವೈವಿಧ್ಯಮಯವಾಗಿ ವಿವಿಧ ರೀತಿಯ ಕಲಾಪ್ರಕಾರಗಳನ್ನು ಹೊಂದಿರುವ ಜಾನಪದ ಕ್ಷೇತ್ರವು ಸಾಂಸ್ಕೃತಿಕವಾಗಿ ಅಸ್ತಿತ್ವವನ್ನು ಹೊಂದಿ ತನ್ನ ಮೂಲ ತನವನ್ನು ಉಳಿಸಿಕೊಂಡಿದೆ. ಇದು ಸಾಮಾನ್ಯ ವರ್ಗ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ ಹಾಗೂ ಹಿಂದುಳಿದ ವರ್ಗಗಳಲ್ಲಿನ ಜನಪದರು ಈ ಎಲ್ಲಾ ಕಲಾಪ್ರಕಾರ ಮತ್ತು ಕಲಾ ಸಾಹಿತ್ಯವನ್ನು ಮೈಗೂಡಿಸಿಕೊಂಡಿರುವುದನ್ನು ನಾವು ಕಾಣುತ್ತೇವೆ. ಹಾಗಾಗಿ ಇವುಗಳ ಉಳಿವಿಗೆ ಮತ್ತು ಯಶಸ್ವಿಗೆ 'ಜಾನಪದ' ಎನ್ನುವ ಹೆಸರಿನಲ್ಲಿ ಎಲ್ಲಾ ಕಲಾಪ್ರಕಾರಗಳಿಗೆ ಸಾಮಾನ್ಯ ಯೋಜನೆ, ವಿಶೇಷ ಘಟಕ ಯೋಜನೆ, ಗಿರಿಜನ ಉಪಯೋಜನೆಯ ಅಡಿಯಲ್ಲಿ ಸಂಘ ಸಂಸ್ಥೆಗಳಿಗೆ ಧನಸಹಾಯ ನೀಡಿ ಆ ಸಂಘ-ಸಂಸ್ಥೆಗಳ ಮೂಲಕ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಜಾನಪದ ಸಂಸ್ಕೃತಿಯನ್ನು ಉಳಿಸಿ-ಬೆಳೆಸುವ ಕೆಲಸವನ್ನು ಮಾಡುತ್ತಿದೆ.

## 3.1 ನೃತ್ಯ ;

ಕರ್ನಾಟಕದ ಸಾಂಸ್ಕೃತಿಕ ಕ್ಷೇತ್ರದಲ್ಲಿ 'ನೃತ್ಯ'ಕ್ಕೆ ವಿಶೇಷವಾದ ಗೌರವವಿದೆ. ಪುರುಷ ಮತ್ತು ಮಹಿಳೆಯರಿಬ್ಬರು ನೃತ್ಯದಲ್ಲಿ ಪಾಲ್ಗೊಳ್ಳುತ್ತಾರೆ. ಜಾನಪದ ಸಂಸ್ಕೃತಿಯಲ್ಲಿಯು 'ನೃತ್ಯ' ಕ್ಷೇತ್ರವು ಬರುತ್ತದೆ. ಅದೇ ರೀತಿ ನಗರ ಸಂಸ್ಕೃತಿಯಲ್ಲಿಯು ನೃತ್ಯ ಕ್ಷೇತ್ರವು ಇದೆ. ಇದರಲ್ಲಿ ಮುಖ್ಯವಾಗಿ ಭರತನಾಟ್ಯ ನಗರ ಸಂಸ್ಕೃತಿಯನ್ನು ಕೇಂದ್ರೀಕರಿಸಿ ಕಾಣಿಸಿಕೊಂಡರೆ 'ಜಾನಪದ ನೃತ್ಯ' ಕ್ಷೇತ್ರವು ಗ್ರಾಮೀಣರಲ್ಲಿ ಕಂಡುಬರುತ್ತದೆ. ಗ್ರಾಮೀಣ ಮತ್ತು ನಗರ ಪ್ರದೇಶಗಳನ್ನು ಕೇಂದ್ರೀಕರಿಸಿ 'ನೃತ್ಯ' ಕಾರ್ಯಕ್ರಮವನ್ನು ನೀಡಲಾಗುತ್ತದೆ. ಇದು ಕಲಾ ಪ್ರಕಾರಗಳಲ್ಲಿ ಪ್ರಮುಖವಾಗಿ ಕಂಡುಬರುತ್ತದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಇಲ್ಲಿನ ಮೂರು ಯೋಜನೆಗಳ ಅಡಿಯಲ್ಲಿಯೂ ಧನ ಸಹಾಯವನ್ನು ಸಂಘ-ಸಂಸ್ಥೆಗಳಿಗೆ ನೀಡಿ ಅವುಗಳ ಮುಖಾಂತರ ಈ ನೃತ್ಯ ಕಲೆಯನ್ನು ಸಂರಕ್ಷಿಸುವ ಕೆಲಸವನ್ನು ಮಾಡುತ್ತಿದೆ.

## 3.2 ನಾಟಕ ;

ಈ ಮೂರು ಯೋಜನೆಗಳ ಮುಖಾಂತರ ಈ ನಾಟಕ ಕ್ಷೇತ್ರದ ಉಳಿವಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಶ್ರಮಿಸುತ್ತಿದೆ. ನಾಟಕ ಕ್ಷೇತ್ರಕ್ಕೆ ದೊಡ್ಡ ಇತಿಹಾಸವಿದೆ. ಕನ್ನಡದ ರಂಗಭೂಮಿಯು ಪ್ರಾದೇಶಿಕವಾಗಿ ತುಂಬಾ ವಿಭಿನ್ನವಾಗಿ ಬೆಳೆದುಬಂದಿದೆ. ನಗರ ಮತ್ತು ಗ್ರಾಮೀಣ ಸಂಸ್ಕೃತಿಗಳಲ್ಲಿ ನಾಟಕ ಕ್ಷೇತ್ರವು ಅಸ್ತಿತ್ವವನ್ನು ಉಳಿಸಿಕೊಂಡಿದೆ. ಇಂದಿಗೂ ಐತಿಹಾಸಿಕ, ಪೌರಾಣಿಕ, ಸಾಮಾಜಿಕ, ರಾಜಕೀಯ ನಾಟಕಗಳು ಪ್ರದರ್ಶನಗೊಂಡಿವೆ. ನಾಟಕ ಪ್ರದರ್ಶನಗೊಳ್ಳಲು ಕಂಪನಿಗಳು, ಕಲಾತಂಡಗಳು, ರಂಗ ಕೇಂದ್ರಗಳು, ರಂಗ ಶಿಕ್ಷಣ ಕೇಂದ್ರಗಳು, ರಂಗಾಯಣ, ರಂಗನಿರಂತರ, ನಿನಾಸಂ ತರಹದ ಸಂಸ್ಥೆಗಳು ಕೆಲಸ ಮಾಡುತ್ತಿವೆ. ನಾಟಕ ಕ್ಷೇತ್ರವು ತನ್ನ ವ್ಯಾಪ್ತಿಯನ್ನು ವಿಶಾಲವಾಗಿ ಹೊಂದಿರುವುದರಿಂದ ಇಂದು ಎಲ್ಲರಿಗೂ ಚಿರಪರಿಚಿತವಾಗಿದೆ. ಕರ್ನಾಟಕದಲ್ಲಿ ಸ್ಥಾಪನೆಯಾಗಿರುವ ಸಂಘ-ಸಂಸ್ಥೆಗಳು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಧನ ಸಹಾಯ ಪಡೆದು ನಾಟಕ ಕ್ಷೇತ್ರವನ್ನು ಅಭಿವೃದ್ಧಿಗೊಳಿಸುತ್ತಿವೆ. ಜೊತೆಗೆ ಕಲಾವಿದರಿಗೆ ಮತ್ತು ನಾಟಕ ತಂಡಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡಲು ಸಹಕರಿಸುತ್ತವೆ.

### 3.3 ಸಂಗೀತ;

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಈ ಮೂರು ಯೋಜನೆಗಳ ಮೂಲಕ ಸಂಘ-ಸಂಸ್ಥೆಗಳಿಗೆ ಧನಸಹಾಯ ನೀಡಿ ಆ ಸಂಸ್ಥೆಗಳ ಮೂಲಕ ಸಂಗೀತ ಕ್ಷೇತ್ರವನ್ನು ಉಳಿಸಿ ಬೆಳೆಸುವಲ್ಲಿ ತೊಡಗಿಕೊಂಡಿರುತ್ತದೆ. ಮುಖ್ಯವಾಗಿ ಕರ್ನಾಟಕ ಸುಗಮ ಸಂಗೀತ, ಹಿಂದೂಸ್ಥಾನಿ ಸಂಗೀತಗಳಿಗೆ ಸಾಮಾನ್ಯ ವರ್ಗದ ಅಡಿಯಲ್ಲಿ ಹೆಚ್ಚಿನ ಅನುಕೂಲ ಮಾಡಿಕೊಡಲಾಗಿದೆ. ವಿಶೇಷ ಘಟಕ ಮತ್ತು ಗಿರಿಜನ ಘಟಕ ಯೋಜನೆಗಳಲ್ಲಿ ಆಯಾ ಜಾತಿಯ ಹಿನ್ನೆಲೆಯಿಂದ ಬಂದಿರುವ ಸಂಗೀತ ಕಲಾ ತಂಡಗಳಿಗೆ ಪ್ರೋತ್ಸಾಹ ನೀಡಲಾಗಿದೆ. ಈ ಎರಡು ಘಟಕಗಳು ಜಾನಪದ ಹಾಡುಗಾರರಿಗೆ ಸ್ವಲ್ಪ ಆದ್ಯತೆಯನ್ನು ಕೊಟ್ಟಿರುತ್ತಾರೆ.

### 3.4. ಯಕ್ಷಗಾನ/ಬಯಲಾಟ/ಗೊಂಬೆ ಪ್ರದರ್ಶನ;

ಯಕ್ಷಗಾನ ಕರಾವಳಿ ಭಾಗದಲ್ಲಿ ಪ್ರಮುಖವಾದರೆ, ಬಯಲಾಟ ಮತ್ತು ಗೊಂಬೆ ಪ್ರದರ್ಶನಗಳು ಬಯಲು ಸೀಮೆಯ ಉತ್ತರ ಕರ್ನಾಟಕದಲ್ಲಿ ಪ್ರಸಿದ್ಧಿಯಾಗಿವೆ. ಯಕ್ಷಗಾನವು ಉತ್ತರ ಕನ್ನಡ, ದಕ್ಷಿಣ ಕನ್ನಡ ಮತ್ತು ಮಡಿಕೇರಿ, ಶಿವಮೊಗ್ಗ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಪ್ರಮುಖವಾಗಿ ಕಲಾ ಪ್ರಕಾರವಾಗಿ ಕಂಡುಬರುತ್ತದೆ. ಆದರೆ ಇಂದು ಕರ್ನಾಟಕದ ಎಲ್ಲಾ ಭಾಗಗಳಲ್ಲಿಯು ಯಕ್ಷಗಾನ ಕಾರ್ಯಕ್ರಮಗಳು ನಡೆಯುತ್ತಿವೆ. ಬೆಂಗಳೂರು ನಗರಕ್ಕೆ ಕರಾವಳಿ ಭಾಗದಿಂದ ವಲಸೆ ಬಂದಿರುವ ಕಲಾವಿದರು ಬೆಂಗಳೂರು ನಗರದಾದ್ಯಂತ ಯಕ್ಷಗಾನ ಕಲಾತಂಡಗಳನ್ನು ಕಟ್ಟಿಕೊಂಡು ಯಕ್ಷಗಾನ ಪ್ರದರ್ಶನ ನೀಡುತ್ತಿದ್ದಾರೆ.

ಅದೇ ರೀತಿ ಬಯಲಾಟ ಕರ್ನಾಟಕದ ಮಧ್ಯ ಕರ್ನಾಟಕದಿಂದ ಪ್ರಾರಂಭವಾಗುತ್ತದೆ. ಬಯಲಾಟವು ಮೂಲ ಜಾನಪದ ರಂಗಭೂಮಿಯಾಗಿದೆ. ಕರಾವಳಿ ಭಾಗದಲ್ಲಿ ಯಕ್ಷಗಾನ ಎಷ್ಟು ಮುಖ್ಯವೋ ಅಷ್ಟೇ ಪ್ರಮಾಣದಲ್ಲಿ ಕರ್ನಾಟಕದ ಬಯಲು ಸೀಮೆಯಲ್ಲಿ ಬಯಲಾಟ ಮುಖ್ಯವಾಗುತ್ತದೆ.

ಬಯಲಾಟ ಮತ್ತು ಯಕ್ಷಗಾನಗಳು ಇಂದಿಗೂ ಮೂಲತನವನ್ನು ಉಳಿಸಿಕೊಂಡು ಪ್ರಾದೇಶಿಕವಾಗಿ ಉಸಿರಾಡುತ್ತಿವೆ. ಅದರಲ್ಲೂ ವಿಶೇಷವಾಗಿ ಯಕ್ಷಗಾನವು ಕರಾವಳಿ ಭಾಗದಲ್ಲಿ ಪ್ರಮುಖವಾಗಿ ಕಂಡುಬಂದಿದೆ. ಬಯಲಾಟ ಚಿತ್ರದುರ್ಗ, ತುಮಕೂರು, ಬಳ್ಳಾರಿ, ದಾವಣಗೆರೆ, ರಾಯಚೂರು, ಗುಲ್ಬರ್ಗ ಮತ್ತು ಉತ್ತರ ಕರ್ನಾಟಕದ ಇನ್ನು ಮುಂತಾದ ಕಡೆಗಳಲ್ಲಿ ಕಂಡುಬರುತ್ತದೆ.

ಅದೇರೀತಿ ಗೊಂಬೆ ಪ್ರದರ್ಶನ ವಿಶೇಷವಾಗಿ ಬಳ್ಳಾರಿ ಹಾಗೂ ಮೈಸೂರು ಪ್ರಾಂತ್ಯದಲ್ಲಿ ವಿಶೇಷವಾಗಿ ಕಂಡುಬರುತ್ತದೆ. ಈ ಮೂರು ಕಲಾ ಪ್ರಕಾರಗಳಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ತನ್ನಲ್ಲಿನ ಮೂರು ಯೋಜನೆಗಳ ಮುಖಾಂತರ ಸಂಘ-ಸಂಸ್ಥೆಗಳಿಗೆ ಧನಸಹಾಯವನ್ನು ನೀಡಿ ಆ ಸಂಸ್ಥೆಗಳ ಮೂಲಕ ಸಂರಕ್ಷಿಸುವ ಕೆಲಸವನ್ನು ಮಾಡುತ್ತಿದೆ.

## 3.5 ಸಾಹಿತ್ಯ;

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಈ ಮೂರು ಯೋಜನೆಗಳ ಅಡಿಯಲ್ಲಿ ಸಂಘ–ಸಂಸ್ಥೆಗಳ ಮೂಲಕ ಕಾರ್ಯಕ್ರಮ ನಡೆಸಲು ಧನ ಸಹಾಯವನ್ನು ನೀಡಿ ಸಾಹಿತ್ಯಕವಾಗಿ ವಿಚಾರ ಸಂಕಿರಣವನ್ನು ನಡೆಸಲು ಅನುವು ಮಾಡಿಕೊಡುತ್ತದೆ. ಸೃಜನಶೀಲ ಸಾಹಿತ್ಯ (ಕಥೆ, ಕಾವ್ಯ, ಕಾದಂಬರಿ, ನಾಟಕ, ಲಲಿತ ಪ್ರಬಂಧ, ಇತ್ಯಾದಿ), ಸಂಶೋಧನೆ ಮತ್ತು ವಿಮರ್ಶೆ ಹಾಗೂ ಜಾನಪದ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ವಿಶೇಷವಾಗಿ ಪರಿಗಣಿಸಿ ಈ ಹಿನ್ನೆಲೆಯಿಂದ ಬಂದ ಕೃತಿಗಳನ್ನು ಆಯಾ ವರ್ಷ ಪ್ರಕಟಿಸಲಾಗುತ್ತದೆ. ಮತ್ತು ಶಿಬಿರವನ್ನು ನಡೆಸಲು ಅವಕಾಶ ಮಾಡಿಕೊಡಲಾಗುತ್ತದೆ. ಸಂಘ–ಸಂಸ್ಥೆಗಳು ಸಾಂಸ್ಕೃತಿಕವಾಗಿ ಮತ್ತು ಸಾಹಿತ್ಯಕವಾಗಿ ಜನರಿಗೆ ಅರಿವು ಮೂಡಿಸಲು ಸಾಹಿತ್ಯಿಕ ಕಾರ್ಯಕ್ರಮಗಳನ್ನು ಏರ್ಪಡಿಸಿರುತ್ತಾರೆ.

## 3.6 ಚಿತ್ರಕಲೆ;

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಸಂಘ ಸಂಸ್ಥೆಗಳಿಗೆ ಧನಸಹಾಯವನ್ನು ನೀಡುವಾಗ ಈ ಮೂರು ಯೋಜನೆಯಲ್ಲಿನ ಸಾಮಾನ್ಯ ಯೋಜನೆಯನ್ನು ಪರಿಗಣಿಸಲಾಗಿದೆ. ಚಿತ್ರ ಕಲಾ ಪ್ರದರ್ಶನಕ್ಕೆ ಸಂಘ–ಸಂಸ್ಥೆಗಳ ಮೂಲಕ ಅವಕಾಶ ಮಾಡಲಾಗಿದೆ. ಚಿತ್ರಕಲೆಯು ಕೂಡ ಸಮಾಜದ ಪ್ರತಿಬಿಂಬ ಸಮಾಜ ಮತ್ತು ಸಂಸ್ಕೃತಿಯಲ್ಲಿನ ಸೂಕ್ಷ್ಮ ವಿಚಾರಗಳನ್ನು ಚಿತ್ರಕಲೆ ಪ್ರತಿಬಿಂಬಿಸುತ್ತದೆ. ಅದು ನಮ್ಮ ವ್ಯಕ್ತಿತ್ವವನ್ನು ಸಹ ಅಭಿವ್ಯಕ್ತಿಸುತ್ತದೆ. ಚಿತ್ರಕಲೆಗೆ ಸಾತ್ವಿಕವಾದ ಶಕ್ತಿ ಇದೆ. ಅದು ಮನುಷ್ಯನ ಸೂಕ್ಷ್ಮ ವಿಚಾರಗಳನ್ನು, ಸಂಘರ್ಷವನ್ನು, ಮಾನಸಿಕ ಅಸಮತೋಲನಗಳ ವಿಚಾರಗಳನ್ನು ಬಯಲು ಮಾಡುತ್ತದೆ. ನಂತರ ಚಿತ್ರಕಲೆಯು ಸಮಾಜ ಮತ್ತು ಸಂಸ್ಕೃತಿಯನ್ನು ವಿಮರ್ಶಿಸುತ್ತದೆ. ಟೀಕಿಸುತ್ತದೆ. ಪ್ರತಿಬಿಂಬಿಸುತ್ತದೆ. ಹಾಗಾಗಿ ಚಿತ್ರಕಲೆಗೆ ಒಂದು ದೊಡ್ಡ ಶಕ್ತಿ ಇದೆ. ಈ ಹಿನ್ನೆಲೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಸಂಘ–ಸಂಸ್ಥೆಗಳಿಗೆ ಅನುದಾನವನ್ನು ನೀಡಿ ಸಂಘ ಸಂಸ್ಥೆಗಳ ಮುಖಾಂತರ ಚಿತ್ರಕಲೆಯ ಪ್ರಚಾರಕ್ಕೆ, ಉಳಿವಿಗೆ ಸಹಾಯ ಮಾಡುತ್ತಿದೆ.

## 3.7 ಸಂಕೀರ್ಣ/ಜಾಗೃತಿ;

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಸಾಮಾನ್ಯ ಯೋಜನೆಯ ಅಡಿಯಲ್ಲಿ ಸಂಘ–ಸಂಸ್ಥೆಗಳ ಮುಖಾಂತರ ಸಂಕೀರ್ಣ ಮತ್ತು ಜಾಗೃತಿಗೆ ಅವಕಾಶ ಮಾಡಿಕೊಡಲಾಗಿದೆ. ಪ್ರಚಲಿತ ವಿದ್ಯಮಾನಗಳನ್ನು ಕೇಂದ್ರೀಕರಿಸಿ ಪ್ರಮುಖ ನಗರಗಳಲ್ಲಿ ವಿಚಾರ ಸಂಕೀರ್ಣವನ್ನು ಏರ್ಪಡಿಸಿ ಜನರಿಗೆ ಅರಿವು ಮೂಡಿಸುವ ಕೆಲಸವನ್ನು ಮಾಡಲಾಗಿದೆ. ಸಂಘ–ಸಂಸ್ಥೆಗಳು ಧನ ಸಹಾಯವನ್ನು ಪಡೆದು ಅದಕ್ಕೆ ಅನುಗುಣವಾಗಿ ನಗರ ಕೇಂದ್ರೀತ ವಲಯಗಳಲ್ಲಿ ಜಾಗತಿಕ ಸಮಸ್ಯೆಗಳು, ಸಾಮಾಜಿಕ ಸಮಸ್ಯೆಗಳು ಹಾಗೂ ಪ್ರಚಲಿತ ವಿದ್ಯಮಾನಗಳನ್ನು ಆಧರಿಸಿ ಮುಕ್ತವಾಗಿ ಚರ್ಚಿಸುವ ಅವಕಾಶವನ್ನು ಉಂಟು ಮಾಡುತ್ತವೆ. ಹಾಗಾಗಿ ಸಂಕೀರ್ಣ ಮತ್ತು ಜಾಗೃತಿ ಕಾರ್ಯಕ್ರಮಗಳು ಅತಿ ಬೇಗನೇ ಸಾಮಾನ್ಯ ಜನರಿಗೆ ಅರಿವು ಮೂಡಿಸುವ ಕೆಲಸವನ್ನು ಮಾಡುತ್ತವೆ. ಇದು ಬೌದ್ಧಿಕ ವಲಯಕ್ಕೂ ಹೆಚ್ಚು ಆಪ್ತವಾಗುತ್ತದೆ.

# ಮೌಲ್ಯಮಾಪನ ವಿಷಯಕ್ಕೆ ಸಂಬಂಧಿಸಿದ ಅಧ್ಯಯನ ಕೃತಿಗಳ ಮತ್ತು ವರದಿಗಳ ಸಮೀಕ್ಷೆ

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ತನ್ನಲ್ಲಿನ ಸಾಮಾನ್ಯ ಯೋಜನೆ, ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯ ಅಡಿಯಲ್ಲಿ ಕನ್ನಡ ನಾಡಿನ ಕಲೆ, ಸಂಗೀತ, ನೃತ್ಯ, ನಾಟಕ, ಸಾಹಿತ್ಯ, ಸಂಸ್ಕೃತಿ ಮತ್ತು ಇನ್ನು ಮುಂತಾದ ಕಲಾಪ್ರಕಾರಗಳನ್ನು ಉಳಿಸಿ ಬೆಳೆಸುವುದಕ್ಕಾಗಿ ಸಂಘ ಸಂಸ್ಥೆಗಳಿಗೆ ಅನುದಾನವನ್ನು ಪ್ರತಿವರ್ಷ ನೀಡುತ್ತಾ ಬಂದಿದೆ. ಹೀಗೆ ನೀಡಿರುವ ಅನುದಾನ ಸರಿಯಾದ ರೀತಿಯಲ್ಲಿ ಸದ್ಬಳಕೆಯಾಗಿದೆಯೇ ಇಲ್ಲವೆ ಎಂಬುದನ್ನು ಮೌಲ್ಯಮಾಪನ ಮಾಡಲು ತೊಡಗಿದಾಗ ಇದಕ್ಕೆ ಪೂರ್ವಭಾವಿಯಾಗಿ ಯಾವುದಾದರೂ ಅಧ್ಯಯನಗಳು ನಡೆದಿದ್ದಾವೆಯೇ ಎಂದು ಪರಿಶೀಲಿಸಿದಾಗ ಈ ಮೌಲ್ಯಮಾಪನಕ್ಕೆ ಸಂಬಂಧಿಸಿದಂತೆ ಯಾವುದೇ ಅಧ್ಯಯನಗಳು ಇದುವರೆವಿಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ನಡೆದಿರುವುದಿಲ್ಲ ಎಂಬುದು ತಿಳಿದುಬಂದಿತು. ಹಾಗಾಗಿ ಈ ಮೌಲ್ಯಮಾಪನವೇ ಮೊಟ್ಟ ಮೊದಲ ಮೌಲ್ಯಮಾಪನ ಅಧ್ಯಯನವಾಗಿದೆ. ಆದರೂ ನೇರವಾಗಿ ಇಲ್ಲಿ ಮೌಲ್ಯಮಾಪನಕ್ಕೆ ತೊಡುಗುವಾಗ ಈಗಾಗಲೇ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯನ್ನು ಕೇಂದ್ರೀಕರಿಸಿ ಹೊರಬಂದ ಅಧ್ಯಯನದ ವರದಿಗಳನ್ನು ಪರಿಗಣಿಸಿ ಇಲ್ಲಿ ಅಧ್ಯಯನ ಮಾಡಿ ಅದರಿಂದ ಈ ಮೌಲ್ಯಮಾಪನಕ್ಕೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಬೇಕಾಗುವಂತಹ ಮಾಹಿತಿಯನ್ನು ಬಳಸಿಕೊಳ್ಳಲಾಗಿದೆ. ಆ ವರದಿಗಳ ಸಂಕ್ಷಿಪ್ತ ನೋಟವನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ.

## 4.0 "ಗೌರ್ನೆನ್ಸ್ ಅನಲೈಸಿಸ್ ಆಫ್ ಕರ್ನಾಟಕಾಸ್ ಡಿಪಾರ್ಟಮೆಂಟ್ ಆಫ್ ಕನ್ನಡ ಅಂಡ್ ಕಲ್ಚರ್" ಡೂರಿಂಗ್ ಮಾಸ್ಟರ್ಸ್ ಇನ್ ಪಬ್ಲಿಕ್ ಪಾಲಿಸಿ ಅಂಡ್ ಗೌರ್ನೆನ್ಸ್ ರಿಟರ್ನ ಬೈ ಪ್ರಚೂರ್ ಗೋಯೆಲ್, ಅಟ್ ಅಜೀಮ್ ಪ್ರೇಮ್‌ಜಿ ಯೂನಿರ್ವಸಿಟಿ, ಬೆಂಗಳೂರು. 2016–18

(ಪ್ರಚೂರ್ ಗೋಯೆಲ್ ರವರು "ಕರ್ನಾಟಕದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಡಳಿತ ವಿಶ್ಲೇಷಣೆ" ಎನ್ನುವುದರ ಮೇಲೆ ಸಾರ್ವಜನಿಕ ನೀತಿ ಮತ್ತು ಆಡಳಿತ ಎಂಬ ಸ್ನಾತಕೋತ್ತರ ಅಧ್ಯಯನದ ಮೊದಲನೇ ಸೆಮಿಸ್ಟರನ ಅವಧಿಯಲ್ಲಿ ಈ ವರದಿಯನ್ನು ತಯಾರಿಸಿ ಅಜೀಮ್ ಪ್ರೇಮ್‌ಜಿ ವಿಶ್ವವಿದ್ಯಾಲಯ– (ಬೆಂಗಳೂರು) ಕ್ಕೆ 2016–18ನೇ ಸಾಲಿನಲ್ಲಿ ಪದವಿಗಾಗಿ ಸಲ್ಲಿಸಿದ ಪ್ರಬಂಧ.)

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಡಳಿತವನ್ನು ಉದ್ದೇಶಿಸಿ ಅಧ್ಯಯನ ಮಾಡುವ ಮೊದಲಿಗೆ ಕನ್ನಡ ನಾಡಿನ ಸಂಸ್ಕೃತಿಯನ್ನು ಕುರಿತು ಚರ್ಚೆಮಾಡಿದ್ದಾರೆ. ಈ ನಾಡಿನ ಸಂಸ್ಕೃತಿಯನ್ನು ಜಾಗತಿಕ ಮಟ್ಟದಲ್ಲಿ ಇಟ್ಟು ವಿವರಿಸಿದ್ದಾರೆ. ಸಂಸ್ಕೃತಿಯ ಬಗ್ಗೆ ಒಂದು ದೊಡ್ಡ ವ್ಯಾಖ್ಯಾನವನ್ನೆ ಮಾಡಿದ್ದಾರೆ. ಇಲ್ಲಿನ ಸಂಸ್ಕೃತಿಯ ವೈಶಿಷ್ಟ್ಯವನ್ನು, ಮಹತ್ವವನ್ನು ಮತ್ತು ವಿಭಿನ್ನತೆಯನ್ನು ಪರಿಚಯಿಸಿದ್ದಾರೆ. ಭಾರತೀಯ

ಸಂಸ್ಕೃತಿಯನ್ನು ಉನ್ನತ ಸ್ಥಾನಕ್ಕೆ ತೆಗೆದುಕೊಂಡು ಹೋಗುವಲ್ಲಿ ಉಪಸಂಸ್ಕೃತಿಯ ಅಡಿಯಲ್ಲಿ ಬರುವ ಕನ್ನಡ ಸಂಸ್ಕೃತಿ, ತೆಲುಗು ಸಂಸ್ಕೃತಿ, ತಮಿಳು ಸಂಸ್ಕೃತಿಗಳು ಹೇಗೆ ಪ್ರಮುಖ ಪಾತ್ರವಹಿಸುತ್ತವೆ ಎಂಬುದನ್ನು ವಿವರಿಸಿದ್ದಾರೆ. ಹಾಗೂ ವಿಶೇಷವಾಗಿ ಕರ್ನಾಟಕ ಸಂಸ್ಕೃತಿಯ ವೈವಿಧ್ಯತೆಯನ್ನು ಅಭಿವ್ಯಕ್ತಿಸಿದ್ದಾರೆ. ಹಾಗೆಯೇ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಹುಟ್ಟು ಮತ್ತು ಬೆಳವಣಿಗೆಯನ್ನು, ಮಹತ್ವವನ್ನು ಹಾಗು ಅದರ ವಿಕಾಸವನ್ನು ತಿಳಿಸಿ ಕೊಟ್ಟಿದ್ದಾರೆ. ಅದೇ ರೀತಿ ಕನ್ನಡ ಭಾಷೆಯ ಪ್ರಾಮುಖ್ಯತೆಯನ್ನು ಸೂಕ್ಷ್ಮವಾಗಿ ಪ್ರಸ್ತಾಪ ಮಾಡಿರುತ್ತಾರೆ. ಕರ್ನಾಟಕ ರಾಜ್ಯಕ್ಕೆ ಕನ್ನಡ ಭಾಷೆಯ ಪ್ರಾಮುಖ್ಯತೆ ಎಷ್ಟರ ಮಟ್ಟಿಗೆ ಇರುತ್ತದೆ ಎಂಬುದನ್ನು ವಿವರಿಸಿದ್ದಾರೆ. ಇತ್ತೀಚಿನ ಶಾಸ್ತ್ರೀಯ ಸ್ಥಾನಮಾನದ ಸಂದರ್ಭದಲ್ಲಿ ಕನ್ನಡ ಭಾಷೆ ಮತ್ತು ಸಂಸ್ಕೃತಿಯು ರಾಷ್ಟ್ರೀಯ ಮಟ್ಟದಲ್ಲಿ ಹೇಗೆ ಬೆಳಕು ಚೆಲ್ಲಿತು ಎಂಬದನ್ನು ತಿಳಿಸಲಾಗಿದೆ. ಕನ್ನಡ ಸಂಸ್ಕೃತಿಯು ತನ್ನೊಳಗಿನ ತುಳು, ಕೊಂಕಣಿ, ಕೊಡವ ಭಾಷೆ ಮತ್ತು ಸಂಸ್ಕೃತಿಯೊಂದಿಗೆ ಮೇಳೈಸಿಕೊಂಡರೂ ಅದು ಹೇಗೆ ತನ್ನ ತನವನ್ನು ಉಳಿಸಿಕೊಂಡು ಬಂದಿದೆ ಎಂಬುದನ್ನು ತಿಳಿಸಿದ್ದಾರೆ.

ನಂತರ ಆಡಳಿತಾತ್ಮಕವಾಗಿ ಮತ್ತು ಕಾನೂನಾತ್ಮಕವಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ತೆಗೆದುಕೊಂಡ ನಿರ್ಣಯಗಳನ್ನು ವಿವರಿಸಿರುತ್ತಾರೆ. ಕಾನೂನಾತ್ಮಕವಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಇರಬೇಕಾದ ನಿಲುವುಗಳನ್ನು ಪ್ರಸ್ತಾಪ ಮಾಡಿರುತ್ತಾರೆ. ಹಾಗೆಯೇ ಇಲಾಖೆಯು ಸರ್ಕಾರದ ಮೂಲಕ ತೆಗೆದುಕೊಂಡ ಕೆಲವು ನಿರ್ಣಯಗಳನ್ನು ಹಲವು ಕಾಯ್ದೆಯ ಮೂಲಕ ಪರಿಚಯಿಸಿರುತ್ತಾರೆ. 1963 ರ ಕರ್ನಾಟಕ ಅಧಿಕೃತ ಭಾಷಾ ಕಾಯ್ದೆ, 1994ರ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಕಾಯ್ದೆ, ಕರ್ನಾಟಕ ಗಡಿಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಕಾಯ್ದೆಗಳ ನಿಯಮಾವಳಿಗಳನ್ನು ಕುರಿತು ಚರ್ಚಿಸಲಾಗಿದೆ. ಹಾಗೆಯೇ ಕನ್ನಡ ತನವನ್ನು ಗಟ್ಟಿಗೊಳಿಸುವಲ್ಲಿ ಕಲೆ ಮತ್ತು ಸಂಸ್ಕೃತಿಯ ಪಾತ್ರವೇನು ಎಂಬುದನ್ನು ತಿಳಿಸಿದ್ದಾರೆ. ಅದೇರೀತಿ ಅಕಾಡೆಮಿಗಳು ಮತ್ತು ಪರಿಷತ್ತುಗಳು ಕನ್ನಡ ಮತ್ತು ಸಂಸ್ಕೃತಿಯನ್ನು ಉಳಿಸಿ ಬೆಳೆಸುವಲ್ಲಿ, ಕಲಾಪ್ರಕಾರಗಳನ್ನು ಗಟ್ಟಿಗೊಳಿಸುವಲ್ಲಿ, ಸಂಸ್ಕೃತಿಯನ್ನು ಆರಾಧಿಸುವಲ್ಲಿ ಯಾವ ರೀತಿಯ ಕೆಲಸವನ್ನು ಮಾಡಬೇಕು ಎಂಬುದನ್ನು ಚರ್ಚಿಸಲಾಗಿದೆ. ಜೊತೆಗೆ ಕಲೆ, ಸಾಹಿತ್ಯ, ಸಂಸ್ಕೃತಿಯನ್ನು ಬೆಳೆಸುವುದಕ್ಕಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಪ್ರಕಟಣೆಯ ಮೂಲಕ ಹೇಗೆ ಪ್ರಚಾರ ಮಾಡುತ್ತಿದೆ ಎಂಬುದನ್ನು ತಿಳಿಸಲಾಗಿದೆ. ಈ ಎಲ್ಲಾ ಅಂಶಗಳನ್ನು ಅಧ್ಯಯನ ಮಾಡಿ ಇಲ್ಲಿನ ಮೌಲ್ಯಮಾಪನದ ಅಧ್ಯಯನಕ್ಕೆ ಪೂರಕವಾಗಿ ಕೆಲವು ಅಂಶಗಳನ್ನು ಪರಿಗಣಿಸಿಕೊಳ್ಳಲಾಗಿದೆ. ಈ ವರದಿಯಲ್ಲಿನ ಸಂಪೂರ್ಣ ಮಾಹಿತಿಯು ಇಂಗ್ಲಿಷಿನಲ್ಲಿ ಇದೆ. ಅದನ್ನು ಅಧ್ಯಯನ ಮಾಡಿ ಇಲ್ಲಿ ಕನ್ನಡದಲ್ಲಿ ಬಳಸಿಕೊಳ್ಳಲಾಗಿದೆ.

## 4.1 2017–18 ನೇ ಸಾಲಿನ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವಾರ್ಷಿಕ ವರದಿ.

ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವಾಲಯವು ಸರ್ಕಾರದ ಕಾರ್ಯದರ್ಶಿಗಳ ನೇತೃತ್ವದಲ್ಲಿ ಹಾಗು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮೂಲಕ ಕನ್ನಡ ನಾಡಿನ ಕಲೆ, ಸಾಹಿತ್ಯ, ಸಂಸ್ಕೃತಿ ಮತ್ತು ಜಾನಪದ ಕಲಾಪ್ರಕಾರಗಳ ಉಳಿವಿಗೆ ಹೆಚ್ಚು ಶ್ರಮಿಸುತ್ತಿದೆ. ಇಂದು ಕನ್ನಡ ಮತ್ತು

ಸಂಸ್ಕೃತಿ ಇಲಾಖೆಯು ಕರ್ನಾಟಕದಲ್ಲಿ ಪ್ರತಿಷ್ಠಿತ ಸಂಸ್ಥೆಯಾಗಿ ಕೆಲಸ ಮಾಡುತ್ತಿದೆ. ಹಾಗಾಗಿ ಪ್ರತಿವರ್ಷ ಈ ಇಲಾಖೆಯು ವಾರ್ಷಿಕ ವರದಿಯನ್ನು ಕ್ರಿಯಾಯೋಜನೆಗೆ ಅನುಗುಣವಾಗಿ ನೀಡುತ್ತಾ ಬರುತ್ತಿದೆ. ಈ ಮೌಲ್ಯಮಾಪನದ 2017–18ನೇ ಸಾಲಿನ ವರದಿಯಲ್ಲಿ ಒಟ್ಟು ಎಷ್ಟು ಹಣ ಖರ್ಚು ಮಾಡಿದ್ದಾರೆ ಎನ್ನುವುದನ್ನು ಇಲ್ಲಿ ಗಮನಿಸಲಾಗಿದೆ. ಈ ವರದಿಯಲ್ಲಿ ಯಾವ ಯಾವ ಯೋಜನೆಗಳಿಗೆ, ಕಾರ್ಯಕ್ರಮಗಳಿಗೆ, ಕೃತಿಗಳ ಪ್ರಕಟಣೆಗಳಿಗೆ, ಪ್ರಶಸ್ತಿಗಳಿಗೆ, ಉತ್ಸವಗಳಿಗೆ, ದಸರ ಹಬ್ಬಗಳಿಗೆ, ಜಯಂತಿಗಳಿಗೆ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ, ಚಿತ್ರಕಲೆ ಮತ್ತು ಶಿಲ್ಪಕಲೆ ಪ್ರದರ್ಶನಕ್ಕೆ, ವಸ್ತುಪ್ರದರ್ಶನ ಮಳಿಗೆಗಳಿಗೆ, ಮನೆಯಂಗಳದಲಿ ಮಾತುಕತೆಗೆ, ಸಾಂಸ್ಕೃತಿಕ ಸೌರಭ, ಯುವಸೌರಭ, ಚಿಗುರು, ಕಾವ್ಯಾಸಮಿತಿ, ಸ್ವಾತಂತ್ರ್ಯ ದಿನಾಚರಣೆ, ಕಲಾವಿದರ ಸಾಮಾಗ್ರಿಗಳ ಖರೀದಿಗೆ, ನಾಟಕ ಕಂಪನಿಗಳಿಗೆ, ಕನ್ನಡ ಸಾಹಿತ್ಯ ಪರಿಷತ್ತು, ಕರ್ನಾಟಕ ಜಾನಪದ ಪರಿಷತ್ತು ಮತ್ತು ಇತರ ಸಂಸ್ಥೆಗಳಿಗೆ ಹಣವನ್ನು ನೀಡುತ್ತಾ ಬಂದಿರುವುದರ ಬಗ್ಗೆ ಮಾಹಿತಿ ಇದೆ. ಇವುಗಳ ಜೊತೆಗೆ ಇನ್ನು ಹತ್ತು ಹಲವು ಕಾರ್ಯಕ್ರಮಗಳಿಗೆ ಅನುದಾನವನ್ನು ನೀಡಿರುತ್ತದೆ. 2017–18ನೇ ಸಾಲಿನಲ್ಲಿ ರೂ. 37043 ಲಕ್ಷಗಳನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ನೀಡಿದೆ. ಅದರಲ್ಲಿ ಖರ್ಚಾಗಿರುವ ಹಣ ರೂ.35,166.24. ಅಂದರೆ ಶೇಕಡಾ 95% ಹಣ ಖರ್ಚಾಗಿರುವುದರ ಬಗ್ಗೆ ಮಾಹಿತಿ ನೀಡಲಾಗಿದೆ.

ವೃದ್ಧ ಕಲಾವಿದರಿಗೆ ಮಾಶಾಸನ, ವಿಧವಾ ಕಲಾವಿದರಿಗೆ ಗೌರವಧನ, ಕಲಾವಿದರಿಗೆ ಗೌರವಧನ, ಕಲಾವಿದರಿಗೆ ವೈದ್ಯಕೀಯ ವೆಚ್ಚ, ಹೀಗೆ ಇನ್ನು ಹಲವು ಕಾರ್ಯಕ್ರಮಗಳಿಗೆ ಅನುದಾನವನ್ನು ನೀಡಿರುವುದರ ಬಗ್ಗೆ ಮಾಹಿತಿ ಇದೆ. ಜಾನಪದ ಸಾಹಿತ್ಯ ಮತ್ತು ಕಲಾಪ್ರಕಾರಗಳಿಗೆ ಹೆಚ್ಚು ಒತ್ತು ಕೊಟ್ಟಿರುವುದನ್ನು ಕಾಣುತ್ತೇವೆ. ಈ ಎಲ್ಲಾ ನೆಲೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಅನುದಾನವನ್ನು ವಾರ್ಷಿಕವಾಗಿ ನೀಡುತ್ತಾ ಬಂದಿದೆ. ಈ ಎಲ್ಲಾ ಅಂಶಗಳನ್ನು ಪರಿಶೀಲಿಸಿ ಮೌಲ್ಯಮಾಪನಕ್ಕೆ ಬೇಕಾಗುವ ಅಂಶಗಳನ್ನು ಬಳಸಿಕೊಳ್ಳಲಾಗಿದೆ.

## 4.2 ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಂತರ್‌ಜಾಲದ ಮುಖಪುಟದಲ್ಲಿ ಲಭ್ಯ ಇರುವ ಮಾಹಿತಿಗಳ ವಿಶ್ಲೇಷಣೆ.

ಕರ್ನಾಟಕದ ಸರ್ಕಾರದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ತನ್ನ ಇಲಾಖೆಯ ವೆಬ್ ಸೈಟ್‌ನಲ್ಲಿ ಕರ್ನಾಟಕ ಸಂಸ್ಕೃತಿಯಲ್ಲಿನ ನಾಡು–ನುಡಿ, ಕಲೆ–ಸಾಹಿತ್ಯ, ದೇಶಿಯತೆ, ಸಂಸ್ಕೃತಿ ಮತ್ತು ನಾಡಿನ ಚಾರಿತ್ರಿಕ ಹಿನ್ನೆಲೆಯ ಬಗ್ಗೆ ಸಂಕ್ಷಿಪ್ತವಾಗಿ ಮಾಹಿತಿಯನ್ನು ನೀಡಿರುತ್ತದೆ. ಹಾಗು ಕನ್ನಡ ಮತ್ತು ಸಂಸ್ಕೃತಿಯ ಐತಿಹಾಸಿಕ ಹಿನ್ನೆಲೆಯ ಬಗ್ಗೆ ಮಾಹಿತಿ ಲಭ್ಯವಿರುತ್ತದೆ. ಜೊತೆಗೆ ಸಂಗೀತ, ನೃತ್ಯ, ಲಲಿತಕಲಾ, ಜಾನಪದ ಕಲಾಪ್ರಕಾರಗಳ ಬಗ್ಗೆ ಮತ್ತು ಇನ್ನಿತರ ಹತ್ತು ಹಲವು ವಿಷಯಗಳ ಬಗ್ಗೆ ಮಾಹಿತಿ ಅಡಕಗೊಳಿಸಿರುತ್ತದೆ. ಇನ್ನು ಮುಂದುವರೆದಂತೆ ಈ ಇಲಾಖೆಯ ಅಡಿಯಲ್ಲಿ ಇರುವ 12 ಅಕಾಡೆಮಿಗಳ ಕುರಿತು ಮಾಹಿತಿ ನೀಡಿರುತ್ತದೆ, ಮತ್ತು ಆ ಅಕಾಡೆಮಿಗಳ ಕಾರ್ಯ ಚಟುವಟಿಕೆಗಳಿಗೆ

ಸಂಬಂಧಪಟ್ಟಂತೆ ಮತ್ತು ಅವುಗಳ ಕ್ರಿಯಾಯೋಜನೆಗಳಿಗೆ ಸಂಬಂಧಪಟ್ಟಂತೆ ಮಾಹಿತಿಯು ಲಭ್ಯವಿರುತ್ತದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ನಿರಂತರವಾಗಿ ನಡೆಸುವ ಕಾರ್ಯಕ್ರಮಗಳ ಬಗ್ಗೆ ತಿಳಿಸಲಾಗಿದೆ. ಸಾಂಸ್ಕೃತಿಕ ಸಂಜೆ ಹೆಸರಿನಲ್ಲಿ ಪ್ರತಿ ಶುಕ್ರವಾರ ಯುವ ಕಲಾವಿದರನ್ನು ಸೇರಿಸಿ ನಮ್ಮ ಸಂಸ್ಕೃತಿಯನ್ನು ಪ್ರತಿಬಿಂಬಿಸುವಂತಹ ಹಲವು ಕಾರ್ಯಕ್ರಮಗಳನ್ನು ನಡೆಸಿಕೊಟ್ಟಿರುತ್ತದೆ. ಚಿಗುರು ಹೆಸರಿನಲ್ಲಿ ಮಕ್ಕಳಲ್ಲಿನ ಕಲಾಪ್ರತಿಭೆಯನ್ನು ಗುರುತಿಸಿ ಅವರಿಂದ ಸಾಂಸ್ಕೃತಿಕ ಕಾರ್ಯಕ್ರಮವನ್ನು ಏರ್ಪಡಿಸಿರುತ್ತದೆ. ಸಾಂಸ್ಕೃತಿಕ ಸೌರಭ ಹೆಸರಿನಲ್ಲಿ ಕರ್ನಾಟಕದ ಬೇರೆ ಬೇರೆ ಜಿಲ್ಲೆಗಳಲ್ಲಿ ಪ್ರತಿ ಮೂರನೇ ಶುಕ್ರವಾರ ಮತ್ತು ಶನಿವಾರ ಉತ್ಸವದ ರೂಪದಲ್ಲಿ ಕಾರ್ಯಕ್ರಮಗಳನ್ನು ಏರ್ಪಡಿಸಿರುತ್ತದೆ. ರಂಗಸುಗ್ಗಿ, ಸಂಗೀತ ಸುಧೆ ಹೀಗೆ ಇನ್ನು ಹಲವು ಕಾರ್ಯಕ್ರಮಗಳನ್ನು ನಡೆಸಿರುತ್ತದೆ. ಈ ಇಲಾಖೆಯು ತುಂಬಾ ಕಷ್ಟದಲ್ಲಿರುವ ಕಲಾವಿದರಿಗೆ ನೀಡಿರುವ ಮಾಶಾಸನದ ಬಗ್ಗೆ ಮಾಹಿತಿ ಕೊಡಲಾಗಿದೆ. ನಂತರ ಈ ಸಾಮಾನ್ಯ ಯೋಜನೆ, ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆ ಎನ್ನುವ ವಿಶೇಷ ಯೋಜನೆಗಳನ್ನು ಕುರಿತು ವಿವರಿಸಲಾಗಿದೆ. ಸಾಂಸ್ಕೃತಿಕ ಪ್ರೋತ್ಸಾಹ ಯೋಜನೆಗಳ ಬಗ್ಗೆ ವಿವರಣಾತ್ಮಕವಾಗಿ ನೀಡಿದ್ದಾರೆ. ರಾಷ್ಟ್ರ ಪ್ರಶಸ್ತಿಗಳು ಮತ್ತು ಅಭಿವೃದ್ಧಿ ಯೋಜನೆಗಳ ಬಗ್ಗೆ ಮಾಹಿತಿ ಇದೆ. ಅಖಿಲ ಭಾರತ ಸೌಹಾರ್ದ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡಿದ್ದಾರೆ. ಜೊತೆಗೆ ಇಲಾಖೆಯ ಮುಖ್ಯ ಕಾರ್ಯ ಕ್ಷೇತ್ರಗಳ ಬಗ್ಗೆ, ಕಲೆ ಸಂಸ್ಕೃತಿಯ ಬಗ್ಗೆ ಮಾಹಿತಿ ಕೊಟ್ಟಿದ್ದಾರೆ. ಚಿತ್ರಕಲೆ, ಶಿಲ್ಪಕಲೆ, ನೃತ್ಯಕಲೆಗಳ ಬಗ್ಗೆ ಮಾಹಿತಿ ನೀಡಿರುತ್ತಾರೆ. ಈ ಯೋಜನೆಯನ್ನು ಮೌಲ್ಯಮಾಪನ ಮಾಡುವ ಸಂದರ್ಭದಲ್ಲಿ ಈ ಎಲ್ಲಾ ಅಂಶಗಳನ್ನು ಅಧ್ಯಯನ ಮಾಡಿ ಇಲ್ಲಿನ ವಿಷಯಗಳನ್ನು ಸಂದರ್ಭೋಚಿತವಾಗಿ ಬಳಸಿಕೊಳ್ಳಲಾಗಿದೆ.

# ಮೌಲ್ಯಮಾಪನದ ಉದ್ದೇಶಗಳು

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕರ್ನಾಟಕದಲ್ಲಿನ ಕಲೆ, ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಮತ್ತು ಸಂರಕ್ಷಿಸುವ ಉದ್ದೇಶವನ್ನಿಟ್ಟುಕೊಂಡು ಸುಮಾರು 11 ಕಲಾಪ್ರಕಾರಗಳಿಗೆ ತನ್ನಲ್ಲಿರುವ ಸಾಮಾನ್ಯ ಯೋಜನೆ, ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆ ಎನ್ನುವ ಈ ಮೂರು ಯೋಜನೆಗಳ ಮೂಲಕ ಹೆಚ್ಚು ಒತ್ತು ನೀಡಿರುತ್ತದೆ. ಅದರಲ್ಲೂ ಈ ಯೋಜನೆಗಳು ಕಾರ್ಯಗತಗೊಳ್ಳಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಸಾಕಷ್ಟು ಶ್ರಮಿಸಿರುತ್ತದೆ. ಆ ಯೋಜನೆಗಳ ಉದ್ದೇಶಗಳನ್ನು ಈ ಕೆಳಕಂಡಂತೆ ಮೌಲ್ಯಮಾಪನ ಮಾಡಲಾಗಿದೆ.

- ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧಿಕಾರಿಗಳು ಸಂಘ–ಸಂಸ್ಥೆಗಳ ಆಯ್ಕೆಯಲ್ಲಿ ಪಾರದರ್ಶಕತೆ ಮತ್ತು ಗುಣಮಟ್ಟವನ್ನು ಪರಿಗಣಿಸಿರುವುದರ ಬಗ್ಗೆ ಪರಿಶೀಲಿಸುವುದು.
- ಇಲಾಖೆಯು ನೀಡಿದ ಹಣವನ್ನು ಸಂಘ–ಸಂಸ್ಥೆಗಳು ನಿಯಮಾನುಸಾರ ಬಳಸಿರುವುದರ ಬಗ್ಗೆ ಮೌಲ್ಯಮಾಪನ ಮಾಡುವುದು.
- ಸಂಘ ಸಂಸ್ಥೆಗಳ ಹೆಸರಿನಲ್ಲಿ ಆ ಸಂಸ್ಥೆಗಳ ಅಧ್ಯಕ್ಷರು, ಕಾರ್ಯದರ್ಶಿಗಳು, ಪದಾಧಿಕಾರಿಗಳು ಕನ್ನಡ ಸಂಸ್ಕೃತಿ ಇಲಾಖೆಯಿಂದ ಪಡೆದ ಧನಸಹಾಯದಿಂದ ಕಲಾಪ್ರಕಾರಗಳನ್ನು ಹೇಗೆ ಉಳಿಸಿ ಬೆಳೆಸುತ್ತಾರೆ ಎಂಬುದರ ಬಗ್ಗೆ ವಿಶ್ಲೇಷಣೆ ಮಾಡುವುದು.
- ಸಂಘ ಸಂಸ್ಥೆಗಳು ಕಲಾವಿದರನ್ನು, ಜಾನಪದ ಕಲೆಯನ್ನು, ಸಂಸ್ಕೃತಿಯನ್ನು ಯಾವ ರೀತಿ ಬಳಸಿಕೊಳ್ಳುತ್ತಾರೆ? ನಂತರ ಅವರಿಗೆ ಹೇಗೆ ಪ್ರೋತ್ಸಾಹ ನೀಡುತ್ತಾರೆ? ಅನ್ನುವುದನ್ನು ಪರಿಶೀಲಿಸಲಾಗುವುದು.
- ಕಲಾವಿದರಿಗೆ ನಿಯಮಾನುಸಾರ ಪ್ರೋತ್ಸಾಹ ಧನ ನೀಡಿರುವರೇ ಅಥವಾ ಇಲ್ಲವೇ ಎಂಬುದರ ಬಗ್ಗೆ ಪರಿಶೀಲಿಸುವುದು.
- ಸಂಘ–ಸಂಸ್ಥೆಗಳು ಹಣ ಬಳಕೆಯ ಪ್ರಮಾಣಪತ್ರ ಮತ್ತು ಲೆಕ್ಕ ಪರಿಶೋಧಕ ಪತ್ರಗಳನ್ನು ನೀಡಿರುವುದರ ಬಗ್ಗೆ ಮಾಹಿತಿ ಪಡೆಯುವುದು.
- ಸಂಘ ಸಂಸ್ಥೆಗಳು ಧನಸಹಾಯವನ್ನು ಸದ್ಬಳಕೆ ಮಾಡಿಕೊಂಡಿದ್ದಾರೆಯೇ ಇಲ್ಲವೇ ಎಂಬುದನ್ನು ಮೌಲ್ಯಮಾಪನ ಮಾಡುವುದು.
- ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಈ ಯೋಜನೆಗಳ ಮೂಲ ಆಶಯಗಳು ಹಾಗು ಅವುಗಳ ಗುರಿಗಳು ಇಲ್ಲಿ ಈಡೇರಿದೆಯೇ ಇಲ್ಲವೇ ಎನ್ನುವುದನ್ನು ಸೂಕ್ಷ್ಮವಾಗಿ ಪರಿಶೀಲಿಸುವುದು.

# ಮೌಲ್ಯಮಾಪನ ಚೌಕಟ್ಟು

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ತನ್ನಲ್ಲಿನ ಮೂರು ಯೋಜನೆಯ ಅಡಿಯಲ್ಲಿ ಸಂಘ–ಸಂಸ್ಥೆಗಳಿಗೆ ನೀಡುತ್ತಿರುವ ಧನಸಹಾಯವು ಸರಿಯಾಗಿ ಸದ್ಬಳಕೆಯಾಗಿದೆಯೇ ಇಲ್ಲವೇ ಎಂಬುದನ್ನು ಪರಿಶೀಲನೆ ಮಾಡಲು ಈ ವಿಷಯಕ್ಕೆ ಸರಿ ಹೊಂದುವಂತಹ ಸಂಶೋಧನೆಯ ವಿಧಾನಗಳನ್ನು ಇಲ್ಲಿ ಬಳಸಿಕೊಳ್ಳಲಾಗಿದೆ.

## 6.0 ಮೌಲ್ಯಮಾಪನದ ಅವಧಿ

ಕನ್ನಡ ಸಂಸ್ಕೃತಿ ಇಲಾಖೆಯು 3 ವರ್ಷದ ಅವಧಿಯಲ್ಲಿ ನೀಡಿದ ಧನಸಹಾಯವನ್ನು ಸಂಘ–ಸಂಸ್ಥೆಗಳು ಸರಿಯಾದ ರೀತಿಯಲ್ಲಿ ಸದ್ಬಳಕೆ ಮಾಡಿಕೊಂಡು ಕಾರ್ಯಕ್ರಮ ನಡೆಸಿದ್ದಾರೆ ಅಥವಾ ಇಲ್ಲವೇ ಎಂಬುದನ್ನು ಪರಿಶೀಲಿಸಲಾಗಿದೆ ಮತ್ತು ಈ ಅವಧಿಯಲ್ಲಿ ಅನುದಾನ ಯಾವ ರೀತಿ ಸದ್ಬಳಕೆಯಾಗಿದೆ ಎಂಬುದನ್ನು ತಿಳಿಸಲಾಗಿದೆ.

**ಕೋಷ್ಟಕ 1: ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ 2014–15 ರಿಂದ 2016–17 ಸಾಲಿನವರೆಗೆ ಸಂಘ ಸಂಸ್ಥೆಗಳಿಗೆ ಬಿಡುಗಡೆಯಾದ ಅನುದಾನದ ವಿವರಣೆ.**

| ಯೋಜನೆಗಳು | ವರ್ಷಗಳು | ಒಟ್ಟು ಸಂಘ ಸಂಸ್ಥೆಗಳ ಸಂಖ್ಯೆಗಳು | ಒಟ್ಟು ಖರ್ಚಾಗಿರುವುದು |
|---|---|---|---|
| **ಸಾಮಾನ್ಯ ಯೋಜನೆ** | 2014–15 | 704 | 15,33,00,000 |
| | 2015–16 | 804 | 14,59,70,000 |
| | 2016–17 | 744 | 13,19,25,000 |
| | **ಒಟ್ಟು** | **2252** | **43,11, 95,000** |
| **ಗಿರಿಜನ ಉಪಯೋಜನೆ** | 2014–15 | 034 | 65,00,000 |
| | 2015–16 | 058 | 94,00,000 |
| | 2016–17 | 042 | 83,00,000 |
| | **ಒಟ್ಟು** | **134** | **02,42,00,000** |
| **ವಿಶೇಷ ಘಟಕ ಯೋಜನೆ.** | 2014–15 | 269 | 07,17,75,000 |
| | 2015–16 | 284 | 04,78,75,000 |
| | 2016–17 | 255 | 05,04,00,000 |
| | **ಒಟ್ಟು** | **808** | **17,00,50,000** |
| ಸಾಮಾನ್ಯ ಯೋಜನೆ | | 2252 | 43,11, 95,000 |
| ಗಿರಿಜನ ಉಪಯೋಜನೆ | | 134 | 02,42,00,000 |
| ವಿಶೇಷ ಘಟಕ ಯೋಜನೆ | | 808 | 17,00,50,000 |
| (3 ವರ್ಷದಲ್ಲಿ 3 ಯೋಜನೆಗಳಿಂದ ಅನುಧಾನವನ್ನ ಪಡೆದುಕೊಂಡಿರುವ ಒಟ್ಟು ಸಂಘ ಸಂಸ್ಥೆಗಳು ಮತ್ತು ಅವುಗಳಿಗೆ ಬಿಡುಗಡೆಯಾಗಿರುವ ಒಟ್ಟು ಹಣ) ಒಟ್ಟು ಮೊತ್ತ. | | **3194** (ಒಟ್ಟು ಸಂಘ ಸಂಸ್ಥೆಗಳು) | **62,54,45,000** (ಒಟ್ಟು ಮೊತ್ತ ) |

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು 2014-15 ರಿಂದ 2016-17ನೇ ಸಾಲಿನವರೆಗೆ ಸಾಮಾನ್ಯ ಯೋಜನೆ, ವಿಶೇಷ ಘಟಕ ಯೋಜನೆ, ಗಿರಿಜನ ಉಪಯೋಜನೆಯ ಅಡಿಯಲ್ಲಿ ಒಟ್ಟು 3194 ಸಂಘ ಸಂಸ್ಥೆಗಳಿಗೆ **ರೂ. 62,54,45,000/-** ಗಳನ್ನು ನೀಡಿದೆ. ಈ **3194** ಸಂಘ ಸಂಸ್ಥೆಗಳನ್ನು ಮೌಲ್ಯಮಾಪನ ಮಾಡುವ ಸಂದರ್ಭದಲ್ಲಿ ಬಳಸಿಕೊಳ್ಳಲಾಗಿದೆ. ಮುಖ್ಯವಾಗಿ ಈ ಮೇಲೆ ತಿಳಿಸಿದ ಇಷ್ಟು ಹಣ ಕಲೆ ಮತ್ತು ಸಂಸ್ಕೃತಿಯ ಉಳಿವಿಗೆ ಸಂಘ ಸಂಸ್ಥೆಗಳ ಮೂಲಕ ಸದ್ಬಳಕೆಯಾಗಿದೆಯೇ ಇಲ್ಲವೇ ಎಂಬುದನ್ನು ಇಲ್ಲಿ ಮೌಲ್ಯಮಾಪನ ಮಾಡುವುದೇ ಪ್ರಮುಖ ಉದ್ದೇಶವಾಗಿರುತ್ತದೆ.

**ಕೋಷ್ಟಕ 1.1: ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಮೂರು ವರ್ಗಗಳಿಗೆ 2014-15 ರಿಂದ 2016-17 ರವರೆಗೆ ನೀಡಿರುವ ಅನುದಾನದ ವಿವರ (ಕೋಟಿ ರೂ. ಗಳಲ್ಲಿ ನೀಡಲಾಗಿದೆ)**

| ಅನುದಾನ ಪಡೆಯುವ ಯೋಜನೆಗಳು | 2014-15 | 2015-16 | 2016-17 | 2014-2017 ಒಟ್ಟು 3 ವರ್ಷ |
|---|---|---|---|---|
| ಸಾಮಾನ್ಯ ಯೋಜನೆ | 15.33 (66.19%) | 14.60 (71.82%) | 13.19 (68.84%) | 43.12 (68.83%) |
| ವಿಶೇಷ ಘಟಕ ಯೋಜನೆ | 7.18 (31.00%) | 4.79 (23.56%) | 5.14 (26.83%) | 17.11 (27.31%) |
| ಗಿರಿಜನ ಉಪಯೋಜನೆ | 0.65 (2.81%) | 0.94 (4.62%) | 0.83 (4.33%) | 2.42 (3.86%) |
| **ಒಟ್ಟು** | **23.16 (100)** | **20.33 (100)** | **19.16 (100)** | **62.65 (100)** |

ಈ ಮೇಲ್ಕಂಡ ಕೋಷ್ಟಕದಲ್ಲಿ ತಿಳಿಸಿರುವ ಮೂರು ಯೋಜನೆಗಳಿಗೆ 2014-15 ರಿಂದ 2016-17 ರ ವರೆಗೆ ಒಟ್ಟು ಮೂರು ವರ್ಷಗಳಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಶೇಕಡಾವಾರು ಅನುದಾನವನ್ನು ನೀಡಿರುವುದರ ಬಗ್ಗೆ ವಿವರಿಸಲಾಗಿದೆ. ಸಾಮಾನ್ಯ ಯೋಜನೆಯು **ಶೇ 68.83** ರಷ್ಟು ಅನುದಾನವನ್ನು ಪಡೆದುಕೊಂಡರೆ, ವಿಶೇಷ ಘಟಕ ಯೋಜನೆಯು **ಶೇ 27.31** ರಷ್ಟು ಪಡೆದುಕೊಂಡಿದೆ. ಅದೇರೀತಿ ಗಿರಿಜನ ಉಪಯೋಜನೆಯು **ಶೇ 3.86** ರಷ್ಟು ಪಡೆದುಕೊಂಡಿರುತ್ತದೆ.

ಕರ್ನಾಟಕ ಸರ್ಕಾರವು ಯಾವುದೇ ಕ್ರಿಯಾಯೋಜನೆಯನ್ನು ಸಾಮಾಜಿಕವಾಗಿ ಅನುಷ್ಠಾನಗೊಳಿಸುವಾಗ ಮೀಸಲಾತಿ ನಿಯಮವನ್ನು ಅನುಸರಿಸುತ್ತಿದೆ. ಅದರಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಈ ಮೇಲಿನ ಕೋಷ್ಟಕದಲ್ಲಿನ ಈ ಮೂರು ಯೋಜನೆಗಳ ಅಡಿಯಲ್ಲಿ ಎಲ್ಲಾ ಜಾತಿ ಮತ್ತು ವರ್ಗದ ಸಂಘ ಸಂಸ್ಥೆಗಳಿಗೆ ತಲುಪಿಸಬೇಕು ಎನ್ನುವ ಕಾರಣಕ್ಕಾಗಿ ಮೀಸಲಾತಿಯ ನಿಯಮವನ್ನು ಅನುಸರಿಸಿರುತ್ತಾರೆ.

## 6.1 ಅನುದಾನದ ಸದ್ಬಳಕೆ

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಇಡೀ ಕರ್ನಾಟಕದಲ್ಲಿನ 3194 ಸಂಘ ಸಂಸ್ಥೆಗಳಿಗೆ 2014–15 ರಿಂದ 2016–17 ನೇ ಸಾಲಿನಲ್ಲಿ (ಒಟ್ಟು 3 ವರ್ಷಗಳ ಕಾಲ) **ರೂ. 62,54,45,000** / ಗಳನ್ನು ಈ ಮೂರು ಯೋಜನೆಗಳ ಅಡಿಯಲ್ಲಿ ಕಲೆ, ಸಾಹಿತ್ಯ, ಸಂಸ್ಕೃತಿ ಮತ್ತು ಜಾನಪದ ಕಲಾಪ್ರಕಾರಗಳನ್ನು ಉಳಿಸಿ ಬೆಳೆಸಲು ಧನಸಹಾಯವನ್ನು ನೀಡಿದೆ. ಈ ಇಲಾಖೆಯು ನೀಡಿದ ಧನಸಹಾಯವನ್ನು ಸಂಘ ಸಂಸ್ಥೆಗಳು ಸರಿಯಾಗಿ ಸದ್ಬಳಕೆ ಮಾಡಿಕೊಂಡಿದ್ದಾರೆಯೇ ಅಥವಾ ಇಲ್ಲವೇ ಎನ್ನುವುದನ್ನು ಮೌಲ್ಯಮಾಪನ ಮಾಡಲಾಗಿದೆ. ಈ ಮೌಲ್ಯಮಾಪನಕ್ಕೆ ಮಾದರಿ ಆಯ್ಕೆಯಲ್ಲಿ ಕೆಲವು ಜಿಲ್ಲೆಗಳನ್ನು, ಸಂಘ ಸಂಸ್ಥೆಗಳನ್ನು, ಕಲಾವಿದರನ್ನು ಮತ್ತು ಪ್ರೇಕ್ಷಕರನ್ನು ಆಯ್ಕೆ ಮಾಡಿಕೊಂಡು ಅನುದಾನವು ಸದ್ಬಳಕೆಯಾಗಿರುವುದರ ಬಗ್ಗೆ ಪರಿಶೀಲಿಸಲಾಗಿದೆ. ಸಂಘ ಸಂಸ್ಥೆಗಳು ಅನುದಾನವನ್ನು ಪಾರದರ್ಶಕವಾಗಿ ಮತ್ತು ನಿಷ್ಪಕ್ಷಪಾತವಾಗಿ ಹಾಗೂ ಪರಿಣಾಮಕಾರಿಯಾಗಿ ಬಳಸಿಕೊಂಡಿರುವುದರನ್ನು ಸೂಕ್ಷ್ಮವಾಗಿ ಕಂಡುಹಿಡಿಯಲಾಗಿದೆ.

### 6.1.1 'ಸದ್ಬಳಕೆ' ಎನ್ನುವ ಪರಿಕಲ್ಪನೆಯ ಬಗ್ಗೆ ವಿವರಣೆ :

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಸಂಘ ಸಂಸ್ಥೆಗಳು ಇಲ್ಲಿನ ಮೂರು ಯೋಜನೆಗಳ ಮೂಲಕ ಅನುದಾನವನ್ನು ಪಡೆದು ಕಲೆ, ಸಾಹಿತ್ಯ, ಸಂಸ್ಕೃತಿ, ಸಂಗೀತ, ನೃತ್ಯ, ಜಾನಪದ ಕಲಾಪ್ರಕಾರಗಳನ್ನು, ಕಲಾವಿದರನ್ನು, ಹೀಗೆ ಇನ್ನು ಹಲವು ಸಾಂಸ್ಕೃತಿಕ ಕ್ಷೇತ್ರಗಳನ್ನು ಉಳಿಸಿ ಬೆಳೆಸುವಲ್ಲಿ ಶ್ರಮಿಸುತ್ತಿವೆ. ಇಂತಹ ಸಂದರ್ಭದಲ್ಲಿ ನಮ್ಮ ಮುಂದೆ ಎದುರಾಗುವುದು 'ಸದ್ಬಳಕೆ'ಯ ವಿಚಾರ. ಆ ಅಂಶವನ್ನು ಈ ಕೆಳಕಂಡಂತೆ ಸೂಕ್ಷ್ಮವಾಗಿ ವಿವರಿಸಲಾಗುವುದು.

ಸದ್ ಎಂದರೆ ಒಳ್ಳೆಯ. ಬಳಕೆ ಎಂದರೆ, ಉಪಯೋಗ. ಹಾಗಾಗಿ ಸದ್ಬಳಕೆ ಎಂದರೆ, ಒಳ್ಳೆಯ ಉಪಯೋಗ ಅಥವಾ ಒಳ್ಳೆಯ ಬಳಕೆ ಎಂದರ್ಥ. ಯಾವುದೇ ವಸ್ತು, ವಿಷಯ ಮತ್ತು ಅನುದಾನವನ್ನು ಸಂದರ್ಭೋಚಿತವಾಗಿ ಸಕಾರಾತ್ಮಕವಾಗಿ ಬಳಸಿಕೊಂಡು ಆ ಯೋಜನೆಯನ್ನು ಅಥವಾ ಕಾರ್ಯಕ್ರಮವನ್ನು ಯಶಸ್ವಿಯಾಗಿ ನೆರವೇರಿಸಿ ಪ್ರಾಮಾಣಿಕವಾಗಿ ಅಲ್ಲಿಗೆ ಸಲ್ಲಿಸಬೇಕಾದ ಎಲ್ಲಾ ಅನುಕೂಲಗಳು ದೊರೆಯುವಂತೆ ಮಾಡಿದಾಗ ಅದು ಸದ್ಬಳಕೆಯಾಗುತ್ತದೆ. ಮೌಲ್ಯಮಾಪನದ ದೃಷ್ಟಿಯಿಂದ ಸದ್ಬಳಕೆ ಎನ್ನುವ ಪರಿಕಲ್ಪನೆಯನ್ನು ಅನೇಕ ಆಯಾಮಗಳಲ್ಲಿ ಚರ್ಚಿಸಿ ಅದರ ಅರ್ಥವ್ಯಾಪ್ತಿಯನ್ನು ತುಂಬಾ ವಿಶಾಲವಾದ ಅರ್ಥದಲ್ಲಿ ಗಮನಿಸಲಾಗುತ್ತದೆ. ಅವು ಈ ಕೆಳಕಂಡಂತೆ ಇರುತ್ತವೆ.

1. ಸಂಘ ಸಂಸ್ಥೆಗಳು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಅನುದಾನವನ್ನು ಪಡೆದುಕೊಂಡು ಯಾವ ರೀತಿ ಸದ್ಬಳಕೆ ಮಾಡಿಕೊಂಡಿದ್ದಾರೆ ಎಂಬುದನ್ನು ಪರಿಶೀಲಿಸಲು ಹೊರಟಾಗ, ಯಾವ ಉದ್ದೇಶಕ್ಕೆ ಅನುದಾನವನ್ನು ನೀಡಿರುತ್ತಾರೋ ಆ ಉದ್ದೇಶಕ್ಕೆ ಅನುಗುಣವಾಗಿ ಅನುದಾನವು ಸದ್ಬಳಕೆಯಾಗಬೇಕು. ಆಗ ಸದ್ಬಳಕೆಯ ಪರಿಕಲ್ಪನೆಗೆ ಅರ್ಥ ಬರುತ್ತದೆ.
2. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ರಾಜ್ಯದ ಎಲ್ಲಾ ಜಿಲ್ಲೆಗಳ ಸಂಘ ಸಂಸ್ಥೆಗಳಿಗೆ ಸಮಾನವಾಗಿ ಅನುದಾನವನ್ನು ಮಂಜೂರು ಮಾಡುವುದೇ ಸದ್ಬಳಕೆ. ನಂತರ ಆ ಅನುದಾನವನ್ನು ಸರಿಯಾಗಿ

ಬಳಸಿಕೊಳ್ಳುವಂತಹ ವಾತಾವರಣವನ್ನು ಅವರಿಗೆ ಸೃಷ್ಟಿಸಬೇಕು. ಆಗ ಸದ್ಬಳಕೆ ಎನ್ನುವ ಪರಿಕಲ್ಪನೆಗೆ ಅರ್ಥ ಸಿಗುತ್ತದೆ.

3. ರಾಜ್ಯದ ಎಲ್ಲಾ ವರ್ಗದಿಂದ ಸ್ಥಾಪಿತವಾದ ಸಂಘ ಸಂಸ್ಥೆಗಳಿಗೆ ಅನುದಾನವನ್ನು ಸಮಾನವಾಗಿ ನೀಡುವುದು ಒಂದು ರೀತಿಯಲ್ಲಿ ಸದ್ಬಳಕೆ ಎನಿಸಿಕೊಳ್ಳುತ್ತದೆ.
4. ಅನುದಾನವು ಇದಕ್ಕೆ ಸಂಬಂಧಿಸಿದ ಎಲ್ಲಾ ಹಕ್ಕುದಾರರಿಗೂ ತಲುಪುವುದು ಸದ್ಬಳಕೆಯಾಗಿದೆ.
5. ಅನುದಾನವು ಎಲ್ಲಾ ಸಂಘ ಸಂಸ್ಥೆಗಳಿಗೂ ಯಾವುದೇ ತಾರತಮ್ಯವಿಲ್ಲದೆ ಏಕರೂಪದಲ್ಲಿ ಸಮಾನವಾಗಿ ಹಂಚಿಯಾಗುವುದು ಕೂಡ ಸದ್ಬಳಕೆ ಎನಿಸಿಕೊಳ್ಳುತ್ತದೆ.

"ಸದ್ಬಳಕೆ" ಇಲ್ಲಿ 'ಎಲ್ಲರನ್ನು ಒಳಗೊಳ್ಳುವುದು' ಎಂಬುದನ್ನು ತೋರಿಸುತ್ತದೆ. ಸಮಾಜದ ಎಲ್ಲಾ ವರ್ಗ ಹಾಗು ಪ್ರಾದೇಶಿಕ ಭಾಗಗಳನ್ನು ಒಳಗೊಳ್ಳುವುದು ಎಂಬುದನ್ನು ತಿಳಿಸುತ್ತದೆ. ಮತ್ತು ಇನ್ನು ಮುಂದುವರೆದು ಎಲ್ಲಾ ಲಿಂಗಗಳನ್ನು ಒಳಗೊಳ್ಳುವುದು ಹಾಗು ಎಲ್ಲಾ ಕಲಾ ಪ್ರಕಾರಗಳನ್ನು ಒಳಗೊಳ್ಳುವುದು ಎಂದು ತಿಳಿದುಕೊಳ್ಳಲಾಗುತ್ತದೆ. ಬೇರೆ ಬೇರೆ ಆಯಾಮಗಳಲ್ಲಿಯು 'ಸದ್ಬಳಕೆ'ಯ ವಿಚಾರವನ್ನು ಚರ್ಚೆ ಮಾಡಬಹುದು. ಇದು ಬಹುರೂಪಿತನವನ್ನು ಹೊಂದಿದೆ. ಸಮಾಜ ಮತ್ತು ಸಂಸ್ಕೃತಿಯ ಹಿನ್ನೆಲೆಯಲ್ಲಿ 'ಸದ್ಬಳಕೆ'ಯ ವಿಚಾರಗಳ ಬಗ್ಗೆ ಸಾಕಷ್ಟು ಮಾಹಿತಿ ಪಡೆಯಬಹುದು. ಒಟ್ಟಿನಲ್ಲಿ 'ಸದ್ಬಳಕೆ' ಎಂದರೆ, ಒಳ್ಳೆಯದಕ್ಕೆ ಬಳಕೆಯಾಗಬೇಕು ಎಂದು ಅರ್ಥವಿರುತ್ತದೆ.

## 6.2 ಮೌಲ್ಯಮಾಪನಕ್ಕೆ ಆಯ್ಕೆಯಾದ ಮಾದರಿ ಜಿಲ್ಲೆಗಳ ವಿವರ

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ತಾನು ಆಯೋಜಿಸಿರುವ ಈ ಮೂರು ಯೋಜನೆಗಳನ್ನು ಕರ್ನಾಟಕ ರಾಜ್ಯದ **30** ಜಿಲ್ಲೆಗಳಲ್ಲಿಯು ಅಳವಡಿಸಿದೆ. ಈ **30** ಜಿಲ್ಲೆಗಳನ್ನು **4** ವಲಯಗಳನ್ನಾಗಿ ಮಾಡಿಕೊಳ್ಳಲಾಗಿದೆ. ಪ್ರಾದೇಶಿಕವಾಗಿ ತುಂಬಾ ವಿಶಿಷ್ಟವಾಗಿ ಕಂಡು ಬರುವ ಜಿಲ್ಲೆಗಳನ್ನು ಕೇಂದ್ರೀಕರಿಸಿ **ಕಲ್ಬುರ್ಗಿ ವಲಯ, ಬೆಳಗಾವಿ ವಲಯ, ಬೆಂಗಳೂರು ವಲಯ ಮತ್ತು ಮೈಸೂರು ವಲಯ** ಗಳೆಂದು ವಿಭಾಗಿಸಲಾಗಿದೆ.

ಈ ರೀತಿ ವಿಭಾಗವಾಗಿರುವ ಪ್ರತಿಯೊಂದು ವಲಯದಿಂದ ಮೊದಲಿಗೆ, **ಸಾಮಾನ್ಯ ಯೋಜನೆಯ** ಅಡಿಯಲ್ಲಿ ಹೆಚ್ಚು ಸಂಘ-ಸಂಸ್ಥೆ ಹೊಂದಿರುವ 1 ಜಿಲ್ಲೆಯನ್ನು, ಅತೀ ಕಡಿಮೆ ಸಂಘ-ಸಂಸ್ಥೆ ಹೊಂದಿರುವ 1 ಜಿಲ್ಲೆಯನ್ನು, ಒಟ್ಟು ಒಂದು ವಲಯದಿಂದ 2 ಜಿಲ್ಲೆ **(2x4=8)** ಹೀಗೆ ನಾಲ್ಕು ವಲಯದಿಂದ 8 ಜಿಲ್ಲೆಗಳನ್ನ ಆಯ್ಕೆ ಮಾಡಿಕೊಂಡು ಮೌಲ್ಯಮಾಪನ ಮಾಡಲಾಗಿದೆ. ಅದೇ ರೀತಿ **ವಿಶೇಷ ಘಟಕ ಯೋಜನೆ ಹಾಗು ಗಿರಿಜನ ಉಪಯೋಜನೆಯ** ಅಡಿಯಲ್ಲಿ ಪ್ರತಿವಲಯದಿಂದ ಮೂರು ಜಿಲ್ಲೆಗಳನ್ನು ಆಯ್ಕೆ **(3x4=12)** ಮಾಡಿಕೊಳ್ಳಲಾಗಿದೆ. ಎಲ್ಲಾ ಕಲಾಪ್ರಕಾರಗಳಿಗೆ ಇಲ್ಲಿ ಪ್ರಾತಿನಿಧ್ಯ ಬಾರದ ಕಾರಣ ತಲಾ ಮೂರು ಜಿಲ್ಲೆಗಳನ್ನು ವಲಯವಾರು ಆಯ್ಕೆಮಾಡಿಕೊಳ್ಳಗಾಗಿದೆ. ಒಟ್ಟು 20 ಜಿಲ್ಲೆಯಿಂದ 11 ಕಲಾಪ್ರಕಾರಗಳು ಮೌಲ್ಯಮಾಪನಕ್ಕೆ ಬಳಕೆಯಾಗಿವೆ

# ಮೌಲ್ಯಮಾಪನಕ್ಕೆ ಬಳಸಿಕೊಂಡಿರುವ ಸಂಶೋಧನಾ ವಿಧಾನಗಳು ಮತ್ತು ತಂತ್ರಗಳು

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ತನ್ನ ಮೂರು ಯೋಜನೆಗಳ ಮೂಲಕ ಸಂಘ–ಸಂಸ್ಥೆಗಳಿಗೆ ನೀಡಿರುವ ಧನಸಹಾಯವು ಸರಿಯಾದ ರೀತಿಯಲ್ಲಿ ಸದ್ಬಳಕೆಯಾಗಿದೆಯೇ ಇಲ್ಲವೇ ಎಂಬುದನ್ನು ಮೌಲ್ಯಮಾಪನ ಮಾಡಲು ಈ ಕೆಳಕಂಡ ಸಂಶೋಧನಾ ವಿಧಾನಗಳನ್ನು ಬಳಸಿಕೊಳ್ಳಲಾಗಿದೆ.

## 7.0 ದತ್ತಾಂಶ ಸಂಗ್ರಹಣಾ ವಿಧಾನ

ಈ ಯೋಜನೆಗೆ ಸಂಬಂಧಿಸಿದಂತೆ ಮಾಹಿತಿ ಸಂಗ್ರಹಿಸಲು ಪ್ರಾಥಮಿಕ ದತ್ತಾಂಶ ಮೂಲ ಮತ್ತು ಮಾಧ್ಯಮಿಕ ದತ್ತಾಂಶ ಮೂಲಗಳನ್ನ ಬಳಸಿಕೊಳ್ಳಲಾಗಿದೆ. ಯಾವುದೇ ವಿಷಯದ ಮೇಲೆ ಸಂಶೋಧನೆ ಮಾಡುವಾಗ ಈ ಎರಡು ಮಾರ್ಗಗಳು ಅತ್ಯಂತ ಸಹಕಾರಿ. ಹಾಗೆಯೇ ಯಾವುದೇ ಒಂದು ಯೋಜನೆಯನ್ನು ಮೌಲ್ಯಮಾಪನ ಮಾಡುವಾಗಲು ಈ ಎರಡೂ ಮೂಲಗಳನ್ನು ಪ್ರಧಾನವಾಗಿ ಬಳಸಿಕೊಳ್ಳುವುದು ಒಂದು ನಿಯಮ. ಹಾಗಾಗಿ ಇಲ್ಲಿನ ಮೌಲ್ಯಮಾಪನಕ್ಕೆ ಈ ಎರಡು ಸಂಶೋಧನಾ ಮಾರ್ಗಗಳನ್ನು ಬಳಸಿಕೊಳ್ಳಲಾಗಿದೆ.

7.0.1 **ಪ್ರಾಥಮಿಕ ದತ್ತಾಂಶ ಮೂಲ:** ಇದು ಸಂಪೂರ್ಣವಾಗಿ ಕ್ಷೇತ್ರಕಾರ್ಯದ ಮೇಲೆ ಅವಲಂಬಿತವಾಗಿರುತ್ತದೆ. ಆದ್ದರಿಂದ ಪ್ರಾಥಮಿಕ ಮೂಲದಲ್ಲಿ ಕಂಡು ಬರುವಂತಹ ಮತ್ತು ಈ ಯೋಜನೆಗೆ ಪೂರಕವಾಗಿ ಬಳಸಿಕೊಂಡಿರುವಂತಹ ಸಂಶೋಧನಾ ಮಾರ್ಗಗಳನ್ನು ಕುರಿತು ಇಲ್ಲಿ ವಿವರಿಸಲಾಗಿದೆ.

### 7.0.1.1 ಪ್ರಶ್ನಾವಳಿ

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿನ ಅಧಿಕಾರಿಗಳನ್ನು, ಸಂಘ–ಸಂಸ್ಥೆಗಳ ಪದಾಧಿಕಾರಿಗಳನ್ನು, ಕಲಾವಿದರನ್ನು, ಪ್ರೇಕ್ಷಕರನ್ನು ಸಂಪರ್ಕಿಸಿ ಮಾಹಿತಿ ಪಡೆಯಲು ಪ್ರಶ್ನಾವಳಿ ವಿಧಾನವನ್ನು ಬಳಸಿಕೊಳ್ಳಲಾಗಿದೆ. ಸಂಶೋಧನೆಯಲ್ಲಿ ಪ್ರಶ್ನಾವಳಿಯು ಮಾಹಿತಿ ಸಂಗ್ರಹಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಎಲ್ಲಾ ಪ್ರಶ್ನೆಗಳು ಆಯ್ಕೆಯ ಉತ್ತರವನ್ನು ಹೊಂದಿರುತ್ತವೆ. ಈ ಪ್ರಶ್ನಾವಳಿಗಳನ್ನು ಈ ಮೂರು ಯೋಜನೆಗಳಿಗೆ ಸಂಬಂಧಿಸಿದ ವ್ಯಕ್ತಿಗಳೊಂದಿಗೆ ಚರ್ಚೆಮಾಡಿ ಮಾಹಿತಿ ಪಡೆದುಕೊಳ್ಳಲು ಉಪಯೋಗಿಸಿಕೊಳ್ಳಲಾಗಿದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಸಂಬಂಧಿಸಿದ ಅಧಿಕಾರಿಗಳನ್ನು ಸಂಪರ್ಕಿಸಿ ಇಲಾಖೆಯಿಂದ ಸಂಘ–ಸಂಸ್ಥೆಗಳಿಗೆ ಯಾವ ರೀತಿಯಾದಂತಹ ಕಾರ್ಯಕ್ರಮಗಳಿಗೆ ಹಣವನ್ನು ಬಿಡುಗಡೆ ಮಾಡಿದ್ದಾರೆ ಎನ್ನುವ ಮಾಹಿತಿಯನ್ನು ಪ್ರಶ್ನಾವಳಿಯ ಮೂಲಕ ಪಡೆದುಕೊಳ್ಳಲಾಗಿದೆ.

ಹಾಗೆಯೇ ಸಂಘ–ಸಂಸ್ಥೆಗಳ ಅಧ್ಯಕ್ಷರು, ಕಾರ್ಯದರ್ಶಿಗಳು ಮತ್ತು ಇನ್ನಿತರ ಪದಾಧಿಕಾರಿಗಳನ್ನ ಸಂಪರ್ಕಿಸಿ ಅವರ ಮೂಲಕ ಕಾರ್ಯಕ್ರಮಗಳನ್ನು ಹೇಗೆ ನಡೆಸಿದ್ದಾರೆ ಮತ್ತು ಸಂಘ–ಸಂಸ್ಥೆಗಳು ಯಾವ ನಿಟ್ಟಿನಲ್ಲಿ ಕೆಲಸ ಮಾಡುತ್ತಿವೆ ಎನ್ನುವ ಮಾಹಿತಿಯನ್ನು ಪ್ರಶ್ನಾವಳಿಯ ಮೂಲಕ ಮಾಹಿತಿ ಸಂಗ್ರಹಿಸಲಾಗಿದೆ.

ಅದೇರೀತಿ, ಈ ಸಂಘ-ಸಂಸ್ಥೆಗಳ ಅಡಿಯಲ್ಲಿ ಕಾರ್ಯಕ್ರಮಗಳನ್ನು ನೀಡಿರುವಂತಹ ಕಲಾವಿದರನ್ನು ಭೇಟಿಮಾಡಿ ಅವರ ಮುಖಾಂತರ ಸಂಘ ಸಂಸ್ಥೆಗಳ ಕಾರ್ಯವೈಖರಿಯ ಬಗ್ಗೆ, ಕಲೆ-ಸಂಸ್ಕೃತಿಯ ಬಗ್ಗೆ, ಕಲಾಪ್ರಕಾರಗಳ ಬಗ್ಗೆ ಮಾಹಿತಿ ಪಡೆಯಲಾಗಿದೆ.

ನಂತರ, ಪ್ರೇಕ್ಷಕರನ್ನು ಮಾದರಿ ವಿಧಾನದಲ್ಲಿ ಪರಿಗಣಿಸಿ, ಆಮೇಲೆ ಅವರನ್ನು ಭೇಟಿಮಾಡಿ ಅವರ ಮುಖಾಂತರ ಸಂಘ-ಸಂಸ್ಥೆಗಳು ನಡೆಸಿರುವ ಕಾರ್ಯಕ್ರಮಗಳ ಬಗ್ಗೆ, ಕಲಾಪ್ರಕಾರಗಳ ಬಗ್ಗೆ, ಕಲಾವಿದರ ಬಗ್ಗೆ ಮತ್ತು ಕಾರ್ಯಕ್ರಮಗಳ ಗುಣಮಟ್ಟದ ಬಗ್ಗೆ ಪ್ರಶ್ನಾವಳಿಯ ಮೂಲಕ ಮಾಹಿತಿ ಸಂಗ್ರಹಿಸಲಾಗಿದೆ.

**7.0.1.2 ಸಂದರ್ಶನ**

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿನ ಅಧಿಕಾರಿಗಳೊಂದಿಗೆ ಈ ಮೂರು ಯೋಜನೆಗಳ ಸಾಧಕ ಬಾಧಕಗಳ ಬಗ್ಗೆ ಮುಕ್ತವಾಗಿ ಸಂದರ್ಶನ ಮಾಡಲಾಗಿದೆ. ಸಂಘ-ಸಂಸ್ಥೆಗಳ ಮುಖ್ಯಸ್ಥರುಗಳನ್ನು ನೇರವಾಗಿ ಸಂದರ್ಶನ ಮಾಡಿ ಮಾಹಿತಿ ಪಡೆದುಕೊಳ್ಳಲಾಗಿದೆ. ಇದರೊಂದಿಗೆ ವಿಶೇಷವೆನಿಸಿದ ಕಲಾವಿದರನ್ನು ಮತ್ತು ಪ್ರೇಕ್ಷಕರನ್ನು ಸಂಪರ್ಕಿಸಿ ಕಲಾಪ್ರಕಾರಗಳ ಬಗ್ಗೆ, ಸಂಸ್ಕೃತಿಯ ಬಗ್ಗೆ, ಕಾರ್ಯಕ್ರಮಗಳ ಬಗ್ಗೆ ಮತ್ತು ಇನ್ನಿತರ ವಿಷಯಗಳ ಬಗ್ಗೆ ಸಂದರ್ಶನ ಮಾಡಿ ಮಾಹಿತಿ ಸಂಗ್ರಹಿಸಲಾಗಿದೆ.

ಪ್ರೇಕ್ಷಕರು ಕಾರ್ಯಕ್ರಮಗಳನ್ನು ನೋಡಿದ ಮೇಲೆ ಅವರಿಗೆ ಆದಂತಹ ಅನುಭವವನ್ನು ಮತ್ತು ಕಲೆಯಲ್ಲಿನ ತಾತ್ವಿಕ ವಿಚಾರಗಳನ್ನು ಸಂದರ್ಶನದ ಮೂಲಕ ಸಂಗ್ರಹಿಸಲಾಗಿದೆ. ಹಾಗು ಕಲಾವಿದರ ಬಗ್ಗೆ ಅವರಲ್ಲಿ ಇರುವ ಅಭಿಪ್ರಾಯವನ್ನು ಸಂದರ್ಶನದ ಮೂಲಕ ಪಡೆಯಲಾಗಿದೆ.

ಅಷ್ಟೇಅಲ್ಲ, ಅವರಿಂದ ಭವಿಷ್ಯದಲ್ಲಿ ಕಲಾಪ್ರಕಾರಗಳ ಉಳಿವಿಗೆ ಏನು ಮಾಡಬೇಕು? ಎನ್ನುವುದರ ಬಗ್ಗೆ ಸಂದರ್ಶನದ ಮೂಲಕ ಮಾಹಿತಿ ಪಡೆಯಲಾಗಿದೆ. ಸಂಘ-ಸಂಸ್ಥೆಗಳ ಪರ ಮತ್ತು ವಿರೋಧದ ಪ್ರತಿರೋಧಗಳನ್ನು ಹಾಗೂ ಅವರ ಪ್ರಭಾವ ಮತ್ತು ಪ್ರಚೋದನೆಯನ್ನು, ಗುಂಪುಗಾರಿಕೆಯನ್ನು, ಅವುಗಳ ಕೊರತೆಗಳಿಗೆ ಸಂಬಂಧಪಟ್ಟ ಅಂಶಗಳನ್ನು ಸಂದರ್ಶನದ ಮೂಲಕ ಸಂಗ್ರಹಿಸಲಾಗಿದೆ. ಅದೇರೀತಿ, ಸಂಘ-ಸಂಸ್ಥೆಗಳ ಪಾರದರ್ಶಕತೆಯ ಬಗ್ಗೆ, ಅಲ್ಲಿನ ಕುಂದು ಕೊರತೆಗಳ ಬಗ್ಗೆ, ಸ್ವಜನ ಪಕ್ಷಪಾತದ ಬಗ್ಗೆ, ದರ್ಪತನದ ಬಗ್ಗೆ, ಬೇರೆಯವರ ಪ್ರಭಾವ ಮತ್ತು ಪಾತ್ರದ ಬಗ್ಗೆ ಸಂದರ್ಶನದ ಮೂಲಕ ಮಾಹಿತಿ ಸಂಗ್ರಹಿಸಲಾಗಿದೆ.

**7.0.2. ಮಾಧ್ಯಮಿಕ ದತ್ತಾಂಶ ಮೂಲ:** ಇದು ಒಂದು ವಿಷಯದ ಮೇಲೆ ಸಂಶೋಧನೆ ಮಾಡಲು ಮತ್ತು ಒಂದು ಯೋಜನೆಯ ಮೌಲ್ಯಮಾಪನ ಮಾಡಲು ತುಂಬಾ ಸಹಾಯವನ್ನು ಮಾಡುತ್ತದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧಿಕಾರಿಗಳಿಂದ ಹಾಗು ಅಲ್ಲಿನ ಇನ್ನಿತರ ಸಿಬ್ಬಂದಿ ವರ್ಗದವರಿಂದ ಈ ಯೋಜನೆಯನ್ನು ಮೌಲ್ಯಮಾಪನ ಮಾಡಲು ಪೂರಕವಾಗಿ ಬೇಕಾಗುವಂತಹ ಹಲವು ಮಾಹಿತಿಗಳನ್ನು ಈ ಮಾರ್ಗದ ಮೂಲಕ ಸಂಗ್ರಹಿಸಿಕೊಳ್ಳಲಾಗಿದೆ. ಅಂದರೆ, ಇಲ್ಲಿನ ಮೂರು ಯೋಜನೆಗಳ ಮುಖಾಂತರ ವಾರ್ಷಿಕವಾಗಿ ಸಂಘ- ಸಂಸ್ಥೆಗಳಿಗೆ ನೀಡಿರುವ ಅನುದಾನದ ವಿವರಗಳನ್ನು, ಇಲಾಖೆಯ ಹುಟ್ಟು ಮತ್ತು

ಬೆಳವಣಿಗೆಗೆ ಸಂಬಂಧಿಸಿದ ಮಾಹಿತಿಯನ್ನು, ಕರ್ನಾಟಕದಲ್ಲಿನ ಒಟ್ಟು ಸಂಘ ಸಂಸ್ಥೆಗಳ ವಿವರವನ್ನು, ಕಲಾವಿದರ ಮಾಹಿತಿಯನ್ನು ಈ ಮಾರ್ಗದ ಮೂಲಕ ಪಡೆದುಕೊಳ್ಳಲಾಯಿತು. ಜೊತೆಗೆ ಕಲಾಪ್ರಕಾರಗಳ ವಿವರವನ್ನು, ಕಲೆಗಳ ಅಸ್ತಿತ್ವವನ್ನು ಕುರಿತು ಮಾಹಿತಿ ಪಡೆದುಕೊಳ್ಳಲು ಇದು ಸಹಕಾರಿಯಾಯಿತು. ಮಾಧ್ಯಮಿಕ ದತ್ತಾಂಶ ಮೂಲವು ಇಲ್ಲಿ ಮಾಹಿತಿ ಪಡೆಯಲು ಹೆಚ್ಚು ಅನುಕೂಲ ಮಾಡಿಕೊಟ್ಟಿದೆ.

## 7.1 ದತ್ತಾಂಶ ವಿಶ್ಲೇಷಣಾ ವಿಧಾನ

ಕ್ಷೇತ್ರಕಾರ್ಯದ ಮುಖಾಂತರ ದತ್ತಾಂಶವನ್ನು ಸಂಗ್ರಹಿಸಿ ಕೊಂಡ ಮೇಲೆ ಆ ದತ್ತಾಂಶವನ್ನು ವಿಶ್ಲೇಷಣೆ ಮಾಡಲು ಮತ್ತು ಆ ಮಾಹಿತಿಗೆ ಒಂದು ಆಕರವನ್ನು ನೀಡಲು ಈ ಕೆಳಕಂಡ ವಿಧಾನಗಳನ್ನು ಅನುಸರಿಸಲಾಗಿದೆ.

### 7.1.1 ವಿವರಣಾತ್ಮಕ ಮತ್ತು ವಿಶ್ಲೇಷಣಾತ್ಮಕ ವಿಧಾನಗಳು

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿನ ಸಾಮಾನ್ಯ ಯೋಜನೆ, ವಿಶೇಷ ಘಟಕ ಯೋಜನೆ, ಗಿರಿಜನ ಉಪಯೋಜನೆಗಳ ಅಡಿಯಲ್ಲಿ ಸಂಘ ಸಂಸ್ಥೆಗಳು ಧನಸಹಾಯವನ್ನು ಪಡೆದು ಆ ಹಣವನ್ನು ಹೇಗೆ ಸದ್ಬಳಕೆ ಮಾಡಿಕೊಂಡಿದ್ದಾರೆ ಎನ್ನುವುದನ್ನು ಮೌಲ್ಯಮಾಪನ ಮಾಡುವ ಸಂದರ್ಭದಲ್ಲಿ ವಿವರಣಾತ್ಮಕ ಮತ್ತು ವಿಶ್ಲೇಷಣಾತ್ಮಕ ವಿಧಾನಗಳನ್ನು ಬಳಸಿಕೊಳ್ಳಲಾಗಿದೆ.

### 7.1.2 ಗುಣಾತ್ಮಕ ಮತ್ತು ಪರಿಮಾಣಾತ್ಮಕ ವಿಧಾನಗಳು

ಪ್ರಾಥಮಿಕ ಮತ್ತು ಮಾಧ್ಯಮಿಕ ದಾಖಲೆಗಳನ್ನು ಆಧರಿಸಿ ಸಾಮಾನ್ಯ ಯೋಜನೆ, ವಿಶೇಷ ಘಟಕ ಯೋಜನೆ, ಗಿರಿಜನ ಉಪಯೋಜನೆಯ ಅಡಿಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಸಂಘ ಸಂಸ್ಥೆಗಳಿಗೆ ನೀಡಿರುವ ಧನಸಹಾಯವು ಸರಿಯಾಗಿ ಸದ್ಬಳಕೆ ಆಗಿದೆಯೇ ಇಲ್ಲವೇ ಎಂಬುದನ್ನು ತಿಳಿಯಲು ಗುಣಾತ್ಮಕ ಮತ್ತು ಪರಿಮಾಣಾತ್ಮಕ ವಿಧಾನಗಳನ್ನು ಬಳಸಿಕೊಳ್ಳಲಾಗಿದೆ.

### 7.1.3 ಸಂಖ್ಯಾಶಾಸ್ತ್ರದ ಮುಖಾಂತರ ವಿಶ್ಲೇಷಣೆ

ಸಾಮಾನ್ಯ ಯೋಜನೆ, ವಿಶೇಷ ಘಟಕ ಯೋಜನೆ, ಗಿರಿಜನ ಉಪಯೋಜನೆಯ ಅಡಿಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಸಂಘ ಸಂಸ್ಥೆಗಳಿಗೆ ನೀಡಿರುವ ಧನಸಹಾಯವು ಸರಿಯಾಗಿ ಸದ್ಬಳಕೆ ಆಗಿದೆಯೇ ಇಲ್ಲವೇ ಎಂಬುದನ್ನು ತಿಳಿಯಲು ಕ್ಷೇತ್ರಕಾರ್ಯ ಕೈಗೊಂಡು ಅಧಿಕಾರಿಗಳನ್ನು, ಸಂಘ ಸಂಸ್ಥೆಗಳನ್ನು, ಕಲಾವಿದರನ್ನು, ಪ್ರೇಕ್ಷಕರನ್ನು ಸಂಪರ್ಕಿಸಿ ಪ್ರಶ್ನಾವಳಿ ಮತ್ತು ಸಂದರ್ಶನದ ಮೂಲಕ ದತ್ತಾಂಶ ಮಾಹಿತಿಯನ್ನು ಸಂಗ್ರಹಿಸಿ ಅವುಗಳನ್ನು ಸಂಖ್ಯಾಶಾಸ್ತ್ರದ ಮುಖಾಂತರ ವಿಶ್ಲೇಷಣೆ ಮಾಡಲಾಗಿದೆ.

### 7.1.4 ಮಾದರಿ ವಿಧಾನ

ಸಾಮಾನ್ಯ ಯೋಜನೆ, ವಿಶೇಷ ಘಟಕ ಯೋಜನೆ, ಗಿರಿಜನ ಉಪಯೋಜನೆಯ ಅಡಿಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಸಂಘ ಸಂಸ್ಥೆಗಳಿಗೆ ನೀಡಿರುವ ಧನಸಹಾಯವು ಸರಿಯಾಗಿ ಸದ್ಬಳಕೆ ಆಗಿದೆಯೇ ಇಲ್ಲವೇ ಎಂಬುದನ್ನು ತಿಳಿಯಲು ಮಾದರಿ ವಿಧಾನವನ್ನು ಬಳಸಿಕೊಳ್ಳಲಾಗಿದೆ.

# ಮಾದರಿ ಮತ್ತು ಮಾದರಿ ಆಯ್ಕೆ

ಈ ಮೂರು ಯೋಜನೆಯ ಅಡಿಯಲ್ಲಿ 20 ಜಿಲ್ಲೆಗಳನ್ನು ಮಾದರಿ ಆಯ್ಕೆಯಾಗಿ ಪರಿಗಣಿಸಲಾಗಿರುತ್ತದೆ. ಒಟ್ಟು 11 ಕಲಾಪ್ರಕಾರಗಳು, 191 ಸಂಘ ಸಂಸ್ಥೆಗಳು, 26 ಅಧಿಕಾರಿಗಳು, 382 ಕಲಾವಿದರು, 382 ಪ್ರೇಕ್ಷಕರು ಮೌಲ್ಯಮಾಪನಕ್ಕೆ ಒಳಗಾಗಿರುತ್ತಾರೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕರ್ನಾಟಕದಲ್ಲಿನ ಸಾಹಿತ್ಯ ಹಾಗು ಸಾಂಸ್ಕೃತಿಕ ಕಾರ್ಯಕ್ರಮಗಳ ಉಳಿವಿಗೆ ತನ್ನಲ್ಲಿರುವ ಯೋಜನೆಗಳ ಮೂಲಕ ಸಂಘ-ಸಂಸ್ಥೆಗಳಿಗೆ ಧನಸಹಾಯವನ್ನು ನೀಡುತ್ತಾ ಬಂದಿದೆ. ಈ ಯೋಜನೆಗಳು ಯಾವ ರೀತಿ ಕಾರ್ಯರೂಪಕ್ಕೆ ಬರುತ್ತವೆ ಮತ್ತು ಅವುಗಳಲ್ಲಿ ಏನಾದರು ಬದಲಾವಣೆಯನ್ನು ತರಲು ಸಾಧ್ಯತೆ ಇದೆಯಾ? ಎನ್ನುವ ವಿಷಯದ ಬಗ್ಗೆ ಸಂಬಂಧಿಸಿದ ಅಧಿಕಾರಿಗಳನ್ನು, ಕಲಾವಿದರನ್ನು ಮತ್ತು ಸಂಘ-ಸಂಸ್ಥೆಗಳ ಮುಖ್ಯಸ್ಥರನ್ನು ಹಾಗು ಪ್ರೇಕ್ಷಕರನ್ನು ಸಂಪರ್ಕಿಸಿ ಮಾಹಿತಿ ಪಡೆಯಲಾಗಿದೆ.

**ಕೋಷ್ಟಕ 2: ಸಾಮಾನ್ಯ ಯೋಜನೆಯ ಅಡಿಯಲ್ಲಿ ಮಾದರಿ ಆಯ್ಕೆಯಾಗಿ ಪರಿಗಣಿಸಿರುವ ಸಂಘ ಸಂಸ್ಥೆಗಳು.**

| ಕ್ರ. ಸಂ | ಜಿಲ್ಲೆಗಳ ಹೆಸರು | **ಕಲಾಪ್ರಕಾರ ಸಾಮಾನ್ಯ ಯೋಜನೆ** | | | | | | | | |
|---|---|---|---|---|---|---|---|---|---|---|
| | | ಜಾನಪದ | ನೃತ್ಯ | ನಾಟಕ | ಸಂಗೀತ | ಯಕ್ಷಗಾನ/ ಬಯಲಾಟ/ ಗೊಂಬೆ ಪ್ರದರ್ಶನ | ಸಾಹಿತ್ಯ | ಚಿತ್ರಕಲೆ | ಸಂಕೀರ್ಣ | ಒಟ್ಟು |
| 1 | ಬೆಂಗಳೂರು ನಗರ | 1 | 3 | 6 | 7 | 2 | 1 | 1 | 11 | 32 |
| 2 | ಕೋಲಾರ | 1 | 0 | 1 | 1 | 0 | 0 | 0 | 1 | 04 |
| | **ಒಟ್ಟು** | **2** | **3** | **7** | **8** | **2** | **1** | **1** | 12 | **36** |
| 3 | ಉಡುಪಿ | 1 | 2 | 2 | 1 | 2 | 0 | 1 | 2 | 11 |
| 4 | ಕೊಡಗು | 0 | 0 | 0 | 0 | 0 | 0 | 0 | 3 | 03 |
| | **ಒಟ್ಟು** | **1** | **2** | **2** | **1** | **2** | **0** | **1** | **5** | **14** |
| 5 | ವಿಜಯಪುರ | 1 | 0 | 1 | 0 | 1 | 0 | 0 | 2 | 05 |
| 6 | ಧಾರವಾಡ | 1 | 1 | 2 | 3 | 1 | 1 | 1 | 4 | 14 |
| | **ಒಟ್ಟು** | **2** | **1** | **3** | **3** | **2** | **1** | **1** | **6** | **19** |
| 7 | ಕಲ್ಬುರ್ಗಿ | 2 | 0 | 1 | 2 | 0 | 0 | 1 | 4 | 10 |
| 8 | ಯಾದಗಿರಿ | 0 | 0 | 0 | 1 | 0 | 0 | 0 | 4 | 05 |
| | **ಒಟ್ಟು** | **2** | **0** | **1** | **3** | **0** | **0** | **1** | **8** | **15** |
| | **4 ವಲಯದ ಒಟ್ಟು ಸಂಖ್ಯೆ** | **07** | **06** | **13** | **15** | **06** | **02** | **04** | **31** | **84** |

**ಕೋಷ್ಟಕ 3: ವಿಶೇಷ ಘಟಕದ ಯೋಜನೆಯ ಅಡಿಯಲ್ಲಿ ಮಾದರಿ ಆಯ್ಕೆಯಾಗಿ ಪರಿಗಣಿಸಿರುವ ಸಂಘ ಸಂಸ್ಥೆಗಳು.**

| ಕ್ರ. ಸಂ | ಜಿಲ್ಲೆಗಳ ಹೆಸರು | ಕಲಾಪ್ರಕಾರ (ವಿಶೇಷ ಘಟಕ ಯೋಜನೆ) | | | | | | |
|---|---|---|---|---|---|---|---|---|
| | | ಜಾನಪದ | ನೃತ್ಯ | ನಾಟಕ | ಸಂಗೀತ | ಯಕ್ಷಗಾನ/ ಬಯಲಾಟ | ಸಂಕೀರ್ಣ | ಒಟ್ಟು |
| 1 | ಬೆಂಗಳೂರು ನಗರ | 7 | 1 | 2 | 2 | 0 | 2 | 14 |
| 2 | ರಾಮನಗರ | 5 | 0 | 1 | 0 | 0 | 0 | 06 |
| 3 | ತುಮಕೂರು | 2 | 0 | 1 | 2 | 0 | 0 | 05 |
| | **ಒಟ್ಟು** | **14** | **1** | **4** | **4** | **0** | **2** | **25** |
| 4 | ಹಾಸನ | 2 | 0 | 0 | 0 | 1 | 0 | 03 |
| 5 | ಮಂಡ್ಯ | 5 | 0 | 1 | 0 | 0 | 0 | 06 |
| 6 | ಮೈಸೂರು | 1 | 0 | 2 | 0 | 0 | 0 | 03 |
| | **ಒಟ್ಟು** | **8** | **0** | **3** | **0** | **1** | **0** | **12** |
| 7 | ಬೆಳಗಾವಿ | 4 | 0 | 1 | 1 | 0 | 0 | 06 |
| 8 | ಬಾಗಲಕೋಟೆ | 4 | 1 | 0 | 1 | 1 | 0 | 07 |
| 9 | ಗದಗ | 1 | 0 | 1 | 1 | 1 | 0 | 04 |
| | **ಒಟ್ಟು** | **9** | **1** | **2** | **3** | **2** | **0** | **17** |
| 10 | ಬಳ್ಳಾರಿ | 2 | 0 | 1 | 1 | 1 | 0 | 05 |
| 11 | ಕಲ್ಬುರ್ಗಿ | 4 | 1 | 0 | 1 | 0 | 0 | 06 |
| 12 | ಯಾದಗಿರಿ | 2 | 0 | 0 | 1 | 0 | 0 | 03 |
| | **ಒಟ್ಟು** | **08** | **01** | **01** | **03** | **01** | **00** | **14** |
| | **4 ವಲಯದ ಒಟ್ಟು ಸಂಖ್ಯೆ** | **39** | **03** | **10** | **10** | **04** | **02** | **68** |

**ಕೋಷ್ಟಕ 4: ಗಿರಿಜನ ಉಪಯೋಜನೆಯ ಅಡಿಯಲ್ಲಿ ಮಾದರಿ ಆಯ್ಕೆಯಾಗಿ ಪರಿಗಣಿಸಿರುವ ಸಂಘ ಸಂಸ್ಥೆಗಳು**

| ಕ್ರ. ಸಂ | ಜಿಲ್ಲೆಗಳ ಹೆಸರು | ಕಲಾಪ್ರಕಾರ (ಗಿರಿಜನ ಉಪ ಯೋಜನೆ) | | | | | | |
|---|---|---|---|---|---|---|---|---|
| | | ಜಾನಪದ | ನೃತ್ಯ | ನಾಟಕ | ಸಂಗೀತ | ಯಕ್ಷಗಾನ/ ಬಯಲಾಟ | ಸಂಕೀರ್ಣ | ಒಟ್ಟು |
| 1 | ಬೆಂಗಳೂರು ನಗರ | 1 | 2 | 1 | 3 | 0 | 0 | 07 |
| 2 | ಚಿತ್ರದುರ್ಗ | 1 | 1 | 1 | 2 | 0 | 0 | 05 |
| 3 | ತುಮಕೂರು | 1 | 0 | 1 | 1 | 0 | 0 | 03 |
| | **ಒಟ್ಟು** | **3** | **3** | **3** | **6** | **0** | **0** | **15** |
| 4 | ಉಡುಪಿ | 1 | 0 | 1 | 0 | 0 | 0 | 02 |
| 5 | ಕೊಡಗು | 1 | 0 | 0 | 0 | 0 | 0 | 01 |
| 6 | ಮೈಸೂರು | 1 | 0 | 0 | 0 | 1 | 0 | 02 |
| | **ಒಟ್ಟು** | **3** | **0** | **1** | **0** | **1** | **0** | **05** |

| | | | | | | | | |
|---|---|---|---|---|---|---|---|---|
| 7 | ಬೆಳಗಾವಿ | 1 | 0 | 2 | 0 | 0 | 0 | 03 |
| 8 | ಬಾಗಲಕೋಟೆ | 1 | 1 | 1 | 2 | 0 | 0 | 05 |
| 9 | ಹಾವೇರಿ | 1 | 0 | 1 | 0 | 0 | 0 | 02 |
| | **ಒಟ್ಟು** | **3** | **1** | **4** | **2** | **0** | **0** | **10** |
| 10 | ಬಳ್ಳಾರಿ | 0 | 0 | 1 | 1 | 0 | 0 | 02 |
| 11 | ಕಲ್ಬುರ್ಗಿ | 2 | 0 | 0 | 2 | 0 | 0 | 04 |
| 12 | ರಾಯಚೂರು | 1 | 0 | 1 | 1 | 0 | 0 | 03 |
| | **ಒಟ್ಟು** | **3** | **0** | **2** | **4** | **0** | **0** | **09** |
| | **4 ವಲಯದ ಒಟ್ಟು ಸಂಖ್ಯೆ.** | **12** | **04** | **10** | **12** | **01** | **00** | **39** |

# ಕ್ಷೇತ್ರ ಕಾರ್ಯಕ್ಕೆ ಬಳಸಿಕೊಂಡ ಮಾದರಿ ಸಂಖ್ಯೆಗಳ ವಿವರ.

ಯೋಜನೆಯ ಉದ್ದೇಶಗಳಿಗೆ ಅನುಗುಣವಾಗಿ ಪ್ರಶ್ನಾವಳಿಯನ್ನು ರಚಿಸಿಕೊಂಡು ಇಡೀ ಕರ್ನಾಟಕದ ಎಲ್ಲಾ ಜಿಲ್ಲೆಗಳನ್ನು ಪರಿಶೀಲಿಸಿ ಕಲಾಪ್ರಕಾರಗಳಿಗನುಗುಣವಾಗಿ ಮತ್ತು ಈ ಮೂರು ಘಟಕಗಳ ಕ್ರಿಯಾಯೋಜನೆಯನ್ನು ಪರಿಗಣಿಸಿ ಒಟ್ಟು 20 ಜಿಲ್ಲೆಗಳನ್ನು ಕ್ಷೇತ್ರಕಾರ್ಯಕ್ಕೆ ಬಳಸಲಾಗಿದೆ. ಈ 20 ಜಿಲ್ಲೆಗಳಲ್ಲಿ **ಸಾಮಾನ್ಯ ಯೋಜನೆ, ವಿಶೇಷ ಘಟಕ ಯೋಜನೆ ಹಾಗು ಗಿರಿಜನ ಉಪಯೋಜನೆಗಳ** ಮೂಲಕ ಯಾವ ಯಾವ ಕಲಾ ಪ್ರಕಾರಗಳನ್ನು ಪರಿಗಣಿಸಿ ಸಂಘ ಸಂಸ್ಥೆಗಳಿಗೆ ಹಣ ನೀಡಿದ್ದಾರೆ ಎನ್ನುವುದನ್ನು ಪರಿಗಣಿಸಿ ಕ್ಷೇತ್ರ ಕಾರ್ಯ ಕೈಗೊಳ್ಳಲಾಗಿದೆ.

ಪ್ರತಿಯೊಂದು ಜಿಲ್ಲೆಗೆ ಭೇಟಿ ನೀಡಿದಾಗ ಅಲ್ಲಿನ ಇಲಾಖೆಯ ಅಧಿಕಾರಿಗಳನ್ನು ಭೇಟಿ ಮಾಡಿ ಅವರನ್ನು ಸಂದರ್ಶನ ಮಾಡಿ ಮಾಹಿತಿ ಪಡೆಯಲಾಗಿದೆ. ತದನಂತರ ಅಲ್ಲಿನ ಸಂಘ–ಸಂಸ್ಥೆಗಳ ಅಧ್ಯಕ್ಷರುಗಳನ್ನು, ಪದಾಧಿಕಾರಿಗಳನ್ನು ಭೇಟಿ ಮಾಡಿ ಸಂದರ್ಶಿಸಿ ಮಾಹಿತಿ ಸಂಗ್ರಹಿಸಲಾಗಿದೆ. ಹಾಗೆಯೇ ಕಲಾವಿದರನ್ನು ಭೇಟಿ ಮಾಡಿ ಸಂದರ್ಶಿಸಿ ಮಾಹಿತಿ ಪಡೆಯಲಾಗಿದೆ. ಕೊನೆಯಲ್ಲಿ ಪ್ರೇಕ್ಷಕರನ್ನು ಸಂಪರ್ಕಿಸಿ ಪ್ರತಿ ಸಂಘ–ಸಂಸ್ಥೆಯ ಪರವಾಗಿ ಇಬ್ಬರನ್ನು ಸಂದರ್ಶನ ಮಾಡಿ ಮಾಹಿತಿ ಪಡೆದುಕೊಳ್ಳಲಾಗಿದೆ.

ಈಗಾಗಲೇ ಮಾದರಿ ಆಯ್ಕೆಯನ್ನು ಮಾಡಿಕೊಳ್ಳಲಾಗಿದೆ. ಆ ಮಾದರಿ ಆಯ್ಕೆಗೆ ಪೂರಕವಾಗಿ ಯೋಜನೆಗಳಿಗೆ ಸಂಬಂಧಿಸಿದ ಅಧಿಕಾರಿಗಳನ್ನು, ಸಂಘ ಸಂಸ್ಥೆಗಳಿಗೆ ಸಂಬಂಧಪಟ್ಟ ಅಧಿಕಾರಿಗಳನ್ನು, ಕಲಾವಿದರನ್ನು, ಪ್ರೇಕ್ಷಕರನ್ನು ಪರಿಗಣಿಸಿ ಅವರಿಂದ ಮಾಹಿತಿ ಪಡೆದುಕೊಳ್ಳಲಾಗಿದೆ. ಇವರುಗಳಿಗೆ ಸಂಬಂಧಿಸಿದ ಮಾಹಿತಿ ಈ ಕೆಳಕಂಡಂತೆ ಇರುತ್ತದೆ.

**ಕೋಷ್ಟಕ 5: ಮೌಲ್ಯಮಾಪಕರಾಗಿ ಕ್ಷೇತ್ರಕಾರ್ಯ ಕೈಗೊಂಡಾಗ ಭೇಟಿ ಮಾಡಿರುವ ಅಧಿಕಾರಿಗಳ ವಿವರ**

| ಕ್ರ. ಸಂ | ಜಿಲ್ಲೆಗಳ ಹೆಸರುಗಳು | ಭೇಟಿ ಮಾಡಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧಿಕಾರಿಗಳ ಸಂಖ್ಯೆ |
|---|---|---|
| 1 | ಬೆಂಗಳೂರು ನಗರ | **07** |
| 2 | ಕೋಲಾರ | **01** |
| 3 | ಉಡುಪಿ | **01** |
| 4 | ಕೊಡಗು | **01** |
| 5 | ವಿಜಯಪುರ | **01** |
| 6 | ಧಾರವಾಡ | **01** |
| 7 | ಕಲ್ಬುರ್ಗಿ | **01** |
| 8 | ಯಾದಗಿರಿ | **01** |
| 9 | ರಾಮನಗರ | **01** |
| 10 | ತುಮಕೂರು | **01** |

| | | |
|---|---|---|
| 11 | ಹಾಸನ | **01** |
| 12 | ಮಂಡ್ಯ | **01** |
| 13 | ಮೈಸೂರು | **01** |
| 14 | ಬೆಳಗಾವಿ | **01** |
| 15 | ಬಾಗಲಕೋಟೆ | **01** |
| 16 | ಗದಗ | **01** |
| 17 | ಬಳ್ಳಾರಿ | **01** |
| 18 | ಚಿತ್ರದುರ್ಗ | **01** |
| 19 | ಹಾವೇರಿ | **01** |
| 20 | ರಾಯಚೂರು | **01** |
| ಒಟ್ಟು | | **26** |

ಈ ಮೇಲಿನ ಪಟ್ಟಿಯು ಅಧಿಕಾರಿಗಳ ಮಾದರಿ ಆಯ್ಕೆಗೆ ಸಂಬಂಧಿಸಿದ ಪಟ್ಟಿಯಾಗಿರುತ್ತದೆ. ಕರ್ನಾಟಕದ 4 ವಲಯಗಳಲ್ಲಿನ ಒಟ್ಟು 30 ಜಿಲ್ಲೆಗಳಲ್ಲಿ 20 ಜಿಲ್ಲೆಗಳನ್ನು ಮಾದರಿ ಜಿಲ್ಲೆಗಳಾಗಿ ಪರಿಗಣಿಸಿ ಕ್ಷೇತ್ರಕಾರ್ಯ ಕೈಗೊಂಡಾಗ ಪ್ರತಿಯೊಂದು ಜಿಲ್ಲೆಯಿಂದ ಒಬ್ಬೊಬ್ಬ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧಿಕಾರಿಗಳನ್ನು ಮತ್ತು ಬೆಂಗಳೂರಿನ ಮುಖ್ಯ ಕಛೇರಿಯಿಂದ ಯೋಜನೆಗಳಿಗೆ ಸಂಬಂಧಿಸಿದ ಕೆಲವು ಅಧಿಕಾರಿಗಳನ್ನು ಸಂದರ್ಶಿಸಲು ಒಟ್ಟು 26 ಜನ ಅಧಿಕಾರಿಗಳನ್ನು ಮಾದರಿ ಆಯ್ಕೆಯಾಗಿ ಮಾಡಿಕೊಳ್ಳಲಾಗಿದೆ.

**ಕೋಷ್ಟಕ 6: ಸಂಘ ಸಂಸ್ಥೆಗಳ ಮಾದರಿ ಸಂಖ್ಯೆಗಳ ವಿವರ**

| ಕ್ರ. ಸಂ | ಜಿಲ್ಲೆಗಳ ಹೆಸರುಗಳು | ಮಾದರಿ ಸಂಖ್ಯೆ |
|---|---|---|
| 1 | ಬೆಂಗಳೂರು ನಗರ | 53 |
| 2 | ಕೋಲಾರ | 04 |
| 3 | ಉಡುಪಿ | 13 |
| 4 | ಕೊಡಗು | 04 |
| 5 | ವಿಜಯಪುರ | 05 |
| 6 | ಧಾರವಾಡ | 14 |
| 7 | ಕಲ್ಬುರ್ಗಿ | 20 |
| 8 | ಯಾದಗಿರಿ | 08 |
| 9 | ರಾಮನಗರ | 06 |
| 10 | ತುಮಕೂರು | 08 |
| 11 | ಹಾಸನ | 03 |
| 12 | ಮಂಡ್ಯ | 06 |
| 13 | ಮೈಸೂರು | 05 |
| 14 | ಬೆಳಗಾವಿ | 09 |

| | | |
|---|---|---|
| 15 | ಬಾಗಲಕೋಟೆ | 12 |
| 16 | ಗದಗ | 04 |
| 17 | ಬಳ್ಳಾರಿ | 07 |
| 18 | ಚಿತ್ರದುರ್ಗ | 05 |
| 19 | ಹಾವೇರಿ | 02 |
| 20 | ರಾಯಚೂರು | 03 |
| ಒಟ್ಟು | | 191 |

ಈ ಮೇಲಿನ ಪಟ್ಟಿಯು ಸಂಘ ಸಂಸ್ಥೆಗಳ ಮಾದರಿ ಆಯ್ಕೆಗೆ ಸಂಬಂಧಿಸಿದ ಪಟ್ಟಿಯಾಗಿರುತ್ತದೆ. ಕರ್ನಾಟಕದ 4 ವಲಯಗಳಲ್ಲಿನ ಒಟ್ಟು 30 ಜಿಲ್ಲೆಗಳಲ್ಲಿ 20 ಜಿಲ್ಲೆಗಳನ್ನು ಮಾದರಿ ಜಿಲ್ಲೆಗಳಾಗಿ ಪರಿಗಣಿಸಲಾಗಿದೆ. ಆ 20 ಜಿಲ್ಲೆಗಳಿಂದ 191 ಸಂಘ-ಸಂಸ್ಥೆಗಳನ್ನು ಮಾದರಿ ಆಯ್ಕೆಯಾಗಿ ಮಾಡಿಕೊಳ್ಳಲಾಗಿದೆ.

**ಕೋಷ್ಟಕ 7: ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ 2014-15 ರಿಂದ 2016-17ನೇ ಸಾಲಿನವರೆಗೆ ಮೂರು ಯೋಜನೆಗಳ ಅಡಿಯಲ್ಲಿ ಸಂಘ ಸಂಸ್ಥೆಗಳಿಗೆ ಬಿಡುಗಡೆಯಾದ ಅನುದಾನದ ವಿವರ. (ಮಾದರಿ ಸಂಖ್ಯೆಗೆ ಅನುಗುಣವಾಗಿ ನೀಡಲಾಗಿದೆ)**

| ಕ್ರ.ಸಂ | ಯೋಜನೆಗಳು | ವರ್ಷಗಳು | ಮಾದರಿ ಸಂಖ್ಯೆಗಳ ಪ್ರಮಾಣ | ಮಾದರಿ ಸಂಖ್ಯೆಗೆ ಅನುಗುಣವಾಗಿ ಸಂಘ ಸಂಸ್ಥೆಗಳಿಗೆ ಬಿಡುಗಡೆಯಾದ ಮೊತ್ತ | ಶೇಕಡಾವಾರು |
|---|---|---|---|---|---|
| 1 | ಸಾಮಾನ್ಯಯೋಜನೆ | 2014-15 | 84 | 1,24,00,000 | 8.08 |
| | | 2015-16 | | 1,19,25,000 | 8.16 |
| | | 2016-17 | | 1,31,50,000 | 9.96 |
| | | **ಒಟ್ಟು** | | **3,74,75,000** | **8.69** |
| 2 | ಗಿರಿಜನ ಉಪಯೋಜನೆ | 2014-15 | 39 | 43,50,000 | 66.92 |
| | | 2015-16 | | 65,00,000 | 69.14 |
| | | 2016-17 | | 40,50,000 | 48.79 |
| | | **ಒಟ್ಟು** | | **1,49,00,000** | **61.57** |
| 3 | ವಿಶೇಷ ಘಟಕಯೋಜನೆ | 2014-15 | 68 | 1,47,00,000 | 20.48 |
| | | 2015-16 | | 1,04,00,000 | 21.72 |
| | | 2016-17 | | 1,16,00,000 | 23.01 |
| | | **ಒಟ್ಟು: 191** | | **ಒಟ್ಟು: 3,67,00,000** | **21.58** |
| | **ಈ 3 ವರ್ಷದಲ್ಲಿ 3 ಯೋಜನೆಗಳಿಗೆ 191 ಮಾದರಿ ಸಂಖ್ಯೆಗಳಿಗನುಗುಣವಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಖರ್ಚಾಗಿರುವ ಒಟ್ಟು ಅನುದಾನದ ಮೊತ್ತ** | | | **8,90,75,000** | **14.24** |

ಮಾದರಿ ಸಂಖ್ಯೆಗನುಗುಣವಾಗಿ 191 ಸಂಸ್ಥೆಗಳಲ್ಲಿ ಸಾಮಾನ್ಯ ಯೋಜನೆಯ ಅಡಿಯಲ್ಲಿ 2014–15 ರಿಂದ 2016–17 ರವರೆಗೆ ಒಟ್ಟು 84 ಸಂಘ ಸಂಸ್ಥೆಗಳಿಗೆ **ರೂ. 3,74,75,000** ರಷ್ಟು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಅನುದಾನ ಬಿಡುಗಡೆಯಾದರೆ, ಗಿರಿಜನ ಉಪಯೋಜನೆಯ ಅಡಿಯಲ್ಲಿ **39** ಸಂಘ ಸಂಸ್ಥೆಗಳಿಗೆ **ರೂ. 1,49,00,000** ರಷ್ಟು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಅನುದಾನ ಬಿಡುಗಡೆಯಾಗಿರುತ್ತದೆ. ಅದೇರೀತಿ, ವಿಶೇಷ ಘಟಕದ ಯೋಜನೆಯ ಅಡಿಯಲ್ಲಿ 2014–15 ರಿಂದ 2016–17 ರವರೆಗೆ ಒಟ್ಟು **68** ಸಂಘ ಸಂಸ್ಥೆಗಳಿಗೆ **ರೂ. 3,67,00,000** ರಷ್ಟು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಅನುದಾನ ಬಿಡುಗಡೆಯಾಗಿರುತ್ತದೆ. ಹಾಗಾಗಿ ಒಟ್ಟು **191** ಸಂಘ ಸಂಸ್ಥೆಗಳಿಗೆ ಈ ಮೂರು ವರ್ಷಗಳಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ **ರೂ. 8,90,75,000**ರಷ್ಟು ಅನುದಾನ ಬಿಡುಗಡೆಯಾಗಿರುತ್ತದೆ.

**ಕೋಷ್ಟಕ 8: ಕಲಾವಿದರ ಮಾದರಿ ಸಂಖ್ಯೆಗಳ ವಿವರ**

| ಕ್ರ. ಸಂ | ಜಿಲ್ಲೆಗಳ ಹೆಸರುಗಳು | ಮಾದರಿ ಸಂಖ್ಯೆ |
|---|---|---|
| 1 | ಬೆಂಗಳೂರು ನಗರ | **106** |
| 2 | ಕೋಲಾರ | **08** |
| 3 | ಉಡುಪಿ | **26** |
| 4 | ಕೊಡಗು | **08** |
| 5 | ವಿಜಯಪುರ | **10** |
| 6 | ಧಾರವಾಡ | **28** |
| 7 | ಕಲ್ಬುರ್ಗಿ | **40** |
| 8 | ಯಾದಗಿರಿ | **16** |
| 9 | ರಾಮನಗರ | **12** |
| 10 | ತುಮಕೂರು | **16** |
| 11 | ಹಾಸನ | **06** |
| 12 | ಮಂಡ್ಯ | **12** |
| 13 | ಮೈಸೂರು | **10** |
| 14 | ಬೆಳಗಾವಿ | **18** |
| 15 | ಬಾಗಲಕೋಟೆ | **24** |
| 16 | ಗದಗ | **08** |
| 17 | ಬಳ್ಳಾರಿ | **14** |
| 18 | ಚಿತ್ರದುರ್ಗ | **10** |
| 19 | ಹಾವೇರಿ | **04** |
| 20 | ರಾಯಚೂರು | **06** |
| ಒಟ್ಟು | | **382** |

ಈ ಮೇಲಿನ ಪಟ್ಟಿಯು ಕಲಾವಿದರ ಮಾದರಿ ಆಯ್ಕೆಗೆ ಸಂಬಂಧಿಸಿದ ಪಟ್ಟಿಯಾಗಿರುತ್ತದೆ. ಒಟ್ಟು 20 ಜಿಲ್ಲೆಗಳಲ್ಲಿನ 191 ಸಂಘ–ಸಂಸ್ಥೆಗಳ ಜೊತೆಗೆ ಪ್ರತಿಯೊಂದು ಸಂಘ ಸಂಸ್ಥೆಗಳೊಂದಿಗೆ ಸಂಪರ್ಕದಲ್ಲಿರುವ 2 (ಇಬ್ಬರು) ಕಲಾವಿದರನ್ನು ಪರಿಗಣಿಸಿ **(191x2=382)** ಒಟ್ಟು 382 ಕಲಾವಿದರನ್ನು ಮಾದರಿ ಆಯ್ಕೆಯಾಗಿ ಮಾಡಿಕೊಳ್ಳಲಾಗಿದೆ.

**ಕೋಷ್ಟಕ 9: ಪ್ರೇಕ್ಷಕರ (ಜನರ) ಮಾದರಿ ಸಂಖ್ಯೆಗಳ ವಿವರ**

| ಕ್ರ. ಸಂ | ಜಿಲ್ಲೆಗಳ ವಿವರ | ಭೇಟಿ ಮಾಡಿರುವ ಪ್ರೇಕ್ಷಕರ ಸಂಖ್ಯೆ |
|---|---|---|
| 1 | ಬೆಂಗಳೂರು ನಗರ | **106** |
| 2 | ಕೋಲಾರ | **08** |
| 3 | ಉಡುಪಿ | **26** |
| 4 | ಕೊಡಗು | **08** |
| 5 | ವಿಜಯಪುರ | **10** |
| 6 | ಧಾರವಾಡ | **28** |
| 7 | ಕಲ್ಬುರ್ಗಿ | **40** |
| 8 | ಯಾದಗಿರಿ | **16** |
| 9 | ರಾಮನಗರ | **12** |
| 10 | ತುಮಕೂರು | **16** |
| 11 | ಹಾಸನ | **06** |
| 12 | ಮಂಡ್ಯ | **12** |
| 13 | ಮೈಸೂರು | **10** |
| 14 | ಬೆಳಗಾವಿ | **18** |
| 15 | ಬಾಗಲಕೋಟೆ | **24** |
| 16 | ಗದಗ | **08** |
| 17 | ಬಳ್ಳಾರಿ | **14** |
| 18 | ಚಿತ್ರದುರ್ಗ | **10** |
| 19 | ಹಾವೇರಿ | **04** |
| 20 | ರಾಯಚೂರು | **06** |
| | ಒಟ್ಟು | 382 |

ಈ ಮೇಲಿನ ಪಟ್ಟಿಯು ಪ್ರೇಕ್ಷಕರ (ಜನರ) ಮಾದರಿ ಆಯ್ಕೆಗೆ ಸಂಬಂಧಿಸಿದ ಪಟ್ಟಿಯಾಗಿರುತ್ತದೆ. ಒಟ್ಟು 20 ಜಿಲ್ಲೆಗಳಲ್ಲಿನ 191 ಸಂಘ–ಸಂಸ್ಥೆಗಳ ಜೊತೆಗೆ ಪ್ರತಿಯೊಂದು ಸಂಘ ಸಂಸ್ಥೆಗಳೊಂದಿಗೆ ಸಂಪರ್ಕದಲ್ಲಿರುವ ಇಬ್ಬರು ಪ್ರೇಕ್ಷಕರನ್ನು (191x2=382) ಒಳಗೊಂಡಂತೆ **ಒಟ್ಟು 382 ಪ್ರೇಕ್ಷಕರನ್ನು** ಮಾದರಿ ಆಯ್ಕೆಯಾಗಿ ಮಾಡಿಕೊಳ್ಳಲಾಗಿದೆ.

## 9.0 ಮೌಲ್ಯಮಾಪನಕ್ಕೆ ಸಂಬಂಧಿಸಿದ ವ್ಯಕ್ತಿಗಳೊಂದಿಗೆ ಚರ್ಚೆ

ಈ ಮೂರು ಯೋಜನೆಗಳನ್ನು ಮೌಲ್ಯಮಾಪನ ಮಾಡಲು ಪ್ರಾರಂಭಿಸಿದಾಗ ಮುಖ್ಯವಾಗಿ ಪ್ರತಿಕ್ರಿಯೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧಿಕಾರಿಗಳು, ಸಂಘ ಸಂಸ್ಥೆಗಳ ಅಧಿಕಾರಿಗಳು, ಕಲಾವಿದರು ಮತ್ತು ಪ್ರೇಕ್ಷಕರು ಚರ್ಚೆಗೆ ಭಾಗವಹಿಸಿರುತ್ತಾರೆ. ಆದ್ದರಿಂದ ಅವರುಗಳ ಬಗ್ಗೆ ಇಲ್ಲಿ ಮಾಹಿತಿ ನೀಡಲಾಗಿದೆ.

## 9.1 ಅನುಷ್ಠಾನಗೊಳಿಸಿದ ಅಧಿಕಾರಿಗಳೊಂದಿಗೆ ಚರ್ಚೆ

ಕರ್ನಾಟಕದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕಲೆ, ಸಾಹಿತ್ಯ ಮತ್ತು ಸಂಸ್ಕೃತಿ, ಕಲಾಪ್ರಕಾರಗಳ ಉಳಿವಿಗೆ ಮತ್ತು ಕಲಾವಿದರ ಬೆಳವಣಿಗೆಗೆ ತನ್ನದೆ ಆದ ರೀತಿಯಲ್ಲಿ ಸೇವೆ ಸಲ್ಲಿಸುತ್ತಿದೆ. ಇಂತಹ ಸಂದರ್ಭದಲ್ಲಿ ಅಧಿಕಾರಿಗಳ ಪಾತ್ರ ತುಂಬಾ ಮುಖ್ಯವಾಗುತ್ತದೆ. ಅಧಿಕಾರಿಗಳು ಸಂಘ–ಸಂಸ್ಥೆಗಳಿಗೆ ಧನಸಹಾಯವನ್ನು ಬಿಡುಗಡೆ ಮಾಡುವಾಗ ತನ್ನ ಇಲಾಖೆಯಲ್ಲಿನ ನೀತಿ ನಿಯಮಗಳನ್ನು ಪಾಲನೆ ಮಾಡಿರುವುದರ ಬಗ್ಗೆ ಮಾಹಿತಿ ಪಡೆದುಕೊಳ್ಳಲಾಗಿದೆ. ಯಾವ ರೀತಿ ಸಂಘ ಸಂಸ್ಥೆಗಳನ್ನು ಆಯ್ಕೆ ಮಾಡುತ್ತಾರೆ ಎನ್ನುವುದನ್ನು ಕುರಿತು ಚರ್ಚಿಸಿ ಮಾಹಿತಿ ಪಡೆದುಕೊಳ್ಳಲಾಗಿದೆ.

## 9.2 ಸಂಘ ಸಂಸ್ಥೆಗಳಗೆ ಸಂಬಂಧಿಸಿದ ಅಧಿಕಾರಿಗಳೊಂದಿಗೆ ಚರ್ಚೆ

ಕರ್ನಾಟಕದಲ್ಲಿನ ಕಲೆ, ಸಾಹಿತ್ಯ, ಸಂಸ್ಕೃತಿ, ನಾಡು–ನುಡಿ, ಕಲಾ ಪ್ರಕಾರಗಳ ಉಳಿವಿಗೆ ಮತ್ತು ಏಳಿಗೆಗೆ ಸಂಘ ಸಂಸ್ಥೆಗಳು ಶ್ರಮಿಸುತ್ತಿವೆ. ಹೀಗೆ ಕಾರ್ಯನಿರ್ವಹಿಸುತ್ತಿರುವ ಸಂಘ ಸಂಸ್ಥೆಗಳು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಸಾಮಾನ್ಯ ಯೋಜನೆ, ವಿಶೇಷ ಘಟಕ ಯೋಜನೆ, ಗಿರಿಜನ ಉಪಯೋಜನೆ ಅಡಿಯಲ್ಲಿ ಧನಸಹಾಯವನ್ನು ಪಡೆದುಕೊಳ್ಳುವಾಗ ಯಾವ ರೀತಿಯ ಮಾನದಂಡಗಳನ್ನು ಅನುಸರಿಸಿದರು ಎನ್ನುವುದರ ಬಗ್ಗೆ ಚರ್ಚೆ ಮಾಡಿ ಮಾಹಿತಿ ಸಂಗ್ರಹಿಸಲಾಗಿದೆ.

## 9.3 ಕಲಾವಿದರೊಂದಿಗೆ ಚರ್ಚೆ

ಕಲೆ ಮತ್ತು ಸಂಸ್ಕೃತಿಯ ಬಗ್ಗೆ ಅವರು ಇಟ್ಟಿರುವ ನಂಬಿಕೆಗಳ ಬಗ್ಗೆ ಅಭಿಪ್ರಾಯ ಸಂಗ್ರಹಿಸಿರುತ್ತೇವೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಯೋಜನೆಗಳಲ್ಲಿ ಏನಾದರೂ ಬದಲಾವಣೆ ಮಾಡಬೇಕೆ ಅಥವಾ ಬೇಡವೇ ಎಂಬುದರ ಬಗ್ಗೆ ಅವರೊಂದಿಗೆ ಚರ್ಚೆ ಮಾಡಿ ಮಾಹಿತಿ ಸಂಗ್ರಹಿಸಿರುತ್ತೇವೆ. ಪ್ರೋತ್ಸಾಹ ಧನ ನೀಡುವುದು ಸಾಕಾಗುತ್ತದೆಯೇ ಇಲ್ಲವೇ ಎಂಬುದರ ಬಗ್ಗೆ ಕಲಾವಿದರೊಂದಿಗೆ ಚರ್ಚೆ ಮಾಡಲಾಗಿದೆ. ಈ ಮೇಲಿನ ಎಲ್ಲಾ ಅಂಶಗಳನ್ನು ಸಂಬಂಧಿಸಿದ ಕಲಾವಿದರೊಂದಿಗೆ ಚರ್ಚಿಸಿ ಮಾಹಿತಿ ಪಡೆಯಲಾಗಿದೆ.

## 9.4 ಪ್ರೇಕ್ಷಕರೊಂದಿಗೆ ಚರ್ಚೆ

ಕಲೆ, ಸಾಹಿತ್ಯ, ಜಾನಪದ ಕಲಾಪ್ರಕಾರಗಳ ಉಳಿವಿಗೆ ಪ್ರೇಕ್ಷಕರು ತುಂಬಾ ಸಹಕಾರಿಯಾಗಿರುತ್ತಾರೆ. ಪ್ರೇಕ್ಷಕರಿಲ್ಲದೆ ಯಾವುದೇ ಕಾರ್ಯಕ್ರಮಗಳನ್ನು ಮಾಡಲು ಸಾಧ್ಯವಿಲ್ಲ. ಪ್ರೇಕ್ಷಕರಿಗೆ ದೊಡ್ಡ ಶಕ್ತಿ ಇದೆ. ಪ್ರೇಕ್ಷಕರು ನಿಜವಾದ ವಿಮರ್ಶಕರು. ಕಲಾವಿದರನ್ನು ತಿದ್ದುವ, ಹೊಗಳುವ, ತೆಗಳುವ ಕೆಲಸವನ್ನು ಪ್ರೇಕ್ಷಕರು

ಮಾಡುತ್ತಾರೆ. ಜೊತೆಗೆ ಸಂಘ ಸಂಸ್ಥೆಗಳು ನಡೆಸುವ ಕಾರ್ಯಕ್ರಮಗಳ ಗುಣಮಟ್ಟದ ಬಗ್ಗೆ ನೇರವಾಗಿ ಪ್ರತಿಕ್ರಿಯೆ ನೀಡುವವರು ಇವರಾಗಿರುತ್ತಾರೆ. ಪ್ರೇಕ್ಷಕರಲ್ಲಿ ಪುರುಷರು, ಮಹಿಳೆಯರು, ಮಕ್ಕಳು, ವಿದ್ಯಾರ್ಥಿಗಳು ಕಂಡು ಬರುತ್ತಾರೆ. ಆದರೆ ಇಲ್ಲಿ ಒಟ್ಟಾರೆ ಪ್ರೇಕ್ಷಕರನ್ನು ಸಂಪರ್ಕಿಸಿ ಕಾರ್ಯಕ್ರಮಗಳ ಗುಣಮಟ್ಟದ ಬಗ್ಗೆ ಚರ್ಚಿಸಲಾಗಿದೆ.

# ಮೌಲ್ಯಮಾಪನ ಅಧ್ಯಯನದ ಮಿತಿಗಳು

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು 2014–15 ರಿಂದ 2016–17 ನೇ ಸಾಲಿನಲ್ಲಿ (3ವರ್ಷ) ಸಾಮಾನ್ಯ ಯೋಜನೆ, ವಿಶೇಷ ಘಟಕ ಯೋಜನೆ, ಗಿರಿಜನ ಉಪಯೋಜನೆಯಡಿಯಲ್ಲಿ ಕಲೆ, ಸಾಹಿತ್ಯ, ಸಂಸ್ಕೃತಿ ಮತ್ತು ಜಾನಪದ ಕಲಾಪ್ರಕಾರಗಳನ್ನು ಉಳಿಸಿ ಬೆಳೆಸಲು ಸಂಘ ಸಂಸ್ಥೆಗಳಿಗೆ ಧನಸಹಾಯವನ್ನು ನೀಡುತ್ತಾ ಬಂದಿದೆ. ಈ ಅವಧಿಯಲ್ಲಿ ನೀಡಿರುವ ಧನಸಹಾಯ ಸರಿಯಾದ ರೀತಿಯಲ್ಲಿ ಸದ್ಬಳಕೆ ಆಗಿದೆಯೇ ಅಥವಾ ಇಲ್ಲವೇ ಎಂಬುದನ್ನು ಮೌಲ್ಯಮಾಪನ ಮಾಡುವ ಸಂದರ್ಭದಲ್ಲಿ ಎದುರಾದ ಮಿತಿಗಳು ಈ ಕೆಳಗಿನಂತಿವೆ.

1. ಕರ್ನಾಟಕ ರಾಜ್ಯದಲ್ಲಿ ಸಾವಿರಾರು ಸಂಘ–ಸಂಸ್ಥೆಗಳು, ನೂರಾರು ಕಲಾವಿದರು, ಅಸಂಖ್ಯಾತ ಪ್ರೇಕ್ಷಕರು ಹಾಗು ಅನೇಕ ಅಧಿಕಾರಿಗಳು ಇದ್ದಾರೆ. ಆದರೆ ಇಲ್ಲಿ ಕಂಡುಬರುವ ಈ ಎಲ್ಲಾ ಸಂಘ ಸಂಸ್ಥೆಗಳನ್ನು, ಕಲಾವಿದರನ್ನು, ಪ್ರೇಕ್ಷಕರನ್ನು ಮತ್ತು ಅಧಿಕಾರಿಗಳನ್ನು ಮೌಲ್ಯಮಾಪನಕ್ಕೆ ಬಳಸಿಕೊಳ್ಳಲು ಸಾಧ್ಯವಾಗಿರುವುದಿಲ್ಲ.
2. ಈ ಮೌಲ್ಯಮಾಪನದಲ್ಲಿ ಎಲ್ಲಾ ಕಲೆ, ಸಾಹಿತ್ಯ, ಸಂಸ್ಕೃತಿ, ಜಾನಪದ ಕಲಾಪ್ರಕಾರಗಳ ಕುರಿತು ಸುದೀರ್ಘವಾಗಿ ಚರ್ಚೆ ಮಾಡಲು ಸಾಧ್ಯವಾಗಿರುವುದಿಲ್ಲ.
3. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಸಂಘ ಸಂಸ್ಥೆಗಳಿಗೆ ನೀಡಿರುವ ಧನಸಹಾಯವು ಸರಿಯಾದ ರೀತಿಯಲ್ಲಿ ಸದ್ಬಳಕೆಯಾಗಿದೆಯೇ ಇಲ್ಲವೇ ಎಂಬುದನ್ನು ಕಂಡು ಹಿಡಿಯುವುದಕ್ಕಾಗಿ ಮೌಲ್ಯಮಾಪನಕ್ಕೆ ಅಗತ್ಯ ಇರುವಷ್ಟು ಸಂಶೋಧನಾ ವಿಧಾನಗಳನ್ನು ಮಾತ್ರ ಬಳಸಿಕೊಳ್ಳಲಾಗಿದೆ.
4. ಈ ಮೌಲ್ಯಮಾಪನದ ಅಧ್ಯಯನಕ್ಕೆ ಅಗತ್ಯವಾದ ಕೃತಿಗಳು ದೊರೆಯದ ಕಾರಣ ಅಧ್ಯಯನಗಳ ಸಮೀಕ್ಷೆಯನ್ನು ಸೂಕ್ತವಾಗಿ ನಡೆಸುವುದು ಸಾಧ್ಯವಾಗಿರುವುದಿಲ್ಲ.
5. ಅನುದಾನವು ಪ್ರಾದೇಶಿಕವಾಗಿ ಹೇಗೆ ಹಂಚಿಕೆಯಾಗಿದೆ ಎಂಬುದನ್ನು ಚರ್ಚಿಸಿರುವುದಿಲ್ಲ. ಏಕೆಂದರೆ ಈ ಅಂಶವನ್ನು ಉದ್ದೇಶವನ್ನಾಗಿ ಪರಿಗಣಿಸಿಲ್ಲ.
6. ಸಂಘ ಸಂಸ್ಥೆಗಳನ್ನು, ಕಲಾವಿದರನ್ನು, ಪ್ರೇಕ್ಷಕರನ್ನು ಮತ್ತು ಅಧಿಕಾರಿಗಳನ್ನು ಅಧ್ಯಯನ ಮಾಡುವ ಸಂದರ್ಭದಲ್ಲಿ ಪುರುಷ ಮತ್ತು ಮಹಿಳೆ ಎಂದು ಪ್ರತ್ಯೇಕವಾಗಿ ಪರಿಗಣಿಸಿ ಮಹಿಳೆಯರನ್ನು ವಿಶೇಷವಾಗಿ ಅಧ್ಯಯನ ಮಾಡಿರುವುದಿಲ್ಲ. ಇಲ್ಲಿ ಇಬ್ಬರನ್ನು ಒಟ್ಟಿಗೆ ಸೇರಿಸಿಕೊಂಡು ಒಂದೇ ನೆಲೆಯಲ್ಲಿ ಅಧ್ಯಯನ ಮಾಡಲಾಗಿದೆ.

# ಕ್ಷೇತ್ರಕಾರ್ಯ ದತ್ತಾಂಶ ವಿಶ್ಲೇಷಣೆ ಮತ್ತು ಚರ್ಚೆ ಹಾಗು ಶೋಧನೆಗಳು

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಸಾಮಾನ್ಯ ಯೋಜನೆ, ವಿಶೇಷ ಘಟಕ ಯೋಜನೆ, ಗಿರಿಜನ ಉಪಯೋಜನೆಯ ಅಡಿಯಲ್ಲಿ ಕರ್ನಾಟಕದ ಕಲೆ, ಸಾಹಿತ್ಯ, ಸಂಸ್ಕೃತಿ ಮತ್ತು ಕಲಾಪ್ರಕಾರಗಳನ್ನು ಉಳಿಸಿ ಬೆಳೆಸಲು ಧನಸಹಾಯವನ್ನು ಸಂಘ ಸಂಸ್ಥೆಗಳಿಗೆ ನೀಡಿರುತ್ತದೆ. ಆ ಸಂಘ–ಸಂಸ್ಥೆಗಳು ಧನಸಹಾಯವನ್ನು ಹೇಗೆ ಸದ್ಬಳಕೆ ಮಾಡಿಕೊಂಡಿದ್ದಾರೆ ಅಥವಾ ಇಲ್ಲವೇ ಎಂಬುದನ್ನು ಪರಿಶೀಲಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಸಂಘ ಸಂಸ್ಥೆಗಳಿಗೆ ಸಂಬಂಧಿಸಿದ ಪದಾಧಿಕಾರಿಗಳ ಕಲಾವಿದರನ್ನು, ಪ್ರೇಕ್ಷಕರನ್ನು, ಅಧಿಕಾರಿಗಳನ್ನು ಕ್ಷೇತ್ರಕಾರ್ಯದ ಮೂಲಕ ಭೇಟಿ ಮಾಡಿ ದತ್ತಾಂಶ ಸಂಗ್ರಹಿಸಿ ಕೆಳಗಿನ ಕೋಷ್ಟಕಗಳ ಮೂಲಕ ವಿಶ್ಲೇಷಿಸಲಾಗಿದೆ.

ಮುಂದಿನ ಪ್ರತಿಯೊಂದು ಕೋಷ್ಟಕಗಳನ್ನು ವಿಶ್ಲೇಷಣೆ ಮಾಡುವಾಗ ಬಹುಆಯ್ಕೆಯ ಉತ್ತರವನ್ನು ಪರಿಗಣಿಸಿ ಚರ್ಚೆಮಾಡಲಾಗಿದೆ. ಇಲ್ಲಿ ಕೇಳಿರುವ ಪ್ರತಿಯೊಂದು ಪ್ರಶ್ನೆಗೂ ನಾಲ್ಕು ಉತ್ತರಗಳನ್ನು ಕೇಳಲಾಗಿದೆ. ಪ್ರತಿಉತ್ತರಕ್ಕೂ ಪ್ರತ್ಯೇಕ ಶೇಕಡಾವಾರು ಕೊಡಲಾಗಿದೆ. ಆದ್ದರಿಂದ ಇಲ್ಲಿನ ನಾಲ್ಕು ಉತ್ತರಗಳು ಶೇಕಡಾವಾರು ಪಡೆಯವಲ್ಲಿ ವಿವಿಧತೆಯನ್ನು ಹೊಂದಿರುತ್ತವೆ. ಹಾಗಾಗಿ ಇಲ್ಲಿನ ಪ್ರತಿಯೊಂದು ಕೋಷ್ಟಕಗಳಲ್ಲಿ ನಾಲ್ಕು ಉತ್ತರಗಳು ಶೇಕಡಾವಾರು 100ಕ್ಕೆ ಸಮನಾಗಿರುವುದಿಲ್ಲ. ಮೌಲ್ಯಮಾಪನದಲ್ಲಿ ಪ್ರತಿಯೊಂದು ವಿಷಯದಲ್ಲಿಯೂ ಸ್ಪಷ್ಟತೆಯನ್ನು ಮತ್ತು ಸತ್ಯಾಂಶವನ್ನು ಕಂಡು ಹಿಡಿಯುವುದಕ್ಕಾಗಿ ಈ ಒಂದು ಕ್ರಮವನ್ನು ಅನುಸರಿಸಲಾಗಿದೆ.

## 11.0 ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧಿಕಾರಿಗಳೊಂದಿಗೆ ಮಾಹಿತಿ ಸಂಗ್ರಹಣೆ

ಸಂಘ ಸಂಸ್ಥೆಗಳು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿ ಸಾಮಾನ್ಯ ಯೋಜನೆ, ವಿಶೇಷ ಘಟಕ ಯೋಜನೆ, ಗಿರಿಜನ ಉಪಯೋಜನೆಯ ಅಡಿಯಲ್ಲಿ ಧನಸಹಾಯವನ್ನು ಪಡೆದು ಆ ಹಣವನ್ನು ಯಾವ ರೀತಿ ಸದ್ಬಳಕೆ ಮಾಡಿಕೊಂಡಿದ್ದಾರೆ ಎಂಬುದನ್ನು ತಿಳಿಯುವುದಕ್ಕಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸುಮಾರು 26 ಜನ ವಿವಿಧ ಹಂತದ ಅಧಿಕಾರಿ ವರ್ಗದವರನ್ನು ಸಂಪರ್ಕಿಸಿ ಮಾಹಿತಿ ಪಡೆದುಕೊಂಡು ಈ ಕೆಳಗಿನ ಅಂಶದ ಆಧಾರದ ಮೇಲೆ ವಿಶ್ಲೇಷಣೆ ಮಾಡಲಾಗಿದೆ.

**ಕೋಷ್ಟಕ 10 : ಸಂಘ–ಸಂಸ್ಥೆಗಳು ಯಾವ ಅಧಿನಿಯಮದಡಿ ನೋಂದಣೆ ಮಾಡಿಕೊಂಡಿವೆ ಎಂಬುದರ ಬಗ್ಗೆ ವಿವರ**

| ಕ್ರ.ಸಂ. | ವಿವರಗಳು | ಅಧಿಕಾರಿಗಳ ಪ್ರತಿಕ್ರಿಯೆ | ಶೇಕಡಾವಾರು |
|---|---|---|---|
| 1 | ಕರ್ನಾಟಕ ಸಹಕಾರ–ಸಂಘಗಳ 1960ರ ಅಧಿನಿಯಮದ ಅಡಿ | 21 | 80.8 |
| 2 | ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿಯಮದ ಅಡಿ | 03 | 11. 5 |
| 3 | ಖಾಸಗಿಯಾಗಿ ನೋಂದಣೆ ಮಾಡಿರುವುದು | 00 | 00.0 |
| 4 | ಟ್ರಸ್ಟ್ ಕಾಯ್ದೆಯ ಅಡಿ ನೋಂದಣೆ ಮಾಡಿಸಿರುವುದು | 04 | 15. 4 |
| | ಒಟ್ಟು | 26 | |

Note: Multiple responses, therefore, total may exceed 100 percent.

**ಮೇಲಿನ ಕೋಷ್ಟಕ 10** ರಲ್ಲಿ ಸಂಘ–ಸಂಸ್ಥೆಗಳು ಯಾವ ಅಧಿನಿಯಮದಡಿ ನೋಂದಣೆ ಮಾಡಿಕೊಂಡಿವೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಒಟ್ಟು 26 ಜನ ಅಧಿಕಾರಿಗಳನ್ನು ಪ್ರಶ್ನಿಸಿದಾಗ **ಶೇ 80.8** ರಷ್ಟು ಅಧಿಕಾರಿಗಳು ಕರ್ನಾಟಕ ಸಹಕಾರ–ಸಂಘಗಳ 1960ರ ಅಧಿನಿಯಮದ ಅಡಿ ನೋಂದಣೆ ಮಾಡಿಕೊಂಡ ಸಂಘ ಸಂಸ್ಥೆಗಳಿಗೆ ಧನಸಹಾಯ ಮಾಡಿದ್ದೇವೆ ಎಂದು ಹೇಳಿದರೆ**, ಶೇ 15.4** ರಷ್ಟು ಅಧಿಕಾರಿಗಳು ಟ್ರಸ್ಟ್ ಕಾಯ್ದೆಯ ಅಡಿ ನೋಂದಣೆ ಮಾಡಿಸಿರುವ ಸಂಘ ಸಂಸ್ಥೆಗಳಿಗೆ ಧನಸಹಾಯ ಮಾಡಿದ್ದೇವೆ ಎಂದು ಹೇಳಿದ್ದಾರೆ. ಅದೇರೀತಿ, **ಶೇ 11.5** ರಷ್ಟು ಅಧಿಕಾರಿಗಳು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿಯಮದ ಅಡಿ ಇರುವಂತಹ ಸಂಘ ಸಂಸ್ಥೆಗಳಿಗೆ ಧನಸಹಾಯ ಮಾಡಿದ್ದೇವೆ ಎಂದು ಹೇಳಿದ್ದಾರೆ. ಅದೇ ರೀತಿ**,** ಖಾಸಗಿಯಾಗಿ ನೋಂದಣೆ ಮಾಡಿರುವ ಯಾವುದೇ ಸಂಘ ಸಂಸ್ಥೆಗಳಿಗೆ ಅಧಿಕಾರಿಗಳು ಧನಸಹಾಯ ಮಾಡಿರುವುದಿಲ್ಲ.

**ಕೋಷ್ಟಕ 11 : ಕಾರ್ಯಕ್ರಮ ನಡೆಸಲು ಎಂತಹ ಸಂಘ ಸಂಸ್ಥೆಗಳಿಗೆ ಧನಸಹಾಯವನ್ನು ನೀಡಿರುತ್ತಾರೆ ಎನ್ನುವುದರ ಬಗ್ಗೆ ಮಾಹಿತಿ.**

| ಕ್ರ.ಸಂ. | ವಿವರಗಳು | ಅಧಿಕಾರಿಗಳ ಪ್ರತಿಕ್ರಿಯೆ | ಶೇಕಡಾವಾರು |
|---|---|---|---|
| **1** | ಕಲೆ, ಸಾಹಿತ್ಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸಲು ಹುಟ್ಟಿಕೊಂಡಂತಹ ಸಂಘ–ಸಂಸ್ಥೆಗಳಿಗೆ | 23 | 88.5 |
| **2** | ವಿವಿಧ ಉದ್ದೇಶಗಳಿಗೆ ಹುಟ್ಟಿಕೊಂಡಂತಹ ಸಂಘ ಸಂಸ್ಥೆಗಳಿಗೆ | 02 | 07.7 |
| **3** | ಖಾಸಗಿಯಾಗಿ ಹುಟ್ಟಿಕೊಂಡಂತಹ ಸಂಘ ಸಂಸ್ಥೆಗಳಿಗೆ. | 02 | 07.7 |
| **4** | ಸಂಘ ಸಂಸ್ಥೆಯ ಹೆಸರು ಬಳಸಿಕೊಂಡು ವ್ಯಕ್ತಿಯೊಬ್ಬ ಸಾರ್ವಜನಿಕವಾಗಿ ನಡೆಸಿದಂತಹ ಕಾರ್ಯಕ್ರಮಗಳನ್ನು ಪರಿಗಣಿಸಿ | 00 | 00.0 |
| | **ಒಟ್ಟು** | 26 | |

Note: Multiple responses, therefore, total may exceed 100 percent.

**ಮೇಲಿನ ಕೋಷ್ಟಕ 11 ರಲ್ಲಿ** ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಒಟ್ಟು 26 ಜನ ಅಧಿಕಾರಿಗಳಲ್ಲಿ ನೀವು ಕಾರ್ಯಕ್ರಮ ನಡೆಸಲು ಎಂತಹ ಸಂಘ ಸಂಸ್ಥೆಗಳಿಗೆ ಧನಸಹಾಯವನ್ನು ನೀಡುತ್ತೀರಾ ಎಂದು ವಿಚಾರಣೆ ಮಾಡಿದಾಗ **ಶೇ 88.5** ರಷ್ಟು ಅಧಿಕಾರಿಗಳು ಕಲೆ, ಸಾಹಿತ್ಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸಲು ಹುಟ್ಟಿಕೊಂಡಂತಹ ಸಂಘ– ಸಂಸ್ಥೆಗಳಿಗೆ ಧನಸಹಾಯ ಮಾಡಿರುವುದಾಗಿ ಒಪ್ಪಿಕೊಂಡರೆ, **ಶೇ 7.7 ರಷ್ಟು** ವಿವಿಧ ಉದ್ದೇಶಗಳಿಗೆ ಹುಟ್ಟಿಕೊಂಡಂತಹ ಸಂಘ ಸಂಸ್ಥೆಗಳಿಗೆ ಧನಸಹಾಯ ಮಾಡಿರುವುದಾಗಿ ಒಪ್ಪಿಕೊಂಡಿದ್ದಾರೆ. ಅದೇರೀತಿ, **ಶೇ 7.7** ರಷ್ಟು ಅಧಿಕಾರಿಗಳು ಖಾಸಗಿಯಾಗಿ ಹುಟ್ಟಿಕೊಂಡಂತಹ ಸಂಘ ಸಂಸ್ಥೆಗಳಿಗೆ ಧನಸಹಾಯ ಮಾಡಿರುವುದಾಗಿ ಹೇಳಿದರೆ, ಸಂಘ ಸಂಸ್ಥೆಯ ಹೆಸರು ಬಳಸಿಕೊಂಡು ವ್ಯಕ್ತಿಯೊಬ್ಬ ಸಾರ್ವಜನಿಕವಾಗಿ ನಡೆಸಿದಂತಹ ಕಾರ್ಯಕ್ರಮಗಳನ್ನು ಪರಿಗಣಿಸಿ ಯಾವ ಅಧಿಕಾರಿಗಳು ಧನಸಹಾಯವನ್ನು ಮಾಡಿರುವುದಿಲ್ಲವೆಂದು ಹೇಳಿದ್ದಾರೆ.

| **ಕೋಷ್ಟಕ 12: ಸಂಘ–ಸಂಸ್ಥೆಗಳಿಗೆ ಧನಸಹಾಯವನ್ನು ನೀಡುವಾಗ ಯಾವುದನ್ನು ಪರಿಗಣಿಸುತ್ತಾರೆ ಎನ್ನುವದರ ಬಗ್ಗೆ ಮಾಹಿತಿ.** | | | |
|---|---|---|---|
| **ಕ್ರ.ಸಂ.** | **ವಿವರಗಳು** | **ಅಧಿಕಾರಿಗಳ ಪ್ರತಿಕ್ರೆಯೆ** | **ಶೇಕಡಾವಾರು** |
| **1** | ತುಂಬಾ ಜವಾಬ್ದಾರಿಯಿಂದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿರುವುದನ್ನು ಪರಿಗಣಿಸಿ | 12 | 46.2 |
| **2** | ಕಲಾವಿದರನ್ನು ಗೌರವದಿಂದ ಕಂಡು ಅವರಿಗೆ ಧನ ಸಹಾಯ ನೀಡಿರುವುದನ್ನು ಪರಿಗಣಿಸಿ | 03 | 11.5 |
| **3** | ಜಾನಪದ ಕಲಾ ಪ್ರಕಾರಗಳಿಗೆ ಹೆಚ್ಚಿನ ಆದ್ಯತೆ ಕೊಟ್ಟಿರುವುದನ್ನು ಪರಿಗಣಿಸಿ | 14 | 53.8 |
| **4** | ಪ್ರೇಕ್ಷಕರನ್ನು ಗಮನದಲ್ಲಿಟ್ಟುಕೊಂಡು ಕಾರ್ಯಕ್ರಮಗಳನ್ನು ಬಿತ್ತರಿಸುವುದನ್ನು ಪರಿಗಣಿಸಿ | 01 | 03.8 |
| | ಒಟ್ಟು | 26 | |

Note: Multiple responses, therefore, total may exceed 100 percent.

**ಮೇಲಿನ ಕೋಷ್ಟಕ 12** ರಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಒಟ್ಟು 26 ಜನ ಅಧಿಕಾರಿಗಳಲ್ಲಿ ನೀವು ಯಾವುದನ್ನು ಪರಿಗಣಿಸಿ ಸಂಘ–ಸಂಸ್ಥೆಗಳಿಗೆ ಪ್ರೋತ್ಸಾಹ ನೀಡುತ್ತೀರಾ ಕೇಳಿದಾಗ, **ಶೇ 53.8 ರಷ್ಟು** ಅಧಿಕಾರಿಗಳು ಜಾನಪದ ಕಲಾ ಪ್ರಕಾರಗಳಿಗೆ ಹೆಚ್ಚಿನ ಆದ್ಯತೆ ಕೊಟ್ಟಿರುವುದನ್ನು ಗುರುತಿಸಿ ನೀಡಿದ್ದೇವೆ ಎಂದು ಹೇಳಿದರೆ, **ಶೇ 46.2 ರಷ್ಟು** ಅಧಿಕಾರಿಗಳು ತುಂಬಾ ಜವಾಬ್ದಾರಿಯಿಂದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿರುವುದನ್ನು ಪರಿಗಣಿಸಿ ಧನಸಹಾಯವನ್ನು ನೀಡುತ್ತೇವೆ ಎಂದು ಹೇಳಿದ್ದಾರೆ. **ಶೇ 11.5 ರಷ್ಟು** ಅಧಿಕಾರಿಗಳು ಕಲಾವಿದರನ್ನು ಗೌರವದಿಂದ ಕಂಡು ಅವರಿಗೆ ಧನ ಸಹಾಯ ನೀಡಿರುವುದನ್ನು ಪರಿಗಣಿಸಿ ಧನಸಹಾಯ ಮಾಡಿದ್ದೇವೆ ಎಂದು ಹೇಳಿದ್ದಾರೆ. ಹಾಗೆಯೇ, **ಶೇ 3.8 ರಷ್ಟು** ಅಧಿಕಾರಿಗಳು ಪ್ರೇಕ್ಷಕರನ್ನು ಗಮನದಲ್ಲಿಟ್ಟುಕೊಂಡು ಕಾರ್ಯಕ್ರಮಗಳನ್ನು ಬಿತ್ತರಿಸುವುದನ್ನು ಪರಿಗಣಿಸಿ ಧನಸಹಾಯವನ್ನು ನೀಡಲಾಗಿದೆ ಎಂದು ಹೇಳಿದ್ದಾರೆ.

| **ಕೋಷ್ಟಕ 13: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನೀಡಿದ ಧನಸಹಾಯವನ್ನು ಸಂಘ–ಸಂಸ್ಥೆಗಳು ಹೇಗೆ ಬಳಸುತ್ತವೆ ಎಂಬುದರ ಬಗ್ಗೆ ಮಾಹಿತಿ.** | | | |
|---|---|---|---|
| **ಕ್ರ.ಸಂ.** | **ವಿವರಗಳು** | **ಅಧಿಕಾರಿಗಳ ಪ್ರತಿಕ್ರೆಯೆ** | **ಶೇಕಡಾವಾರು** |
| **1** | ನಗದು ವ್ಯವಹಾರ | 01 | 3.8 |
| **2** | ಚೆಕ್ ಮೂಲಕ ವಿತರಣೆ | 13 | 50.0 |
| **3** | ಒಂದೇ ಚೆಕ್‌ನಲ್ಲಿ ಹಣ ಡ್ರಾ ಮಾಡಿ ನಗದು ವ್ಯವಹಾರ | 01 | 3.8 |
| **4** | ಕೆಲವು ಕಡೆ ಚೆಕ್ ಬಳಕೆ, ಇನ್ನು ಕೆಲವು ಕಡೆ ನಗದು ವ್ಯವಹಾರ | 08 | 30.8 |
| | ಒಟ್ಟು | 26 | |

Note: Multiple responses, therefore, total may exceed 100 percent.

**ಮೇಲಿನ ಕೋಷ್ಟಕ 13 ರಲ್ಲಿ** ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ನೀಡಿರುವ ಧನಸಹಾಯವನ್ನು ಸಂಘ–ಸಂಸ್ಥೆಗಳು ಹೇಗೆ ಬಳಸುತ್ತವೆ ಎಂದು ಒಟ್ಟು **26 ಜನ ಅಧಿಕಾರಿಗಳನ್ನು ಪ್ರಶ್ನಿಸಿದಾಗ, ಶೇ 50.0 ರಷ್ಟು ಅಧಿಕಾರಿಗಳು** ಸಂಘ ಸಂಸ್ಥೆಗಳು ಚೆಕ್ ಮೂಲಕ ಹಣವನ್ನು ಬಳಸಿರುತ್ತಾರೆ ಎಂದು ಹೇಳಿದರೆ, **ಶೇ 30.8 ರಷ್ಟು ಅಧಿಕಾರಿಗಳು** ಸಂಘ ಸಂಸ್ಥೆಗಳು ಕೆಲವು ಕಡೆ ಚೆಕ್ ಬಳಕೆ ಮಾಡಿದ್ದಾರೆ. ಇನ್ನು ಕೆಲವು ಕಡೆ ನಗದು ವ್ಯವಹಾರ ಮಾಡಿದ್ದಾರೆ ಎಂದು ಹೇಳಿದ್ದಾರೆ. ಇನ್ನೊಂದು ಕಡೆ, **ಶೇ 3.8 ರಷ್ಟು ಅಧಿಕಾರಿಗಳು** ಸಂಘ ಸಂಸ್ಥೆಗಳು ಒಂದೇ ಚೆಕ್‌ನಲ್ಲಿ ಹಣ ಡ್ರಾ ಮಾಡಿ ನಗದು ವ್ಯವಹಾರ ಮಾಡಿದ್ದಾರೆ ಎಂದು ಹೇಳಿರುತ್ತಾರೆ.

**ಕೋಷ್ಟಕ 14 : ಮೂರು ಯೋಜನೆಗಳಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಅಳವಡಿಸಬೇಕಾದ ಹೊಸ ವಿಧಾನಗಳ ಬಗ್ಗೆ ಮಾಹಿತಿ.**

| ಕ್ರ.ಸಂ. | ಉತ್ತರಗಳು | ಅಧಿಕಾರಿಗಳ ಪ್ರತಿಕ್ರಿಯೆ | ಶೇಕಡಾವಾರು |
|---|---|---|---|
| 1 | ಸರ್ಕಾರವು ಇನ್ನು ಹೆಚ್ಚಿನ ಹಣ ಬಿಡುಗಡೆ ಮಾಡಿ ಪ್ರೋತ್ಸಾಹಿಸಬೇಕು. | 08 | 30.8 |
| 2 | ಸಂಘ–ಸಂಸ್ಥೆಗಳಿಗೆ ಉತ್ತೇಜನ ನೀಡಬೇಕಾಗುತ್ತದೆ. | 07 | 26.9 |
| 3 | ಕಲಾವಿದರಿಗೆ ಹೆಚ್ಚಿನ ಆರ್ಥಿಕ ನೆರವು ನೀಡಬೇಕು. | 05 | 19.2 |
| 4 | ಅಭಿವೃದ್ಧಿಯ ಹೆಸರಿನಲ್ಲಿ ಆಗುವಂತಹ ಅನ್ಯಾಯವನ್ನು ತಡೆಗಟ್ಟಬೇಕು. | 08 | 30.8 |
| | ಒಟ್ಟು | 26 | |

Note: Multiple responses, therefore, total may exceed 100 percent.

**ಮೇಲಿನ ಕೋಷ್ಟಕ 14 ರಲ್ಲಿ** ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಸಂಘ–ಸಂಸ್ಥೆಗಳನ್ನು ಕೇಂದ್ರೀಕರಿಸಿ ಈ ಮೂರು ಯೋಜನೆಗಳಲ್ಲಿ ಅಳವಡಿಸಬೇಕಾದ ಹೊಸ ವಿಧಾನಗಳಾವುವು ಎಂದು **ಒಟ್ಟು 26 ಜನ ಅಧಿಕಾರಿಗಳನ್ನು** ಕೇಳಿದಾಗ, **ಶೇ 30.8 ರಷ್ಟು** ಅಧಿಕಾರಿಗಳು ಸರ್ಕಾರವು ಇನ್ನು ಹೆಚ್ಚಿನ ಹಣ ಬಿಡುಗಡೆ ಮಾಡಿ ಪ್ರೋತ್ಸಾಹಿಸಬೇಕು ಎಂದು ಹೇಳಿದರೆ, **ಶೇ 30.8** ರಷ್ಟು ಅಧಿಕಾರಿಗಳು ಅಭಿವೃದ್ಧಿಯ ಹೆಸರಿನಲ್ಲಿ ಆಗುವಂತಹ ಅನ್ಯಾಯವನ್ನು ತಡೆಗಟ್ಟಬೇಕು ಎಂದು ಹೇಳಿದ್ದಾರೆ. ಹಾಗೆಯೇ ಶೇಕಡಾ **26.9** ರಷ್ಟು ಅಧಿಕಾರಿಗಳು ಸಂಘ–ಸಂಸ್ಥೆಗಳಿಗೆ ಉತ್ತೇಜನ ನೀಡಬೇಕು ಎಂದು ಹೇಳಿದರೆ, **ಶೇ 19.2** ಅಧಿಕಾರಿಗಳು ಕಲಾವಿದರಿಗೆ ಹೆಚ್ಚಿನ ಆರ್ಥಿಕ ನೆರವು ನೀಡಬೇಕು ಎಂದು ಹೇಳಿದ್ದಾರೆ.

**ಕೋಷ್ಟಕ 15: ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ನೀಡಿರುವ ಧನಸಹಾಯವನ್ನು ಸಂಘ ಸಂಸ್ಥೆಗಳು ಹೇಗೆ ಸದ್ಬಳಕೆ ಮಾಡಿಕೊಂಡಿವೆ ಎಂಬುದರ ಬಗ್ಗೆ ಮಾಹಿತಿ.**

| ಕ್ರ.ಸಂ. | ವಿವರಗಳು | ಅಧಿಕಾರಿಗಳ ಪ್ರತಿಕ್ರಿಯೆ | ಶೇಕಡಾವಾರು |
|---|---|---|---|
| **1** | ಸಂಘ–ಸಂಸ್ಥೆಗಳು ನೀಡಿದ ವರದಿಯ ಆಧಾರದ ಮೇಲೆ | 13 | 50.0 |
| **2** | ಲೆಕ್ಕಪರಿಶೋಧಕರ ವರದಿಯ ಆಧಾರದ ಮೇಲೆ | 16 | 61.5 |
| **3** | ಕಲಾವಿದರ ಅಭಿಪ್ರಾಯದ ಆಧಾರದ ಮೇಲೆ | 01 | 03.8 |
| **4** | ಮಾಧ್ಯಮಗಳು ನೀಡಿದ ವರದಿಯ ಆಧಾರದ ಮೇಲೆ | 02 | 7.7 |
| | ಒಟ್ಟು | 26 | |

Note: Multiple responses, therefore, total may exceed 100 percent.

**ಮೇಲಿನ ಕೋಷ್ಟಕ 15 ರಲ್ಲಿ** ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ನೀಡಿದ ಧನಸಹಾಯವನ್ನು ಸಂಘ–ಸಂಸ್ಥೆಗಳು ಪಡೆದು ಸದ್ಬಳಕೆ ಮಾಡಿಕೊಂಡಿರುವುದನ್ನು ಹೇಗೆ ಪತ್ತೆ ಹಚ್ಚುತ್ತೀರಾ ಎಂದು **ಒಟ್ಟು 26 ಜನ ಅಧಿಕಾರಿಗಳನ್ನು** ಕೇಳಿದಾಗ, **ಶೇ 50.0** ಅಧಿಕಾರಿಗಳು ಸಂಘ–ಸಂಸ್ಥೆಗಳು ನೀಡಿದ ವರದಿಯ ಆಧಾರದ ಮೇಲೆ ಸದ್ಬಳಕೆ ಮಾಡಿಕೊಂಡಿರುವುದರ ಬಗ್ಗೆ ಪತ್ತೆ ಹಚ್ಚಲಾಗುವುದು ಎಂದು ಹೇಳಿದರೆ, **ಶೇ 61.5** ರಷ್ಟು ಅಧಿಕಾರಿಗಳು ಲೆಕ್ಕಪರಿಶೋಧಕರ ವರದಿಯ ಆಧಾರದ ಮೇಲೆ ಸಂಘ ಸಂಸ್ಥೆಗಳು ಸದ್ಬಳಕೆ ಮಾಡಿಕೊಂಡಿರುವುದರ ಬಗ್ಗೆ ಪತ್ತೆ ಹಚ್ಚಲಾಗುವುದು ಎಂದು ಹೇಳಿದ್ದಾರೆ. **ಶೇ 3.8** ರಷ್ಟು ಅಧಿಕಾರಿಗಳು ಕಲಾವಿದರ ಅಭಿಪ್ರಾಯದ ಆಧಾರದ ಮೇಲೆ ಸದ್ಬಳಕೆ ಮಾಡಿಕೊಂಡಿರುವುದರ ಬಗ್ಗೆ ಪತ್ತೆ ಹಚ್ಚಲಾಗುವುದು ಎಂದು ಹೇಳಿದರೆ, **ಶೇ 7.7** ರಷ್ಟು ಅಧಿಕಾರಿಗಳು ಮಾಧ್ಯಮಗಳು ನೀಡಿದ ವರದಿಯ ಆಧಾರದ ಮೇಲೆ ಸಂಘ ಸಂಸ್ಥೆಗಳು ಸದ್ಬಳಕೆ ಮಾಡಿಕೊಂಡಿರುವುದರ ಬಗ್ಗೆ ಪತ್ತೆ ಹಚ್ಚಲಾಗಿದೆ ಎಂದು ಹೇಳಿದ್ದಾರೆ.

## 11.1 ಸಂಘ ಸಂಸ್ಥೆಗಳಿಗೆ ಸಂಬಂಧಿಸಿದ ಅಧಿಕಾರಿ ವರ್ಗದವರೊಂದಿಗೆ ಸಂದರ್ಶಿಸಿ ಮಾಹಿತಿ ಸಂಗ್ರಹಿಸಿರುವುದು.

ಸಂಘ ಸಂಸ್ಥೆಗಳು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿ ಸಾಮಾನ್ಯ ಯೋಜನೆ, ವಿಶೇಷ ಘಟಕ ಯೋಜನೆ, ಗಿರಿಜನ ಉಪಯೋಜನೆಯ ಅಡಿಯಲ್ಲಿ ಧನಸಹಾಯವನ್ನು ಪಡೆದು ಆ ಹಣವನ್ನು ಯಾವ ರೀತಿ ಬಳಸಿಕೊಂಡಿದ್ದಾರೆ ಎಂಬುದನ್ನು ತಿಳಿಯುವುದಕ್ಕಾಗಿ ಸಾಮಾನ್ಯ ಯೋಜನೆಯ ಅಡಿಯಲ್ಲಿ 84 ಸಂಘ ಸಂಸ್ಥೆಗಳನ್ನು, ವಿಶೇಷ ಘಟಕ ಯೋಜನೆಯ ಅಡಿಯಲ್ಲಿ 70 ಸಂಘ ಸಂಸ್ಥೆಗಳನ್ನು, ಗಿರಿಜನ ಉಪಯೋಜನೆಯ ಅಡಿಯಲ್ಲಿ 39 ಸಂಘ ಸಂಸ್ಥೆಗಳನ್ನು ಮಾದರಿ ಆಯ್ಕೆಯನ್ನಾಗಿ ಮಾಡಿಕೊಳ್ಳಲಾಗಿದೆ. ಒಟ್ಟು ಈ ಮೂರು ಯೋಜನೆಗಳಿಂದ 191 ಸಂಘ ಸಂಸ್ಥೆಗಳನ್ನು ತೆಗೆದುಕೊಳ್ಳಬೇಕಾಗಿತ್ತು. ಆದರೆ ಇಲ್ಲಿ ವಿಶೇಷ ಘಟಕದ ಅಡಿಯಲ್ಲಿ ಕ್ಷೇತ್ರಕಾರ್ಯದ ಸಂದರ್ಭದಲ್ಲಿ 2 ಸಂಘ ಸಂಸ್ಥೆಗಳನ್ನು ಹೆಚ್ಚುವರಿಯಾಗಿ

ಪರಿಗಣಿಸಿದ ಕಾರಣಕ್ಕಾಗಿ (**ಮಾದರಿ ಆಯ್ಕೆಯ ಪಟ್ಟಿಯಲ್ಲಿ 191 ಸಂಘ ಸಂಸ್ಥೆಗಳೆಂದು ದಾಖಲಿಸಲಾಗಿದೆ.**) ಒಟ್ಟು 193 ಸಂಘ ಸಂಸ್ಥೆಗಳನ್ನು ಇಲ್ಲಿ ವಿಶ್ಲೇಷಣೆಗೆ ಬಳಸಿಕೊಳ್ಳಲಾಗಿದೆ.

**ಕೋಷ್ಟಕ 16: ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ನೀಡಿದ ಧನ ಸಹಾಯವನ್ನು ಪಾರದರ್ಶಕವಾಗಿ ಬಳಸಿಕೊಳ್ಳುವಾಗ ಅನುಸರಿಸುವ ನಿಯಮಗಳು**

| | ವಿವರಗಳು | ಸಾಮಾನ್ಯ ಯೋಜನೆ | ಶೇಕಡ | ವಿಶೇಷ ಘಟಕ ಯೋಜನೆ | ಶೇಕಡ | ಗಿರಿಜನ ಉಪ ಯೋಜನೆ | ಶೇಕಡ | ಒಟ್ಟು ಸಂಘಸಂಸ್ಥೆಗಳ ಸಂಖ್ಯೆ | ಶೇಕಡ |
|---|---|---|---|---|---|---|---|---|---|
| 1 | ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ನೀಡಿರುವ ಮಾರ್ಗಸೂಚಿಯಲ್ಲಿನ ನಿಯಮಗಳ ಪ್ರಕಾರ | 70 | 83.3 | 67 | 95.7 | 32 | 82.1 | 169 | 87.6 |
| 2 | ಲೆಕ್ಕ ಪರಿಶೋಧನಾ ಇಲಾಖೆಯ ನಿಯಮಗಳ ಪ್ರಕಾರ | 26 | 31.0 | 29 | 41.4 | 14 | 35.9 | 69 | 35.8 |
| 3 | ನಮ್ಮ ಸಂಸ್ಥೆಯ ನಿಯಮಗಳ ಪ್ರಕಾರ | 4 | 4.8 | 4 | 5.7 | 4 | 10.3 | 12 | 6.2 |
| 4 | ಸ್ವ–ಇಚ್ಛೆಯಿಂದ | 2 | 2.4 | 2 | 2.9 | 2 | 5.1 | 06 | 3.1 |
| **ಒಟ್ಟು** | | **84** | | **70** | | **39** | | **193** | |

Note: Multiple responses, therefore, total may exceed 100 percent.

**ಮೇಲಿನ ಕೋಷ್ಟಕ 16 ರಲ್ಲಿ ಸಾಮಾನ್ಯ ಯೋಜನೆಯ ಒಟ್ಟು 84 ಸಂಘ ಸಂಸ್ಥೆಗಳನ್ನು ಸಂಪರ್ಕಿಸಿ** ಧನ ಸಹಾಯವನ್ನು ಪಾರದರ್ಶಕವಾಗಿ ಬಳಸಿಕೊಳ್ಳುವಾಗ ಅನುಸರಿಸುವ ನಿಯಮಗಳು ಯಾವುವು ಎಂದು ಸಂಘ ಸಂಸ್ಥೆಯ ಅಧಿಕಾರಿಗಳನ್ನು ಪ್ರಶ್ನಿಸಿದಾಗ **ಶೇ 83.3** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ನೀಡಿರುವ ಮಾರ್ಗಸೂಚಿಯಲ್ಲಿನ ನಿಯಮಗಳ ಪ್ರಕಾರ ಹಣವನ್ನು ಬಳಸಿಕೊಂಡಿದ್ದೇವೆ ಎಂದು ಹೇಳಿದರೆ, **ಶೇ 31.0** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ಲೆಕ್ಕ ಪರಿಶೋಧನಾ ಇಲಾಖೆಯ ನಿಯಮಗಳ ಪ್ರಕಾರ ಹಣವನ್ನು ಉಪಯೋಗಿಸಿಕೊಳ್ಳಲಾಗಿದೆ ಎಂದು ಹೇಳಿದ್ದಾರೆ. ಹಾಗೆಯೇ **ಶೇ 4.8** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ನಮ್ಮ ಸಂಸ್ಥೆಯ ನಿಯಮಗಳ ಪ್ರಕಾರ ಹಣವನ್ನು ಬಳಸಿರುತ್ತೇವೆ ಎಂದು ಹೇಳಿದ್ದಾರೆ. ನಂತರ **ಶೇ 2.4 ರಷ್ಟು** ಸಂಘ ಸಂಸ್ಥೆಗಳ ಅಧಿಕಾರಿಗಳು ಸ್ವ–ಇಚ್ಛೆಯಿಂದ ಬಳಸಿಕೊಂಡಿದ್ದೇವೆ ಎಂದು ಹೇಳಿದ್ದಾರೆ.

**ಅದೇರೀತಿ, ವಿಶೇಷ ಘಟಕ ಯೋಜನೆಯ ಒಟ್ಟು 70 ಸಂಘ ಸಂಸ್ಥೆಗಳನ್ನು ಸಂಪರ್ಕಿಸಿ,** ಧನ ಸಹಾಯವನ್ನು ಪಾರದರ್ಶಕವಾಗಿ ಬಳಸಿಕೊಳ್ಳುವಾಗ ಅನುಸರಿಸುವ ನಿಯಮಗಳು ಯಾವುವು ಎಂದು ಕೇಳಿದಾಗ, **ಶೇ 95.7**% ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ನೀಡಿರುವ ಮಾರ್ಗಸೂಚಿಯಲ್ಲಿನ ನಿಯಮಗಳ ಪ್ರಕಾರ ಹಣವನ್ನು ಬಳಸಿಕೊಂಡಿದ್ದೇವೆ ಎಂದು ಹೇಳಿದರೆ, **ಶೇ 41.4** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ಲೆಕ್ಕ ಪರಿಶೋಧನಾ ಇಲಾಖೆಯ ನಿಯಮಗಳ ಪ್ರಕಾರ

ಹಣವನ್ನು ಬಳಸಿಕೊಂಡಿದ್ದೇವೆ ಎಂದು ಹೇಳಿದ್ದಾರೆ. ಹಾಗೆಯೇ **ಶೇ 5.7** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ನಮ್ಮ ಸಂಸ್ಥೆಯ ನಿಯಮಗಳ ಪ್ರಕಾರ ಹಣವನ್ನು ಬಳಸಿಕೊಂಡಿದ್ದೇವೆ ಎಂದು ಹೇಳಿದ್ದಾರೆ. ನಂತರ **ಶೇ 2.9 ರಷ್ಟು** ಸಂಘ ಸಂಸ್ಥೆಗಳ ಅಧಿಕಾರಿಗಳು ಸ್ವ–ಇಚ್ಛೆಯಿಂದ ಬಳಸಿಕೊಂಡಿದ್ದೇವೆ ಎಂದು ಹೇಳಿದ್ದಾರೆ.

**ಹಾಗೆಯೇ, ಗಿರಿಜನ ಉಪಯೋಜನೆಯ ಒಟ್ಟು 39 ಸಂಘ ಸಂಸ್ಥೆಗಳನ್ನು ಸಂಪರ್ಕಿಸಿ,** ಧನ ಸಹಾಯವನ್ನು ಪಾರದರ್ಶಕವಾಗಿ ಬಳಸಿಕೊಳ್ಳುವಾಗ ಅನುಸರಿಸುವ ನಿಯಮಗಳು ಯಾವುವು ಎಂದು ಕೇಳಿದಾಗ, **ಶೇ 82.1** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ನೀಡಿರುವ ಮಾರ್ಗಸೂಚಿಯಲ್ಲಿನ ನಿಯಮಗಳ ಪ್ರಕಾರ ಹಣವನ್ನು ಬಳಸಿಕೊಂಡಿದ್ದೇವೆ ಎಂದು ಹೇಳಿದರೆ, **ಶೇ 35.9** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ಲೆಕ್ಕ ಪರಿಶೋಧನಾ ಇಲಾಖೆಯ ನಿಯಮಗಳ ಪ್ರಕಾರ ಹಣವನ್ನು ಬಳಸಿಕೊಂಡಿದ್ದೇವೆ ಎಂದು ಹೇಳಿದ್ದಾರೆ. ಹಾಗೆಯೇ **ಶೇ 10.3** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ನಮ್ಮ ಸಂಸ್ಥೆಯ ನಿಯಮಗಳ ಪ್ರಕಾರ ಹಣವನ್ನು ಬಳಸಿಕೊಂಡಿದ್ದೇವೆ ಎಂದು ಹೇಳಿದ್ದಾರೆ. ನಂತರ **ಶೇ 5.1 ರಷ್ಟು** ಸಂಘ ಸಂಸ್ಥೆಗಳ ಅಧಿಕಾರಿಗಳು ಸ್ವ–ಇಚ್ಛೆಯಿಂದ ಬಳಸಿಕೊಂಡಿದ್ದೇವೆ ಎಂದು ಹೇಳಿದ್ದಾರೆ.

**ಒಟ್ಟು ಮೂರು ಯೋಜನೆಗಳಿಂದ 193 ಸಂಘ ಸಂಸ್ಥೆಗಳನ್ನು ಸಂಪರ್ಕಿಸಿ,** ಧನ ಸಹಾಯವನ್ನು ಪಾರದರ್ಶಕವಾಗಿ ಬಳಸಿಕೊಳ್ಳುವಾಗ ಅನುಸರಿಸುವ ನಿಯಮಗಳು ಯಾವುವು ಎಂದು ಕೇಳಿದಾಗ, **ಶೇ 87.6** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ನೀಡಿರುವ ಮಾರ್ಗಸೂಚಿಯಲ್ಲಿನ ನಿಯಮಗಳ ಪ್ರಕಾರ ಹಣವನ್ನು ಬಳಸಿಕೊಂಡಿದ್ದೇವೆ ಎಂದು ಹೇಳಿದರೆ, **ಶೇ 35.8** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ಲೆಕ್ಕ ಪರಿಶೋಧನಾ ಇಲಾಖೆಯ ನಿಯಮಗಳ ಪ್ರಕಾರ ಹಣವನ್ನು ಬಳಸಿಕೊಂಡಿದ್ದೇವೆ ಎಂದು ಹೇಳಿದ್ದಾರೆ. ಹಾಗೆಯೇ **ಶೇ 6.2** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ನಮ್ಮ ಸಂಸ್ಥೆಯ ನಿಯಮಗಳ ಪ್ರಕಾರ ಹಣವನ್ನು ಬಳಸಿಕೊಂಡಿದ್ದೇವೆ ಎಂದು ಹೇಳಿದ್ದಾರೆ. ನಂತರ **ಶೇ 3.1 ರಷ್ಟು** ಸಂಘ ಸಂಸ್ಥೆಗಳ ಅಧಿಕಾರಿಗಳು ಸ್ವ–ಇಚ್ಛೆಯಿಂದ ಬಳಸಿಕೊಂಡಿದ್ದೇವೆ ಎಂದು ಹೇಳಿದ್ದಾರೆ.

**ಚರ್ಚೆ;** ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿ ಚಾಲ್ತಿಯಲ್ಲಿರುವ ಈ ಮೂರು ಯೋಜನೆಯ ಅಡಿಯಲ್ಲಿ ಕರ್ನಾಟಕದಲ್ಲಿನ ಸಂಘ ಸಂಸ್ಥೆಗಳು ಧನಸಹಾಯವನ್ನು ಪಡೆದು ಪಾರದರ್ಶಕವಾಗಿ ಬಳಸುವಾಗ ಕನ್ನಡ ಸಂಸ್ಕೃತಿ ಇಲಾಖೆಯ ಮಾರ್ಗಸೂಚಿಯಲ್ಲಿನ ನಿಯಮಗಳನ್ನು ಹೆಚ್ಚಿನ ಸಂಘ ಸಂಸ್ಥೆಗಳು ಬಳಸಿಕೊಂಡಿವೆ. ಇನ್ನು ಕೆಲವು ಸಂಘ ಸಂಸ್ಥೆಗಳು ಲೆಕ್ಕ ಪರಿಶೋಧನಾ ಇಲಾಖೆಯ ನಿಯಮಗಳನ್ನು ಬಳಸಿದರೆ, ಮತ್ತೆ ಕೆಲವು ಸಂಘ ಸಂಸ್ಥೆಗಳು ತಮ್ಮ ಸಂಸ್ಥೆಯಲ್ಲಿನ ನಿಯಮಗಳನ್ನು ಪಾಲಿಸಿದ್ದಾರೆ. ಹಾಗೆಯೇ ಇನ್ನೂ ಕೆಲವು ಸಂಘ ಸಂಸ್ಥೆಗಳು ಸ್ವ–ಇಚ್ಛೆಯಿಂದ ಬಳಸಿಕೊಂಡಿದ್ದಾರೆ ಎಂಬುದು ತಿಳಿದು ಬಂದಿದೆ.

**ಕೋಷ್ಟಕ 17: ಸಂಘ ಸಂಸ್ಥೆಗಳು ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ಕಲಾವಿದರಿಗೆ ಹಣವನ್ನು ಯಾವ ರೀತಿ ವಿತರಿಸಿದ್ದಾರೆ ಎಂಬುದರ ಬಗ್ಗೆ ಮಾಹಿತಿ.**

| | ವಿವರಗಳು | ಸಾಮಾನ್ಯ ಯೋಜನೆ | ಶೇಕಡ | ವಿಶೇಷ ಘಟಕ ಯೋಜನೆ | ಶೇಕಡ | ಗಿರಿಜನ ಉಪ ಯೋಜನೆ | ಶೇಕಡ | ಒಟ್ಟು ಸಂಘ ಸಂಸ್ಥೆಗಳು | ಶೇಕಡ |
|---|---|---|---|---|---|---|---|---|---|
| 1 | ಚೆಕ್ ಮುಖಾಂತರ | 45 | 53.6 | 24 | 34.3 | 12 | 30.8 | 81 | 42.0 |
| 2 | ನಗದು ಮುಖಾಂತರ | 52 | 61.9 | 58 | 82.9 | 29 | 74.4 | 139 | 72.0 |
| 3 | ವಸ್ತುವಿನ ರೂಪದಲ್ಲಿ | 03 | 3.6 | 00 | 0.0 | 1 | 2.6 | 4 | 2.1 |
| 4 | ಹಣ್ಣು- ಹಂಪಲು | 04 | 4.8 | 00 | 0.00 | 0 | 0.0 | 4 | 2.1 |
| 5 | ಇತರೆ(ತಿಳಿಸಿ) ಆರ್.ಟಿ.ಜಿ.ಎಸ್/ ಎನ್.ಇ.ಎಫ್.ಟಿ | 01 | 1.2 | 1 | 1.4 | 00 | 0.0 | 2 | 1.0 |
| **ಒಟ್ಟು** | | **84** | | **70** | | **39** | | **193** | |

Note: Multiple responses, therefore, total may exceed 100 percent.

**ಮೇಲಿನ ಕೋಷ್ಟಕ 17 ರಲ್ಲಿ ಸಾಮಾನ್ಯ ಯೋಜನೆಯ ಒಟ್ಟು 84 ಸಂಘ ಸಂಸ್ಥೆಗಳನ್ನು ಸಂಪರ್ಕಿಸಿ,** ಸಂಘ ಸಂಸ್ಥೆಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ ಕಲಾವಿದರಿಗೆ ಹಣವನ್ನು ಯಾವ ರೀತಿ ವಿತರಿಸಿರುತ್ತೀರಾ ಎಂದು ಕೇಳಿದಾಗ, **ಶೇ 61.9** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ನಗದು ಮುಖಾಂತರ ಹಣವನ್ನು ನೀಡುತ್ತೇವೆ ಎಂದು ಹೇಳಿದರೆ, **ಶೇ 53.6 ರಷ್ಟು** ಸಂಘ ಸಂಸ್ಥೆಗಳ ಅಧಿಕಾರಿಗಳು ಚೆಕ್ ಮುಖಾಂತರ ಹಣವನ್ನು ನೀಡುತ್ತೇವೆ ಎಂದು ಹೇಳಿದ್ದಾರೆ. ಅದೇರೀತಿ, **ಶೇ 4.8** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ಹಣ್ಣು ಹಂಪಲು ನೀಡುತ್ತೇವೆ ಎಂದು ಹೇಳಿದರೆ, **ಶೇ 3.6** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ವಸ್ತುವಿನ ರೂಪದಲ್ಲಿ ನೀಡುತ್ತೇವೆ ಎಂದು ಹೇಳಿದ್ದಾರೆ. ಹಾಗೆಯೇ **ಶೇ 1.2** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ಕಲಾವಿದರ ಬ್ಯಾಂಕ್ ಖಾತೆಗೆ ಹಣವನ್ನು **ಆರ್.ಟಿ.ಜಿ.ಎಸ್/ಎನ್.ಇ.ಎಫ್.ಟಿ** ಮೂಲಕ ಹಣವನ್ನು ಸಂದಾಯ ಮಾಡಿರುವುದಾಗಿ ಹೇಳಿದ್ದಾರೆ.

**ವಿಶೇಷ ಘಟಕ ಯೋಜನೆಯ ಒಟ್ಟು 84 ಸಂಘ ಸಂಸ್ಥೆಗಳನ್ನು ಸಂಪರ್ಕಿಸಿ,** ಸಂಘ ಸಂಸ್ಥೆಗಳು ಕಲಾವಿದರಿಗೆ ಹಣವನ್ನು ಯಾವ ರೀತಿ ವಿತರಿಸಿರುತ್ತೀರಾ ಎಂದು ಕೇಳಿದಾಗ, **ಶೇ 82.9** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ನಗದು ಮುಖಾಂತರ ಹಣವನ್ನು ನೀಡುತ್ತೇವೆ ಎಂದು ಹೇಳಿದರೆ, **ಶೇ 34.3 ರಷ್ಟು** ಸಂಘ ಸಂಸ್ಥೆಗಳ ಅಧಿಕಾರಿಗಳು ಚೆಕ್ ಮುಖಾಂತರ ಹಣವನ್ನು ನೀಡುತ್ತೇವೆ ಎಂದು ಹೇಳಿದ್ದಾರೆ. ಅದೇರೀತಿ, ಯಾವೊಬ್ಬ ಸಂಘ ಸಂಸ್ಥೆಗಳ ಅಧಿಕಾರಿಗಳು ವಸ್ತುವಿನ ರೂಪದಲ್ಲಿ ನೀಡಿರುತ್ತೇವೆ ಎಂದು ಹೇಳಿರುವುದಿಲ್ಲ. ಅದೇರೀತಿ ಸಂಘ ಸಂಸ್ಥೆಗಳ ಯಾವೊಬ್ಬ ಅಧಿಕಾರಿಗಳು ಹಣ್ಣು ಹಂಪಲು ನೀಡುತ್ತೇವೆ

ಎಂದು ಹೇಳಿರುವುದಿಲ್ಲ. ಹಾಗೆಯೇ **ಶೇ 1.4** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ಕಲಾವಿದರ ಬ್ಯಾಂಕ್ ಖಾತೆಗೆ ಹಣವನ್ನು ಆರ್.ಟಿ.ಜಿ.ಎಸ್/ ಎನ್.ಇ.ಎಫ್.ಟಿ ಮೂಲಕ ಹಣವನ್ನು ಸಂದಾಯ ಮಾಡಿರುವುದಾಗಿ ಹೇಳಿದ್ದಾರೆ.

**ಗಿರಿಜನ ಉಪಯೋಜನೆಯ ಒಟ್ಟು 39 ಸಂಘ ಸಂಸ್ಥೆಗಳನ್ನು ಸಂಪರ್ಕಿಸಿ,** ಸಂಘ ಸಂಸ್ಥೆಗಳು ಕಲಾವಿದರಿಗೆ ಹಣವನ್ನು ಯಾವ ರೀತಿ ವಿತರಿಸಿರುತ್ತೀರಾ ಎಂದು ಕೇಳಿದಾಗ, **ಶೇ 74.4** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ನಗದು ಮುಖಾಂತರ ಹಣವನ್ನು ನೀಡುತ್ತೇವೆ ಎಂದು ಹೇಳಿದರೆ, **ಶೇ 30.8 ರಷ್ಟು** ಸಂಘ ಸಂಸ್ಥೆಗಳ ಅಧಿಕಾರಿಗಳು ಚೆಕ್ ಮುಖಾಂತರ ಹಣವನ್ನು ನೀಡುತ್ತೇವೆ ಎಂದು ಹೇಳಿದ್ದಾರೆ. ಅದೇರೀತಿ, **ಶೇ 2.6** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ವಸ್ತುವಿನ ರೂಪದಲ್ಲಿ ನೀಡುತ್ತೇವೆ ಎಂದು ಹೇಳಿದರೆ, ಹಾಗೆಯೇ ಸಂಘ ಸಂಸ್ಥೆಗಳ ಯಾವೊಬ್ಬ ಅಧಿಕಾರಿಗಳು ಹಣ್ಣು ಹಂಪಲು ನೀಡುತ್ತೇವೆ ಎಂದು ಹೇಳಿರುವುದಿಲ್ಲ. ಹಾಗೆಯೇ ಸಂಘ ಸಂಸ್ಥೆಗಳ ಯಾವೊಬ್ಬ ಅಧಿಕಾರಿಗಳು ಕಲಾವಿದರ ಬ್ಯಾಂಕ್ ಖಾತೆಗೆ ಆರ್.ಟಿ.ಜಿ.ಎಸ್/ ಎನ್.ಇ.ಎಫ್.ಟಿ ಮಾಡಿರುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

**ಒಟ್ಟು ಮೂರು ಯೋಜನೆಗಳ 193 ಸಂಘ ಸಂಸ್ಥೆಗಳನ್ನು ಸಂಪರ್ಕಿಸಿ,** ಸಂಘ ಸಂಸ್ಥೆಗಳು ಕಲಾವಿದರಿಗೆ ಹಣವನ್ನು ಯಾವ ರೀತಿ ವಿತರಿಸಿರುತ್ತೀರಾ ಎಂದು ಕೇಳಿದಾಗ, **ಶೇ 72.0** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ನಗದು ಮುಖಾಂತರ ಹಣವನ್ನು ನೀಡುತ್ತೇವೆ ಎಂದು ಹೇಳಿದರೆ, **ಶೇ 42.0 ರಷ್ಟು** ಸಂಘ ಸಂಸ್ಥೆಗಳ ಅಧಿಕಾರಿಗಳು ಚೆಕ್ ಮುಖಾಂತರ ಹಣವನ್ನು ನೀಡುತ್ತೇವೆ ಎಂದು ಹೇಳಿದ್ದಾರೆ. ಅದೇರೀತಿ, **ಶೇ 2.1** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ವಸ್ತುವಿನ ರೂಪದಲ್ಲಿ ನೀಡುತ್ತೇವೆ ಎಂದು ಹೇಳಿದರೆ, **ಶೇ 2.1** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ಹಣ್ಣು ಹಂಪಲು ನೀಡುತ್ತೇವೆ ಎಂದು ಹೇಳಿದ್ದಾರೆ. ಹಾಗೆಯೇ **ಶೇ 1.0** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ಕಲಾವಿದರ ಬ್ಯಾಂಕ್ ಖಾತೆಗೆ ಹಣವನ್ನು ಆರ್.ಟಿ.ಜಿ.ಎಸ್/ ಎನ್.ಇ.ಎಫ್.ಟಿ ಮೂಲಕ ಹಣವನ್ನು ಸಂದಾಯ ಮಾಡಿರುವುದಾಗಿ ಹೇಳಿದ್ದಾರೆ.

**ಚರ್ಚೆ:** ಸಂಘ ಸಂಸ್ಥೆಗಳು ಕಾರ್ಯಕ್ರಮಗಳಿಗೆ ಬಂದ ಕಲಾವಿದರಿಗೆ ಸಂಭಾವನೆ ನೀಡುವಾಗ ಬಹುಪಾಲು ಸಂಘ ಸಂಸ್ಥೆಗಳು ನಗದು ಹಣ ನೀಡಿದರೆ, ಕೆಲವು ಸಂಘ ಸಂಸ್ಥೆಗಳು ಚೆಕ್ ಮುಖಾಂತರ ಸಂಭಾವನೆ ನೀಡಿರುತ್ತಾರೆ. ಅದೇರೀತಿ, ಇನ್ನು ಕೆಲವು ಸಂಘ ಸಂಸ್ಥೆಗಳು ಸಂಭಾವನೆ ರಹಿತ ವಸ್ತುವಿನ ರೂಪದಲ್ಲಿ ಅಥವಾ ಹಣ್ಣು ಹಂಪಲುಗಳನ್ನು ನೀಡುತ್ತಾರೆ. ಇನ್ನೂ ಉಳಿದ ಕೆಲವು ಸಂಘ ಸಂಸ್ಥೆಗಳು ಕಲಾವಿದರ ಬ್ಯಾಂಕ್ ಖಾತೆಗೆ ಹಣವನ್ನು ಆರ್.ಟಿ.ಜಿ.ಎಸ್/ ಎನ್.ಇ.ಎಫ್.ಟಿ ಮೂಲಕ ಹಣವನ್ನು ಸಂದಾಯ ಮಾಡಿರುವುದಾಗಿ ಹೇಳಿದ್ದಾರೆ.

**ಕೋಷ್ಟಕ 18: ಸಂಘ ಸಂಸ್ಥೆಗಳ ಮುಖಾಂತರ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುವ ಉದ್ದೇಶಗಳ ವಿವರ**

| | ವಿವರಗಳು | ಸಾಮಾನ್ಯ ಯೋಜನೆ | ಶೇಕಡ | ವಿಶೇಷ ಘಟಕ ಯೋಜನೆ | ಶೇಕಡ | ಗಿರಿಜನ ಉಪ ಯೋಜನೆ | ಶೇಕಡ | ಒಟ್ಟು ಸಂಘ ಸಂಸ್ಥೆಗಳು (ಪ್ರತಿಕ್ರಿಯೆ) | ಶೇಕಡ |
|---|---|---|---|---|---|---|---|---|---|
| 1 | ನಮ್ಮ ಸಂಘ ಸಂಸ್ಥೆಯ ಶ್ರೇಯಸ್ಸಿಗಾಗಿ | 14 | 16.7 | 17 | 24.3 | 07 | 17.9 | 38 | 19.7 |
| 2 | ನನ್ನ ವೈಯಕ್ತಿಕ ಪ್ರಸಿದ್ಧಿಗಾಗಿ | 02 | 2.4 | 00 | 0.0 | 00 | 0.0 | 02 | 1.0 |
| 3 | ಕಲೆ ಮತ್ತು ಸಂಸ್ಕೃತಿಯ ಉಳಿವಿಗಾಗಿ | 78 | 92.9 | 56 | 80.0 | 32 | 82.1 | 166 | 86.0 |
| 4 | ಕಲಾವಿದರ ಶ್ರೇಯಸ್ಸಿಗಾಗಿ | 12 | 14.3 | 16 | 22.9 | 09 | 23.1 | 37 | 19.2 |
| ಒಟ್ಟು | | **84** | | **70** | | **39** | | **193** | |

Note: Multiple responses, therefore, total may exceed 100 percent.

**ಮೇಲಿನ ಕೋಷ್ಟಕ 18 ರಲ್ಲಿ ಸಾಮಾನ್ಯ ಯೋಜನೆಯ ಒಟ್ಟು 84 ಸಂಘ ಸಂಸ್ಥೆಗಳನ್ನು ಸಂಪರ್ಕಿಸಿ** ಸಂಘ ಸಂಸ್ಥೆಗಳ ಮುಖಾಂತರ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುವ ಉದ್ದೇಶವೇನು ಎಂದು ಸಂಘ ಸಂಸ್ಥೆಗಳ ಅಧಿಕಾರಿಗಳನ್ನು ಪ್ರಶ್ನಿಸಿದಾಗ **ಶೇ 92.9** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ಕಲೆ ಮತ್ತು ಸಂಸ್ಕೃತಿಯ ಉಳಿವಿಗಾಗಿ ಎಂದು ಹೇಳಿದರೆ, **ಶೇ 16.7** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ನಮ್ಮ ಸಂಘ–ಸಂಸ್ಥೆಯ ಶ್ರೇಯಸ್ಸಿಗಾಗಿ ಎಂದು ಹೇಳಿದ್ದಾರೆ. ಹಾಗೆಯೇ **ಶೇ 14.3 ರಷ್ಟು** ಸಂಘ ಸಂಸ್ಥೆಗಳ ಅಧಿಕಾರಿಗಳು ಕಲಾವಿದರ ಶ್ರೇಯಸ್ಸಿಗಾಗಿ ಎಂದು ಹೇಳಿದ್ದಾರೆ. ಅದೇ ರೀತಿ **ಶೇ 2.4** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ನಮ್ಮ ವೈಯಕ್ತಿಕ ಪ್ರಸಿದ್ಧಿಗಾಗಿ ಎಂದು ತಿಳಿಸಿದ್ದಾರೆ.

**ವಿಶೇಷ ಘಟಕ ಯೋಜನೆಯ ಒಟ್ಟು 70 ಸಂಘ ಸಂಸ್ಥೆಗಳನ್ನು ಸಂಪರ್ಕಿಸಿ,** ಸಂಘ ಸಂಸ್ಥೆಗಳ ಮುಖಾಂತರ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುವ ಉದ್ದೇಶವೇನು ಎಂದು ಸಂಘ ಸಂಸ್ಥೆಗಳ ಅಧಿಕಾರಿಗಳನ್ನು ಪ್ರಶ್ನಿಸಿದಾಗ **ಶೇ 80.0** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ಕಲೆ ಮತ್ತು ಸಂಸ್ಕೃತಿಯ ಉಳಿವಿಗಾಗಿ ಎಂದು ಹೇಳಿದರೆ, **ಶೇ 24.3** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ನಮ್ಮ ಸಂಘ–ಸಂಸ್ಥೆಯ ಶ್ರೇಯಸ್ಸಿಗಾಗಿ ಎಂದು ಹೇಳಿದ್ದಾರೆ. ಹಾಗೆಯೇ, **ಶೇ 22.9 ರಷ್ಟು** ಸಂಘ ಸಂಸ್ಥೆಗಳ ಅಧಿಕಾರಿಗಳು ಕಲಾವಿದರ ಶ್ರೇಯಸ್ಸಿಗಾಗಿ ಎಂದು ಹೇಳಿದ್ದಾರೆ. ಅದೇ ರೀತಿ ಯಾವೊಬ್ಬ ಸಂಘ ಸಂಸ್ಥೆಗಳ ಅಧಿಕಾರಿಗಳು ನಮ್ಮ ವೈಯಕ್ತಿಕ ಪ್ರಸಿದ್ಧಿಗಾಗಿ ಎಂದು ಹೇಳಿರುವುದಿಲ್ಲ.

**ಗಿರಿಜನ ಉಪಯೋಜನೆಯ ಒಟ್ಟು 39 ಸಂಘ ಸಂಸ್ಥೆಗಳನ್ನು ಸಂಪರ್ಕಿಸಿ,** ಸಂಘ ಸಂಸ್ಥೆಗಳ ಮುಖಾಂತರ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುವ ಉದ್ದೇಶವೇನು ಎಂದು ಸಂಘ ಸಂಸ್ಥೆಗಳ

ಅಧಿಕಾರಿಗಳನ್ನು ಪ್ರಶ್ನಿಸಿದಾಗ **ಶೇ 82.1** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ಕಲೆ ಮತ್ತು ಸಂಸ್ಕೃತಿಯ ಉಳಿವಿಗಾಗಿ ಎಂದು ಹೇಳಿದರೆ, **ಶೇ 23.1 ರಷ್ಟು** ಸಂಘ ಸಂಸ್ಥೆಗಳ ಅಧಿಕಾರಿಗಳು ಕಲಾವಿದರ ಶ್ರೇಯಸ್ಸಿಗಾಗಿ ಎಂದು ಹೇಳಿದ್ದಾರೆ. **ಶೇ 17.9** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ನಮ್ಮ ಸಂಘ–ಸಂಸ್ಥೆಯ ಶ್ರೇಯಸ್ಸಿಗಾಗಿ ಎಂದು ಹೇಳಿದ್ದಾರೆ. ಹಾಗೆಯೇ ಅದೇ ರೀತಿ ಯಾವೊಬ್ಬ ಸಂಘ ಸಂಸ್ಥೆಗಳ ಅಧಿಕಾರಿಗಳು ನಮ್ಮ ವೈಯಕ್ತಿಕ ಪ್ರಸಿದ್ಧಿಗಾಗಿ ಎಂದು ಹೇಳಿರುವುದಿಲ್ಲ.

**ಒಟ್ಟು ಮೂರು ಯೋಜನೆಗಳ 193 ಸಂಘ ಸಂಸ್ಥೆಗಳನ್ನು ಸಂಪರ್ಕಿಸಿ,** ಸಂಘ ಸಂಸ್ಥೆಗಳ ಮುಖಾಂತರ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುವ ಉದ್ದೇಶವೇನು ಎಂದು ಎಂದು ಸಂಘ ಸಂಸ್ಥೆಗಳ ಅಧಿಕಾರಿಗಳನ್ನು ಪ್ರಶ್ನಿಸಿದಾಗ **ಶೇ 86.0** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ಕಲೆ ಮತ್ತು ಸಂಸ್ಕೃತಿಯ ಉಳಿವಿಗಾಗಿ ಎಂದು ಹೇಳಿದರೆ, **ಶೇ 19.7** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ನಮ್ಮ ಸಂಘ–ಸಂಸ್ಥೆಯ ಶ್ರೇಯಸ್ಸಿಗಾಗಿ ಎಂದು ಹೇಳಿದ್ದಾರೆ. ಹಾಗೆಯೇ **ಶೇ 19.2 ರಷ್ಟು** ಸಂಘ ಸಂಸ್ಥೆಗಳ ಅಧಿಕಾರಿಗಳು ಕಲಾವಿದರ ಶ್ರೇಯಸ್ಸಿಗಾಗಿ ಎಂದು ಹೇಳಿದ್ದಾರೆ. ಅದೇ ರೀತಿ **ಶೇ 1.0** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ನಮ್ಮ ವೈಯಕ್ತಿಕ ಪ್ರಸಿದ್ಧಿಗಾಗಿ ಎಂದು ತಿಳಿಸಿದ್ದಾರೆ.

**ಕೋಷ್ಟಕ 19: ಸಂಘ ಸಂಸ್ಥೆಗಳು ಆಯೋಜಿಸಿದ್ದ ಕಾರ್ಯಕ್ರಮಗಳು ಮಾಧ್ಯಮಗಳಲ್ಲಿ ಪ್ರಕಟವಾಗಿರುವುದರ ಮಾಹಿತಿ**

| | ವಿವರಗಳು | ಸಾಮಾನ್ಯ ಯೋಜನೆ | ಶೇಕಡಾ | ವಿಶೇಷ ಘಟಕ ಯೋಜನೆ | ಶೇಕಡಾ | ಗಿರಿಜನ ಉಪ ಯೋಜನೆ | ಶೇಕಡಾ | ಒಟ್ಟು ಸಂಘ ಸಂಸ್ಥೆಗಳ ಪ್ರತಿಕ್ರಿಯೆ | ಶೇಕಡಾ |
|---|---|---|---|---|---|---|---|---|---|
| 1 | ದೂರದರ್ಶನದಲ್ಲಿ | 26 | 31 | 14 | 20 | 5 | 12.8 | 45 | 23.3 |
| 2 | ರೇಡಿಯೋಗಳಲ್ಲಿ | 10 | 11.9 | 8 | 11.4 | 5 | 12.8 | 23 | 11.9 |
| 3 | ಪತ್ರಿಕೆಗಳಲ್ಲಿ | 79 | 94 | 66 | 94.3 | 34 | 87.2 | 179 | 92.7 |
| 4 | ಆನ್‌ಲೈನಿನಲ್ಲಿ | 13 | 15.5 | 3 | 4.3 | 2 | 5.1 | 18 | 9.3 |
| **ಒಟ್ಟು** | | **84** | | **70** | | **39** | | **193** | |

Note: Multiple responses, therefore, total may exceed 100 percent.

**ಮೇಲಿನ ಕೋಷ್ಟಕ 19 ರಲ್ಲಿ ಸಾಮಾನ್ಯ ಯೋಜನೆಯ ಒಟ್ಟು 84 ಸಂಘ ಸಂಸ್ಥೆಗಳನ್ನು ಸಂಪರ್ಕಿಸಿ,** ನೀವು ಆಯೋಜಿಸಿದ್ದ ಕಾರ್ಯಕ್ರಮಗಳು ಯಾವ ಮಾಧ್ಯಮದಲ್ಲಿ ಪ್ರಕಟವಾಗಿವೆ ಎಂದು ಅಲ್ಲಿನ ಸಂಘ ಸಂಸ್ಥೆಗಳ ಅಧಿಕಾರಿಗಳನ್ನು ವಿಚಾರಿಸಿದಾಗ, **ಶೇ 94** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ಪತ್ರಿಕೆಗಳಲ್ಲಿ ಪ್ರಕಟವಾಗಿವೆ ಎಂದು ಹೇಳಿದರೆ, **ಶೇ 31**ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ದೂರದರ್ಶನದಲ್ಲಿ ಪ್ರಕಟವಾಗಿವೆ ಎಂದು ಹೇಳಿದ್ದಾರೆ. ಅದೇ ರೀತಿ, **ಶೇ 15.5 ರಷ್ಟು** ಸಂಘ ಸಂಸ್ಥೆಗಳ ಅಧಿಕಾರಿಗಳು

ಆನ್‌ಲೈನ್‌ನಲ್ಲಿ ಪ್ರಕಟವಾಗಿವೆ ಎಂದು ಹೇಳಿದರೆ, **ಶೇ11.9** ರಷ್ಟು ಅಧಿಕಾರಿಗಳು ರೇಡಿಯೋಗಳಲ್ಲಿ ಪ್ರಕಟವಾಗಿವೆ ಎಂದು ಹೇಳಿದ್ದಾರೆ.

**ವಿಶೇಷ ಘಟಕ ಯೋಜನೆಯ ಒಟ್ಟು 70 ಸಂಘ ಸಂಸ್ಥೆಗಳನ್ನು ಸಂಪರ್ಕಿಸಿ,** ನೀವು ಆಯೋಜಿಸಿದ್ದ ಕಾರ್ಯಕ್ರಮಗಳು ಯಾವ ಮಾಧ್ಯಮದಲ್ಲಿ ಪ್ರಕಟವಾಗಿವೆ ಎಂದು ಅಲ್ಲಿನ ಸಂಘ ಸಂಸ್ಥೆಗಳ ಅಧಿಕಾರಿಗಳನ್ನು ಪ್ರಶ್ನಿಸಿದಾಗ, **ಶೇ 94.3** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ಪತ್ರಿಕೆಗಳಲ್ಲಿ ಪ್ರಕಟವಾಗಿವೆ ಎಂದು ಹೇಳಿದರೆ, **ಶೇ20** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ದೂರದರ್ಶನದಲ್ಲಿ ಪ್ರಕಟವಾಗಿವೆ ಎಂದು ಹೇಳಿದ್ದಾರೆ. ಅದೇರೀತಿ, **ಶೇ 11.4** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ರೇಡಿಯೋಗಳಲ್ಲಿ ಪ್ರಕಟವಾಗಿವೆ ಎಂದು ಹೇಳಿದರೆ, ನಂತರ **ಶೇ 4.3 ರಷ್ಟು** ಸಂಘ ಸಂಸ್ಥೆಗಳ ಅಧಿಕಾರಿಗಳು ಆನ್‌ಲೈನ್‌ನಲ್ಲಿ ಪ್ರಕಟವಾಗಿವೆ ಎಂದು ಹೇಳಿದ್ದಾರೆ.

**ಗಿರಿಜನ ಉಪಯೋಜನೆಯ ಒಟ್ಟು 39 ಸಂಘ ಸಂಸ್ಥೆಗಳನ್ನು ಸಂಪರ್ಕಿಸಿ,** ನೀವು ಆಯೋಜಿಸಿದ್ದ ಕಾರ್ಯಕ್ರಮಗಳು ಯಾವ ಮಾಧ್ಯಮದಲ್ಲಿ ಪ್ರಕಟವಾಗಿವೆ ಎಂದು ಅಲ್ಲಿನ ಸಂಘ ಸಂಸ್ಥೆಗಳ ಅಧಿಕಾರಿಗಳನ್ನು ಪ್ರಶ್ನಿಸಿದಾಗ, **ಶೇ 87.2** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ಪತ್ರಿಕೆಗಳಲ್ಲಿ ಪ್ರಕಟವಾಗಿವೆ ಎಂದು ಹೇಳಿದರೆ, **ಶೇ 12.8** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ದೂರದರ್ಶನದಲ್ಲಿ ಪ್ರಕಟವಾಗಿವೆ ಎಂದು ಹೇಳಿದ್ದಾರೆ. ಅದೇರೀತಿ, **ಶೇ 12.8** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ರೇಡಿಯೋಗಳಲ್ಲಿ ಪ್ರಕಟವಾಗಿವೆ ಎಂದು ಹೇಳಿದರೆ, ನಂತರ **ಶೇ 5.1 ರಷ್ಟು** ಸಂಘ ಸಂಸ್ಥೆಗಳ ಅಧಿಕಾರಿಗಳು ಆನ್‌ಲೈನ್‌ನಲ್ಲಿ ಪ್ರಕಟವಾಗಿವೆ ಎಂದು ಹೇಳಿದ್ದಾರೆ.

**ಇಲ್ಲಿನ ಮೂರು ಯೋಜನೆಗಳ ಅಡಿಯಲ್ಲಿನ ಒಟ್ಟು 193 ಸಂಘ ಸಂಸ್ಥೆಗಳಿಗೆ,** ನೀವು ಆಯೋಜಿಸಿದ್ದ ಕಾರ್ಯಕ್ರಮಗಳು ಯಾವ ಮಾಧ್ಯಮದಲ್ಲಿ ಪ್ರಕಟವಾಗಿವೆ ಎಂದು ಅಲ್ಲಿನ ಸಂಘ ಸಂಸ್ಥೆಗಳ ಅಧಿಕಾರಿಗಳನ್ನು ಪ್ರಶ್ನಿಸಿದಾಗ, **ಶೇ 92.7** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ಪತ್ರಿಕೆಗಳಲ್ಲಿ ಪ್ರಕಟವಾಗಿವೆ ಎಂದು ಹೇಳಿದರೆ, **ಶೇ 23.3** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ದೂರದರ್ಶನದಲ್ಲಿ ಪ್ರಕಟವಾಗಿವೆ ಎಂದು ಹೇಳಿದ್ದಾರೆ. ಆದೇರೀತಿ, **ಶೇ 11.9** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ರೇಡಿಯೋಗಳಲ್ಲಿ ಪ್ರಕಟವಾಗಿವೆ ಎಂದು ಹೇಳಿದರೆ, ನಂತರ **ಶೇ 9.3 ರಷ್ಟು** ಸಂಘ ಸಂಸ್ಥೆಗಳ ಅಧಿಕಾರಿಗಳು ಆನ್‌ಲೈನ್‌ನಲ್ಲಿ ಪ್ರಕಟವಾಗಿವೆ ಎಂದು ಹೇಳಿದ್ದಾರೆ.

**ಚರ್ಚೆ;** ಕರ್ನಾಟಕದಲ್ಲಿನ ಸಂಘ ಸಂಸ್ಥೆಗಳು ನಡೆಸಿರುವ ಬಹುತೇಕ ಕಾರ್ಯಕ್ರಮಗಳು ಅತೀ ಹೆಚ್ಚಿನದಾಗಿ ಪತ್ರಿಕೆಗಳಲ್ಲಿ ಪ್ರಕಟವಾಗಿವೆ ಎಂಬುದು ತಿಳಿದು ಬಂದಿದೆ. ಇಂದು ಪತ್ರಿಕೆಗಳು ಓದುಗ ವರ್ಗಕ್ಕೆ ತುಂಬಾ ಹತ್ತಿರವಾಗಿರುವುದು ಕಂಡುಬರುತ್ತದೆ. ಈ ಸಂಘ ಸಂಸ್ಥೆಗಳು ಕರ್ನಾಟಕದಲ್ಲಿನ ದಿನಪತ್ರಿಕೆಗಳ ಜೊತೆ

ಒಳ್ಳೆಯ ಸಂಬಂಧವನ್ನು ಇಟ್ಟುಕೊಂಡಿವೆ. ಹಾಗಾಗಿ ಪತ್ರಿಕೆಗಳು ಇವರು ನಡೆಸಿರುವ ಕಾರ್ಯಕ್ರಮಗಳನ್ನು ಪ್ರಕಟಿಸಿರುವುದು ತಿಳಿಯುತ್ತದೆ.

**ಕೋಷ್ಟಕ 20 : ಸಂಘ ಸಂಸ್ಥೆಗಳ ಮೂಲಕ ಆಯೋಜಿಸುವ ಕಾರ್ಯಕ್ರಮಗಳಿಗೆ ಪ್ರೇಕ್ಷಕರನ್ನು ಸೇರಿಸುವ ರೀತಿ.**

| | ವಿವರಗಳು | ಸಾಮಾನ್ಯ ಯೋಜನೆ | ಶೇಕಡಾ | ವಿಶೇಷ ಘಟಕ ಯೋಜನೆ | ಶೇಕಡಾ | ಗಿರಿಜನ ಉಪ ಯೋಜನೆ | ಶೇಕಡಾ | ಒಟ್ಟು ಸಂಘಸಂಸ್ಥೆಗಳ ಪ್ರತಿಕ್ರಿಯೆ | ಶೇಕಡಾ |
|---|---|---|---|---|---|---|---|---|---|
| 1 | ಕಾರ್ಯಕ್ರಮದ ಬಗ್ಗೆ ಪತ್ರಿಕೆಗಳಲ್ಲಿ ಜಾಹಿರಾತು ನೀಡುವುದರ ಮೂಲಕ | 15 | 17.9 | 18 | 25.7 | 19 | 48.7 | 52 | 26.9 |
| 2 | ಆಮಂತ್ರಣಪತ್ರಿಕೆ ಹಂಚುವುದರ ಮೂಲಕ | 30 | 35.7 | 28 | 40 | 17 | 43.6 | 75 | 38.9 |
| 3 | ಮೌಖಿಕವಾಗಿ ಕರೆಯುವುದರ ಮೂಲಕ | 17 | 20.2 | 19 | 27.1 | 12 | 30.8 | 48 | 24.9 |
| 4 | ಈ ಮೇಲಿನ ಎಲ್ಲವೂ | 52 | 61.9 | 48 | 68.6 | 22 | 56.4 | 122 | 63.2 |
| **ಒಟ್ಟು** | | **84** | | **70** | | **39** | | **193** | |

Note: Multiple responses, therefore, total may exceed 100 percent.

**ಮೇಲಿನ ಕೋಷ್ಟಕ 20ರಲ್ಲಿ ಸಾಮಾನ್ಯ ಯೋಜನೆಯ ಒಟ್ಟು 84 ಸಂಘ ಸಂಸ್ಥೆಗಳನ್ನು ಸಂಪರ್ಕಿಸಿ,** ನೀವು ಆಯೋಜಿಸುವ ಕಾರ್ಯಕ್ರಮಗಳಿಗೆ ಪ್ರೇಕ್ಷಕರನ್ನು ಹೇಗೆ ಸೇರಿಸುತ್ತೀರಾ? ಎಂದು ಅಲ್ಲಿನ ಸಂಘ ಸಂಸ್ಥೆಗಳ ಅಧಿಕಾರಿಗಳನ್ನು ಪ್ರಶ್ನಿಸಿದಾಗ **ಶೇ 61.9 ರಷ್ಟು** ಸಂಘ ಸಂಸ್ಥೆಗಳ ಅಧಿಕಾರಿಗಳು ಮೇಲಿನ ಎಲ್ಲವೂ (ಅಂದರೆ, ಪತ್ರಿಕೆಗಳಲ್ಲಿ ಜಾಹಿರಾತು, ಆಮಂತ್ರಣ ಪತ್ರಿಕೆ, ಮೌಖಿಕವಾಗಿ ಕರೆಯುವುದರ ಮೂಲಕ) ಎಂದು ಹೇಳಿದರೆ, **ಶೇ 35.7** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ಆಮಂತ್ರಣ ಪತ್ರಿಕೆ ಹಂಚುವುದರ ಮೂಲಕ ಎಂದು ಹೇಳಿದ್ದಾರೆ. ಹಾಗೆಯೇ **ಶೇ 20.2** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ಮೌಖಿಕವಾಗಿ ಕರೆಯುವುದರ ಮೂಲಕ ಎಂದು ಹೇಳಿದರೆ. **ಶೇ.17.9** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ಕಾರ್ಯಕ್ರಮದ ಬಗ್ಗೆ ಪತ್ರಿಕೆಗಳಲ್ಲಿ ಜಾಹಿರಾತು ನೀಡುವುದರ ಮೂಲಕ ಎಂದು ಹೇಳಿದ್ದಾರೆ.

**ವಿಶೇಷ ಘಟಕ ಯೋಜನೆಯ ಒಟ್ಟು 70 ಸಂಘ ಸಂಸ್ಥೆಗಳನ್ನು ಸಂಪರ್ಕಿಸಿ,** ನೀವು ಆಯೋಜಿಸುವ ಕಾರ್ಯಕ್ರಮಗಳಿಗೆ ಜನರನ್ನು ಹೇಗೆ ಸೇರಿಸುತ್ತೀರಾ? ಎಂದು ಅಲ್ಲಿನ ಸಂಘ ಸಂಸ್ಥೆಗಳ ಅಧಿಕಾರಿಗಳನ್ನು ಪ್ರಶ್ನಿಸಿದಾಗ **ಶೇ 68.6 ರಷ್ಟು** ಸಂಘ ಸಂಸ್ಥೆಗಳ ಅಧಿಕಾರಿಗಳು ಮೇಲಿನ ಎಲ್ಲವೂ (ಅಂದರೆ, ಪತ್ರಿಕೆಗಳಲ್ಲಿ ಜಾಹಿರಾತು, ಆಮಂತ್ರಣ ಪತ್ರಿಕೆ, ಮೌಖಿಕವಾಗಿ ಕರೆಯುವುದರ ಮೂಲಕ) ಎಂದು ಹೇಳಿದರೆ, **ಶೇ 40** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ಆಮಂತ್ರಣ ಪತ್ರಿಕೆ ಹಂಚುವುದರ ಮೂಲಕ ಎಂದು ಹೇಳಿದ್ದಾರೆ. ನಂತರ **ಶೇ 27.1** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ಮೌಖಿಕವಾಗಿ ಕರೆಯುವುದರ ಮೂಲಕ ಎಂದು

ಹೇಳಿದ್ದಾರೆ. ಅದೇರೀತಿ **ಶೇ 25.7** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ಕಾರ್ಯಕ್ರಮದ ಬಗ್ಗೆ ಪತ್ರಿಕೆಗಳಲ್ಲಿ ಜಾಹಿರಾತು ನೀಡುವುದರ ಮೂಲಕ ಎಂದು ಹೇಳಿದ್ದಾರೆ.

**ಗಿರಿಜನ ಉಪಯೋಜನೆಯ ಒಟ್ಟು 39 ಸಂಘ ಸಂಸ್ಥೆಗಳನ್ನು ಸಂಪರ್ಕಿಸಿ,** ನೀವು ಆಯೋಜಿಸುವ ಕಾರ್ಯಕ್ರಮಗಳಿಗೆ ಜನರನ್ನು ಹೇಗೆ ಸೇರಿಸುತ್ತೀರಾ? ಎಂದು ಅಲ್ಲಿನ ಸಂಘ ಸಂಸ್ಥೆಗಳ ಅಧಿಕಾರಿಗಳನ್ನು ವಿಚಾರಿಸಿದಾಗ **ಶೇ 56.4 ರಷ್ಟು** ಸಂಘ ಸಂಸ್ಥೆಗಳ ಅಧಿಕಾರಿಗಳು ಮೇಲಿನ ಎಲ್ಲವೂ (ಅಂದರೆ, ಪತ್ರಿಕೆಗಳಲ್ಲಿ ಜಾಹಿರಾತು, ಆಮಂತ್ರಣ ಪತ್ರಿಕೆ, ಮೌಖಿಕವಾಗಿ ಕರೆಯುವುದರ ಮೂಲಕ) ಎಂದು ಹೇಳಿದರೆ, **ಶೇ 48.7** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ಆಮಂತ್ರಣ ಪತ್ರಿಕೆ ಹಂಚುವುದರ ಮೂಲಕ ಎಂದು ಹೇಳಿದ್ದಾರೆ. **ಶೇ 43.6** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ಮೌಖಿಕವಾಗಿ ಕರೆಯುವುದರ ಮೂಲಕ ಎಂದು ಹೇಳಿದ್ದಾರೆ. ಹಾಗೆಯೇ **ಶೇ 30.8** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ಕಾರ್ಯಕ್ರಮದ ಬಗ್ಗೆ ಪತ್ರಿಕೆಗಳಲ್ಲಿ ಜಾಹಿರಾತು ನೀಡುವುದರ ಮೂಲಕ ಎಂದು ಹೇಳಿದ್ದಾರೆ.

**ಒಟ್ಟು ಮೂರು ಯೋಜನೆಗಳ 193 ಸಂಘ ಸಂಸ್ಥೆಗಳಿಗೆ,** ನೀವು ಆಯೋಜಿಸುವ ಕಾರ್ಯಕ್ರಮಗಳಿಗೆ ಜನರನ್ನು ಹೇಗೆ ಸೇರಿಸುತ್ತೀರಾ? ಎಂದು ಅಲ್ಲಿನ ಅಲ್ಲಿನ ಸಂಘ ಸಂಸ್ಥೆಗಳ ಅಧಿಕಾರಿಗಳನ್ನು ಪ್ರಶ್ನಿಸಿದಾಗ **ಶೇ 63.2 ರಷ್ಟು** ಸಂಘ ಸಂಸ್ಥೆಗಳ ಅಧಿಕಾರಿಗಳು ಮೇಲಿನ ಎಲ್ಲವೂ (ಅಂದರೆ, ಪತ್ರಿಕೆಗಳಲ್ಲಿ ಜಾಹಿರಾತು, ಆಮಂತ್ರಣ ಪತ್ರಿಕೆ, ಮೌಖಿಕವಾಗಿ ಕರೆಯುವುದರ ಮೂಲಕ) ಎಂದು ಹೇಳಿದರೆ, **ಶೇ 38.9** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ಆಮಂತ್ರಣ ಪತ್ರಿಕೆ ಹಂಚುವುದರ ಮೂಲಕ ಎಂದು ಹೇಳಿದ್ದಾರೆ. ಹಾಗೆಯೇ **ಶೇ 26.9** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ಕಾರ್ಯಕ್ರಮದ ಬಗ್ಗೆ ಪತ್ರಿಕೆಗಳಲ್ಲಿ ಜಾಹಿರಾತು ನೀಡುವುದರ ಮೂಲಕ ಎಂದು ಹೇಳಿದರೆ, **ಶೇ 24.9** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ಮೌಖಿಕವಾಗಿ ಕರೆಯುವುದರ ಮೂಲಕ ಎಂದು ಹೇಳಿದ್ದಾರೆ.

**ಚರ್ಚೆ:** ಸಂಘ ಸಂಸ್ಥೆಗಳು ಆಯೋಜಿಸಿರುವ ಕಾರ್ಯಕ್ರಮಗಳಿಗೆ ಜನರನ್ನ ಸೇರಿಸಲು ಪತ್ರಿಕೆಗಳಲ್ಲಿ ಜಾಹಿರಾತು ಕೊಡುವುದು, ಆಮಂತ್ರಣ ಪತ್ರಿಕೆಗಳನ್ನು ನೀಡುವುದು ಮತ್ತು ಮೌಖಿಕವಾಗಿ ಕರೆಯುವ ಮಾರ್ಗಗಳನ್ನು ಹೆಚ್ಚಿನದಾಗಿ ಅನುಸರಿಸುತ್ತಾರೆ. ಇಂದಿನ ದಿನಗಳಲ್ಲಿ ಸಾರ್ವಜನಿಕವಾಗಿ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಜನರನ್ನು ಸೇರಿಸುವುದು ಸ್ವಲ್ಪ ಕಷ್ಟದ ಕೆಲಸವೆಂದೇ ಹೇಳಬಹುದು. ಏಕೆಂದರೆ ಇಂದು ಪ್ರತಿಯೊಂದು ಮನೆಯಲ್ಲಿನ ಸದಸ್ಯರ ಮೇಲೆ ದೂರದರ್ಶನ ಮತ್ತು ಅದರಲ್ಲಿ ಬರುವ ಖಾಸಗಿ ಚಾನಲ್‌ಗಳ ಪ್ರಭಾವಗಳು ಜಾಸ್ತಿಯಾಗಿವೆ. ಆದ್ದರಿಂದ ಕಾರ್ಯಕ್ರಮಗಳಿಗೆ ಜನರನ್ನು ಸೇರಿಸುವುದು ಸವಾಲಿನ ಕೆಲಸವಾಗಿದೆ. ಈ ಹಿನ್ನೆಲೆಯಲ್ಲಿ ಸಂಘ ಸಂಸ್ಥೆಗಳು ಆಯೋಜಿಸಿರುವ ಕಾರ್ಯಕ್ರಮಗಳಿಗೆ ಪ್ರೇಕ್ಷಕರನ್ನು ಮೇಲಿನ ಮಾರ್ಗಗಳನ್ನು ಅನುಸರಿಸಿ ತುಂಬಾ ಜಾಣತನದಿಂದ ಸೇರಿಸಿರುತ್ತಾರೆ.

**ಕೋಷ್ಟಕ 21: ಸಂಘ ಸಂಸ್ಥೆಗಳಿಂದ ಆಯೋಜಿಸುವ ಕಾರ್ಯಕ್ರಮಗಳಿಗೆ ವೇದಿಕೆಗಳನ್ನು ಆಯ್ಕೆ ಮಾಡಿಕೊಳ್ಳುವುದು**

| | ವಿವರಗಳು | ಸಾಮಾನ್ಯ ಯೋಜನೆ | ಶೇಕಡಾ | ವಿಶೇಷ ಘಟಕ ಯೋಜನೆ | ಶೇಕಡಾ | ಗಿರಿಜನ ಉಪ ಯೋಜನೆ | ಶೇಕಡಾ | ಒಟ್ಟು ಸಂಘಸಂಸ್ಥೆಗಳ ಪ್ರತಿಕ್ರಿಯೆ | ಶೇಕಡಾ |
|---|---|---|---|---|---|---|---|---|---|
| 1 | ಸಾರ್ವಜನಿಕವಾಗಿ ಈಗಾಗಲೇ ಇರುವಂತಹ ವೇದಿಕೆಯನ್ನು ಆಯ್ಕೆ ಮಾಡಿ ಅದಕ್ಕೆ ಅಲಂಕಾರ ಮಾಡುವುದು. | 53 | 63.1 | 44 | 62.9 | 21 | 53.8 | 118 | 61.1 |
| 2 | ಸರ್ಕಾರಿಕಟ್ಟಡಗಳಲ್ಲಿರುವ ವೇದಿಕೆಗಳನ್ನು ಬಳಸಿಕೊಳ್ಳುವುದು. | 10 | 11.9 | 20 | 28.6 | 06 | 15.4 | 36 | 18.7 |
| 3 | ಒಂದುಜಾಗವನ್ನು ಪರಿಗಣಿಸಿ ಅಲ್ಲಿ ವೇದಿಕೆಯನ್ನು ಸಜ್ಜುಗೊಳಿಸುವುದು. | 16 | 19 | 15 | 21.4 | 11 | 28.2 | 42 | 21.8 |
| 4 | ಖಾಸಗಿವಲಯದಲ್ಲಿನ ವೇದಿಕೆಗಳನ್ನು ಬಳಸಿಕೊಳ್ಳುವುದು. | 29 | 34.5 | 22 | 31.4 | 14 | 35.9 | 65 | 33.7 |
| 5 | ಇತರೆ (ಸಮುದಾಯ ಭವನ, ಸ್ವಂತ ವೇದಿಕೆ) | 03 | 3.6 | 02 | 2.9 | 02 | 5.1 | 07 | 3.6 |
| **ಒಟ್ಟು** | | **84** | | **70** | | **39** | | **193** | |

Note: Multiple responses, therefore, total may exceed 100 percent.

**ಮೇಲಿನ ಕೋಷ್ಟಕ 21 ರಲ್ಲಿ ಸಾಮಾನ್ಯ ಯೋಜನೆಯ ಒಟ್ಟು 84 ಸಂಘ ಸಂಸ್ಥೆಗಳನ್ನು ಸಂಪರ್ಕಿಸಿ,** ನೀವು ಕಾರ್ಯಕ್ರಮಗಳನ್ನು ನಡೆಸಲು ಎಂತಹ ವೇದಿಕೆಯನ್ನು ಆಯ್ಕೆ ಮಾಡಿಕೊಳ್ಳುತ್ತೀರಾ? ಎಂದು ಸಂಘ ಸಂಸ್ಥೆಗಳ ಅಧಿಕಾರಿಗಳನ್ನು ಪ್ರಶ್ನಿಸಿದಾಗ, **ಶೇ 63.1** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ಸಾರ್ವಜನಿಕವಾಗಿ ಈಗಾಗಲೇ ಇರುವಂತಹ ವೇದಿಕೆಯನ್ನು ಆಯ್ಕೆ ಮಾಡಿ ಅದಕ್ಕೆ ಅಲಂಕಾರ ಮಾಡುವುದು ಎಂದು ಹೇಳಿದರೆ, **ಶೇ 34.5 ರಷ್ಟು** ಸಂಘ ಸಂಸ್ಥೆಗಳ ಅಧಿಕಾರಿಗಳು ಖಾಸಗಿ ವಲಯದಲ್ಲಿನ ವೇದಿಕೆಗಳನ್ನು ಬಳಸಿಕೊಳ್ಳುತ್ತೇವೆ ಎಂದು ಹೇಳಿದ್ದಾರೆ. ಅದೇರೀತಿ, **ಶೇ 19** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ಒಂದು ಜಾಗವನ್ನು ಪರಿಗಣಿಸಿ ಅಲ್ಲಿ ವೇದಿಕೆಯನ್ನು ಸಜ್ಜುಗೊಳಿಸುತ್ತೇವೆ ಎಂದು ಹೇಳಿದರೆ, **ಶೇ 11.9** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ಸರ್ಕಾರಿ ಕಟ್ಟಡಗಳಲ್ಲಿರುವ ವೇದಿಕೆಗಳನ್ನು ಬಳಸಿಕೊಳ್ಳುತ್ತೇವೆ ಎಂದು ಹೇಳಿದ್ದಾರೆ. ನಂತರ **ಶೇ 3.6 ರಷ್ಟು** ಸಂಘ ಸಂಸ್ಥೆಗಳ ಅಧಿಕಾರಿಗಳು ಇತರೆ (ಸಮುದಾಯ ಭವನ, ಸ್ವಂತ ವೇದಿಕೆ) ಕಟ್ಟಡಗಳನ್ನು ಬಳಸಿಕೊಳ್ಳುತ್ತೇವೆ ಎಂದು ಹೇಳಿದ್ದಾರೆ.

**ವಿಶೇಷ ಘಟಕ ಯೋಜನೆಯ ಒಟ್ಟು 70 ಸಂಘ ಸಂಸ್ಥೆಗಳನ್ನು ಸಂಪರ್ಕಿಸಿ,** ನೀವು ಕಾರ್ಯಕ್ರಮಗಳನ್ನು ನಡೆಸಲು ಎಂತಹ ವೇದಿಕೆಯನ್ನು ಆಯ್ಕೆ ಮಾಡಿಕೊಳ್ಳುತ್ತೀರಾ? ಎಂದು ಸಂಘ ಸಂಸ್ಥೆಗಳ ಅಧಿಕಾರಿಗಳನ್ನು

ಪ್ರಶ್ನಿಸಿದಾಗ, **ಶೇ 62.9** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ಸಾರ್ವಜನಿಕವಾಗಿ ಈಗಾಗಲೇ ಇರುವಂತಹ ವೇದಿಕೆಯನ್ನು ಆಯ್ಕೆ ಮಾಡಿ ಅದಕ್ಕೆ ಅಲಂಕಾರ ಮಾಡುವುದು ಎಂದು ಹೇಳಿದರೆ, **ಶೇ 31.4 ರಷ್ಟು** ಸಂಘ ಸಂಸ್ಥೆಗಳ ಅಧಿಕಾರಿಗಳು ಖಾಸಗಿ ವಲಯದಲ್ಲಿನ ವೇದಿಕೆಗಳನ್ನು ಬಳಸಿಕೊಳ್ಳುತ್ತೇವೆ ಎಂದು ಹೇಳಿದ್ದಾರೆ. ಅದೇರೀತಿ, **ಶೇ 28.6** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ಸರ್ಕಾರಿ ಕಟ್ಟಡಗಳಲ್ಲಿರುವ ವೇದಿಕೆಗಳನ್ನು ಬಳಸಿಕೊಳ್ಳುತ್ತೇವೆ ಎಂದು ಹೇಳಿದರೆ, **ಶೇ 21.4** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ಒಂದು ಜಾಗವನ್ನು ಪರಿಗಣಿಸಿ ಅಲ್ಲಿ ವೇದಿಕೆಯನ್ನು ಸಜ್ಜುಗೊಳಿಸುತ್ತೇವೆ ಎಂದು ಹೇಳಿದ್ದಾರೆ. ನಂತರ **ಶೇ 2.9 ರಷ್ಟು** ಸಂಘ ಸಂಸ್ಥೆಗಳ ಅಧಿಕಾರಿಗಳು ಇತರೆ (ಸಮುದಾಯ ಭವನ, ಸ್ವಂತ ವೇದಿಕೆ) ಕಟ್ಟಡಗಳನ್ನು ಬಳಸಿಕೊಳ್ಳುತ್ತೇವೆ ಎಂದು ಹೇಳಿದ್ದಾರೆ.

**ಗಿರಿಜನ ಉಪಯೋಜನೆಯ ಒಟ್ಟು 39 ಸಂಘ ಸಂಸ್ಥೆಗಳನ್ನು ಸಂಪರ್ಕಿಸಿ,** ನೀವು ಕಾರ್ಯಕ್ರಮಗಳನ್ನು ನಡೆಸಲು ಎಂತಹ ವೇದಿಕೆಯನ್ನು ಆಯ್ಕೆ ಮಾಡಿಕೊಳ್ಳುತ್ತೀರಾ ? ಎಂದು ಸಂಘ ಸಂಸ್ಥೆಗಳ ಅಧಿಕಾರಿಗಳನ್ನು ಪ್ರಶ್ನಿಸಿದಾಗ, **ಶೇ 53.8** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ಸಾರ್ವಜನಿಕವಾಗಿ ಈಗಾಗಲೇ ಇರುವಂತಹ ವೇದಿಕೆಯನ್ನು ಆಯ್ಕೆ ಮಾಡಿ ಅದಕ್ಕೆ ಅಲಂಕಾರ ಮಾಡುವುದು ಎಂದು ಹೇಳಿದರೆ, **ಶೇ 35.9 ರಷ್ಟು** ಸಂಘ ಸಂಸ್ಥೆಗಳ ಅಧಿಕಾರಿಗಳು ಖಾಸಗಿ ವಲಯದಲ್ಲಿನ ವೇದಿಕೆಗಳನ್ನು ಬಳಸಿಕೊಳ್ಳುತ್ತೇವೆ ಎಂದು ಹೇಳಿದ್ದಾರೆ. ಅದೇರೀತಿ, **ಶೇ 28.2** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ಒಂದು ಜಾಗವನ್ನು ಪರಿಗಣಿಸಿ ಅಲ್ಲಿ ವೇದಿಕೆಯನ್ನು ಸಜ್ಜುಗೊಳಿಸುತ್ತೇವೆ ಎಂದು ಹೇಳಿದರೆ, **ಶೇ15.4** ರಷ್ಟು ಪ್ರತಿಕ್ರಿಯಾದಾರರು ಸರ್ಕಾರಿ ಕಟ್ಟಡಗಳಲ್ಲಿರುವ ವೇದಿಕೆಗಳನ್ನು ಬಳಸಿಕೊಳ್ಳುತ್ತೇವೆ ಎಂದು ಹೇಳಿದ್ದಾರೆ. ನಂತರ **ಶೇ 5.1 ರಷ್ಟು** ಸಂಘ ಸಂಸ್ಥೆಗಳ ಅಧಿಕಾರಿಗಳು ಇತರೆ (ಸಮುದಾಯ ಭವನ, ಸ್ವಂತ ವೇದಿಕೆ) ಕಟ್ಟಡಗಳನ್ನು ಬಳಸಿಕೊಳ್ಳುತ್ತೇವೆ ಎಂದು ಹೇಳಿದ್ದಾರೆ.

**ಒಟ್ಟು ಮೂರು ಯೋಜನೆಗಳ 193 ಸಂಘ ಸಂಸ್ಥೆಗಳಿಗೆ,** ನೀವು ಕಾರ್ಯಕ್ರಮಗಳನ್ನು ನಡೆಸಲು ಯಾವ ರೀತಿಯ ವೇದಿಕೆಯನ್ನು ಆಯ್ಕೆ ಮಾಡಿಕೊಳ್ಳುತ್ತೀರಾ? ಎಂದು ಸಂಘ ಸಂಸ್ಥೆಗಳ ಅಧಿಕಾರಿಗಳನ್ನು ಪ್ರಶ್ನಿಸಿದಾಗ, **ಶೇ 61.1** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ಸಾರ್ವಜನಿಕವಾಗಿ ಈಗಾಗಲೇ ಇರುವಂತಹ ವೇದಿಕೆಯನ್ನು ಆಯ್ಕೆ ಮಾಡಿ ಅದಕ್ಕೆ ಅಲಂಕಾರ ಮಾಡುವುದು ಎಂದು ಹೇಳಿದರೆ, **ಶೇ 33.7 ರಷ್ಟು** ಸಂಘ ಸಂಸ್ಥೆಗಳ ಅಧಿಕಾರಿಗಳು ಖಾಸಗಿ ವಲಯದಲ್ಲಿನ ವೇದಿಕೆಗಳನ್ನು ಬಳಸಿಕೊಳ್ಳುತ್ತೇವೆ ಎಂದು ಹೇಳಿದ್ದಾರೆ. ಅದೇರೀತಿ, **ಶೇ 21.8** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ಒಂದು ಜಾಗವನ್ನು ಪರಿಗಣಿಸಿ ಅಲ್ಲಿ ವೇದಿಕೆಯನ್ನು ಸಜ್ಜುಗೊಳಿಸುತ್ತೇವೆ ಎಂದು ಹೇಳಿದರೆ, **ಶೇ 18.7** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ಸರ್ಕಾರಿ ಕಟ್ಟಡಗಳಲ್ಲಿರುವ ವೇದಿಕೆಗಳನ್ನು ಬಳಸಿಕೊಳ್ಳುತ್ತೇವೆ ಎಂದು ಹೇಳಿದ್ದಾರೆ. ನಂತರ **ಶೇ 3.6 ರಷ್ಟು** ಸಂಘ ಸಂಸ್ಥೆಗಳ ಅಧಿಕಾರಿಗಳು ಇತರೆ (ಸಮುದಾಯ ಭವನ, ಸ್ವಂತ ವೇದಿಕೆ) ಕಟ್ಟಡಗಳನ್ನು ಬಳಸಿಕೊಳ್ಳುತ್ತೇವೆ ಎಂದು ಹೇಳಿದ್ದಾರೆ.

**ಚರ್ಚೆ;** ಸಂಘ ಸಂಸ್ಥೆಗಳು ಕಾರ್ಯಕ್ರಮಗಳನ್ನು ನಡೆಸಲು ಅತೀ ಹೆಚ್ಚಿನದಾಗಿ ಸಾರ್ವಜನಿಕವಾಗಿ ಈಗಾಗಲೇ ಇರುವಂತಹ ವೇದಿಕೆಯನ್ನು ಆಯ್ಕೆ ಮಾಡಿಕೊಡು ಆ ವೇದಿಕೆಗಳಿಗೆ ಅಲಂಕಾರ ಮಾಡಿ ಕಾರ್ಯಕ್ರಮ ನಡೆಸಿರುತ್ತಾರೆ.

**ಕೋಷ್ಟಕ 22: ಸಂಘ ಸಂಸ್ಥೆಗಳ ಹಣವನ್ನು ಸದ್ಬಳಕೆ ಮಾಡಿಕೊಳ್ಳುವುದರ ವಿವರ**

| | ವಿವರಗಳು | ಸಾಮಾನ್ಯ ಯೋಜನೆ | ಶೇಕಡಾ | ವಿಶೇಷ ಘಟಕ ಯೋಜನೆ | ಶೇಕಡಾ | ಗಿರಿಜನ ಉಪ ಯೋಜನೆ | ಶೇಕಡಾ | ಒಟ್ಟು ಸಂಘಸಂಸ್ಥೆಗಳ ಪ್ರತಿಕ್ರಿಯೆ | ಶೇಕಡಾ |
|---|---|---|---|---|---|---|---|---|---|
| 1 | ಒಳ್ಳೆಯ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುವುದರ ಮೂಲಕ ಸದ್ಬಳಕೆ ಮಾಡಿಕೊಳ್ಳಲಾಗಿದೆ. | 54 | 64.3 | 54 | 77.1 | 27 | 69.2 | 135 | 69.9 |
| 2 | ಸಾರ್ವಜನಿಕರಿಗೆ ಅರಿವು ಮೂಡಿಸುವುದರ ಮುಖಾಂತರ ಹಣವನ್ನು ಸದ್ಬಳಕೆ ಮಾಡಿಕೊಳ್ಳಲಾಗಿದೆ. | 18 | 21.4 | 18 | 25.7 | 13 | 33.3 | 49 | 25.4 |
| 3 | ವಿಚಾರ ಸಂಕಿರಣಗಳನ್ನು ಹಮ್ಮಿಕೊಳ್ಳುವುದರ ಮೂಲಕ ಹಣವನ್ನು ಸದ್ಬಳಕೆ ಮಾಡಿಕೊಳ್ಳಲಾಗಿದೆ. | 12 | 14.3 | 09 | 12.9 | 05 | 12.8 | 26 | 13.5 |
| 4 | ಕಲಾವಿದರಿಗೆ ಪ್ರೋತ್ಸಾಹ ನೀಡುವುದರ ಮೂಲಕ ಹಣವನ್ನು ಸದ್ಬಳಕೆ ಮಾಡಿಕೊಳ್ಳಲಾಗಿದೆ. | 19 | 22.6 | 13 | 18.6 | 04 | 10.3 | 36 | 18.7 |
| 5 | ಮೇಲಿನ ಎಲ್ಲವು | 28 | 33.3 | 13 | 18.6 | 04 | 10.3 | 45 | 23.3 |
| | **ಒಟ್ಟು** | **84** | | **70** | | **39** | | **193** | |

Note: Multiple responses, therefore, total may exceed 100 percent.

**ಮೇಲಿನ ಕೋಷ್ಟಕ 22 ರಲ್ಲಿ ಸಾಮಾನ್ಯ ಯೋಜನೆಯ ಒಟ್ಟು 84 ಸಂಘ ಸಂಸ್ಥೆಗಳನ್ನು ಸಂಪರ್ಕಿಸಿ,** ನೀವು ಹಣವನ್ನು ಹೇಗೆ ಸದ್ಬಳಕೆ ಮಾಡಿಕೊಂಡಿದ್ದೀರಾ ? ಎಂದು ಸಂಘ ಸಂಸ್ಥೆಗಳ ಅಧಿಕಾರಿಗಳನ್ನು ವಿಚಾರಣೆ ಮಾಡಿದಾಗ **ಶೇ 64.3** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ಒಳ್ಳೆಯ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುವುದರ ಮೂಲಕ ಸದ್ಬಳಕೆ ಮಾಡಿಕೊಳ್ಳಲಾಗಿದೆ ಎಂದು ಹೇಳಿದರೆ, **ಶೇ 21.4** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ಸಾರ್ವಜನಿಕರಿಗೆ ಅರಿವು ಮೂಡಿಸುವುದರ ಮುಖಾಂತರ ಹಣವನ್ನು ಸದ್ಬಳಕೆ ಮಾಡಿಕೊಳ್ಳಲಾಗಿದೆ ಎಂದು ಹೇಳಿದ್ದಾರೆ. ಹಾಗೆಯೇ **ಶೇ 14.3** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ವಿಚಾರ ಸಂಕಿರಣಗಳನ್ನು ಹಮ್ಮಿಕೊಳ್ಳುವುದರ ಮೂಲಕ ಹಣವನ್ನು ಸದ್ಬಳಕೆ ಮಾಡಿಕೊಳ್ಳಲಾಗಿದೆ ಎಂದು ಹೇಳಿದ್ದಾರೆ. ನಂತರ **ಶೇ 22.6 ರಷ್ಟು** ಸಂಘ ಸಂಸ್ಥೆಗಳ ಅಧಿಕಾರಿಗಳು ಕಲಾವಿದರಿಗೆ ಪ್ರೋತ್ಸಾಹ ನೀಡುವುದರ ಮೂಲಕ ಹಣವನ್ನು ಸದ್ಬಳಕೆ ಮಾಡಿಕೊಳ್ಳಲಾಗಿದೆ ಎಂದು

ಹೇಳಿದ್ದಾರೆ. ಅದೇರೀತಿ, **ಶೇ 33.3 ರಷ್ಟು** ಸಂಘ ಸಂಸ್ಥೆಗಳ ಅಧಿಕಾರಿಗಳು ಮೇಲಿನ ಎಲ್ಲವೂ (ಅಂದರೆ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುವುದು, ಸಾರ್ವಜನಿಕರಿಗೆ ಅರಿವು ಮೂಡಿಸುವುದು, ವಿಚಾರ ಸಂಕಿರಣಗಳನ್ನು ಏರ್ಪಡಿಸುವುದು, ಕಲಾವಿದರಿಗೆ ಪ್ರೋತ್ಸಾಹ ನೀಡುವುದು) ಎಂದು ಹೇಳಿದ್ದಾರೆ.

**ವಿಶೇಷ ಘಟಕ ಯೋಜನೆಯ ಒಟ್ಟು 70 ಸಂಘ ಸಂಸ್ಥೆಗಳನ್ನು ಸಂಪರ್ಕಿಸಿ,** ನೀವು ಹಣವನ್ನು ಹೇಗೆ ಸದ್ಬಳಕೆ ಮಾಡಿಕೊಂಡಿದ್ದೀರಾ? ಎಂದು ಸಂಘ ಸಂಸ್ಥೆಗಳ ಅಧಿಕಾರಿಗಳನ್ನು ಪ್ರಶ್ನಿಸಿದಾಗ, **ಶೇ 77.1**ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ಒಳ್ಳೆಯ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುವುದರ ಮೂಲಕ ಸದ್ಬಳಕೆ ಮಾಡಿಕೊಳ್ಳಲಾಗಿದೆ ಎಂದು ಹೇಳಿದರೆ, **ಶೇ 25.7** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ಸಾರ್ವಜನಿಕರಿಗೆ ಅರಿವು ಮೂಡಿಸುವುದರ ಮುಖಾಂತರ ಹಣವನ್ನು ಸದ್ಬಳಕೆ ಮಾಡಿಕೊಳ್ಳಲಾಗಿದೆ ಎಂದು ಹೇಳಿದ್ದಾರೆ. ಹಾಗೆಯೇ **ಶೇ 12.9** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ವಿಚಾರ ಸಂಕಿರಣಗಳನ್ನು ಹಮ್ಮಿಕೊಳ್ಳುವುದರ ಮೂಲಕ ಹಣವನ್ನು ಸದ್ಬಳಕೆ ಮಾಡಿಕೊಳ್ಳಲಾಗಿದೆ ಎಂದು ಹೇಳಿದ್ದಾರೆ. ನಂತರ **ಶೇ 18.6 ರಷ್ಟು** ಸಂಘ ಸಂಸ್ಥೆಗಳ ಅಧಿಕಾರಿಗಳು ಕಲಾವಿದರಿಗೆ ಪ್ರೋತ್ಸಾಹ ನೀಡುವುದರ ಮೂಲಕ ಹಣವನ್ನು ಸದ್ಬಳಕೆ ಮಾಡಿಕೊಳ್ಳಲಾಗಿದೆ ಎಂದು ಹೇಳಿದ್ದಾರೆ. ಅದೇರೀತಿ **ಶೇ 18.6 ರಷ್ಟು** ಸಂಘ ಸಂಸ್ಥೆಗಳ ಅಧಿಕಾರಿಗಳು ಮೇಲಿನ ಎಲ್ಲವೂ (ಅಂದರೆ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುವುದು, ಸಾರ್ವಜನಿಕರಿಗೆ ಅರಿವು ಮೂಡಿಸುವುದು, ವಿಚಾರ ಸಂಕಿರಣಗಳನ್ನು ಏರ್ಪಡಿಸುವುದು, ಕಲಾವಿದರಿಗೆ ಪ್ರೋತ್ಸಾಹ ನೀಡುವುದು) ಎಂದು ಹೇಳಿದ್ದಾರೆ.

**ಗಿರಿಜನ ಉಪಯೋಜನೆಯ ಒಟ್ಟು 39 ಸಂಘ ಸಂಸ್ಥೆಗಳನ್ನು ಸಂಪರ್ಕಿಸಿ,** ನೀವು ಹಣವನ್ನು ಹೇಗೆ ಸದ್ಬಳಕೆ ಮಾಡಿಕೊಂಡಿದ್ದೀರಾ? ಎಂದು ಸಂಘ ಸಂಸ್ಥೆಗಳ ಅಧಿಕಾರಿಗಳನ್ನು ವಿಚಾರಣೆ ಮಾಡಿದಾಗ, **ಶೇ 69.2** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ಒಳ್ಳೆಯ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುವುದರ ಮೂಲಕ ಸದ್ಬಳಕೆ ಮಾಡಿಕೊಳ್ಳಲಾಗಿದೆ ಎಂದು ಹೇಳಿದರೆ, **ಶೇ 33.3** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ಸಾರ್ವಜನಿಕರಿಗೆ ಅರಿವು ಮೂಡಿಸುವುದರ ಮುಖಾಂತರ ಹಣವನ್ನು ಸದ್ಬಳಕೆ ಮಾಡಿಕೊಳ್ಳಲಾಗಿದೆ ಎಂದು ಹೇಳಿದ್ದಾರೆ. ಹಾಗೆಯೇ **ಶೇ 12.8** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ವಿಚಾರ ಸಂಕಿರಣಗಳನ್ನು ಹಮ್ಮಿಕೊಳ್ಳುವುದರ ಮೂಲಕ ಹಣವನ್ನು ಸದ್ಬಳಕೆ ಮಾಡಿಕೊಳ್ಳಲಾಗಿದೆ ಎಂದು ಹೇಳಿದ್ದಾರೆ. ನಂತರ **ಶೇ 10.3 ರಷ್ಟು** ಸಂಘ ಸಂಸ್ಥೆಗಳ ಅಧಿಕಾರಿಗಳು ಕಲಾವಿದರಿಗೆ ಪ್ರೋತ್ಸಾಹ ನೀಡುವುದರ ಮೂಲಕ ಹಣವನ್ನು ಸದ್ಬಳಕೆ ಮಾಡಿಕೊಳ್ಳಲಾಗಿದೆ ಎಂದು ಹೇಳಿದ್ದಾರೆ. ಅದೇರೀತಿ, **ಶೇ 10.3 ರಷ್ಟು** ಸಂಘ ಸಂಸ್ಥೆಗಳ ಅಧಿಕಾರಿಗಳು ಮೇಲಿನ ಎಲ್ಲವೂ (ಅಂದರೆ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುವುದು, ಸಾರ್ವಜನಿಕರಿಗೆ ಅರಿವು ಮೂಡಿಸುವುದು, ವಿಚಾರ ಸಂಕಿರಣಗಳನ್ನು ಏರ್ಪಡಿಸುವುದು, ಕಲಾವಿದರಿಗೆ ಪ್ರೋತ್ಸಾಹ ನೀಡುವುದು) ಎಂದು ಹೇಳಿದ್ದಾರೆ.

**ಒಟ್ಟು ಮೂರು ಯೋಜನೆಗಳ 193 ಸಂಘ ಸಂಸ್ಥೆಗಳಿಗೆ,** ನೀವು ಹಣವನ್ನು ಹೇಗೆ ಸದ್ಬಳಕೆ ಮಾಡಿಕೊಂಡಿದ್ದೀರಾ? ಎಂದು ಸಂಘ ಸಂಸ್ಥೆಗಳ ಅಧಿಕಾರಿಗಳನ್ನು ವಿಚಾರಣೆ ಮಾಡಿದಾಗ **ಶೇ 69.9** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ಒಳ್ಳೆಯ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುವುದರ ಮೂಲಕ ಸದ್ಬಳಕೆ ಮಾಡಿಕೊಳ್ಳಲಾಗಿದೆ ಎಂದು ಹೇಳಿದರೆ, **ಶೇ 25.4** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ಸಾರ್ವಜನಿಕರಿಗೆ ಅರಿವು ಮೂಡಿಸುವುದರ ಮುಖಾಂತರ ಹಣವನ್ನು ಸದ್ಬಳಕೆ ಮಾಡಿಕೊಳ್ಳಲಾಗಿದೆ ಎಂದು ಹೇಳಿದ್ದಾರೆ. ಹಾಗೆಯೆ **ಶೇ 13.5 ರಷ್ಟು** ಸಂಘ ಸಂಸ್ಥೆಗಳ ಅಧಿಕಾರಿಗಳು ಕಲಾವಿದರಿಗೆ ಪ್ರೋತ್ಸಾಹ ನೀಡುವುದರ ಮೂಲಕ ಹಣವನ್ನು ಸದ್ಬಳಕೆ ಮಾಡಿಕೊಳ್ಳಲಾಗಿದೆ ಎಂದು ಹೇಳಿದರೆ, **ಶೇ 18.7** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ವಿಚಾರ ಸಂಕಿರಣಗಳನ್ನು ಹಮ್ಮಿಕೊಳ್ಳುವುದರ ಮೂಲಕ ಹಣವನ್ನು ಸದ್ಬಳಕೆ ಮಾಡಿಕೊಳ್ಳಲಾಗಿದೆ ಎಂದು ಹೇಳಿದ್ದಾರೆ. ನಂತರ ಅದೇರೀತಿ, **ಶೇ 23.3 ರಷ್ಟು** ಸಂಘ ಸಂಸ್ಥೆಗಳ ಅಧಿಕಾರಿಗಳು ಮೇಲಿನ ಎಲ್ಲವೂ (ಅಂದರೆ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುವುದು, ಸಾರ್ವಜನಿಕರಿಗೆ ಅರಿವು ಮೂಡಿಸುವುದು, ವಿಚಾರ ಸಂಕಿರಣಗಳನ್ನು ಏರ್ಪಡಿಸುವುದು, ಕಲಾವಿದರಿಗೆ ಪ್ರೋತ್ಸಾಹ ನೀಡುವುದು) ಎಂದು ಹೇಳಿದ್ದಾರೆ.

**ಚರ್ಚೆ:** ಸಂಘ ಸಂಸ್ಥೆಗಳು ಹೆಚ್ಚಿನದಾಗಿ ಒಳ್ಳೆಯ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುವುದರ ಮೂಲಕ ಧನಸಹಾಯವನ್ನು ಸದ್ಬಳಕೆ ಮಾಡಿಕೊಂಡಿದ್ದಾರೆ.

**ಕೋಷ್ಟಕ 23 : ಹೆಚ್ಚಿನ ಪ್ರೋತ್ಸಾಹ ಪಡೆಯುವ ಕಲಾಪ್ರಕಾರಗಳ ವಿವರ**

| | **ವಿವರಗಳು** | **ಸಾಮಾನ್ಯ ಯೋಜನೆ** | ಶೇಕಡಾ | **ವಿಶೇಷ ಘಟಕ ಯೋಜನೆ** | ಶೇಕಡಾ | **ಗಿರಿಜನ ಉಪ ಯೋಜನೆ** | ಶೇಕಡಾ | **ಒಟ್ಟು ಸಂಘಸಂಸ್ಥೆಗಳ ಪ್ರತಿಕ್ರಿಯೆ** | ಶೇಕಡಾ |
|---|---|---|---|---|---|---|---|---|---|
| 1 | ಜಾನಪದ | 07 | 08.33 | 39 | 55.71 | 12 | 30.76 | 58 | 30.05 |
| 2 | ನೃತ್ಯ | 06 | 07.14 | 03 | 04.28 | 04 | 10.25 | 13 | 06.73 |
| 3 | ನಾಟಕ | 13 | 15.47 | 10 | 14.28 | 10 | 25.64 | 33 | 17.09 |
| 4 | ಸಂಗೀತ | 15 | 17.85 | 10 | 14.28 | 12 | 30.76 | 37 | 19.17 |
| **5** | ಯಕ್ಷಗಾನ/ ಬಯಲಾಟ/ಗೊಂಬೆ ಪ್ರದರ್ಶನ | 06 | 07.14 | 04 | 05.71 | 01 | 09.00 | 11 | 05.69 |
| **6** | ಸಾಹಿತ್ಯ | 02 | 02.38 | 02 | 02.85 | 00 | 00.00 | 04 | 02.07 |
| **7** | ಚಿತ್ರಕಲೆ | 04 | 04.76 | 00 | 00.00 | 00 | 00.00 | 04 | 02.07 |
| **8** | ಸಂಕೀರ್ಣ/ಜಾಗೃತಿ | 31 | 36.90 | 02 | 02.85 | 00 | 00.00 | 33 | 17.09 |
| | **ಒಟ್ಟು** | **84** | | **70** | | **39** | | **193** | |

Note: Multiple responses, therefore, total may exceed 100 percent.

**ಮೇಲಿನ ಕೋಷ್ಟಕ 23 ರಲ್ಲಿ** ಸಾಮಾನ್ಯ ಯೋಜನೆಯ **ಒಟ್ಟು 84** ಸಂಘ ಸಂಸ್ಥೆಗಳನ್ನು ಸಂಪರ್ಕಿಸಿ, ಯಾವ ಕಲಾಪ್ರಕಾರಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡಿದ್ದೀರಾ ಎಂದು ಸಂಘ ಸಂಸ್ಥೆಗಳ ಅಧಿಕಾರಿಗಳನ್ನು ವಿಚಾರಣೆ ಮಾಡಿದಾಗ **ಶೇ 36.90** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ಸಂಕೀರ್ಣ/ಜಾಗೃತಿಗೆ ಹೆಚ್ಚಿನ ಪ್ರೋತ್ಸಾಹ ನೀಡಿದ್ದೇವೆ ಎಂದು ಹೇಳಿದರೆ **ಶೇ 17.85 ರಷ್ಟು** ಸಂಘ ಸಂಸ್ಥೆಗಳ ಅಧಿಕಾರಿಗಳು ಸಂಗೀತಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಿರುತ್ತೇವೆ ಎಂದು ಹೇಳಿರುತ್ತಾರೆ. ಹಾಗೆಯೇ **ಶೇ 15.47** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ನಾಟಕ ಕ್ಷೇತ್ರಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಿದ್ದೇವೆ ಎಂದು ಹೇಳಿರುತ್ತಾರೆ. ಹಾಗೆಯೇ **ಶೇ 8.33** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ಜಾನಪದ ಕಲಾಪ್ರಕಾರಗಳಿಗೆ, **ಶೇ 7.14 ರಷ್ಟು** ಸಂಘ ಸಂಸ್ಥೆಗಳ ಅಧಿಕಾರಿಗಳು ಸಂಗೀತಕ್ಕೆ, **ಶೇ 7.14 ರಷ್ಟು** ಸಂಘ ಸಂಸ್ಥೆಗಳ ಅಧಿಕಾರಿಗಳು ಯಕ್ಷಗಾನ/ಬಯಲಾಟ/ಗೊಂಬೆ ಪ್ರದರ್ಶನಗಳಿಗೆ **ಶೇ 4.76** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ಚಿತ್ರಕಲೆಗೆ ಮತ್ತು **ಶೇ 2.38** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ಸಾಹಿತ್ಯಕ್ಕೆ ಪ್ರೋತ್ಸಾಹ ನೀಡಿದ್ದೇವೆ ಎಂದು ಹೇಳಿದ್ದಾರೆ.

**ಅದೇರೀತಿ, ವಿಶೇಷ ಘಟಕ ಯೋಜನೆಯ ಒಟ್ಟು 70 ಸಂಘ ಸಂಸ್ಥೆಗಳನ್ನು ಸಂಪರ್ಕಿಸಿ,** ಯಾವ ಕಲಾಪ್ರಕಾರಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡಿದ್ದೀರಾ ಎಂದು ಸಂಘ ಸಂಸ್ಥೆಗಳ ಅಧಿಕಾರಿಗಳನ್ನು ಪ್ರಶ್ನಿಸಿದಾಗ, **ಶೇ 55.71** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ಜಾನಪದ ಕಲಾಪ್ರಕಾರಗಳಿಗೆ, **ಶೇ 14.28** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ನಾಟಕ ಕ್ಷೇತ್ರಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಿದ್ದೇವೆ ಎಂದು ಹೇಳಿರುತ್ತಾರೆ. ಹಾಗೆಯೇ **ಶೇ 14.28 ರಷ್ಟು** ಸಂಘ ಸಂಸ್ಥೆಗಳ ಅಧಿಕಾರಿಗಳು ಸಂಗೀತಕ್ಕೆ, **ಶೇ 5.71 ರಷ್ಟು** ಸಂಘ ಸಂಸ್ಥೆಗಳ ಅಧಿಕಾರಿಗಳು ಯಕ್ಷಗಾನ/ಬಯಲಾಟ/ಗೊಂಬೆ ಪ್ರದರ್ಶನಗಳಿಗೆ **ಶೇ 04.28 ರಷ್ಟು** ಸಂಘ ಸಂಸ್ಥೆಗಳ ಅಧಿಕಾರಿಗಳು ನೃತ್ಯಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಿರುತ್ತೇವೆ ಎಂದು ಹೇಳಿರುತ್ತಾರೆ. **ಶೇ 02.85** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ಸಂಕೀರ್ಣ/ಜಾಗೃತಿಗೆ ಹೆಚ್ಚಿನ ಪ್ರೋತ್ಸಾಹ ನೀಡಿದ್ದೇವೆ ಎಂದು ಹೇಳಿದರೆ **ಶೇ 2.85** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ಸಾಹಿತ್ಯಕ್ಕೆ ಪ್ರೋತ್ಸಾಹ ನೀಡಿದ್ದೇವೆ ಎಂದು ಹೇಳಿದ್ದಾರೆ. ಹಾಗೆಯೇ ಯಾವೊಂದು ಸಂಘ ಸಂಸ್ಥೆಗಳ ಅಧಿಕಾರಿಗಳು ಚಿತ್ರಕಲೆಗೆ ಪ್ರೋತ್ಸಾಹ ನೀಡಿರುವುದಿಲ್ಲ.

**ಹಾಗೆಯೇ, ಗಿರಿಜನ ಉಪಯೋಜನೆಯ ಒಟ್ಟು 39 ಸಂಘ ಸಂಸ್ಥೆಗಳನ್ನು ಸಂಪರ್ಕಿಸಿ,** ಯಾವ ಕಲಾಪ್ರಕಾರಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡಿದ್ದೀರಾ ಎಂದು ಸಂಘ ಸಂಸ್ಥೆಗಳ ಅಧಿಕಾರಿಗಳನ್ನು ವಿಚಾರಣೆ ಮಾಡಿದಾಗ **ಶೇ 30.76** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ಜಾನಪದ ಕಲಾಪ್ರಕಾರಗಳಿಗೆ, **ಶೇ 30.76 ರಷ್ಟು** ಸಂಘ ಸಂಸ್ಥೆಗಳ ಅಧಿಕಾರಿಗಳು ಸಂಗೀತಕ್ಕೆ, **ಶೇ 25.64** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ನಾಟಕ ಕ್ಷೇತ್ರಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಿದ್ದೇವೆ ಎಂದು ಹೇಳಿರುತ್ತಾರೆ. ಹಾಗೆಯೇ **ಶೇ 10.25 ರಷ್ಟು** ಸಂಘ ಸಂಸ್ಥೆಗಳ ಅಧಿಕಾರಿಗಳು ನೃತ್ಯಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಿರುತ್ತೇವೆ ಎಂದು ಹೇಳಿರುತ್ತಾರೆ. **ಶೇ 9.00 ರಷ್ಟು** ಸಂಘ ಸಂಸ್ಥೆಗಳ ಅಧಿಕಾರಿಗಳು ಯಕ್ಷಗಾನ/ಬಯಲಾಟ/ಗೊಂಬೆ ಪ್ರದರ್ಶನಗಳಿಗೆ, ಯಾವೊಂದು ಸಂಘ ಸಂಸ್ಥೆಗಳ ಅಧಿಕಾರಿಗಳು ಸಂಕೀರ್ಣ/ಜಾಗೃತಿಗೆ, ಸಾಹಿತ್ಯಕ್ಕೆ ಮತ್ತು ಚಿತ್ರಕಲೆಗೆ ಪ್ರೋತ್ಸಾಹ ನೀಡಿರುವುದಿಲ್ಲ.

**ಒಟ್ಟು ಮೂರು ಯೋಜನೆಗಳ 193 ಸಂಘ ಸಂಸ್ಥೆಗಳನ್ನು ಸಂಪರ್ಕಿಸಿ,** ಯಾವ ಕಲಾಪ್ರಕಾರಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡಿದ್ದೀರಾ ಎಂದು ಸಂಘ ಸಂಸ್ಥೆಗಳ ಅಧಿಕಾರಿಗಳನ್ನು ವಿಚಾರಿಸಿದಾಗ **ಶೇ 30.05** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ಜಾನಪದ ಕಲಾಪ್ರಕಾರಗಳಿಗೆ, **ಶೇ 19.17 ರಷ್ಟು** ಸಂಘ ಸಂಸ್ಥೆಗಳ ಅಧಿಕಾರಿಗಳು ಸಂಗೀತಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಿರುತ್ತೇವೆ ಎಂದು ಹೇಳಿರುತ್ತಾರೆ. ಹಾಗೆಯೇ **ಶೇ 17.09** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ನಾಟಕ ಕ್ಷೇತ್ರಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಿದ್ದೇವೆ ಎಂದು ಹೇಳಿದರೆ, **ಶೇ 17.09** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ಸಂಕೀರ್ಣ/ಜಾಗೃತಿಗೆ ಹೆಚ್ಚಿನ ಪ್ರೋತ್ಸಾಹ ನೀಡಿದ್ದೇವೆ ಎಂದು ಹೇಳಿದರೆ **ಶೇ 05.69 ರಷ್ಟು** ಸಂಘ ಸಂಸ್ಥೆಗಳ ಅಧಿಕಾರಿಗಳು ಯಕ್ಷಗಾನ/ಬಯಲಾಟ/ಗೊಂಬೆ ಪ್ರದರ್ಶನಗಳಿಗೆ **ಶೇ 02.07** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ಚಿತ್ರಕಲೆಗೆ ಮತ್ತು **ಶೇ 02.07** ರಷ್ಟು ಸಂಘ ಸಂಸ್ಥೆಗಳ ಅಧಿಕಾರಿಗಳು ಸಾಹಿತ್ಯಕ್ಕೆ ಪ್ರೋತ್ಸಾಹ ನೀಡಿದ್ದೇವೆ ಎಂದು ಹೇಳಿದ್ದಾರೆ.

**ಚರ್ಚೆ;** ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿ ಚಾಲ್ತಿಯಲ್ಲಿರುವ ಈ ಮೂರು ಯೋಜನೆಯ ಅಡಿಯಲ್ಲಿ ಕರ್ನಾಟಕದಲ್ಲಿನ ಸಂಘ ಸಂಸ್ಥೆಗಳು ಧನ ಸಹಾಯವನ್ನು ಪಡೆದು ಯಾವ ಕಲಾಪ್ರಕಾರಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡಿದ್ದೀರಾ ಎಂದು ಸಂಘ ಸಂಸ್ಥೆಯ ಅಧಿಕಾರಿಗಳನ್ನು ಕೇಳಿದಾಗ, ಜಾನಪದ ಕಲಾ ಪ್ರಕಾರಗಳಿಗೆ ಮೊದಲ ಪ್ರಾಶಸ್ತ್ಯ ನೀಡಿದರೆ, ಎರಡನೇ ಪ್ರಾಶಸ್ತ್ಯವನ್ನು ಸಂಗೀತಕ್ಕೆ ನೀಡಲಾಗಿದೆ. ಮೂರನೇ ಪ್ರಾಶಸ್ತ್ಯವನ್ನು ನಾಟಕ ಮತ್ತು ಸಂಕೀರ್ಣ/ಜಾಗೃತಿಗೆ ಕೊಟ್ಟಿರುತ್ತಾರೆ. ಅದೇ ರೀತಿ ನಾಲ್ಕನೇ ಪ್ರಾಶಸ್ತ್ಯವನ್ನು ಯಕ್ಷಗಾನ/ಬಯಲಾಟ/ಗೊಂಬೆ ಪ್ರದರ್ಶನಗಳಿಗೆ ನೀಡಿದರೆ, ಐದನೇ ಪ್ರಾಶಸ್ತ್ಯವನ್ನು ಚಿತ್ರಕಲೆಗೆ ಮತ್ತು ಸಾಹಿತ್ಯಕ್ಕೆ ನೀಡಿರುತ್ತಾರೆ.

## 11.2 ಕಲಾವಿದರೊಂದಿಗೆ ಸಂದರ್ಶಿಸಿ ಮಾಹಿತಿ ಸಂಗ್ರಹಿಸಿರುವುದು

ಸಂಘ ಸಂಸ್ಥೆಗಳು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿ ಸಾಮಾನ್ಯ ಯೋಜನೆ, ವಿಶೇಷ ಘಟಕ ಯೋಜನೆ, ಗಿರಿಜನ ಉಪಯೋಜನೆಯ ಅಡಿಯಲ್ಲಿ ಧನಸಹಾಯವನ್ನು ಪಡೆದು ಆ ಹಣವನ್ನು ಯಾವ ರೀತಿ ಸದ್ಬಳಕೆ ಮಾಡಿಕೊಂಡಿದ್ದಾರೆ ಎಂಬುದನ್ನು ತಿಳಿಯುವುದಕ್ಕಾಗಿ ಕಲಾವಿದರನ್ನು ವಯಸ್ಸಿನ ಆಧಾರದ ಮೇಲೆ ಮೂರು ಗುಂಪುಗಳನ್ನಾಗಿ ಮಾಡಿಕೊಂಡು ಅವರಿಂದ ಸಂಘ ಸಂಸ್ಥೆಗಳ ಬಗ್ಗೆ ಮತ್ತು ಅವರು ಕೈಗೊಳ್ಳುವ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ಪಡೆಯಲಾಗಿದೆ. ಅಂದರೆ, 35 ವರ್ಷದ ವರೆಗಿನ ಗುಂಪಿನಿಂದ **107 ಜನ ಕಲಾವಿದರನ್ನು** 36 ರಿಂದ 50 ವರ್ಷದವರೆಗಿನ ಗುಂಪಿನಿಂದ **178 ಕಲಾವಿದರನ್ನು** ಮತ್ತು 51 ವರ್ಷಕ್ಕಿಂತ ಮೇಲ್ಪಟ್ಟ ವಯಸ್ಸಿನ ಗುಂಪಿನಿಂದ **102 ಜನ ಕಲಾವಿದರನ್ನು** ಆಯ್ಕೆ ಮಾಡಿಕೊಳ್ಳಲಾಗಿದೆ. ಒಟ್ಟು ಈ ಮೂರು ಗುಂಪಿನಿಂದ **387 ಜನ ಕಲಾವಿದರನ್ನು** ಆಯ್ಕೆ ಮಾಡಿಕೊಳ್ಳಲಾಗಿದೆ. (ವಾಸ್ತವವಾಗಿ ಮಾದರಿ ಆಯ್ಕೆಯ ಪಟ್ಟಿಯಲ್ಲಿ 382 ಜನ ಕಲಾವಿದರನ್ನು ಸೂಚಿಸಿದೆ. ಆದರೆ ಕ್ಷೇತ್ರಕಾರ್ಯ ಮಾಡುವ ಸಂದರ್ಭದಲ್ಲಿ ಹೆಚ್ಚುವರಿಯಾಗಿ 5 ಜನ ಕಲಾವಿದರನ್ನು ಆಯ್ಕೆ ಮಾಡಿಕೊಂಡಿರುವುದರಿಂದ ಇಲ್ಲಿ ಒಟ್ಟು 387 ಕಲಾವಿದರನ್ನು ದತ್ತಾಂಶ ವಿಶ್ಲೇಷಣೆಯಲ್ಲಿ ಪರಿಗಣಿಸಲಾಗಿದೆ.) ಆದ್ದರಿಂದ ಇಲ್ಲಿನ 387

ಕಲಾವಿದರಿಂದ ಕೆಲವು ವಿಷಯಗಳಿಗೆ ಮಾಹಿತಿ ಪಡೆದು ಇಲ್ಲಿ ವಿಶ್ಲೇಷಣೆ ಮಾಡಲಾಗಿದೆ. ಕಲಾವಿದರಿಗೆ ಸಂಬಂಧಿಸಿದ ಎಲ್ಲಾ ಕೋಷ್ಟಕಗಳಲ್ಲಿ 387 ಕಲಾವಿದರನ್ನು ಪರಿಗಣಿಸಲಾಗಿದೆ.

**ಕೋಷ್ಟಕ 24: ಸಂಘ–ಸಂಸ್ಥೆಗಳು ಕಾರ್ಯಕ್ರಮಗಳಿಗೆ ಕಲಾವಿದರನ್ನು ಆಯ್ಕೆ ಮಾಡಿಕೊಳ್ಳುವುದರ ಬಗ್ಗೆ ಮಾಹಿತಿ.**

| | ವಿವರಗಳು | 35 ವರ್ಷದ ವರೆಗೆ | ಶೇಕಡಾ | 36 ರಿಂದ 50 ವರ್ಷದವರೆಗೆ | ಶೇಕಡಾ | 51 ವರ್ಷಕ್ಕಿಂತ ಮೇಲ್ಪಟ್ಟು | ಶೇಕಡಾ | ಒಟ್ಟು ಕಲಾವಿದರ ಪ್ರತಿಕ್ರಿಯೆ | ಶೇಕಡಾ |
|---|---|---|---|---|---|---|---|---|---|
| 1 | ನಮ್ಮಲ್ಲಿರುವ ಕಲೆಯನ್ನು ಮೆಚ್ಚಿಕೊಂಡು ನಮ್ಮನ್ನು ಆಯ್ಕೆ ಮಾಡುತ್ತಾರೆ. | 71 | 66.4 | 89 | 50.0 | 63 | 61.8 | 223 | 57.6 |
| 2 | ಕಲೆಯಲ್ಲಿನ ಸಾಧನೆಯನ್ನು ಮೆಚ್ಚಿಕೊಂಡು ನಮ್ಮನ್ನು ಆಯ್ಕೆ ಮಾಡುತ್ತಾರೆ. | 38 | 35.5 | 93 | 52.2 | 43 | 42.2 | 174 | 45 |
| 3 | ಹಿಂದೆ ನೀಡಿರುವ ಕಾರ್ಯಕ್ರಮಗಳನ್ನು ನೋಡಿ ಮೆಚ್ಚಿಕೊಂಡು ನಮ್ಮನ್ನು ಆಯ್ಕೆ ಮಾಡುತ್ತಾರೆ. | 12 | 11.2 | 12 | 6.7 | 12 | 11.8 | 36 | 9.3 |
| 4 | ಪರಿಚಯ ಇರುವ ಕಾರಣಕ್ಕಾಗಿ ನಮ್ಮನ್ನು ಆಯ್ಕೆ ಮಾಡುತ್ತಾರೆ. | 04 | 3.7 | 02 | 1.1 | 01 | 1.0 | 07 | 1.8 |
| 5 | ಬೇರೆಯಯವರ ಪ್ರಭಾವದಿಂದ ನಮ್ಮನ್ನು ಆಯ್ಕೆ ಮಾಡುತ್ತಾರೆ. | 00 | 0.0 | 00 | 0.0 | 00 | 0.0 | 00 | 0.0 |
| **ಒಟ್ಟು** | | **107** | | **178** | | **102** | | **387** | |

Note: Multiple responses, therefore, total may exceed 100 percent.

**ಮೇಲಿನ ಕೋಷ್ಟಕ 24 ರಲ್ಲಿ** ಒಟ್ಟು **387** ಕಲಾವಿದರುಗಳಿಗೆ ಸಂಘ–ಸಂಸ್ಥೆಗಳು ಕಾರ್ಯಕ್ರಮ ನೀಡಲು ನಿಮ್ಮನ್ನು ಯಾವ ರೀತಿ ಆಯ್ಕೆ ಮಾಡುತ್ತಾರೆ? ಎಂದು ವಿಚಾರಿಸಿದಾಗ **ಶೇ 57.6** ರಷ್ಟು ಕಲಾವಿದರುಗಳು ನಮ್ಮಲ್ಲಿರುವ ಕಲೆಯನ್ನು ಮೆಚ್ಚಿಕೊಂಡು ನಮ್ಮನ್ನು ಆಯ್ಕೆ ಮಾಡುತ್ತಾರೆ ಎಂದು ಹೇಳಿದರೆ, **ಶೇ 45** ರಷ್ಟು ಕಲಾವಿದರುಗಳು ಕಲೆಯಲ್ಲಿನ ಸಾಧನೆಯನ್ನು ಮೆಚ್ಚಿಕೊಂಡು ನಮ್ಮನ್ನು ಆಯ್ಕೆ ಮಾಡುತ್ತಾರೆ ಎಂದು ಹೇಳಿದ್ದಾರೆ. ಹಾಗೆಯೇ**, ಶೇ 9.3** ರಷ್ಟು ಕಲಾವಿದರುಗಳು ಹಿಂದೆ ನೀಡಿರುವ ಕಾರ್ಯಕ್ರಮಗಳನ್ನು ನೋಡಿ ಮೆಚ್ಚಿಕೊಂಡು ನಮ್ಮನ್ನು ಆಯ್ಕೆ ಮಾಡುತ್ತಾರೆ ಎಂದು ಹೇಳಿದರೆ, **ಶೇ 1.8** ರಷ್ಟು ಕಲಾವಿದರುಗಳು ಪರಿಚಯ ಇರುವ ಕಾರಣಕ್ಕಾಗಿ ನಮ್ಮನ್ನು ಆಯ್ಕೆ ಮಾಡುತ್ತಾರೆ ಎಂದು ಹೇಳಿದ್ದಾರೆ. ಆದರೆ ಯಾವೊಬ್ಬ ಕಲಾವಿದರುಗಳು ಬೇರೆಯವರ ಪ್ರಭಾವದಿಂದ ನಮ್ಮನ್ನು ಆಯ್ಕೆ ಮಾಡಿದ್ದಾರೆ ಎಂದು ಹೇಳಿರುವುದಿಲ್ಲ.

**ಕೋಷ್ಟಕ 25 : ಸಂಘ-ಸಂಸ್ಥೆಗಳು ಕಲಾವಿದರಿಗೆ ಸಂಭಾವನೆ ನೀಡುವುದರ ಕುರಿತು ಮಾಹಿತಿ.**

| | ವಿವರಗಳು | 35 ವರ್ಷದ ವರೆಗೆ | ಶೇಕಡಾ | 36 ರಿಂದ 50 ವರ್ಷದವರೆಗೆ | ಶೇಕಡಾ | 51 ವರ್ಷಕ್ಕಿಂತ ಮೇಲ್ಪಟ್ಟು | ಶೇಕಡಾ | ಒಟ್ಟು ಕಲಾವಿದರ ಪ್ರತಿಕ್ರಿಯೆ | ಶೇಕಡಾ |
|---|---|---|---|---|---|---|---|---|---|
| 1 | ಚೆಕ್ ಮೂಲಕ | 49 | 45.8 | 62 | 34.8 | 32 | 31.4 | 143 | 37.0 |
| 2 | ನಗದು ರೂಪದಲ್ಲಿ | 68 | 63.6 | 126 | 70.8 | 72 | 70.6 | 266 | 68.7 |
| 3 | ವಸ್ತುವಿನ ರೂಪದಲ್ಲಿ | 00 | 0.0 | 01 | 0.6 | 01 | 1.0 | 02 | 0.5 |
| 4 | ನೀಡಿರುವುದಿಲ್ಲ. | 01 | 0.9 | 03 | 1.7 | 02 | 2.0 | 06 | 1.6 |
| **ಒಟ್ಟು** | | **107** | | **178** | | **102** | | **387** | |

Note: Multiple responses, therefore, total may exceed 100 percent.

**ಮೇಲಿನ ಕೋಷ್ಟಕ 25 ರಲ್ಲಿ** ಒಟ್ಟು **387** ಕಲಾವಿದರುಗಳಿಗೆ, ಕಾರ್ಯಕ್ರಮ ನೀಡಿದ ಮೇಲೆ ಸಂಘ-ಸಂಸ್ಥೆಗಳು ನಿಮಗೆ ಹೇಗೆ ಸಂಭಾವನೆ ನೀಡುತ್ತವೆ? ಎಂದು ವಿಚಾರಿಸಿದಾಗ **ಶೇ. 68.7**ರಷ್ಟು ಕಲಾವಿದರುಗಳು ನಗದು ರೂಪದಲ್ಲಿ ಸಂಭಾವನೆ ನೀಡುತ್ತಾರೆ ಎಂದು ಹೇಳಿದರೆ, **ಶೇ. 37** ರಷ್ಟು ಕಲಾವಿದರುಗಳು ಚೆಕ್ ಮೂಲಕ ಸಂಭಾವನೆ ನೀಡುತ್ತಾರೆ ಎಂದು ಹೇಳಿದ್ದಾರೆ. ಹಾಗೆಯೇ**, ಶೇ 1.6** ರಷ್ಟು ಕಲಾವಿದರುಗಳು ಸಂಭಾವನೆ ನೀಡಿರುವುದಿಲ್ಲ ಎಂದು ಹೇಳಿದ್ದಾರೆ. ಮತ್ತು **ಶೇ 0.5** ಕಲಾವಿದರುಗಳು ವಸ್ತುವಿನ ರೂಪದಲ್ಲಿ ಸಂಭಾವನೆ ನೀಡುತ್ತಾರೆ ಎಂದು ಹೇಳಿದ್ದಾರೆ.

**ಚರ್ಚೆ:** ಸಂಘ ಸಂಸ್ಥೆಗಳು ಕಾರ್ಯಕ್ರಮಗಳಿಗೆ ಬಾಗವಹಿಸಿದವರಲ್ಲಿ ಹೆಚ್ಚಿನ ಕಲಾವಿದರಿಗೆ ನಗದು ರೂಪದಲ್ಲಿ ಸಂಭಾವನೆ ನೀಡಿದರೆ, ಇನ್ನು ಸ್ವಲ್ಪ ಪ್ರಮಾಣದ ಕಲಾವಿದರಿಗೆ ಚೆಕ್ ಮೂಲಕ ಸಂಭಾವನೆ ನೀಡಿರುತ್ತಾರೆ.

**ಕೋಷ್ಟಕ 26 : ಕಾರ್ಯಕ್ರಮದಲ್ಲಿ ಭಾಗವಹಿಸುವ ಕಲಾವಿದರಿಗೆ ಸಂಘ-ಸಂಸ್ಥೆಗಳು ನೀಡುವ ಸೌಲಭ್ಯಗಳ ವಿವರ**

| | ವಿವರಗಳು | 35 ವರ್ಷದ ವರೆಗೆ | ಶೇಕಡಾ | 36 ರಿಂದ 50 ವರ್ಷದವರೆಗೆ | ಶೇಕಡಾ | 51 ವರ್ಷಕ್ಕಿಂತ ಮೇಲ್ಪಟ್ಟು | ಶೇಕಡಾ | ಒಟ್ಟು ಕಲಾವಿದರ ಪ್ರತಿಕ್ರಿಯೆ | ಶೇಕಡಾ |
|---|---|---|---|---|---|---|---|---|---|
| 1 | ಊಟ-ವಸತಿ ಸೌಲಭ್ಯ ನೀಡುತ್ತಾರೆ. | 99 | 92.5 | 163 | 91.6 | 94 | 92.2 | 356 | 92.0 |
| 2 | ಊಟ-ವಸತಿ ಸೌಲಭ್ಯ ನೀಡುವುದಿಲ್ಲ. | 02 | 1.9 | 03 | 1.7 | 02 | 2.0 | 07 | 1.8 |
| 3 | ಊಟ ಮಾತ್ರ ನೀಡುತ್ತಾರೆ. | 05 | 4.7 | 05 | 2.8 | 05 | 4.9 | 15 | 3.9 |
| 4 | ಏನೂ ನೀಡುವುದಿಲ್ಲ. | 00 | 0.0 | 02 | 1.1 | 00 | 0.0 | 02 | 0.5 |
| **ಒಟ್ಟು** | | **107** | | **178** | | **102** | | **387** | |

Note: Multiple responses, therefore, total may exceed 100 percent.

**ಮೇಲಿನ ಕೋಷ್ಟಕ 26 ರಲ್ಲಿ** ಒಟ್ಟು **387 ಕಲಾವಿದರುಗಳನ್ನು,** ಕಾರ್ಯಕ್ರಮಕ್ಕೆ ಭಾಗವಹಿಸಿದಾಗ ಸಂಘ ಸಂಸ್ಥೆಗಳು ಯಾವ ರೀತಿ ಊಟ ಮತ್ತು ವಸತಿ ಸೌಲಭ್ಯವನ್ನು ನಿಮಗೆ ನೀಡುತ್ತವೆ ಎಂದು ವಿಚಾರಿಸಿದಾಗ ಕಲಾವಿದರುಗಳು **ಶೇ 92** ರಷ್ಟು ಕಲಾವಿದರುಗಳು ಊಟ–ವಸತಿ ಸೌಲಭ್ಯ ನೀಡುತ್ತಾರೆ ಎಂದು ಹೇಳಿದರೆ, **ಶೇ 3.9** ಕಲಾವಿದರುಗಳು ಊಟ ಮಾತ್ರ ನೀಡುತ್ತಾರೆ ಎಂದು ಹೇಳಿದ್ದಾರೆ. ಹಾಗೆಯೇ **ಶೇ 1.8** ರಷ್ಟು ಕಲಾವಿದರುಗಳು ಊಟ–ವಸತಿ ಸೌಲಭ್ಯ ನೀಡುವುದಿಲ್ಲ ಎಂದು ಹೇಳಿದ್ದಾರೆ. ಅದೇರೀತಿ, **ಶೇ 0.5** ರಷ್ಟು ಕಲಾವಿದರುಗಳು ಏನೂ ನೀಡುವುದಿಲ್ಲವೆಂದು ಹೇಳಿದ್ದಾರೆ.

**ಚರ್ಚೆ:** ಕಾರ್ಯಕ್ರಮಗಳಿಗೆ ಭಾಗವಹಿಸಿದ ಹೆಚ್ಚಿನ ಪ್ರಮಾಣದ ಕಲಾವಿದರಿಗೆ ಊಟ ವಸತಿ ಸೌಲಭ್ಯ ನೀಡುತ್ತಾರೆ ಎಂದು ಹೇಳಿದರೆ, ಇನ್ನೂ ತುಂಬಾ ಕಡಿಮೆ ಕಲಾವಿದರಿಗೆ ಊಟ ವಸತಿ ಸೌಲಭ್ಯ ನೀಡುವುದಿಲ್ಲವೆಂದು ಹೇಳಿದ್ದಾರೆ.

**ಕೋಷ್ಟಕ 27: ಕಲಾವಿದರುಗಳು ಕಲೆಯನ್ನು ಸ್ವೀಕರಿಸುವ ಉದ್ದೇಶಗಳು.**

| | ವಿವರಗಳು | 35 ವರ್ಷದ ವರೆಗೆ | ಶೇಕಡಾ | 36 ರಿಂದ 50 ವರ್ಷದವರೆಗೆ | ಶೇಕಡಾ | 51 ವರ್ಷಕ್ಕಿಂತ ಮೇಲ್ಪಟ್ಟು | ಶೇಕಡಾ | ಒಟ್ಟು ಕಲಾವಿದರ ಪ್ರತಿಕ್ರಿಯೆ | ಶೇಕಡಾ |
|---|---|---|---|---|---|---|---|---|---|
| 1 | ಕಲೆಯ ಉಳಿವಿಗಾಗಿ ಸ್ವೀಕರಿಸುವುದು. | 95 | 88.8 | 158 | 88.8 | 89 | 87.3 | 342 | 88.4 |
| 2 | ಹೊಟ್ಟೆಯ ಪಾಡಿಗಾಗಿ ಸ್ವೀಕರಿಸುವುದು. | 03 | 2.8 | 07 | 3.9 | 07 | 6.9 | 17 | 4.4 |
| 3 | ಇದೊಂದು ವೃತ್ತಿಯಾಗಿ ಸ್ವೀಕರಿಸುವುದು | 11 | 10.3 | 21 | 11.8 | 05 | 4.9 | 37 | 9.6 |
| 4 | ತಲಾತಲಾಂತರದಿಂದ ಪೂರ್ವಜರು ಮಾಡಿಕೊಂಡು ಬಂದಿರುವುದಕ್ಕಾಗಿ ಸ್ವೀಕರಿಸುವುದು. | 03 | 2.8 | 04 | 2.2 | 08 | 7.8 | 15 | 3.9 |
| 5 | ಹವ್ಯಾಸಕ್ಕಾಗಿ ಸ್ವೀಕರಿಸುವುದು. | 08 | 7.5 | 08 | 4.5 | 02 | 2.0 | 18 | 4.7 |
| | **ಒಟ್ಟು** | **107** | | **178** | | **102** | | **387** | |

Note: Multiple responses, therefore, total may exceed 100 percent.

**ಮೇಲಿನ ಕೋಷ್ಟಕ 27 ರಲ್ಲಿ** ಒಟ್ಟು **387 ಕಲಾವಿದರಿಗೆ,** ಯಾವ ಉದ್ದೇಶದಿಂದ ಕಲೆಯನ್ನು ನೀವು ಸ್ವೀಕರಿಸುತ್ತೀರಾ? ಎಂದು ವಿಚಾರಿಸಿದಾಗ **ಶೇ. 88.4** ರಷ್ಟು ಕಲಾವಿದರುಗಳು ಕಲೆಯ ಉಳಿವಿಗಾಗಿ ಸ್ವೀಕರಿಸುವುದು ಎಂದು ಹೇಳಿದರೆ, **ಶೇ 9.6 ರಷ್ಟು** ಕಲಾವಿದರುಗಳು ಇದೊಂದು ವೃತ್ತಿಯಾಗಿ ಸ್ವೀಕರಿಸುವುದು ಎಂದು ಹೇಳಿರುತ್ತಾರೆ. ಹಾಗು **ಶೇ 4.7** ರಷ್ಟು ಕಲಾವಿದರುಗಳು ಹವ್ಯಾಸಕ್ಕಾಗಿ ಎಂದು ಹೇಳಿದರೆ, **ಶೇ 4.4** ರಷ್ಟು ಕಲಾವಿದರುಗಳು ಹೊಟ್ಟೆಯ ಪಾಡಿಗಾಗಿ ಸ್ವೀಕರಿಸುವುದು ಎಂದು ಹೇಳಿದ್ದಾರೆ. ಹಾಗೆಯೇ **ಶೇ 3.9**ರಷ್ಟು

ಕಲಾವಿದರುಗಳು ತಲಾತಲಾಂತರದಿಂದ ಪೂರ್ವಜರು ಮಾಡಿಕೊಂಡು ಬಂದಿರುವುದಕ್ಕಾಗಿ ಎಂದು ಹೇಳಿದ್ದಾರೆ.

| **ಕೋಷ್ಟಕ 28: ಸಂಘ ಸಂಸ್ಥೆಗಳ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜೊತೆ ಕಲಾವಿದರ ಸಂಬಂಧ** | | | | | | | | | |
|---|---|---|---|---|---|---|---|---|---|
| | ವಿವರಗಳು | **35 ವರ್ಷದ ವರೆಗೆ** | ಶೇಕಡಾ | **36 ರಿಂದ 50 ವರ್ಷದವರೆಗೆ** | ಶೇಕಡಾ | **51 ವರ್ಷಕ್ಕಿಂತ ಮೇಲ್ಪಟ್ಟು** | ಶೇಕಡಾ | **ಒಟ್ಟು ಕಲಾವಿದರ ಪ್ರತಿಕ್ರಿಯೆ** | ಶೇಕಡಾ |
| 1 | ನಮಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯೊಂದಿಗೆ ಯಾವುದೇ ಸಂಬಂದವಿಲ್ಲ. | 09 | 8.4 | 25 | 14.0 | 08 | 7.8 | 42 | 10.9 |
| 2 | ನಮಗೆ ಸಂಘ–ಸಂಸ್ಥೆಗಳೊಂದಿಗೆ ಒಳ್ಳೆಯ ಸಂಬಂಧವಿದೆ. | 89 | 83.2 | 150 | 84.3 | 83 | 81.4 | 322 | 83.2 |
| 3 | ನಮಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬಗ್ಗೆ ಏನೂ ಗೊತ್ತಿಲ್ಲ. | 03 | 2.8 | 02 | 1.1 | 01 | 1.0 | 06 | 1.6 |
| 4 | ನಮ್ಮನ್ನು ಯಾವುದೇ ಸಂಘ ಸಂಸ್ಥೆಗಳು ಕರೆದಾಗ ಕಾರ್ಯಕ್ರಮ ನೀಡಲು ಬರುತ್ತೇವೆ. | 07 | 6.5 | 07 | 3.9 | 08 | 7.8 | 22 | 5.7 |
| ಒಟ್ಟು | | **107** | | **178** | | **102** | | **387** | |

Note: Multiple responses, therefore, total may exceed 100 percent.

**ಮೇಲಿನ ಕೋಷ್ಟಕ 28 ರಲ್ಲಿ ಒಟ್ಟು 387 ಕಲಾವಿದರಿಗೆ,** ನೀವುಗಳು ಯಾರೊಂದಿಗೆ ಒಳ್ಳೆಯ ಸಂಬಂಧ ಇಟ್ಟುಕೊಂಡಿದ್ದೀರಾ ಎಂದು ವಿಚಾರಿಸಿದಾಗ **ಶೇ 83.2** ರಷ್ಟು ಕಲಾವಿದರುಗಳು ನಮಗೆ ಸಂಘ–ಸಂಸ್ಥೆಗಳೊಂದಿಗೆ ಸಂಬಂಧವಿದೆ ಎಂದು ಹೇಳಿದರೆ, **ಶೇ 10.9** ರಷ್ಟು ಕಲಾವಿದರುಗಳು ನಮಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯೊಂದಿಗೆ ಯಾವುದೇ ಸಂಬಂದವಿಲ್ಲವೆಂದು ಹೇಳಿದ್ದಾರೆ. ಹಾಗೆಯೇ**, ಶೇ 5.7**ರಷ್ಟು ಕಲಾವಿದರುಗಳು ನಮ್ಮನ್ನು ಕರೆದಾಗ ಕಾರ್ಯಕ್ರಮ ನೀಡಲು ಬರುತ್ತೇವೆ. ಮತ್ತು ನಮಗೆ ಯಾವ ಸಂಸ್ಥೆ ಬಗ್ಗೆ ಏನೂ ಗೊತ್ತಿಲ್ಲ ಎಂದು ಹೇಳಿದ್ದಾರೆ. ಅದೇರೀತಿ, **ಶೇ 1.6** ಕಲಾವಿದರುಗಳು ನಮಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬಗ್ಗೆ ಏನೂ ಗೊತ್ತಿಲ್ಲ ಎಂದು ಹೇಳಿರುತ್ತಾರೆ.

**ಕೋಷ್ಟಕ 29: ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ನೀಡಿರುವ ಧನಸಹಾಯವನ್ನು ಸಂಘ–ಸಂಸ್ಥೆಗಳು ಸದ್ಬಳಕೆ ಮಾಡಿಕೊಂಡಿರುವ ಕುರಿತು ವಿವಿಧ ವಯಸ್ಸಿನ ಕಲಾವಿದರಿಂದ ಪಡೆದ ಮಾಹಿತಿ.**

| | ವಿವರಗಳು | 35 ವರ್ಷದ ವರೆಗೆ | ಶೇಕಡಾ | 36 ರಿಂದ 50 ವರ್ಷದವರೆಗೆ | ಶೇಕಡಾ | 51ವರ್ಷಕ್ಕಿಂತ ಮೇಲ್ಪಟ್ಟು | ಶೇಕಡಾ | ಒಟ್ಟು ಕಲಾವಿದರ ಪ್ರತಿಕ್ರಿಯೆ | ಶೇಕಡಾ |
|---|---|---|---|---|---|---|---|---|---|
| 1 | ಕಾರ್ಯಕ್ರಮಗಳನ್ನು ಅರ್ಥಪೂರ್ಣವಾಗಿ ಯಶಸ್ವಿಗೊಳಿಸುವುದರ ಮೂಲಕ | 97 | 90.7 | 155 | 87.1 | 92 | 90.2 | 344 | 88.9 |
| 2 | ಪ್ರಾದೇಶಿಕವಾಗಿ ವಿಭಿನ್ನವಾದ ಕಾರ್ಯಕ್ರಮಗಳನ್ನು ನಡೆಸುವುದರ ಮೂಲಕ | 16 | 15.0 | 27 | 15.2 | 17 | 16.7 | 60 | 15.5 |
| 3 | ಹಣದ ಆಸೆಗಾಗಿ ಕಾರ್ಯಕ್ರಮ ನಡೆಸುವುದರ ಮೂಲಕ | 00 | 0.0 | 02 | 1.1 | 00 | 0.0 | 02 | 0.5 |
| 4 | ಸರ್ಕಾರದ ಹಣವನ್ನು ಸ್ವಾರ್ಥಕ್ಕೆ ಬಳಸಿಕೊಳ್ಳುವುದರ ಮೂಲಕ | 00 | 0.0 | 01 | 0.6 | 00 | 0.0 | 01 | 0.3 |
| | **ಒಟ್ಟು** | **107** | | **178** | | **102** | | **387** | |

Note: Multiple responses, therefore, total may exceed 100 percent.

**ಮೇಲಿನ ಕೋಷ್ಟಕ 29 ರಲ್ಲಿ** ಒಟ್ಟು **387 ಕಲಾವಿದರುಗಳಿಗೆ,** ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ನೀಡಿದ ಹಣವನ್ನು ಸಂಘ–ಸಂಸ್ಥೆಗಳು ಯಾವ ರೀತಿ ಸದ್ಬಳಕೆ ಮಾಡಿಕೊಂಡಿದ್ದಾವೆ? ಎಂದು ವಿಚಾರಿಸಿದಾಗ **ಶೇ. 88.9** ರಷ್ಟು ಕಲಾವಿದರುಗಳು ಕಾರ್ಯಕ್ರಮಗಳನ್ನು ಅರ್ಥಪೂರ್ಣವಾಗಿ ಯಶಸ್ವಿಗೊಳಿಸುವುದರ ಮೂಲಕ ಸದ್ಬಳಕೆ ಮಾಡಿಕೊಂಡಿದ್ದಾರೆ ಎಂದು ಹೇಳಿದರೆ, **ಶೇ 15.5** ರಷ್ಟು ಕಲಾವಿದರುಗಳು ಪ್ರಾದೇಶಿಕವಾಗಿ ವಿಭಿನ್ನವಾದ ಕಾರ್ಯಕ್ರಮಗಳನ್ನು ನಡೆಸುವುದರ ಮೂಲಕ ಸದ್ಬಳಕೆ ಮಾಡಿಕೊಂಡಿದ್ದಾರೆ ಎಂದು ಹೇಳಿದ್ದಾರೆ. ಹಾಗೆಯೇ**, ಶೇ 0.5** ಕಲಾವಿದರುಗಳು ಹಣದ ಆಸೆಗಾಗಿ ಕಾರ್ಯಕ್ರಮ ನಡೆಸುವುದರ ಮೂಲಕ ಹಣವನ್ನು ಬಳಕೆ ಮಾಡಿಕೊಂಡಿದ್ದಾರೆ ಎಂದು ಹೇಳಿದರೆ, **ಶೇ 0.3** ರಷ್ಟು ಕಲಾವಿದರುಗಳು ಸರ್ಕಾರದ ಹಣವನ್ನು ಸ್ವಾರ್ಥಕ್ಕೆ ಬಳಸಿಕೊಂಡಿದ್ದಾರೆ ಎಂದು ಹೇಳಿದ್ದಾರೆ.

## 11.3 ಪ್ರೇಕ್ಷಕರೊಂದಿಗೆ ಸಂದರ್ಶಿಸಿ ಮಾಹಿತಿ ಸಂಗ್ರಹಿಸಿರುವುದು

ಸಂಘ ಸಂಸ್ಥೆಗಳು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿ ಸಾಮಾನ್ಯ ಯೋಜನೆ, ವಿಶೇಷ ಘಟಕ ಯೋಜನೆ, ಗಿರಿಜನ ಉಪಯೋಜನೆಯ ಅಡಿಯಲ್ಲಿ ಧನಸಹಾಯವನ್ನು ಪಡೆದು ಆ ಹಣವನ್ನು ಯಾವ ರೀತಿ ಸದ್ಬಳಕೆ ಮಾಡಿಕೊಂಡಿದ್ದಾರೆ ಎಂಬುದನ್ನು ತಿಳಿಯುವುದಕ್ಕಾಗಿ ಪ್ರೇಕ್ಷಕರನ್ನು ವಯಸ್ಸಿನ ಆಧಾರದ ಮೇಲೆ ಮೂರು ಗುಂಪುಗಳನ್ನಾಗಿ ಮಾಡಿಕೊಂಡು ಅವರಿಂದ ಸಂಘ ಸಂಸ್ಥೆಗಳ ಬಗ್ಗೆ ಮತ್ತು ಅವರು ಕೈಗೊಳ್ಳುವ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ಪಡೆಯಲಾಗಿದೆ. ಅಂದರೆ, 35 ವರ್ಷದವರೆಗಿನ ಗುಂಪಿನಿಂದ **116 ಜನ ಪ್ರೇಕ್ಷಕರನ್ನು,** 36 ರಿಂದ 50 ವರ್ಷದವರೆಗಿನ ಗುಂಪಿನಿಂದ **185 ಜನ ಪ್ರೇಕ್ಷಕರನ್ನು,** ಮತ್ತು 51 ವರ್ಷಕ್ಕಿಂತ ಮೇಲ್ಪಟ್ಟ ವಯಸ್ಸಿನ ಗುಂಪಿನಿಂದ **91 ಜನ ಪ್ರೇಕ್ಷಕರನ್ನು** ಆಯ್ಕೆ ಮಾಡಿಕೊಳ್ಳಲಾಗಿದೆ. ಒಟ್ಟು ಈ ಮೂರು ಗುಂಪಿನಿಂದ 392 ಜನ ಪ್ರೇಕ್ಷಕರನ್ನು (ಮಾದರಿ ಆಯ್ಕೆಯ ಪಟ್ಟಿಯಲ್ಲಿ 382 ಜನ ಪ್ರೇಕ್ಷಕರನ್ನು ಸೂಚಿಸಿದೆ. ಆದರೆ ಇಲ್ಲಿ ಹೆಚ್ಚುವರಿಯಾಗಿ 10 ಜನ ಪ್ರೇಕ್ಷಕರನ್ನು ಕ್ಷೇತ್ರಕಾರ್ಯ ಮಾಡುವಾಗ ಆಯ್ಕೆ ಮಾಡಿಕೊಂಡಿರುವುದರಿಂದ ಒಟ್ಟು 392 ಪ್ರೇಕ್ಷಕರನ್ನು ದತ್ತಾಂಶ ವಿಶ್ಲೇಷಣೆಯಲ್ಲಿ ಪರಿಗಣಿಸಲಾಗಿದೆ.) ಆಯ್ಕೆ ಮಾಡಿಕೊಳ್ಳಲಾಗಿದೆ. ಒಟ್ಟು 392 ಪ್ರೇಕ್ಷಕರಿಂದ ಕೆಲವು ವಿಷಯಗಳಿಗೆ ಮಾಹಿತಿ ಪಡೆದು ಇಲ್ಲಿ ವಿಶ್ಲೇಷಣೆ ಮಾಡಲಾಗಿದೆ.

**ಕೋಷ್ಟಕ 30: ಸಂಘ–ಸಂಸ್ಥೆಗಳು ನಡೆಸಿರುವ ಕಾರ್ಯಕ್ರಮಗಳ ಗುಣಮಟ್ಟವನ್ನು ತಿಳಿಯಲು ಪ್ರೇಕ್ಷಕರನ್ನು ವಯಸ್ಸಿನ ಆಧಾರದ ಮೇಲೆ ಪರಿಗಣಿಸಿ, ಪಡೆದ ಮಾಹಿತಿ.**

| | ವಿವರಗಳು | 35 ವರ್ಷದ ವರೆಗೆ | ಶೇಕಡಾ | 36 ರಿಂದ 50 ವರ್ಷದವರೆಗೆ | ಶೇಕಡಾ | 51 ವರ್ಷಕ್ಕಿಂತ ಮೇಲ್ಪಟ್ಟು | ಶೇಕಡಾ | ಒಟ್ಟು ಪ್ರೇಕ್ಷಕರ (ಜನರ) ಪ್ರತಿಕ್ರಿಯೆ | ಶೇಕಡಾ |
|---|---|---|---|---|---|---|---|---|---|
| 1 | ಒಳ್ಳೆಯ ಗುಣಮಟ್ಟವನ್ನು ಹೊಂದಿವೆ | 108 | 93.1 | 178 | 96.2 | 87 | 95.6 | 373 | 95.2 |
| 2 | ಸಾಧಾರಣ ಗುಣಮಟ್ಟವನ್ನು ಹೊಂದಿವೆ | 08 | 6.9 | 07 | 3.8 | 04 | 4.4 | 19 | 4.8 |
| | ಒಟ್ಟು | **116** | | **185** | | **91** | | **392** | **100.0** |

Note: Multiple responses, therefore, total may exceed 100 percent.

**ಮೇಲಿನ ಕೋಷ್ಟಕ 30 ರಲ್ಲಿ** ಒಟ್ಟು **392 ಜನ ಪ್ರೇಕ್ಷಕರನ್ನು** ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮೂಲಕ ಸಂಘ–ಸಂಸ್ಥೆಗಳು ಧನಸಹಾಯವನ್ನು ಪಡೆದು ನಡೆಸುವ ಕಾರ್ಯಕ್ರಮಗಳು ಯಾವ ರೀತಿಯ ಗುಣಮಟ್ಟವನ್ನು ಹೊಂದಿರುತ್ತವೆ? ಎಂದು ವಿಚಾರಿಸಿದಾಗ **ಶೇ 95.2** ರಷ್ಟು ಪ್ರೇಕ್ಷಕರು ಒಳ್ಳೆಯ ಗುಣಮಟ್ಟವನ್ನು ಹೊಂದಿವೆ ಎಂದು ಹೇಳಿದರೆ, **ಶೇ 4.8** ರಷ್ಟು ಪ್ರೇಕ್ಷಕರು ಸಾಧಾರಣ ಗುಣಮಟ್ಟವನ್ನು ಹೊಂದಿವೆ ಎಂದು ಹೇಳಿದ್ದಾರೆ.

**ಕೋಷ್ಟಕ 31: ಸಂಘ–ಸಂಸ್ಥೆಗಳು ಜಾನಪದ ಕಲೆಯ ಉಳಿವಿಗೆ ಯಾವ ರೀತಿ ಶ್ರಮಿಸುತ್ತಿವೆ ಎನ್ನುವುದರ ಬಗ್ಗೆ ಪ್ರೇಕ್ಷಕರಿಂದ ಪಡೆದುಕೊಂಡ ಮಾಹಿತಿ.**

| | **ವಿವರಗಳು** | **35 ವರ್ಷದ ವರೆಗೆ** | ಶೇಕಡಾ | **36 ರಿಂದ 50 ವರ್ಷದವರೆಗೆ** | ಶೇಕಡಾ | **51 ವರ್ಷಕ್ಕಿಂತ ಮೇಲ್ಪಟ್ಟು** | ಶೇಕಡಾ | **ಒಟ್ಟು ಪ್ರೇಕ್ಷಕರ (ಜನರ) ಪ್ರತಿಕ್ರಿಯೆ** | ಶೇಕಡಾ |
|---|---|---|---|---|---|---|---|---|---|
| 1 | ಒಳ್ಳೆಯ ರೀತಿ ಶ್ರಮಿಸುತ್ತಿವೆ | 108 | 93.1 | 174 | 94.1 | 84 | 92.3 | 366 | 93.4 |
| 2 | ಅನುದಾನಕ್ಕಾಗಿ ಮಾತ್ರ | 5 | 4.3 | 2 | 1.1 | 3 | 3.3 | 10 | 2.6 |
| 3 | ಸಂಘ–ಸಂಸ್ಥೆಗಳ ಉಳಿವಿಗೆ | 4 | 3.4 | 11 | 5.9 | 8 | 8.8 | 23 | 5.9 |
| 4 | ಶ್ರಮಿಸುವುದಿಲ್ಲ | 0 | 0.0 | 0 | 0.0 | 0 | 0.0 | 0 | 0.0 |
| ಒಟ್ಟು | | **116** | | **185** | | **91** | | **392** | |

Note: Multiple responses, therefore, total may exceed 100 percent.

**ಮೇಲಿನ ಕೋಷ್ಟಕ 31** ರಲ್ಲಿ ಒಟ್ಟು **392** ಪ್ರೇಕ್ಷಕರನ್ನು **ಜಾನಪದ ಕಲೆಯ ಉಳಿವಿಗೆ ಸಂಘ–ಸಂಸ್ಥೆಗಳು ಯಾವ ರೀತಿ ಶ್ರಮಿಸುತ್ತಿವೆ** ಎಂದು ವಿಚಾರಿಸಿದಾಗ **ಶೇ 93.4** ರಷ್ಟು ಪ್ರೇಕ್ಷಕರು ಒಳ್ಳೆಯ ರೀತಿ ಶ್ರಮಿಸುತ್ತಿವೆ ಎಂದು ಹೇಳಿದರೆ, **ಶೇ 2.6** ರಷ್ಟು ಪ್ರೇಕ್ಷಕರು ಅನುದಾನಕ್ಕಾಗಿ ಮಾತ್ರ ಎಂದು ಹೇಳಿದ್ದಾರೆ. ಹಾಗೆಯೇ, **ಶೇ5.9** ರಷ್ಟು ಪ್ರೇಕ್ಷಕರು ಸಂಘ–ಸಂಸ್ಥೆಗಳ ಉಳಿವಿಗೆ ಎಂದು ಹೇಳಿದ್ದಾರೆ. ಹಾಗೆಯೇ ಯಾವುದೇ ಒಬ್ಬ ಪ್ರೇಕ್ಷಕರು ಸಂಘ ಸಂಸ್ಥೆಗಳು ಜಾನಪದ ಕಲೆಯ ಉಳಿವಿಗೆ ಶ್ರಮಿಸುವುದಿಲ್ಲವೆಂದು ಹೇಳಿರುವುದಿಲ್ಲ.

**ಕೋಷ್ಟಕ 32 : ಸಂಘ–ಸಂಸ್ಥೆಗಳು ಅನುದಾನವನ್ನು ಕಾರ್ಯಕ್ರಮಗಳಿಗೆ ಸದ್ಬಳಕೆ ಮಾಡಿಕೊಂಡಿರುವುದರ ಬಗ್ಗೆ ಪ್ರೇಕ್ಷಕರಿಂದ ಪಡೆದ ಮಾಹಿತಿ.**

| | **ವಿವರಗಳು** | **35 ವರ್ಷದ ವರೆಗೆ** | ಶೇಕಡಾ | **36 ರಿಂದ 50 ವರ್ಷದವರೆಗೆ** | ಶೇಕಡಾ | **51 ವರ್ಷಕ್ಕಿಂತ ಮೇಲ್ಪಟ್ಟು** | ಶೇಕಡಾ | **ಒಟ್ಟು ಪ್ರೇಕ್ಷಕರ (ಜನರ) ಪ್ರತಿಕ್ರಿಯೆ** | ಶೇಕಡಾ |
|---|---|---|---|---|---|---|---|---|---|
| 1 | ಸದ್ಬಳಕೆ ಮಾಡಿಕೊಂಡಿದ್ದಾರೆ. | 110 | 94.8 | 181 | 97.8 | 88 | 96.7 | 379 | 96.7 |
| 2 | ಅನುದಾನ ಸದ್ಬಳಕೆಯಾಗಿಲ್ಲ | 5 | 4.3 | 0 | 0.0 | 1 | 1.1 | 6 | 1.5 |
| 3 | ಅಲ್ಪ–ಸ್ವಲ್ಪ ಅನುದಾನ ಸದ್ಬಳಕೆಯಾಗಿದೆ | 1 | 0.9 | 4 | 2.2 | 3 | 3.3 | 8 | 2.0 |
| 4 | ತೋರಿಕೆಗೋಸ್ಕರ ಕಾರ್ಯಕ್ರಮ ನಡೆಸಿರುತ್ತಾರೆ. | 0 | 0.0 | 0 | 0.0 | 0 | 0.0 | 0 | 0.0 |
| **ಒಟ್ಟು** | | **116** | | **185** | | **91** | | **392** | |

Note: Multiple responses, therefore, total may exceed 100 percent.

**ಮೇಲಿನ ಕೋಷ್ಟಕ 32 ರಲ್ಲಿ** ಒಟ್ಟು **392** ಪ್ರೇಕ್ಷಕರನ್ನು ಸಂಘ-ಸಂಸ್ಥೆಗಳು ಅನುದಾನವನ್ನು ಕಾರ್ಯಕ್ರಮಗಳಿಗೆ ಸದ್ಬಳಕೆ ಮಾಡಿಕೊಂಡಿದ್ದಾರೆಯೇ? ಎಂದು ವಿಚಾರಿಸಿದಾಗ **ಶೇ 96.7** ರಷ್ಟು ಪ್ರೇಕ್ಷಕರು ಅನುದಾನವನ್ನು ಸದ್ಬಳಕೆ ಮಾಡಿಕೊಂಡಿದ್ದಾರೆ ಎಂದು ಹೇಳಿದರೆ, **ಶೇ 1.5** ರಷ್ಟು ಪ್ರೇಕ್ಷಕರು ಅನುದಾನ ಸದ್ಬಳಕೆ ಬಳಕೆಯಾಗಿಲ್ಲ ಎಂದು ಹೇಳಿದ್ದಾರೆ. ಹಾಗೆಯೇ, **ಶೇ 2.0**ರಷ್ಟು ಅಲ್ಪ- ಸ್ವಲ್ಪ ಅನುದಾನ ಸದ್ಬಳಕೆಯಾಗಿದೆ ಎಂದು ಹೇಳಿದ್ದಾರೆ. ಯಾವೊಬ್ಬ ಪ್ರತಿವಾದಿಗಳು ಸಂಘ ಸಂಸ್ಥೆಗಳು ತೋರಿಕೆಗೋಸ್ಕರ ಕಾರ್ಯಕ್ರಮ ನಡೆಸಿರುತ್ತಾರೆ ಎಂದು ಹೇಳಿರುವುದಿಲ್ಲ.

# ಪ್ರಕರಣ ಅಧ್ಯಯನ

ಈ ಮೂರು ಯೋಜನೆಗಳನ್ನು ಮೌಲ್ಯಮಾಪನ ಮಾಡುವ ಸಂದರ್ಭದಲ್ಲಿ ಪ್ರಕರಣ ಅಧ್ಯಯನವನ್ನು ಪರಿಗಣಿಸಲಾಗಿದೆ. 2014–15 ರಿಂದ 2016–17 ರವರೆಗೆ ಒಟ್ಟು 3 ವರ್ಷದಲ್ಲಿ 3194 ಸಂಘ ಸಂಸ್ಥೆಗಳು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಸಾಮಾನ್ಯ ಯೋಜನೆ, ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಗಳ ಅಡಿಯಲ್ಲಿ ಕಲೆ, ಸಾಹಿತ್ಯ, ಸಂಸ್ಕೃತಿ, ಸಂಗೀತ, ನೃತ್ಯ ಮತ್ತು ಜಾನಪದ ಸಂಸ್ಕೃತಿಯನ್ನು ಉಳಿಸಿ ಬೆಳಸಲು ಮತ್ತು ಪೋಷಿಸಲು ಧನಸಹಾಯವನ್ನು ಪಡೆದುಕೊಂಡಿವೆ. ಇದರಲ್ಲಿ ಮೌಲ್ಯಮಾಪನಕ್ಕೆ ಇಡೀ ಕರ್ನಾಟಕದಲ್ಲಿ ಮಾದರಿ ಆಯ್ಕೆಯಾಗಿ 193 ಸಂಘ ಸಂಸ್ಥೆಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಅವುಗಳಲ್ಲಿ ಮೌಲ್ಯಮಾಪನ ಮಾಡುವ ಇಂತಹ ಸಂದರ್ಭದಲ್ಲಿ ಸಾಮಾನ್ಯ ಯೋಜನೆಯಡಿಯಲ್ಲಿ ಒಂದು ಸಂಘ ಸಂಸ್ಥೆಯನ್ನು ವಿಶೇಷ ಘಟಕ ಯೋಜನೆಯಡಿಯಲ್ಲಿ ಒಂದು ಸಂಘ ಸಂಸ್ಥೆಯನ್ನು ಮತ್ತು ಗಿರಿಜನ ಉಪಯೋಜನೆಯ ಅಡಿಯಲ್ಲಿ ಒಂದು ಸಂಘ ಸಂಸ್ಥೆಯನ್ನು ಪ್ರಕರಣ ಅಧ್ಯಯನಕ್ಕೆ ಬಳಸಿಕೊಂಡು ಮೌಲ್ಯಮಾಪನ ಮಾಡಲಾಗಿದೆ. 193 ಸಂಘ ಸಂಸ್ಥೆಗಳಲ್ಲಿ ಯಾವುದನ್ನು ಪ್ರಕರಣ ಅಧ್ಯಯನಕ್ಕೆ ಬಳಸಿಕೊಳ್ಳಬೇಕು ಎಂದು ಯೋಚಿಸಿದಾಗ ಆಯ್ಕೆ ಮಾಡಿಕೊಳ್ಳುವುದು ತುಂಬಾ ಕಷ್ಟಕರವಾದ ಕೆಲಸ. ಜೊತೆಗೆ ಸವಾಲಿನ ವಿಷಯವು ಆಗಿರುತ್ತದೆ. ಇಲ್ಲಿನ ಬಹುತೇಕ ಸಂಘ ಸಂಸ್ಥೆಗಳು ಒಳ್ಳೆಯ ಸಂಘ ಸಂಸ್ಥೆಗಳಾಗಿ ಕಾರ್ಯ ನಿರ್ವಹಿಸುತ್ತಿವೆ. ಆದ್ದರಿಂದ ಇಲ್ಲಿ ರ‍್ಯಾಂಡಮ್ ಆಗಿ ಕೇವಲ ಮೂರು ಸಂಘ ಸಂಸ್ಥೆಗಳನ್ನು ಪರಿಗಣಿಸಿ ಅವುಗಳನ್ನು ಸೂಕ್ಷ್ಮವಾಗಿ ಪ್ರಕರಣ ಅಧ್ಯಯನದಲ್ಲಿ ಬಳಸಿಕೊಂಡು ವಿಶ್ಲೇಷಣೆ ಮಾಡಲಾಗಿದೆ.

**12. ಸಾಮಾನ್ಯ ಯೋಜನೆಯ ಅಡಿಯಲ್ಲಿ ಸಂಗೀತ ಗಂಗಾ ಸಂಸ್ಥೆ (ರಿ), 41/1, ಬಸವನಗುಡಿರಸ್ತೆ, ಬಸವನಗುಡಿ, ಬೆಂಗಳೂರು– 4.**

ಈ ಸಂಗೀತ ಗಂಗಾ ಸಂಸ್ಥೆಯನ್ನು ಸುಪ್ರಸಿದ್ಧ ಸಂಗೀತಗಾರರಾದ ಜಿ.ವಿ.ಅತ್ರಿಯವರು 1993ನೇ ಆಗಸ್ಟ್ 27 ರಂದು ಶುಕ್ರವಾರ ಬೆಂಗಳೂರಿನ ಬಸವನಗುಡಿಯಲ್ಲಿ ಪ್ರಾರಂಭಿಸಿದರು. ಈ ಸಂಗೀತ ಸಂಸ್ಥೆಯ ಉದ್ಘಾಟನೆಯನ್ನು ಖ್ಯಾತ ಗಾಯಕರಾದ ಪಿ.ಬಿ.ಶ್ರೀನಿವಾಸ್ ಮತ್ತು ರಾಜನ್ ನಾಗೇಂದ್ರ ಅವರು ಮಾಡಿದರು. ಈ ಉದ್ಘಾಟನಾ ಸಮಾರಂಭಕ್ಕೆ ಹಲವು ಸಂಗೀತ ವಿದ್ವಾಂಸರು, ಖ್ಯಾತ ಕವಿಗಳು, ಇನ್ನಿತರ ದಿಗ್ಗಜರು ಮತ್ತು ಸಂಗೀತಾ ಆಸಕ್ತರು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು. ಈ ಸಂಗೀತ ಗಂಗಾ ಸಂಸ್ಥೆಯ ಮೂಲಕ ಅನೇಕ ಸಂಗೀತ ಕಾರ್ಯಕ್ರಮಗಳನ್ನು ಪ್ರಾರಂಭದಿಂದಲೇ ನಡೆಸುತ್ತಾ ಬಂದಿದ್ದರು. ಅದರಲ್ಲೂ ವಿಶೇಷವಾಗಿ ಸುಗಮಸಂಗೀತ ಕಾರ್ಯಕ್ರಮಗಳನ್ನು ನಿರಂತರವಾಗಿ ನಡೆಸುತ್ತಾ ಬಂದಿದ್ದಾರೆ. ಆಮೇಲೆ ಈ ಸಂಸ್ಥೆಯ ಮೂಲಕ ಜಾನಪದ ಗೀತೆ, ಭಾವಗೀತೆ, ದೇವರನಾಮ, ಭಕ್ತಿಗೀತೆಗಳು, ದಾಸರಸಂಗೀತ, ಚಿತ್ರಸಂಗೀತ, ನೃತ್ಯ, ಕಾವ್ಯಗಳ ಪ್ರಹಸನ ಮತ್ತು ಇನ್ನು ಹಲವು ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸುತ್ತಾ ಬಂದಿದ್ದಾರೆ. ಜಿ.ವಿ ಅತ್ರಿಯವರು ಈ ಸಂಸ್ಥೆಯನ್ನು ಚೆನ್ನಾಗಿ ಕಟ್ಟಿ ಬೆಳೆಸಿದರು. ಇವರು

ನಿರಂತರವಾಗಿ ಸಂಗೀತ ಕಾರ್ಯಕ್ರಮಗಳನ್ನು ನಡೆಸಿ ಒಳ್ಳೆಯ ಹೆಸರು ಪಡೆದುಕೊಂಡರು. ಇವರು 1994 ರಿಂದ 1999 ರವರೆಗೆ ಕನ್ನಡ ಸಂಗೀತ ಸಮ್ಮೇಳನವನ್ನು ಬೆಂಗಳೂರು, ಗುಲ್ಬರ್ಗ, ಧಾರವಾಡ, ಮೈಸೂರು, ಚಿಕ್ಕಮಗಳೂರು ಮತ್ತು ಬೆಳಗಾಂನಲ್ಲಿ ಮಾಡಿ ಯಶಸ್ವಿಗೊಳಿಸಿದರು. ಸರ್ಕಾರದಿಂದ ಯಾವುದೇ ಸಹಾಯವಿಲ್ಲದೇ ಕನ್ನಡ ಸಂಗೀತ ಸಮ್ಮೇಳನವನ್ನು ಮಾಡಿ ದೊಡ್ಡ ಹೆಸರು ಮಾಡಿದರು. ಆದರೆ. ಜಿ.ವಿ. ಅತ್ರಿಯವರು 2000ನೇ ಇಸವಿ ಏಪ್ರಿಲ್ 30 ರಂದು ಅಕಾಲಿಕ ಮರಣ ಹೊಂದುತ್ತಾರೆ. ಇವರ ಮರಣದ ನಂತರ ಇವರ ತಂಗಿಯಾದ ಶ್ರೀಮತಿ. ಹೇಮಾ ಪ್ರಸಾದ್ ಅವರು ಸಂಗೀತ ಗಂಗಾ ಸಂಸ್ಥೆಯ ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತಾರೆ. ಜಿ.ವಿ. ಅತ್ರಿಯವರು ಕಟ್ಟಿದಂತಹ ಈ ಸಂಗೀತ ಗಂಗಾ ಸಂಸ್ಥೆಯನ್ನು ಹೇಮಾಪ್ರಸಾದ್ ಅವರು ಛಲದಿಂದ ಮುನ್ನಡೆಸುತ್ತಿದ್ದಾರೆ. ಹೇಮಾಪ್ರಸಾದ್ ಅವರು ಈ ಸಂಸ್ಥೆಯ ಅಡಿಯಲ್ಲಿ ಅನೇಕ ಕಾರ್ಯಕ್ರಮಗಳನ್ನು ನಡೆಸುತ್ತಾ ಬಂದಿದ್ದಾರೆ. ಯಾರಿಂದಲೂ ಹಣದ ಸಹಾಯವನ್ನು ಪಡೆಯದೇ ಸ್ವತಃ ಅವರೇ ಹಣವನ್ನು ಕೈಯಿಂದ ಖರ್ಚು ಮಾಡಿ ಎಷ್ಟೋ ಕಾರ್ಯಕ್ರಮಗಳನ್ನು ನಡೆಸಿರುತ್ತಾರೆ.

ಹೇಮಾಪ್ರಸಾದ್ ಅವರು ಸಂಗೀತ ಗಂಗಾ ಸಂಸ್ಥೆಯಿಂದ ನಡೆಸಿದ ಕಾರ್ಯಕ್ರಮಗಳ ಗುಣಮಟ್ಟವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧಿಕಾರಿಗಳು ಮೆಚ್ಚಿ ಧನಸಹಾಯವನ್ನು ನೀಡಿರುತ್ತಾರೆ. ಅಂದರೆ, 2014-15ನೇ ಸಾಲಿನಲ್ಲಿ ರೂ. 5,00,000 (5ಲಕ್ಷ), 2015-16ನೇ ಸಾಲಿನಲ್ಲಿ ರೂ.3,00,000 (3ಲಕ್ಷ), 2016-17ನೇ ಸಾಲಿನಲ್ಲಿ ರೂ. 3,00,000 (ಲಕ್ಷ)ಗಳನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಸಾಮಾನ್ಯ ಯೋಜನೆಯ ಅಡಿಯಲ್ಲಿ ಕನ್ನಡ ನಾಡಿನ ಕಲೆ, ಸಾಹಿತ್ಯ, ನೃತ್ಯ, ಸಂಗೀತ ಮತ್ತು ಸಂಸ್ಕೃತಿಯನ್ನು ಉಳಿಸಿ ಬೆಳಸುವುದಕ್ಕೆ ಧನಸಹಾಯವನ್ನಾಗಿ ಈ ಸಂಸ್ಥೆಗೆ ನೀಡಿರುತ್ತದೆ. ಈ ಸಂಗೀತ ಗಂಗಾ ಸಂಸ್ಥೆಯ ಅಧ್ಯಕ್ಷರಾದ ಹೇಮಾಪ್ರಸಾದ್ ರವರು ಒಳ್ಳೊಳ್ಳೆ ಕಾರ್ಯಕ್ರಮಗಳನ್ನು ನಡೆಸಿರುತ್ತಾರೆ. ಇವರು ಈ ಸಂಸ್ಥೆಯ ನೇತೃತ್ವದಲ್ಲಿ **"ಮಹಿಳಾ ಕಲಾವಿದರ ಸಮ್ಮೇಳನ"**ವನ್ನು ಪ್ರತಿವರ್ಷ ಹಮ್ಮಿಕೊಂಡು ಬರುತ್ತಿದ್ದಾರೆ. ಈ ಸಮ್ಮೇಳನಕ್ಕೆ ರಂಗಭೂಮಿ ಮಹಿಳಾ ಕಲಾವಿದರನ್ನು, ಸಂಗೀತಗಾರರನ್ನು ಹಾಗೂ ಎಲ್ಲಾ ರೀತಿಯ ಮಹಿಳಾ ಕಲಾವಿದರನ್ನು ಕರೆಸಿಕೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿರುತ್ತಾರೆ. ಇವರು ಇನ್ನು ಮುಂದುವರೆದು ಈ ಸಂಗೀತ ಗಂಗಾ ಸಂಸ್ಥೆಯ ಅಡಿಯಲ್ಲಿ ದಾಸರ ಗೀತೆಗಳನ್ನು ರಂಗಭೂಮಿಯ ಗೀತೆಗಳನ್ನು, ಭಾವಗೀತೆಗಳನ್ನು ಕಾರ್ಯಕ್ರಮಗಳ ಮೂಲಕ ನಡೆಸಿಕೊಡುತ್ತಿದ್ದರು. ಇವರು ತಮ್ಮ ಸಂಸ್ಥೆಯ ಮುಖಾಂತರ ಕರ್ನಾಟಕದ ಬೇರೆ ಬೇರೆ ಜಿಲ್ಲೆಗಳಲ್ಲಿ ಕಾರ್ಯಕ್ರಮಗಳನ್ನು ನೀಡಿರುತ್ತಾರೆ. ನಂತರ ಇವರು ಜಿ.ವಿ. ಅತ್ರಿಯವರ ಸ್ಮರಣೆಗೆ 'ಅತ್ರಿ ನೆನಪಿನ ಸಂಗೀತೋತ್ಸವ' ಕಾರ್ಯಕ್ರಮವನ್ನು ರವೀಂದ್ರ ಕಲಾಕ್ಷೇತ್ರದಲ್ಲಿ ಹಮ್ಮಿಕೊಂಡಿದ್ದಾರೆ. ಈ ಕಾರ್ಯಕ್ರಮದಲ್ಲಿ ಕಾವ್ಯ ಸಾಹಿತ್ಯ, ಚಿತ್ರ ಸಂಗೀತ, ನೃತ್ಯ ಕಾರ್ಯಕ್ರಮಗಳನ್ನು ನಡೆಸುತ್ತಿದ್ದರು. ಸಂಸ್ಥೆಯ ವಾರ್ಷಿಕೋತ್ಸವ ಸಮಾರಂಭದಲ್ಲಿ ಸಂಗೀತ ಕಾರ್ಯಕ್ರಮ, ರಸಸಂಜೆ ಕಾರ್ಯಕ್ರಮಗಳನ್ನು ನಡೆಸುತ್ತಾ ಬಂದಿದೆ. ಅದೇರೀತಿ ಈ ಸಂಸ್ಥೆಯ ಮುಖಾಂತರ ಕಲಾವಿದರಿಗೆ, ಕವಿಗಳಿಗೆ, ಸಂಗೀತಗಾರರಿಗೆ, ಸಂಗೀತ ನಿರ್ದೇಶಕರಿಗೆ, ಗಾಯಕರಿಗೆ ಸಂಗೀತ ಗಂಗಾ ಪ್ರಶಸ್ತಿಯನ್ನು ಕೊಟ್ಟಿರುತ್ತಾರೆ.

ಕವಿಗಳಾದ ಪು.ತಿ.ನ, ಕಯ್ಯಾರ ಕಿಂಞ್ಞಣ್ಣ ರೈ, ಜಿ.ಎಸ್.ಎಸ್, ನಿಸಾರ್ ಅಹಮದ್, ಚೆನ್ನವಿರಕಣವಿ, ಲಕ್ಷ್ಮೀನಾರಾಯಣ, ಹೆಚ್.ಎಸ್.ವಿ, ದೊಡ್ಡರಂಗೇಗೌಡ, ಚಂದ್ರಶೇಖರ್ ಕಂಬಾರ್, ಸ.ಸಿ. ಮರಳಯ್ಯ ಇವರಿಗೆ ಸಂಗೀತ ಗಂಗಾ ಪ್ರಶಸ್ತಿಯನ್ನು ನೀಡಿತು. ಅದೇರೀತಿ ಸಂಗೀತ ನಿರ್ದೇಶಕರಾದ ವಿಜಯಬಾಸ್ಕರ್, ಸಿ.ಅಶ್ವತ್, ಹಂಸಲೇಖ, ವಸಂತ ಕನಕಾಪುರ, ರಾಜನ್ ನಾಗೇಂದ್ರರವರಿಗೆ ಸಂಗೀತ ಗಂಗಾ ಪ್ರಶಸ್ತಿಯನ್ನು ನೀಡಿದೆ. ತದನಂತರ ಈ ಸಂಸ್ಥೆಯು ಗಾಯಕರಾದ ಪಿ.ಬಿ.ಶ್ರೀನಿವಾಸ, ಎಸ್.ಜಾನಕಿ, ಬಾಲಸುಬ್ರಮಣ್ಯಂ, ಸಶೀಲಾ, ಬಿ. ಕೆ ಸುಮಿತ್ರ, ಎಲ್.ಆರ್.ಈಶ್ವರಿ, ಕಸ್ತೂರಿಶಂಕರ್, ಶಿವಮೊಗ್ಗ ಸುಬ್ಬಣ್ಣ, ಬಾನಂದೂರು ಕೆಂಪಯ್ಯ ಅವರಿಗೆ ಸಂಗೀತ ಗಂಗಾ ಪ್ರಶಸ್ತಿ ನೀಡಿ ಗೌರವಿಸಿತು. ಇಂದಿಗೂ ಈ ಸಂಸ್ಥೆಯು ನಿರಂತರವಾಗಿ ಕಾರ್ಯಕ್ರಮಗಳನ್ನು, ಸಂಗೀತೋತ್ಸವ ಸಮಾರಂಭಗಳನ್ನು, ಪುರಂದರದಾಸರ ಆರಾಧನಾ ಕಾರ್ಯಕ್ರಮವನ್ನು ನಡೆಸುತ್ತಿದೆ. ಈ ಸಂಸ್ಥೆಯು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ನೀಡುವ ಅನುದಾನಕ್ಕೆ ಮಾತ್ರ ಸೀಮಿತವಾಗಿಲ್ಲ. ಅದರ ಆಚೆಗೂ ಸಂಸ್ಥೆಯ ಅಧ್ಯಕ್ಷರ ನೇತೃತ್ವದಲ್ಲಿ ಅನೇಕ ಕಾರ್ಯಕ್ರಮಗಳನ್ನು ನಡೆಸುತ್ತಾ ಬಂದಿದೆ. ಈ ಸಂಗೀತ ಗಂಗಾ ಸಂಸ್ಥೆಯು  ಇಂದು ಬೆಂಗಳೂರಿನಲ್ಲಿ ಪ್ರತಿಷ್ಠಿತ ಸಂಸ್ಥೆಯಾಗಿ ಕೆಲಸ ಮಾಡುತ್ತಿದೆ.

## 12.1. ವಿಶೇಷ ಘಟಕ ಯೋಜನೆಯ ಅಡಿಯಲ್ಲಿ 'ಗೋತಮಿ ಫೌಂಡೇಷನ್ ಸಂಸ್ಥೆ (ರಿ)' ನಂ.226, ಕೆ. ಲಿಂಗಯ್ಯ ಸೊಸೈಟಿ ರಸ್ತೆ, ಕಿರುಗಂದೂರು. ಮಂಡ್ಯ ತಾ/ ಜಿಲ್ಲೆ

ಈ ಸಂಸ್ಥೆಯು ಪ್ರಾರಂಭವಾಗಿ ಸುಮಾರು 10 ವರ್ಷವಾಗಿದೆ. ಈ ಸಂಸ್ಥೆಯು ಮಂಡ್ಯದಲ್ಲಿ ಪ್ರತಿಷ್ಠಿತ ಸಂಸ್ಥೆಯಾಗಿ ಕೆಲಸ ಮಾಡುತ್ತಿದೆ. ಇದು ಪ್ರತಿವರ್ಷ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿ ವಿಶೇಷ ಘಟಕ ಯೋಜನೆಯ ಅಡಿಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಧನಸಹಾಯವನ್ನು ಪಡೆದುಕೊಂಡಿದೆ. ಅಂದರೆ, ವಿಶೇಷ ಘಟಕ ಯೋಜನೆಯ ಅಡಿಯಲ್ಲಿ 2014-15ನೇ ಸಾಲಿನಲ್ಲಿ ರೂ. 6,00,000 (6ಲಕ್ಷ), 2015-16ನೇ ಸಾಲಿನಲ್ಲಿ ರೂ.5,00,000 (5ಲಕ್ಷ), 2016-17ನೇ ಸಾಲಿನಲ್ಲಿ ರೂ.8,00,000 (8ಲಕ್ಷ) ಗಳನ್ನು ಧನಸಹಾಯವನ್ನಾಗಿ ಪಡೆದುಕೊಂಡು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುತ್ತಾ ಬಂದಿದೆ. ಇದು ಮಂಡ್ಯದಲ್ಲಿ ಪ್ರಾರಂಭವಾದರೂ ಇಡೀ ಕರ್ನಾಟಕದಾದ್ಯಂತ ನಾಟಕ ಪ್ರದರ್ಶನಗಳನ್ನು ಮಾಡಿ ದೊಡ್ಡ ಹೆಸರು ಮಾಡಿದೆ. ಈ ಸಂಸ್ಥೆಯು ನಮ್ಮ ನಾಡಿನ ಮತ್ತು ದೇಶದ ಇತಿಹಾಸದ ಬಗ್ಗೆ, ಸಂಸ್ಕೃತಿಯ ಬಗ್ಗೆ, ರಾಷ್ಟ್ರೀಯ ಭಾವೈಕ್ಯತೆಯ ಬಗ್ಗೆ ನಾಟಕಗಳ ಮೂಲಕ ಜೀವತುಂಬಿ ಸಾಮಾಜಿಕರಿಗೆ, ಪ್ರೇಕ್ಷಕರಿಗೆ ಅರಿವು ಮೂಡಿಸಿರುತ್ತಾರೆ. ಹಾಗೆಯೇ ಈ ಎಲ್ಲಾ ವಿಷಯಗಳ ಮೇಲೆ ಬೆಳಕು ಚೆಲ್ಲಿ ಜನರಲ್ಲಿ ಜಾಗೃತಿ ಮೂಡಿಸುವುದಕ್ಕಾಗಿ ಅನೇಕ ಕಾರ್ಯಕ್ರಮಗಳನ್ನು ಆಯೋಜಿಸುತ್ತಾ ಬಂದಿದ್ದಾರೆ. ನಮ್ಮ ಹೆಮ್ಮೆಯ ಭಾರತದ ಇತಿಹಾಸದಲ್ಲಿ ಪ್ರಜೆಗಳಿಗೆ ಬೇಕಾದ ಜೀವನ ಮೌಲ್ಯಗಳನ್ನು ಪರಿಚಯಿಸುವಲ್ಲಿ ಯಶಸ್ವಿಯಾಗಿದ್ದಾರೆ. ಜನರ ಆರೋಗ್ಯ, ಶಾಂತಿ, ನೆಮ್ಮದಿ, ಸೌಹಾರ್ದತೆ, ಪ್ರೀತಿ, ಕರುಣೆ, ಬಾತೃತ್ವ ಹಾಗು ಮಿತ್ರತ್ವಗಳನ್ನು ಬೆಳಸಿಕೊಂಡು ಜನರು ಹೇಗೆ ಬಾಳಿ ಬದುಕಬೇಕು ಎಂಬುದನ್ನು ಆಧರಿಸಿ ನಾಟಕಗಳ ಪ್ರಯೋಗ ಮಾಡಿದ್ದಾರೆ. ಜನರಿಗೆ ಪ್ರೇರಣೆ ನೀಡುವಂತಹ ನಾಟಕಗಳನ್ನು ಪ್ರದರ್ಶನ ಮಾಡಿರುತ್ತಾರೆ. ಐತಿಹಾಸಿಕವಾಗಿ ಪ್ರಸಿದ್ಧಿ ಹೊಂದಿದಂತಹ

ಸಾಮ್ರಾಟ್ ಅಶೋಕನ ಸಾಧನೆ ಮತ್ತು ಜನಪ್ರಿಯತೆಯನ್ನು ಕೇಂದ್ರೀಕರಿಸಿ 'ದೇವನಾಂಪ್ರಿಯ ಅಶೋಕ'ಎಂಬ ನಾಟಕವನ್ನು ರಚಿಸಿ ನಾಡಿನ ವಿವಿಧ ಸ್ಥಳಗಳಲ್ಲಿ ಪ್ರದರ್ಶನ ಮಾಡಿ ಗೋತಮಿ ಫೌಂಡೇಷನ್ ತಂಡ ಜನರಿಂದ ಮನ್ನಣೆ ಗಳಿಸಿದೆ. ಈ ನಾಟಕದಲ್ಲಿ ಅಶೋಕ ತನ್ನ ಕಾಲದಲ್ಲಿ ಜನರಿಗೆ ಸಾರಿಗೆ ವ್ಯವಸ್ಥೆ, ರೈತರಿಗೆ ಕೆರೆ-ಕಟ್ಟೆ-ಕಾಲುವೆಗಳ ನಿರ್ಮಾಣ, ಜನರಿಗೆ, ಜಾನುವಾರುಗಳಿಗೆ ಮತ್ತು ಪ್ರಾಣಿ ಪಕ್ಷಿಗಳಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಹೇಗೆ ಮಾಡುತ್ತಿದ್ದನು ಎಂಬುದರ ಬಗ್ಗೆ ಅರಿವು ಮೂಡಿಸಿರುತ್ತಾರೆ. ಸಾಮ್ರಾಟ ಅಶೋಕ ಸಾರ್ವಜನಿಕರಿಗಾಗಿ ರಸ್ತೆಗಳ ಬದಿಯಲ್ಲಿ ಸಾಲುಮರಗಳ ನಿರ್ಮಾಣ ಹಾಗು ಜ್ಞಾನಾರ್ಜನೆಗೆ ಗುರುಕುಲಗಳ ನಿರ್ಮಾಣಗಳನ್ನು ಯಾವ ರೀತಿ ವ್ಯವಸ್ಥೆ ಮಾಡಿದ್ದನು ಎಂಬುದರ ಬಗ್ಗೆ ನಾಟಕದ ಮೂಲಕ ತಿಳಿಸಲಾಗುತ್ತಿತ್ತು. ಹಾಗೆಯೇ ಸಾಮ್ರಾಟ ಅಶೋಕ ಇನ್ನು ಅನೇಕ ಯೋಜನೆಗಳನ್ನು ಯಾವ ರೀತಿ ಮಾಡುತ್ತಿದ್ದನು ಎನ್ನುವುದರ ಬಗ್ಗೆ ನಾಟಕದ ಮೂಲಕ ತೋರಿಸಿ ಕೊಡಲಾಗುತ್ತಿತ್ತು.

ಈ ಸಂಸ್ಥೆಯು ನಾಟಕ ಪ್ರದರ್ಶನ ಮಾಡಿಸುವಲ್ಲಿ ಪ್ರಸಿದ್ಧಿಯಾಗಿದೆ. ಮೂಲಭೂತವಾಗಿ ಈ ಸಂಸ್ಥೆಯು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಧನಸಹಾಯ ಹಾಗು ವಿವಿಧ ಸಂಘ ಸಂಸ್ಥೆಗಳ ಸಹಾಕಾರದಿಂದ ದೊಡ್ಡ ಹೆಸರು ಮಾಡಿರುತ್ತದೆ. ಇದು ಮಾನವನ ಎಲ್ಲಾ ಮೌಲ್ಯಗಳನ್ನು ಪ್ರತಿಬಿಂಬಿಸುವಂತಹ ನಾಟಕಗಳನ್ನು ಪ್ರದರ್ಶನ ಮಾಡಿಸಿರುತ್ತದೆ. ಪ್ರಮುಖವಾಗಿ ಕ್ರಾಂತಿಕಾರಿ ಬಸವಣ್ಣನ ಚಿಂತನೆ ಮತ್ತು ವಿಚಾರಗಳ ಬಗ್ಗೆ ನಾಟಕವನ್ನು ಪ್ರದರ್ಶನ ಮಾಡಿಸಿದ್ದಾರೆ. ಹಾಗೆಯೇ ಮಾನವತಾವಾದಿ ಡಾ.ಬಿ.ಆರ್. ಅಂಬೇಡ್ಕರ್ ರವರ ವಿಚಾರಗಳನ್ನು ಪ್ರೇಕ್ಷಕರಿಗೆ ತಿಳಿಸುವುದಕ್ಕಾಗಿ ಅವರ ವಿಚಾರಗಳ ಮೇಲೆ ನಾಟಕವನ್ನು ರಚನೆ ಮಾಡಿಸಿ ನಾಟಕವನ್ನು ಪ್ರದರ್ಶನ ಮಾಡಿಸಿದ್ದಾರೆ. ಹಾಗೆಯೇ ಅಂಗುಲಿ ಮಾಲ, ಕಿಸಾಗೋತಮಿ, ಮಹಾಪೌರ್ಣಿಮೆ ಇನ್ನು ಮುಂತಾದ ನಾಟಕಗಳನ್ನು ಪ್ರದರ್ಶನ ಮಾಡಿಸಿ ಅರಿವು ಮೂಡಿಸಿರುತ್ತಾರೆ.

ಅಲ್ಲದೆ ಕಾಲ ಕಾಲಕ್ಕೆ ಕಂಡು ಬರುವ ಪ್ರಚಲಿತ ವಿದ್ಯಾಮಾನಗಳನ್ನು ಕೇಂದ್ರೀಕರಿಸಿ ಬೀದಿ ನಾಟಕಗಳನ್ನು ಪ್ರದರ್ಶನ ಮಾಡಿಸಿರುತ್ತಾರೆ. ಈ ಸಂಸ್ಥೆಯು ರಾಜ್ಯ, ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಸುಮಾರು 153 ಕ್ಕೂ ಹೆಚ್ಚು ನಾಟಕಗಳನ್ನು ಪ್ರದರ್ಶನ ಮಾಡಿಸಿದೆ. ಹೀಗೆ ನಾಟಕ ಪ್ರದರ್ಶನ ಮಾಡಿಸುವುದರ ಜೊತೆಗೆ ರಂಗ ತರಬೇತಿ ಶಿಬಿರಗಳನ್ನು ಏರ್ಪಡಿಸಿರುತ್ತದೆ. ಈ ಸಂಸ್ಥೆಯ ಮೂಲಕ ಸರಾಸರಿ 20 ರಿಂದ 30 ರವರೆಗೆ ಕಲಾವಿದರಿಗೆ ಅವಕಾಶ ಮಾಡಿಕೊಟ್ಟಿದೆ. ಈ ಸಂಸ್ಥೆಯಿಂದ ತರಬೇತಿ ಪಡೆದ ಅನೇಕ ಕಲಾವಿದರು ಎನ್ ಎಸ್ ಡಿ ಯಲ್ಲಿ ಮತ್ತು ಗಂಗೂ ಬಾಯಿ ಹಾನಗಲ್ ವಿಶ್ವವಿದ್ಯಾಲಯದಲ್ಲಿ ಡಿಪ್ಲೋಮಾ ಮತ್ತು ಪದವಿಗಳನ್ನು ಪಡೆದಿರುತ್ತಾರೆ. ಗೋತಮಿ ಫೌಂಡೇಷನ್ ಸಂಸ್ಥೆಯು ಇಂತಹ ಎಲ್ಲಾ ಕಾರ್ಯಕ್ರಮಗಳನ್ನು ರಂಗಕರ್ಮಿ ಶಿವಲಿಂಗಯ್ಯ ಅವರ ನೇತೃತ್ವದಲ್ಲಿ ಆಯೋಜಿಸಿರುತ್ತದೆ. ಈ ಸಂಸ್ಥೆಯು ಶಿವಲಿಂಗಯ್ಯ ಅವರ ನೇತೃತ್ವದಲ್ಲಿ ಒಳ್ಳೆಯ ಹೆಸರು ಗಳಿಸಿಕೊಂಡರೆ, ಶಿವಲಿಂಗಯ್ಯನವರು ಸಂಸ್ಥೆಯ ಮುಖಾಂತರ ದೊಡ್ಡ ಹೆಸರು ಗಳಿಸಿಕೊಂಡಿದ್ದಾರೆ. ಆದ್ದರಿಂದಲೇ ಶಿವಲಿಂಗಯ್ಯನವರಿಗೆ ಅವರ

ಸಾಧನೆಯನ್ನು ಮೆಚ್ಚಿ ಕರ್ನಾಟಕ ಸರ್ಕಾರ 2019 ರ ಸಾಲಿನಲ್ಲಿ ಕನ್ನಡ ರಾಜ್ಯೋತ್ಸವ ಪ್ರಶಸ್ತಿಯನ್ನು ಪ್ರಧಾನ ಮಾಡಿರುತ್ತದೆ. ಈ ಹಿನ್ನೆಲೆಯಲ್ಲಿ ಗೋತಮಿ ಫೌಂಡೇಷನ್‌ಗೆ ಕರ್ನಾಟಕದ ಸಾಂಸ್ಕೃತಿಕ ಲೋಕದಲ್ಲಿ ದೊಡ್ಡ ಹೆಸರು ಇದೆ.

## 12.2 ಗಿರಿಜನ ಉಪಯೋಜನೆಯ ಅಡಿಯಲ್ಲಿ ಮದಕರಿಯುವಕ ಸಂಘ (ರಿ). ಕರುವಿನ ಕಟ್ಟೆ ಸರ್ಕಲ್, ಕಭೀರಾನಂದ ನಗರ, ಚಿತ್ರದುರ್ಗ–577501

ಮದಕರಿ ಯುವಕ ಸಂಘ (ರಿ) ಸಂಸ್ಥೆಯು ಚಿತ್ರದುರ್ಗ ನಗರದಲ್ಲಿ ಒಂದು ಪ್ರತಿಷ್ಠಿತ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿದೆ. ಈ ಸಂಸ್ಥೆಯು 2001–02 ರಲ್ಲಿ ಸ್ಥಾಪನೆಯಾಗಿದೆ. ಇದು ಕಲೆ, ಸಾಹಿತ್ಯ, ಸಂಸ್ಕೃತಿ ಮತ್ತು ಜಾನಪದ ಕಲಾಪ್ರಕಾರಗಳನ್ನು ಉಳಿಸಿ ಬೆಳೆಸುವ ಕೆಲಸವನ್ನು ಮಾಡುತ್ತಿದೆ. ಈ ಸಂಸ್ಥೆಯು ತುಂಬಾ ಸಕ್ರಿಯವಾಗಿ ಸಮಾಜಮುಖಿಯಾಗಿ ತೊಡಗಿಕೊಂಡಿದೆ. ಇದು ಪ್ರತಿವರ್ಷ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಗಿರಿಜನ ಉಪಯೋಜನೆ (ವಿಶೇಷ ಯೋಜನೆ) ಯ ಅಡಿಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲು ಅನುದಾನವನ್ನು ತೆಗೆದುಕೊಳ್ಳುತ್ತಿದೆ. 2014–15ನೇ ಸಾಲಿನಲ್ಲಿ ರೂ.1,50,000, (1.5 ಲಕ್ಷ) ತೆಗೆದುಕೊಂಡರೆ, 2015–16ನೇ ಸಾಲಿನಲ್ಲಿ ರೂ.2,00,000 (2ಲಕ್ಷ) ಗಳನ್ನು ತೆಗೆದುಕೊಂಡಿದೆ. ಹಾಗೆಯೇ 2016–17ನೇ ಸಾಲಿನಲ್ಲಿ ರೂ. 2,00,000 (2ಲಕ್ಷ) ಗಳನ್ನು ತೆಗೆದು ಕೊಂಡಿರುತ್ತದೆ. ಈ ಸಂಸ್ಥೆಯ ಪ್ರಮುಖ ಉದ್ದೇಶವೇನಂದರೆ ಜಾನಪದ ಕಲೆ ಮತ್ತು ಸಂಸ್ಕೃತಿಯನ್ನು ಉಳಿಸಿ ಬೆಳೆಸುವುದಾಗಿದೆ. ಆದ್ದರಿಂದಲೇ ಅಲ್ಲಿನ ಸ್ಥಳೀಯ ಸಂಸ್ಕೃತಿ ಮತ್ತು ಕಲೆಗೆ ಹೆಚ್ಚಿನ ಆದ್ಯತೆಯನ್ನು ಕೊಟ್ಟಿರುತ್ತದೆ. ಜೊತೆಗೆ ಈ ಸಂಸ್ಥೆಯು ಕಲೆ ಮತ್ತು ಸಂಸ್ಕೃತಿಯ ಬಗ್ಗೆ ಜನರಿಗೆ, ಸಾಮಾಜಿಕರಿಗೆ, ಪ್ರೇಕ್ಷಕರಿಗೆ ಅರಿವು ಮತ್ತು ಜಾಗೃತಿ ಮೂಡಿಸುವ ಕೆಲಸವನ್ನು ಮಾಡುತ್ತಿದೆ. ಅಷ್ಟೇಅಲ್ಲ ಅವುಗಳನ್ನು ಉನ್ನತ ಶಿಖರಕ್ಕೆ ತೆಗೆದುಕೊಂಡು ಹೋಗುವುದೇ ಈ ಸಂಸ್ಥೆಯ ಪ್ರಮುಖ ಆಶಯವಾಗಿದೆ.

ಒಳ್ಳೆಯ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿ ಜನಸಾಮಾನ್ಯರಿಗೆ ತಲುಪಿಸುವ ಕೆಲಸವನ್ನು ಮಾಡುತ್ತಾ ಬಂದಿದೆ. ಜಾನಪದ ಕಲಾಪ್ರಕಾರಗಳಲ್ಲಿ ಪ್ರಾದೇಶಿಕವಾಗಿ ಚಿತ್ರದುರ್ಗದಲ್ಲಿ ವಿಶೇಷವಾಗಿ ಕಂಡು ಬರುವ ಡೊಳ್ಳು ಕುಣಿತ, ಮರಗಾಲು ಕುಣಿತ, ವೀರಗಾಸೆ ನೃತ್ಯ, ಭಜನೆ, ಕೋಲಾಟ, ಕಹಳೆ ವಾದನ, ತಮಟೆ ವಾದ್ಯ, ಉರಿಮೆ ಬಾರಿಸುವುದು, ಜಾನಪದ ಸಂಗೀತ, ಜಾನಪದ ನೃತ್ಯ, ಮ್ಯಾಸಬೇಡರ ನೃತ್ಯ, ಕರಡಿ ಮಜಲು ಇನ್ನು ಮುಂತಾದ ನೃತ್ಯಗಳು ಚಿತ್ರದುರ್ಗದ ಸಾಂಸ್ಕೃತಿ ಪರಂಪರೆಯನ್ನು ಎತ್ತಿ ತೋರಿಸುತ್ತವೆ. ಅದರಲ್ಲೂ ವಿಶೇಷವಾಗಿ ಈ ಸಂಸ್ಥೆಯು ಮದಕರಿನಾಯಕನಿಗೆ ಸಂಬಂಧಿಸಿದಂತೆ ಏಕಪಾತ್ರ ಅಭಿನಯ, ಐತಿಹಾಸಿಕ ನಾಟಕಗಳನ್ನು ಪ್ರದರ್ಶನಗೊಳಿಸಿ ನಾಡಿನ ಸಾಂಸ್ಕೃತಿಕ ಲೋಕವನ್ನೆ ಬೆರಗುಗೊಳಿಸಿರುತ್ತದೆ. ಈ ಸಂಸ್ಥೆಯು ಇಂತಹ ಕಾರ್ಯಕ್ರಮಗಳನ್ನು ಮಾಡುವುದರ ಮೂಲಕ ಕಲಾವಿದರ ಬದುಕಿಗೆ ಆಸರೆಯಾಗಿರುತ್ತದೆ. ಜೊತೆಗೆ ಕಲೆಗೆ ಹೆಚ್ಚಿನ ಅವಕಾಶಗಳನ್ನು ಈ ಸಂಸ್ಥೆಯು ನೀಡಿರುತ್ತದೆ. ವಿಶೇಷವಾಗಿ ಈ ಸಂಸ್ಥೆಯು ಗ್ರಾಮೀಣ ಸಂಸ್ಕೃತಿಯಲ್ಲಿ ಬಡತನದಲ್ಲಿರುವ ಕಲಾವಿದರಿಗೆ ಹೆಚ್ಚಿನ ಆದ್ಯತೆಯನ್ನು ಕೊಟ್ಟಿದೆ. ಹಾಗೆಯೇ ಅವರಿಂದ

ಕಲೆಯನ್ನು ಪ್ರದರ್ಶಿಸಿ ಅವರ ಬದುಕಿಗೆ ಮತ್ತು ಕಲೆಗೆ ಈ ಸಂಸ್ಥೆಯು ಆಶ್ರಯವಾಗಿದೆ. ಇದನ್ನು ಈ ಸಂಸ್ಥೆಯು ಏರ್ಪಡಿಸಿರುವ ಅನೇಕ ಕಾರ್ಯಕ್ರಮಗಳ ಮೂಲಕ ತಿಳಿಯಬಹುದಾಗಿದೆ. ಒಟ್ಟಿನಲ್ಲಿ ಮದಕರಿ ಯುವಕ ಸಂಘ (ರಿ) ಸಂಸ್ಥೆಯು ತನ್ನದೆ ಆದ ರೀತಿಯಲ್ಲಿ ತನ್ನ ತನವನ್ನು ಉಳಿಸಿಕೊಂಡಿದೆ.

# ಅನುಷ್ಠಾನ ಅಧಿಕಾರಿಗಳೊಂದಿಗೆ ಮತ್ತು ಸಂಘ ಸಂಸ್ಥೆಗಳ ಮುಖ್ಯಸ್ಥರೊಂದಿಗೆ ಸಮೂಹ ಚರ್ಚೆ

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಡಿಯಲ್ಲಿ ಸಾಮಾನ್ಯ ಯೋಜನೆ, ವಿಶೇಷ ಘಟಕ ಯೋಜನೆ, ಗಿರಿಜನ ಉಪಯೋಜನೆಯ ಮೂಲಕ ಎಲ್ಲಾ ವರ್ಗದ ಸಂಘ ಸಂಸ್ಥೆಗಳಿಗೆ ಧನಸಹಾಯವನ್ನು ನೀಡುತ್ತಾ ಬಂದಿದೆ. ಹಾಗಾಗಿ ಈ ಯೋಜನೆಗಳನ್ನು ಅನುಷ್ಠಾನಗೊಳಿಸಿದ ಅಧಿಕಾರಿಗಳೊಂದಿಗೆ ಮತ್ತು ಧನಸಹಾಯವನ್ನು ಪಡೆದುಕೊಂಡ ಸಂಘ ಸಂಸ್ಥೆಗಳ ಮುಖ್ಯಸ್ಥರೊಂದಿಗೆ ಯೋಜನೆಗಳಲ್ಲಿನ ಸಾಧಕ ಬಾಧಕಗಳ ಬಗ್ಗೆ, ಕುಂದು ಕೊರೆತೆಗಳ ಬಗ್ಗೆ ಮತ್ತು ಬದಲಾವಣೆಯ ಬಗ್ಗೆ ಸಮೂಹ ಚರ್ಚೆಯನ್ನು ಮಾಡಲಾಯಿತು.

## 13.0 ಅನುಷ್ಠಾನಗೊಳಿಸುವ ಅಧಿಕಾರಿಗಳೊಂದಿಗೆ ಸಮೂಹ ಚರ್ಚೆ

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು 2014-15 ರಿಂದ 2016-17ನೇ ಸಾಲಿನಲ್ಲಿ ಸಾಹಿತ್ಯ ಪರ/ಸಾಂಸ್ಕೃತಿಕ ಪರ ಮತ್ತು ಕನ್ನಡ ಪರ ಕಾರ್ಯಕ್ರಮಗಳಿಗೆ ನೀಡಿದ ಪ್ರೋತ್ಸಾಹ ಧನವನ್ನು ಸಂಘ ಸಂಸ್ಥೆಗಳು ಸದ್ಬಳಕೆ ಮಾಡಿಕೊಂಡಿರುವ ಬಗ್ಗೆ ಮೌಲ್ಯಮಾಪನ ಮಾಡಲಾಗಿದೆ. ಇದರ ಸಂಬಂಧವಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಶಿಲ್ಪ ಕಲಾ ವಿಭಾಗದಲ್ಲಿನ ಸಭಾಂಗಣದಲ್ಲಿ ಅನುಷ್ಠಾನಗೊಳಿಸಿದ ಅಧಿಕಾರಿಗಳೊಂದಿಗೆ ಸಂವಾದ ಅಥವಾ ಗುಂಪು ಚರ್ಚೆಗೆ ದಿನಾಂಕ 15.10.2019ರಂದು ಮಧ್ಯಾಹ್ನ 3.00 ಗಂಟೆಗೆ ಸಭೆ ಕರೆಯಲಾಗಿತ್ತು. ಈ ಸಭೆಗೆ ಪ್ರಸ್ತುತ ಕರ್ತವ್ಯದಲ್ಲಿದ್ದ ಜಂಟಿನಿರ್ದೇಶಕರು, ನಿರ್ದೇಶಕರು, ಸಹಾಯಕ ನಿರ್ದೇಶಕರು, ಮತ್ತು ಇನ್ನಿತರ ಅಧಿಕಾರಿ ವರ್ಗದವರು ಹಾಜರಾಗಿದ್ದರು.

ಈ ಸಭೆಯಲ್ಲಿ ಮುಖ್ಯವಾಗಿ ಕರ್ನಾಟಕದ ಕಲೆ, ಸಾಹಿತ್ಯ, ಸಂಸ್ಕೃತಿ ಮತ್ತು ಜಾನಪದ ಕಲಾಪ್ರಕಾರಗಳನ್ನು ಉಳಿಸಿ ಬೆಳಸಿ ಸಂರಕ್ಷಿಸುವ ಸಲುವಾಗಿ ಸಂಘ ಸಂಸ್ಥೆಗಳಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಧನಸಹಾಯವನ್ನು ನೀಡಿರುತ್ತದೆ. ಆದರೆ, ಸಂಘ ಸಂಸ್ಥೆಗಳು ಧನಸಹಾಯವನ್ನು ಯಾವ ರೀತಿ ಸದ್ಬಳಕೆ ಮಾಡಿಕೊಂಡಿವೆ ಎಂಬುದನ್ನು ತಿಳಿಯಲು, ಈ ಯೋಜನೆಗಳಲ್ಲಿ ಏನಾದರು ಬದಲಾವಣೆ ತರುವುದರ ಬಗ್ಗೆ ಹಾಗು ಅಲ್ಲಿನ ಸಾಧಕ - ಬಾಧಕಗಳ ಬಗ್ಗೆ ವಿವರವಾಗಿ ಚರ್ಚಿಸಲು ಸಂವಾದ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಸಭೆಯಲ್ಲಿ 2014-15 ರಿಂದ 2016-17ನೇ ಸಾಲಿನ ಅವಧಿಯನ್ನು ಕೇಂದ್ರೀಕರಿಸಿ ಈ ಮೂರು ವರ್ಷಗಳ ಅವಧಿಯನ್ನು ಪರಿಗಣಿಸಿ ಮೌಲ್ಯಮಾಪನ ಮಾಡಲಾಗುತ್ತಿದೆ. ಆದ್ದರಿಂದ ಈ ಮೂರು ವರ್ಷಗಳ ಅವಧಿಯಲ್ಲಿನ ವಿಷಯಗಳನ್ನು ಕೇಂದ್ರೀಕರಿಸಿ ಈ ಗುಂಪು ಚರ್ಚೆಯಲ್ಲಿ ಮುಕ್ತವಾಗಿ ಇಲಾಖೆಯ ಆಡಳಿತದ ಬಗ್ಗೆ, ಸಂಘ ಸಂಸ್ಥೆಗಳನ್ನು ಪರಿಗಣಿಸುವುದರ ಬಗ್ಗೆ ಮತ್ತು ಕಲಾವಿದರ ಬಗ್ಗೆ ಕುರಿತು ಮುಕ್ತವಾಗಿ ಚರ್ಚೆ ಮಾಡಲಾಯಿತು.

## 13.1 ಸಮೂಹ ಚರ್ಚೆ ಮಾಡಿದಾಗ ಕಂಡುಬಂದ ಅಂಶಗಳು.

ಅನುಷ್ಠಾನಗೊಳಿಸುವ ಅಧಿಕಾರಿಗಳಿಗೆ ಸಂಸ್ಕೃತಿಯ ಉಳಿವಿಗೆ ಧನಸಹಾಯವನ್ನು ನೀಡುವಾಗ ನೀವು ಯಾವ ರೀತಿಯ ಸಂಘ ಸಂಸ್ಥೆಗಳನ್ನು ಪರಿಗಣಿಸುತ್ತೀರಾ ಎಂದು ಕೇಳಿದಾಗ, ಅವರು ಹೇಳುವುದೇನೆಂದರೆ,

- ಸಹಕಾರ ಇಲಾಖೆಯಲ್ಲಿ ನೋಂದಣಿಯಾಗಿರುವ ಸಂಘ ಸಂಸ್ಥೆಗಳಿಗೆ ಹಣವನ್ನು ನೀಡಲಾಗುತ್ತದೆ. ಅದರ ಜೊತೆಗೆ ಟ್ರಸ್ಟ್‌ಗಳನ್ನು ಪರಿಗಣಿಸಿ ಹಣವನ್ನು ನೀಡಲಾಗಿದೆ ಎಂದು ಹೇಳಿದರು. ಸಹಕಾರ ಸಂಘದಲ್ಲಿ ನೋಂದಣಿಯಾದ ಸಂಘ ಸಂಸ್ಥೆಗಳಿಗೆ ಹಣ ಕೊಡುವುದು ಸೂಕ್ತವಾಗಿದೆ. ಏಕೆಂದರೆ, ಆ ಸಂಸ್ಥೆಗಳು ಪ್ರತಿ ವರ್ಷ ಸಹಕಾರ ಸಂಘದಲ್ಲಿ ನೋಂದಣಿ ಮಾಡಿಕೊಳ್ಳುತ್ತವೆ. ಟ್ರಸ್ಟ್‌ಗಳು ಪ್ರತಿ ವರ್ಷ ನೋಂದಣಿ ಮಾಡಿಸುವುದಿಲ್ಲ. ಒಂದು ಸಾರಿ ಟ್ರಸ್ಟ್ ಪ್ರಾರಂಭವಾದರೆ ಅವರು ಜೀವನ ಪೂರ್ತಿ ಅನುಕೂಲ ಪಡೆಯಬಹುದು. ಹಾಗಾಗಿ ಟ್ರಸ್ಟಿನವರು ಸರಿಯಾದ ರೀತಿಯಲ್ಲಿ ಕಾರ್ಯಕ್ರಮ ನಡೆಸಲು ಯೋಚಿಸುವುದಿಲ್ಲ. ಆದ್ದರಿಂದ ಪ್ರತಿ ಸಂಘ–ಸಂಸ್ಥೆಗಳು ಸಹಕಾರ ಸಂಘದಿಂದ ನೋಂದಣಿ ಮಾಡಿಸಿದರೆ ಒಳ್ಳೆಯದು ಎಂದು ಅಧಿಕಾರಿಗಳು ಹೇಳಿರುತ್ತಾರೆ.
- ಸಂಘ–ಸಂಸ್ಥೆಗಳ ಕ್ರಿಯಾ ಯೋಜನೆಯನ್ನು ಪರಿಗಣಿಸಿ ಹಣವನ್ನು ಬಿಡುಗಡೆ ಮಾಡಲಾಗುವುದು.
- ಹಿಂದಿನ ವರ್ಷದ ಕಾರ್ಯಕ್ರಮಗಳ ವಿವರವನ್ನು ಆಧರಿಸಿ ಅನುದಾನವನ್ನು ನಿಗದಿ ಮಾಡಲು ತೀರ್ಮಾನಿಸುವುದು.
- ಹಿಂದಿನ ವರ್ಷ ಪಡೆದುಕೊಂಡ ಅನುದಾನದ ಸಂಬಂಧವಾಗಿ ಲೆಕ್ಕಪರಿಶೋಧಕರಿಂದ ಲೆಕ್ಕಪರಿಶೋಧನೆ ಮಾಡಿಸಿರುತ್ತಾರೆಯೇ ಅಥವಾ ಇಲ್ಲವೇ ಎಂಬುದನ್ನು ಪರಿಶೀಲಿಸುವುದು.
- ಸಂಘ–ಸಂಸ್ಥೆಗಳ ಗುಣಮಟ್ಟದ ಆಧಾರದ ಮೇಲೆ ಅನುದಾನವನ್ನು ನಿಗದಿ ಪಡಿಸಲಾಗುವುದು.
- ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿನ ಅಧಿಕಾರಿಗಳು ತನ್ನಲ್ಲಿರುವ ನಿಯಮಾವಳಿ ಪ್ರಕಾರ ಸಂಸ್ಕೃತಿ ಮತ್ತು ಸಾಹಿತ್ಯ ಕ್ಷೇತ್ರವನ್ನು ಕೇಂದ್ರೀಕರಿಸಿ ಯಾವ ಸಂಘ–ಸಂಸ್ಥೆಗಳು ಕಾರ್ಯಕ್ರಮಗಳನ್ನು ಜವಾಬ್ದಾರಿಯಿಂದ ನಡೆಸಿ ಯಶಸ್ವಿಗೊಳಿಸುವಂತಹ ಸಂಘ–ಸಂಸ್ಥೆಗಳಿಗೆ ಅನುದಾನವನ್ನು ಬಿಡುಗಡೆ ಮಾಡಬೇಕು ಎಂಬ ಅಭಿಪ್ರಾಯವನ್ನು ತಿಳಿಸಿರುತ್ತಾರೆ.
- ಜಿಲ್ಲಾ ಮಟ್ಟದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧಿಕಾರಿಗಳು ಒಂದು ಕಮಿಟಿಯನ್ನು ಮಾಡಿಕೊಂಡಿರುತ್ತಾರೆ. ಸ್ಥಳಿಯ ಸಂಘ–ಸಂಸ್ಥೆಗಳ ಗುಣಮಟ್ಟದ ಬಗ್ಗೆ ಮತ್ತು ಅವರು ಹಮ್ಮಿಕೊಳ್ಳುವ ಕಾರ್ಯಕ್ರಮಗಳ ಬಗ್ಗೆ ಪರಿಶೀಲಿಸಿ ವರದಿಯನ್ನು ಕೇಂದ್ರ ಕಛೇರಿಗೆ ಕಳುಹಿಸಿಕೊಡುತ್ತಾರೆ. ಅದರ ಆಧಾರದ ಮೇಲೆ ಅನುದಾನವನ್ನು ಬಿಡುಗಡೆ ಮಾಡಲಾಗುವುದು. ಈ ಎಲ್ಲಾ ಅಂಶಗಳನ್ನು ಅನುಷ್ಠಾನಗೊಳಿಸುವ ಅಧಿಕಾರಿ ವರ್ಗದವರು ತಿಳಿಸಿರುತ್ತಾರೆ.

ಅನುಷ್ಠಾನಗೊಳಿಸುವ ಅಧಿಕಾರಿಗಳು ಅನುದಾನವನ್ನು ಸಂಘ ಸಂಸ್ಥೆಗಳಿಗೆ ವಿತರಿಸುವಾಗ ತುಂಬಾ ಜವಾಬ್ದಾರಿ ವಹಿಸಬೇಕಾಗುತ್ತದೆ. ಈ ಮೇಲಿನ ಅಂಶಗಳನ್ನು ಪರಿಗಣಿಸಿ ಅಧಿಕಾರಿಗಳು ಅನುದಾನವನ್ನು ಬಿಡುಗಡೆ ಮಾಡುವಾಗ ಸಂಘ ಸಂಸ್ಥೆಗಳ ಸ್ಥಿತಿಗತಿಗಳ ಬಗ್ಗೆ ಮತ್ತು ಅವರು ಇಡೀ ವರ್ಷ ನಡೆಸಿರುವ ಕಾರ್ಯಕ್ರಮಗಳ ಬಗ್ಗೆ ಸೂಕ್ಷ್ಮವಾಗಿ ವಿಶ್ಲೇಷಣೆ ಮಾಡಬೇಕಾಗುತ್ತದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧಿಕಾರಿಗಳು ನಿಷ್ಪಕ್ಷಪಾತವಾಗಿ ಕಾರ್ಯ ನಿರ್ವಹಿಸಬೇಕಾಗುತ್ತದೆ. ಅಧಿಕಾರಿಗಳು ಯಾವ ಸಂಘ ಸಂಸ್ಥೆಯ ಪರ ಮತ್ತು ವಿರೋಧವನ್ನು ವ್ಯಕ್ತಪಡಿಸದೆ ಸಂದರ್ಭೋಚಿತವಾಗಿ ಒಳ್ಳೆಯ ನಿರ್ಧಾರವನ್ನು ತಗೆದುಕೊಂಡು ಅನುದಾನವನ್ನು ಬಿಡುಗಡೆ ಮಾಡಿದರೆ ತುಂಬಾ ಒಳ್ಳೆಯದು. ಈ ಹಿನ್ನೆಲೆಯಲ್ಲಿ ಇಲ್ಲಿನ ಅಧಿಕಾರಿಗಳ ಪಾತ್ರ ಪ್ರಮುಖವಾಗುತ್ತದೆ.

## 13.2 ಅನುಷ್ಠಾನ ಅಧಿಕಾರಿಗಳ ಪ್ರಕಾರ ಕೆಲವು ಬದಲಾವಣೆಯನ್ನು ಮಾಡಿಕೊಳ್ಳಬೇಕಾಗಿರುವ ಅಂಶಗಳು.

- ಏಕರೂಪ ನೋಂದಣಿ ಮಾಡಿಸಿದ ಸಂಘ-ಸಂಸ್ಥೆಗಳನ್ನು ಮಾತ್ರ ಪರಿಗಣಿಸಬೇಕು. ಅಂದರೆ 1960ರ ಸಹಕಾರ ಕಾಯ್ದೆಯ ಪ್ರಕಾರ ನೋಂದಣಿಯಾಗಿರುವ ಸಂಘ-ಸಂಸ್ಥೆಗಳಿಗೆ ಮಾತ್ರ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಧನಸಹಾಯ ನೀಡಬೇಕು.
- ಸಂಘ ಸಂಸ್ಥೆಗಳು ಕಲಾವಿದರಿಗೆ ಹಣವನ್ನು **ಎನ್.ಇ.ಎಫ್.ಟಿ / ಆರ್.ಟಿ.ಜಿ.ಎಸ್.** ಮೂಲಕ ನೀಡಬೇಕು
- ಸಂಘ ಸಂಸ್ಥೆಗಳು **ರೂ. 5000/** ಮೇಲ್ಪಟ್ಟು ಯಾವುದೇ ಹಣವನ್ನು ಸಂಬಂಧಿಸಿದ ಕಲಾವಿದರ ಮತ್ತು ಬೇರೆ ಬೇರೆ ಕೆಲಸಗಳನ್ನು ಮಾಡಿದ ವ್ಯಕ್ತಿಗಳ ಖಾತೆಗೆ ಹಣವನ್ನು ವರ್ಗಾವಣೆ ಮಾಡಬೇಕು.
- ಸಾಹಿತ್ಯ ಮತ್ತು ಸಂಸ್ಕೃತಿಯ ಶ್ರೇಯಸ್ಸಿಗಾಗಿಯೇ ಇರುವಂತಹ ಸಂಘ-ಸಂಸ್ಥೆಗಳನ್ನು ಪರಿಗಣಿಸಬೇಕು
- ಸಂಘ-ಸಂಸ್ಥೆಗಳು ಇಲಾಖೆಯ ಕಾರ್ಯಚಟುವಟಿಕೆಗಳಲ್ಲಿ ಪರೋಕ್ಷವಾಗಿ ಮತ್ತು ಪ್ರತ್ಯಕ್ಷವಾಗಿ ಮಧ್ಯಸ್ತಿಕೆ ವಹಿಸಬಾರದು.
- ಇಲಾಖೆಯ ನಿಯಮಗಳು ಮತ್ತು ಮಾನದಂಡಗಳು ಯಥಾವತ್ತಾಗಿ ಚಾಲನೆಗೆ ಬರಬೇಕು.
- ಧನಸಹಾಯ ನೀಡುವಾಗ ಅಧಿಕಾರಿಗಳು ಸಂಘ ಸಂಸ್ಥೆಗಳ ಆಯ್ಕೆಯಲ್ಲಿ ಪಾರದರ್ಶಕತೆಯನ್ನು ಅನುಸರಿಸಬೇಕು.
- ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮೂಲ ಉದ್ದೇಶಗಳು ಯಶಸ್ವಿಯಾಗುವಂತೆ ಇಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿಗಳು ಸೇವೆ ಮಾಡುವಂತಾಗಬೇಕು.

ಈ ಎಲ್ಲಾ ವಿಚಾರಗಳನ್ನು ಇಲಾಖೆಯ ಅನುಷ್ಠಾನ ಅಧಿಕಾರಿಗಳಿಂದ ಸಮೂಹ ಚರ್ಚೆಯ ಮೂಲಕ ಪಡೆದುಕೊಳ್ಳಲಾಯಿತು. ಈ ಎಲ್ಲಾ ಅಂಶಗಳು ಯಥಾವತ್ತಾಗಿ ಕಾರ್ಯರೂಪಕ್ಕೆ ಬಂದರೆ ಅಧಿಕಾರಿಗಳು

ಒಳ್ಳೆಯ ಕೆಲಸ ಮಾಡಿದಂತೆ ಆಗುತ್ತದೆ. ಜೊತೆಗೆ ಮೌಲ್ಯಯುತವಾದ ಮತ್ತು ಗುಣಮಟ್ಟದ ಕಾರ್ಯಕ್ರಮಗಳನ್ನು ನಡೆಸಲು ಸಂಘ ಸಂಸ್ಥೆಗಳಿಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. ಹಾಗು ಒಳ್ಳೆಯ ಗುಣಮಟ್ಟವುಳ್ಳ ಸಂಘ ಸಂಸ್ಥೆಗಳನ್ನು ಬೆಳೆಸಿದಂತಾಗುತ್ತದೆ. ಅನುಷ್ಠಾನ ಅಧಿಕಾರಿಗಳು ಪ್ರಸ್ತಾಪ ಮಾಡಿರುವ ಕೆಲವು ಅಂಶಗಳನ್ನು ಬದಲಾವಣೆ ಮಾಡಿಕೊಂಡರೆ ಈ ಮೂರು ಯೋಜನೆಗಳ ಬೆಳವಣಿಗೆಗೆ ಸಹಕರಿಸಿದಂತಾಗುತ್ತದೆ.

## 13.3 ಸಂಘ–ಸಂಸ್ಥೆಗಳಿಗೆ ಸಂಬಂಧಿಸಿದ ಮುಖ್ಯಸ್ಥರೊಂದಿಗೆ ಸಮೂಹ ಚರ್ಚೆ

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಸಾಮಾನ್ಯ ಘಟಕ, ವಿಶೇಷ ಘಟಕ ಮತ್ತು ಗಿರಿಜನ ಉಪಯೋಜನೆ ಘಟಕಗಳ ಮೂಲಕ ಯಾವ ಸಂಘ–ಸಂಸ್ಥೆಗಳು ಹಣವನ್ನು ತೆಗೆದುಕೊಂಡಿರುತ್ತವೆಯೋ ಅಂತಹ ಸಂಘ–ಸಂಸ್ಥೆಗಳೊಂದಿಗೆ ಸಮೂಹ ಚರ್ಚೆ ಮಾಡಲಾಯಿತು. ಸಂಘ–ಸಂಸ್ಥೆಗಳ ಪದಾಧಿಕಾರಿಗಳು, ಕಾರ್ಯದರ್ಶಿಗಳು, ಅಧ್ಯಕ್ಷರುಗಳು ಹೇಳಿಕೊಂಡಿರುವ ಮಾಹಿತಿಗಳು ಈ ಕೆಳಕಂಡಂತೆ ಇರುತ್ತವೆ.

- ಸಾಮಾನ್ಯ, ವಿಶೇಷ ಮತ್ತು ಗಿರಿಜನ ಉಪಯೋಜನೆ ಘಟಕಗಳಿಗೆ ನಿಗದಿಯಾದ ಹಣ ಆಯಾ ಘಟಕಗಳ ಅಡಿಯಲ್ಲಿ ನಿಯಮಾನುಸಾರ ಬಳಕೆಯಾಗುತ್ತಿಲ್ಲ. ಅದರಲ್ಲೂ ವಿಶೇಷವಾಗಿ ಗಿರಿಜನ ಘಟಕಕ್ಕೆ ಮೀಸಲಾದ ಅನುದಾನ ಸರಿಯಾದ ರೀತಿಯಲ್ಲಿ ಬಳಕೆಯಾಗುತ್ತಿಲ್ಲ. ಹಾಗಾಗಿ ಪ್ರತಿಯೊಂದು ಯೋಜನೆಗೆ ನಿಗದಿಯಾದ ಧನಸಹಾಯವನ್ನು ಆ ಯೋಜನೆಗೆ ಮಾತ್ರ ಬಳಸಬೇಕು.
- ಧನಸಹಾಯವನ್ನು ಎಂತಹ ಸಂಘ–ಸಂಸ್ಥೆಗಳಿಗೆ ಕೊಡಬೇಕು ಎನ್ನುವುದರ ಬಗ್ಗೆ ಒಂದು ನಿರ್ದಿಷ್ಟ ನಿಯಮಾವಳಿ ರಚನೆಯಾಗಬೇಕು.
- ಸಹಕಾರ ಸಂಘದಲ್ಲಿ ನೋಂದಣಿಯಾದಂತಹ ಸಂಘ–ಸಂಸ್ಥೆಗಳನ್ನು ಮಾತ್ರ ಪರಿಗಣಿಸಬೇಕು. ಆದರೆ ಇಲ್ಲಿ ಕೆಲವು ಟ್ರಸ್ಟ್‌ಗಳಿಗೂ ಅನುದಾನ ಬಿಡುಗಡೆಯಾಗುತ್ತಿದೆ. ಇದರ ಸಂಬಂಧ ಸೂಕ್ತ ಕ್ರಮ ತೆಗೆದುಕೊಳ್ಳಬೇಕು.
- ಧನಸಹಾಯವನ್ನು ಬಿಡುಗಡೆ ಮಾಡಿಸಲು ಪ್ರಭಾವಿ ವ್ಯಕ್ತಿಗಳ ಒತ್ತಡವನ್ನು ತಪ್ಪಿಸಬೇಕು.
- ಸಂಘ ಸಂಸ್ಥೆಗಳಿಗೆ ಸಮಾನವಾಗಿ ಆದ್ಯತೆ ನೀಡಬೇಕು. ಸಂಘ–ಸಂಸ್ಥೆಗಳಿಗೆ ಅನುದಾನವನ್ನು ಬಿಡುಗಡೆ ಮಾಡುವಾಗ ಕ್ರಿಯಾಯೋಜನೆಗೆ ಅನುಗುಣವಾಗಿ ಒಂದು ಮಾನದಂಡವನ್ನು ಅನುಸರಿಸಬೇಕು.
- ಸಂಘ–ಸಂಸ್ಥೆಗಳ ಕಾರ್ಯ ಚಟುವಟಿಕೆಗಳನ್ನು ಪರಿಗಣಿಸಿ ಹಣ ಬಿಡುಗಡೆ ಮಾಡುವುದು ಸೂಕ್ತ.
- ಸಂಘ–ಸಂಸ್ಥೆಗಳ ಹೆಸರಿನಲ್ಲಿ ಎಲ್ಲಾ ಕಲಾಪ್ರಕಾರಗಳ ಸಂಘ–ಸಂಸ್ಥೆಗಳಿಗೆ ಅನುದಾನ ಬಿಡುಗಡೆಯಾಗುತ್ತಿಲ್ಲ. ಅದರಲ್ಲೂ ವಿಶೇಷವಾಗಿ ಪೌರಾಣಿಕ ಕಲಾವಿದರು ಪ್ರಾರಂಭಿಸಿರುವ ಸಂಘ

ಸಂಸ್ಥೆಗಳು ಇದರಿಂದ ವಂಚಿತವಾಗಿರುತ್ತವೆ. ಹಾಗಾಗಿ ಅಂತಹ ಸಂಘ ಸಂಸ್ಥೆಗಳಿಗೆ ಅವಕಾಶ ಮಾಡಿಕೊಡಬೇಕು.

- ಕಾಲಕಾಲಕ್ಕೆ ಕಾರ್ಯಕ್ರಮಗಳಿಗೆ ಖರ್ಚು ವೆಚ್ಚ ಜಾಸ್ತಿಯಾಗುತ್ತದೆ. ಆದ್ದರಿಂದ ಪ್ರತಿವರ್ಷ ಅನುದಾನವನ್ನು ಜಾಸ್ತಿಮಾಡಬೇಕು.
- ಸಾಮಾನ್ಯ ಘಟಕದಡಿಯಲ್ಲಿ ಅನುದಾನ ಬಳಕೆಯಾಗುವಂತೆ ವಿಶೇಷ ಘಟಕ ಮತ್ತು ಗಿರಿಜನ ಉಪಯೋಜನೆ ಅಡಿಯಲ್ಲಿ ಸರಿಯಾಗಿ ಅನುದಾನ ಬಳಕೆಯಾಗುತ್ತಿಲ್ಲ. ಹಾಗಾಗಿ ಇಲ್ಲಿ ಸೂಕ್ತಕ್ರಮ ಕೈಗೊಳ್ಳಬೇಕಾಗಿದೆ.
- ಇಲಾಖೆಯಲ್ಲಿನ ತಾಂತ್ರಿಕ ಸಮಸ್ಯೆಗಳನ್ನು ಸರಿಪಡಿಸಿಕೊಂಡು ಸಂಘ-ಸಂಸ್ಥೆಗಳಿಗೆ ಸರಿಯಾಗಿ ಸ್ಪಂದಿಸಬೇಕು.
- ಹಣವನ್ನು ವರ್ಷದ ಪ್ರಾರಂಭದ ದಿನಗಳಲ್ಲಿ ಸಮಯಕ್ಕೆ ಸರಿಯಾಗಿ ನೀಡಿದರೆ, ನಮ್ಮ ಕ್ರಿಯಾ ಯೋಜನೆಯ ಪ್ರಕಾರ ಅನುದಾನವನ್ನು ಬಳಸಿಕೊಳ್ಳಲು ಸಾಧ್ಯವಾಗುತ್ತದೆ. ಪ್ರತಿಸಾರಿ ವರ್ಷದ ಕೊನೆಗೆ ಫೆಬ್ರವರಿ, ಮಾರ್ಚ್ ತಿಂಗಳಲ್ಲಿ ಬಿಡುಗಡೆ ಮಾಡುವುದು ಸರಿಯಾದ ಕ್ರಮವಲ್ಲವೆಂದು ಹೇಳಿದ್ದಾರೆ.
- ಸಂಘ-ಸಂಸ್ಥೆಗಳು ಇಲಾಖೆಯಿಂದ ಅನುದಾನ ತೆಗೆದುಕೊಂಡು ಕಾರ್ಯಕ್ರಮ ನಡೆಸುವಾಗ ಇಲಾಖೆಯ ಕಡೆಯಿಂದ ಅಧಿಕಾರಿಗಳೋ ಅಥವಾ ಅವರಿಂದ ನಾಮ ನಿರ್ದೇಶಿತರಾದ ಹಿರಿಯ ಕಲಾವಿದರಿಂದ ಮೇಲ್ವಿಚಾರಣೆ ವ್ಯವಸ್ಥೆಯನ್ನು ಮಾಡಿಸಬೇಕು.
- ಧನಸಹಾಯ ನೀಡುವುದಕ್ಕೆ ಏಕರೂಪವಾದಂತಹ ಮಾನದಂಡ ಸೃಷ್ಟಿಮಾಡಬೇಕಾಗಿದೆ.
- ಶಿಕ್ಷಣ ಸಂಸ್ಥೆಗಳಿಗೆ, ಮಠಗಳಿಗೆ ಮತ್ತು ಸಾಹಿತ್ಯ ಪರಿಷತ್ತಿಗೆ ಈ ಮೂರು ಘಟಕಗಳಿಗೆ ಮೀಸಲಾದ ಹಣವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಬಿಡುಗಡೆ ಮಾಡಬಾರದು. ಅವರಿಗೆ ಇಲಾಖೆ ಅನುದಾನ ಕೊಡುವುದಾದರೆ ಬೇರೆ ನಿಧಿಯಿಂದ ಕೊಡುವುದು. ಈ ಮೂರು ಘಟಕಗಳಿಗೆ ನಿಗದಿಯಾದ ಅನುದಾನವನ್ನು ಸಂಪೂರ್ಣ ಸಂಘ-ಸಂಸ್ಥೆಗಳಿಗೆ ಬಳಕೆಯಾಗುವಂತೆ ಮಾಡಬೇಕು ಎಂಬುದು ಜನಾಭಿಪ್ರಾಯವಾಗಿದೆ.

ಸಂಘ ಸಂಸ್ಥೆಗಳಿಗೆ ಸಂಬಂಧಿಸಿದ ಅಧಿಕಾರಿವರ್ಗದವರು ಈ ಮೇಲಿನ ಅಂಶಗಳನ್ನು ಗುಂಪು ಚರ್ಚೆಯಲ್ಲಿ ಹೇಳಿಕೊಂಡಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧಿಕಾರಿಗಳು ತುಂಬಾ ಗಂಭೀರವಾಗಿ ಈ ಮೇಲಿನ ಅಂಶಗಳನ್ನು ಪರಿಗಣಿಸಬೇಕಾಗಿದೆ. ಇಲ್ಲಿ ಯಾರಿಗೂ ತೊಂದರೆಯಾಗದಂತೆ ಎಲ್ಲಾ ವರ್ಗದ ಸಂಘ ಸಂಸ್ಥೆಗಳಿಗೆ ಅನುದಾನವನ್ನು ಬಿಡುಗಡೆ ಮಾಡಬೇಕೆಂದು ಸಂಘ ಸಂಸ್ಥೆಗಳ ಅಧಿಕಾರಿಗಳು ಕೇಳಿಕೊಂಡಿದ್ದಾರೆ.

# ಶೋಧನೆಗಳು

2014–15 ರಿಂದ 2016–17ನೇ ಸಾಲಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕರ್ನಾಟಕ ಸರ್ಕಾರದ ಅಡಿಯಲ್ಲಿ ಸಾಮಾನ್ಯ ಯೋಜನೆ, ವಿಶೇಷ ಘಟಕ ಮತ್ತು ಗಿರಿಜನ ಉಪಯೋಜನೆ ಎನ್ನುವ ಮೂರು ಘಟಕಗಳ ಮುಖಾಂತರ ಸಾಹಿತ್ಯಪರ, ಸಾಂಸ್ಕೃತಿಕಪರ ಮತ್ತು ಕನ್ನಡಪರ ಕಾರ್ಯಕ್ರಮಗಳಿಗೆ ನೀಡಿದ ಪ್ರೋತ್ಸಾಹ ಧನವನ್ನು ಸಂಘ–ಸಂಸ್ಥೆಗಳು ಸದ್ಬಳಕೆ ಮಾಡಿಕೊಂಡಿರುವ ಬಗ್ಗೆ ಮೌಲ್ಯಮಾಪನ ಮಾಡಿರುವ ಹಿನ್ನೆಲೆಯಲ್ಲಿ ಕೆಲವು ಶೋಧನೆಗಳನ್ನು ಕಂಡುಕೊಳ್ಳಲಾಗಿದೆ.

## 14.0 ಅನುಷ್ಠಾನಗೊಳಿಸುವ ಅಧಿಕಾರಿಗಳೊಂದಿಗೆ ಕಂಡುಕೊಂಡ ಶೋಧನೆಗಳು

1. **ಶೇ 88.5 ರಷ್ಟು** ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧಿಕಾರಿಗಳು ಕಲೆ, ಸಾಹಿತ್ಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸಲು ಹುಟ್ಟಿ ಕೊಂಡಂತಹ ಒಳ್ಳೆಯ ಸಂಘ– ಸಂಸ್ಥೆಗಳಿಗೆ ಧನಸಹಾಯವನ್ನು ನೀಡಿರುತ್ತಾರೆ.
2. **ಶೇ 80.8** ರಷ್ಟು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧಿಕಾರಿಗಳು ಕರ್ನಾಟಕ ಸಹಕಾರ–ಸಂಘಗಳ 1960ರ ಅಧಿನಿಯಮದ ಅಡಿ ನೋಂದಣಿ ಮಾಡಿಕೊಂಡ ಸಂಘ ಸಂಸ್ಥೆಗಳಿಗೆ ಧನಸಹಾಯವನ್ನು ನೀಡಿರುತ್ತಾರೆ.
3. **ಶೇ 69.2 ರಷ್ಟು** ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧಿಕಾರಿಗಳ ಪ್ರಕಾರ ಸಂಘ–ಸಂಸ್ಥೆಗಳು ಉತ್ತಮ ಕಾರ್ಯಕ್ರಮಗಳನ್ನು ಮಾಡಿರುತ್ತವೆ.
4. **ಶೇ 61.5 ರಷ್ಟು** ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧಿಕಾರಿಗಳು ಲೆಕ್ಕಪರಿಶೋಧಕರ ವರದಿಯ ಆಧಾರದ ಮೇಲೆ ಸಂಘ ಸಂಸ್ಥೆಗಳು ಸದ್ಬಳಕೆ ಮಾಡಿಕೊಂಡಿರುವುದರ ಬಗ್ಗೆ ಪತ್ತೆ ಮಾಡಿರುತ್ತಾರೆ.
5. **ಶೇ 53.8 ರಷ್ಟು** ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧಿಕಾರಿಗಳು ಧನಸಹಾಯ ನೀಡುವಾಗ ಜಾನಪದ ಕಲಾ ಪ್ರಕಾರಗಳಿಗೆ ಹೆಚ್ಚಿನ ಆದ್ಯತೆ ಕೊಟ್ಟಿರುತ್ತಾರೆ.
6. **ಶೇ 50.0 ರಷ್ಟು** ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧಿಕಾರಿಗಳ ಪ್ರಕಾರ ಸಂಘ ಸಂಸ್ಥೆಗಳು ಚೆಕ್ ಮೂಲಕ ಅನುದಾನವನ್ನು ಬಳಸಿರುತ್ತಾರೆ.

## 14.1 ಸಂಘ ಸಂಸ್ಥೆಗಳೊಂದಿಗೆ ಕಂಡುಕೊಂಡ ಶೋಧನೆಗಳು

1. **ಶೇ 92.7 ರಷ್ಟು** ಸಂಘ ಸಂಸ್ಥೆಗಳ ಪ್ರಕಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಡಿಯಲ್ಲಿ ನಡೆಸುವ ಕಾರ್ಯಕ್ರಮಗಳು ಪತ್ರಿಕೆಗಳಲ್ಲಿ ಪ್ರಕಟವಾಗಿರುತ್ತವೆ.
2. **ಶೇ 87.6 ರಷ್ಟು** ಸಂಘ ಸಂಸ್ಥೆಗಳು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ನೀಡಿರುವ ಜಾಹಿರಾತಿನ ಮಾರ್ಗಸೂಚಿಯಲ್ಲಿನ ನಿಯಮಗಳ ಪ್ರಕಾರ ಅನುದಾನವನ್ನು ಬಳಸಿಕೊಂಡಿರುತ್ತವೆ.
3. **ಶೇ 86.0 ರಷ್ಟು** ಸಂಘ ಸಂಸ್ಥೆಗಳು ಕಲೆ ಮತ್ತು ಸಂಸ್ಕೃತಿಯ ಉಳಿವಿಗಾಗಿ ಶ್ರಮಿಸಿರುತ್ತವೆ.

4. **ಶೇ 72.0 ರಷ್ಟು** ಸಂಘ ಸಂಸ್ಥೆಗಳು ಕಲಾವಿದರಿಗೆ ನಗದು ಮುಖಾಂತರ ಹಣವನ್ನು ನೀಡಿರುತ್ತವೆ.
5. **ಶೇ 69.9 ರಷ್ಟು** ಸಂಘ ಸಂಸ್ಥೆಗಳು ಜನಪ್ರಿಯ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುವುದರ ಮೂಲಕ ಹಣವನ್ನು ಸದ್ಬಳಕೆ ಮಾಡಿಕೊಂಡಿರುತ್ತವೆ.
6. **ಶೇ 63.2** ರಷ್ಟು ಸಂಘ ಸಂಸ್ಥೆಗಳು ಪ್ರೇಕ್ಷಕರನ್ನು ಕಾರ್ಯಕ್ರಮಗಳಿಗೆ ಪತ್ರಿಕೆಗಳಲ್ಲಿ ಜಾಹಿರಾತು ಕೊಡುವುದರ ಮೂಲಕ, ಆಮಂತ್ರಣ ಪತ್ರಿಕೆ ಹಂಚುವುದರ ಮೂಲಕ, ಮೌಖಿಕವಾಗಿ ಕರೆಯುವುದರ ಮೂಲಕ ಆಹ್ವಾನಿಸಿರುತ್ತಾರೆ.
7. **ಶೇ 61.1 ರಷ್ಟು** ಸಂಘ ಸಂಸ್ಥೆಗಳು ಸಾರ್ವಜನಿಕವಾಗಿ ಈಗಾಗಲೇ ಇರುವಂತಹ ವೇದಿಕೆಯನ್ನು ಕಾರ್ಯಕ್ರಮಕ್ಕೆ ಆಯ್ಕೆ ಮಾಡಿಕೊಂಡಿರುತ್ತಾರೆ.
8. **ಶೇ 30.05 ರಷ್ಟು** ಸಂಘ ಸಂಸ್ಥೆಗಳು ಜಾನಪದ ಕಲಾಪ್ರಕಾರಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡಿರುತ್ತವೆ.

## 14.2 ಕಲಾವಿದರೊಂದಿಗೆ ಕಂಡುಕೊಂಡ ಶೋಧನೆಗಳು

1. **ಶೇ 92.0 ರಷ್ಟು** ಜನ ಕಲಾವಿದರ ಪ್ರಕಾರ ಸಂಘ ಸಂಸ್ಥೆಗಳು ಊಟ-ವಸತಿ ಸೌಲಭ್ಯ ನೀಡಿರುತ್ತಾರೆ.
2. **ಶೇ 88.9 ರಷ್ಟು** ಜನ ಕಲಾವಿದರ ಪ್ರಕಾರ ಸಂಘ ಸಂಸ್ಥೆಗಳು ಕಾರ್ಯಕ್ರಮಗಳನ್ನು ಅರ್ಥಪೂರ್ಣವಾಗಿ ಯಶಸ್ವಿಗೊಳಿಸುವುದರ ಮೂಲಕ ಸದ್ಬಳಕೆ ಮಾಡಿಕೊಂಡಿರುತ್ತಾರೆ.
3. **ಶೇ 88.4 ರಷ್ಟು** ಜನ ಕಲಾವಿದರು ಕಲೆಯ ಉಳಿವಿಗಾಗಿ ಕಲೆಯನ್ನು ಸ್ವೀಕರಿಸಿರುತ್ತಾರೆ.
4. **ಶೇ 83.2 ರಷ್ಟು** ಜನ ಕಲಾವಿದರ ಪ್ರಕಾರ ಸಂಘ-ಸಂಸ್ಥೆಗಳೊಂದಿಗೆ ನೇರವಾದ ಸಂಬಂಧವಿದೆ.
5. **ಶೇ 68.7 ರಷ್ಟು** ಜನ ಕಲಾವಿದರ ಪ್ರಕಾರ ಸಂಘ ಸಂಸ್ಥೆಗಳು ನಗದು ರೂಪದಲ್ಲಿ ಸಂಭಾವನೆ ನೀಡುತ್ತಾರೆ.
6. **ಶೇ 57.6 ರಷ್ಟು** ಕಲಾವಿದರ ಪ್ರಕಾರ ನಮ್ಮಲ್ಲಿರುವ ಕಲೆಯನ್ನು ಮೆಚ್ಚಿಕೊಂಡು ಸಂಘ ಸಂಸ್ಥೆಗಳು ನಮ್ಮನ್ನು ಆಯ್ಕೆ ಮಾಡುತ್ತವೆ.

## 14.3 ಪ್ರೇಕ್ಷಕರೊಂದಿಗೆ ಕಂಡುಕೊಂಡ ಶೋಧನೆಗಳು

1. **ಶೇ 96.7 ರಷ್ಟು** ಪ್ರೇಕ್ಷಕರ ಪ್ರಕಾರ ಸಂಘ ಸಂಸ್ಥೆಗಳು ಅನದಾನವನ್ನು ಸದ್ಬಳಕೆ ಮಾಡಿಕೊಂಡಿರುತ್ತವೆ.
2. **ಶೇ 95.2 ರಷ್ಟು** ಪ್ರೇಕ್ಷಕರ ಪ್ರಕಾರ ಸಂಘ ಸಂಸ್ಥೆಗಳು ಆಕರ್ಷಕವಾದ ಕಾರ್ಯಕ್ರಮಗಳನ್ನು ಮಾಡಿರುತ್ತಾರೆ.
3. **ಶೇ 93.4 ರಷ್ಟು** ಪ್ರೇಕ್ಷಕರ ಪ್ರಕಾರ ಸಂಘ-ಸಂಸ್ಥೆಗಳು ಕಲೆಯ ಉಳಿವಿಗಾಗಿ ಶ್ರಮಿಸುತ್ತಿವೆ.

# ಶಿಫಾರಸ್ಸುಗಳು

1. ಶುದ್ಧ ಸಾಂಸ್ಕೃತಿಕ/ಸಾಹಿತ್ಯಕ ಉದ್ದೇಶಕ್ಕಾಗಿ ಸ್ಥಾಪಿತವಾಗಿ ಸಕ್ರಿಯವಾಗಿರುವ ಸಂಘ–ಸಂಸ್ಥೆಗಳನ್ನು ಮಾತ್ರ ಧನಸಹಾಯಕ್ಕಾಗಿ ಪರಿಗಣಿಸಬೇಕು. ವಿವಿದೋದ್ಧೇಶಗಳನ್ನು ಹೊಂದಿರುವ ಅದರಲ್ಲಿ 'ಸಾಂಸ್ಕೃತಿಕ' ಒಂದಂಶವನ್ನು ಒಳಗೊಂಡು ರಚನೆಯಾದ ಸಂಘ ಸಂಸ್ಥೆಗಳು ಏರ್ಪಡಿಸುವ ಕಾರ್ಯಕ್ರಮಗಳಿಗೆ ಕಲಾತಂಡಗಳನ್ನು ಇಲಾಖೆಯ ಮಾನದಂಡಕ್ಕನುಗುಣವಾಗಿ ನೀಡಬಹುದು.
2. ಸಂಘ–ಸಂಸ್ಥೆಗಳ ಮುಖ್ಯಸ್ಥರೊಂದಿಗೆ ಚರ್ಚೆ ಮಾಡಿದ ಸಂದರ್ಭದಲ್ಲಿ ಇಲಾಖೆಯಿಂದ ವರ್ಷದ ಕೊನೆಯ ತಿಂಗಳುಗಳಲ್ಲಿ ಧನಸಹಾಯ ಬರುತ್ತಿರುವುದರಿಂದ ಕಾರ್ಯಕ್ರಮಗಳನ್ನು ಯೋಜಿಸಿ ಏರ್ಪಡಿಸಲು ತೊಂದರೆಯಾಗುತ್ತಿರುವುದಾಗಿ ಹೇಳಿರುತ್ತಾರೆ. ಹಿಂದಿನ ಆರ್ಥಿಕ ವರ್ಷದಲ್ಲಿಯೇ ಅರ್ಜಿಗಳನ್ನು ಪಡೆಯುವ ಹಾಗೂ ಪರಿಶೀಲನೆ ಮಾಡುವ ಪ್ರಕ್ರಿಯೆಯನ್ನು ಪ್ರಾರಂಭಮಾಡಿ ಮುಂದಿನ ಆರ್ಥಿಕ ವರ್ಷದ ಪ್ರಾರಂಭದಲ್ಲಿ ಸಂಘ–ಸಂಸ್ಥೆಗಳಿಗೆ ಧನಸಹಾಯ ಮಂಜೂರು ಮಾಡುವುದು ಸೂಕ್ತವಾಗಿರುತ್ತದೆ.
3. ಸಂಘ–ಸಂಸ್ಥೆಗಳಿಗೆ ಧನಸಹಾಯ ನೀಡುವಾಗ 1960ರ ಸಹಕಾರ ಕಾಯ್ದೆಯ ಪ್ರಕಾರ ಏಕರೂಪವಾಗಿ ನೋಂದಣಿ ಮಾಡಿಸಿದಂತಹ ಸಂಘ–ಸಂಸ್ಥೆಗಳನ್ನು ಮಾತ್ರ ಪರಿಗಣಿಸಬೇಕು.
4. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಸಂಘ–ಸಂಸ್ಥೆಗಳಿಗೆ ಧನಸಹಾಯವನ್ನು ನೀಡುವಾಗ ಈ ಹಿಂದೆ ಪಡೆದ ಅನುದಾನಕ್ಕೆ ತಕ್ಕಂತೆ ಕಾರ್ಯಕ್ರಮ ಏರ್ಪಡಿಸಿರುವ ಬಗ್ಗೆ ಪರಾಮರ್ಶಿಸುವುದು. ಹಾಗೂ ಈ ಹಿಂದಿನ ವರ್ಷದಲ್ಲಿ ಏರ್ಪಡಿಸಿದ ಕಾರ್ಯಕ್ರಮಗಳ ಗುಣಮಟ್ಟ ಮತ್ತು ಕಾರ್ಯಕ್ರಮಗಳ ಸಂಖ್ಯೆ ಹಾಗೂ ಅದರ ಪರಿಣಾಮಗಳನ್ನು ಮಾನದಂಡವಾಗಿ ಅನುಸರಿಸಿ ಧನಸಹಾಯವನ್ನು ನಿಗದಿಪಡಿಸುವುದು ಸೂಕ್ತವಾಗಿರುತ್ತದೆ.
5. ಧನಸಹಾಯ ಪಡೆಯುವ ಸಂಘ–ಸಂಸ್ಥೆಗಳು ನಡೆಸುವ ಸಾಂಸ್ಕೃತಿಕ ಚಟುವಟಿಕೆಗಳ ಸಂಘಟನಾ ವೆಚ್ಚ, ಸಂಭಾವನೆ ವೆಚ್ಚಗಳನ್ನು ರೂ.5,000/–ಗಳ ಮೇಲ್ಪಟ್ಟು ಪಾವತಿಸುವ ಮೊತ್ತವನ್ನು ಆರ್,ಟಿ.ಜಿ.ಎಸ್/ಎನ್.ಇ.ಎಫ್.ಟಿ ಮೂಲಕ ಕಡ್ಡಾಯವಾಗಿ ಮಾಡಬೇಕು.
6. ಸಾಮಾನ್ಯ ಯೋಜನೆ, ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಗಳಿಗೆ ನಿಗದಿಯಾದ ಹಣವನ್ನು ಆಯಾ ಯೋಜನೆಯ ಅಡಿಯಲ್ಲಿ ಸಂಬಂಧಿಸಿದ ಸಂಘ–ಸಂಸ್ಥೆಗಳಿಗೆ ಮಾತ್ರ ನಿಯಮಾನುಸಾರ ಬಳಕೆ ಮಾಡಬೇಕು. ಅದರಲ್ಲೂ ವಿಶೇಷವಾಗಿ ಗಿರಿಜನ ಉಪಯೋಜನೆ ಘಟಕಕ್ಕೆ ಮೀಸಲಾದ ಹಣ ಸರಿಯಾದ ರೀತಿಯಲ್ಲಿ ಬಳಕೆಯಾಗುತ್ತಿಲ್ಲ. ಅದನ್ನು ಆ ಯೋಜನೆಯ ಅಡಿಯಲ್ಲಿ ಬರುವ ಸಂಘ–ಸಂಸ್ಥೆಗಳಿಗೆ ಮಾತ್ರ ಬಳಸಬೇಕು.
7. ಸಂಘ–ಸಂಸ್ಥೆಗಳು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಹಣ ತೆಗೆದುಕೊಂಡು ಕಾರ್ಯಕ್ರಮಗಳನ್ನು ನಡೆಸುವಾಗ ಸಾಮಾಜಿಕ ಸಮಸ್ಯೆಗಳ ಕಡೆ ಗಮನ ಕೊಡಬೇಕು. ಸರ್ಕಾರದ ವಿವಿಧ ಯೋಜನೆಗಳಿಗೆ

ಪೂರಕವಾಗಿ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಏರ್ಪಡಿಸಲು ಮುಂದಾದಲ್ಲಿ ಅವುಗಳಿಗೆ ಆದ್ಯತೆ ನೀಡಬಹುದು. (ಉದಾ : ಆರೋಗ್ಯ, ಪೌಷ್ಟಿಕತೆ ಹಾಗೂ ಶುಚಿತ್ವ ಇತ್ಯಾದಿ.)

8. ನಶಿಸಿ ಹೋಗುತ್ತಿರುವ ಅಪರೂಪದ ಕಲೆಗಳನ್ನು ಪುನರುಜ್ಜೀವನಗೊಳಿಸಲು ಮೂಲ ಕಲಾಪ್ರಕಾರಗಳ ಮೇಲೆ ಬೆಳಕು ಚೆಲ್ಲಬೇಕು.
9. ರೂ. 5.00 ಲಕ್ಷ ಮತ್ತು ಅದಕ್ಕಿಂತ ಹೆಚ್ಚಿನ ಮೊತ್ತದ ಅನುದಾನ ಪಡೆಯುವ ಸಂಘ–ಸಂಸ್ಥೆಗಳ ಕಾರ್ಯಕ್ರಮಗಳ ಬಗ್ಗೆ 2 ವರ್ಷಗಳಿಗೊಮ್ಮೆ ಸೋಸಿಯಲ್ ಆಡಿಟ್ ಮಾಡಿಸಲು ಕ್ರಮ ವಹಿಸುವುದು.
10. ಕೆಲವು ಸಂಘ ಸಂಸ್ಥೆಗಳು ಸರ್ಕಾರದ ಮೇಲೆ ಪ್ರಭಾವ ಬೀರಿ ಹೆಚ್ಚಿನ ಮೊತ್ತದ ಅನುದಾನವನ್ನು ಪಡೆದು ಅದಕ್ಕೆ ತಕ್ಕಂತೆ ಕಾರ್ಯಕ್ರಮಗಳನ್ನು ಏರ್ಪಡಿಸದೆ ಇರುವುದು ಕಂಡು ಬಂದಿದ್ದು, ಈ ರೀತಿ ತಾರತಮ್ಯವಾಗದಂತೆ ಎಲ್ಲರಿಗೂ ಮಾರ್ಗಸೂಚಿಗೆ ಅನುಗುಣವಾಗಿ ಅನುದಾನ ನೀಡುವುದು ನ್ಯಾಯೋಚಿತವಾಗಿರುತ್ತದೆ.
11. ಆನ್–ಲೈನ್ ಮೂಲಕ ಸಂಘ ಸಂಸ್ಥೆಗಳಿಗೆ ಅನುದಾನಕ್ಕಾಗಿ ಅರ್ಜಿಯನ್ನು ಸಲ್ಲಿಸುವ ಅವಕಾಶ ಕಲ್ಪಿಸಲಾಗಿದೆ. ಈ ವ್ಯವಸ್ಥೆಯಲ್ಲಿ ಇರುವ ತಾಂತ್ರಿಕ ದೋಷಗಳನ್ನು ಸರಿಪಡಿಸಿ ಫಲಾನುಭವಿಗಳಿಗೆ ಇನ್ನೂ ಅನುಕೂಲವಾದ ರೀತಿಯಲ್ಲಿ ಸೌಲಭ್ಯ ಒದಗಿಸಲು ಗಮನ ಹರಿಸಬಹುದಾಗಿದೆ.

# ಅನುಬಂಧ 1: ಮೌಲ್ಯಮಾಪನ ಅಧ್ಯಯನದ ಉಲ್ಲೇಖಿತ ನಿಯಮಗಳು

## 2012-13 ರಿಂದ 2014-15ನೇ ಸಾಲಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಾಹಿತ್ಯ ಪರ/ಸಾಂಸ್ಕೃತಿಕ ಪರ ಮತ್ತು ಕನ್ನಡ ಪರ ಕಾರ್ಯಕ್ರಮಗಳಿಗೆ ನೀಡಿದ ಪ್ರೋತ್ಸಾಹ ಧನವನ್ನು ಸಂಘ ಸಂಸ್ಥೆಗಳು ಸದ್ಬಳಕೆ ಮಾಡಿಕೊಂಡಿರುವ ಬಗ್ಗೆ ಮೌಲ್ಯಮಾಪನದ ಉಲ್ಲೇಖಿತ ನಿಯಮಗಳು (ToR)

1. ಅಧ್ಯಯನದ ಶಿರೋನಾಮೆ:

2012-13 ರಿಂದ 2014-15ನೇ ಸಾಲಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಾಹಿತ್ಯ ಪರ/ಸಾಂಸ್ಕೃತಿಕ ಪರ ಮತ್ತು ಕನ್ನಡ ಪರ ಕಾರ್ಯಕ್ರಮಗಳಿಗೆ ನೀಡಿದ ಪ್ರೋತ್ಸಾಹ ಧನವನ್ನು ಸಂಘ ಸಂಸ್ಥೆಗಳು ಸದ್ಬಳಕೆ ಮಾಡಿಕೊಂಡಿರುವ ಬಗ್ಗೆ ಮೌಲ್ಯಮಾಪನ.

2. ಯೋಜನೆಯನ್ನು ಅನುಷ್ಠಾನಗೊಳಿಸುತ್ತಿರುವ ಇಲಾಖೆ:

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

3. ಹಿನ್ನಲೆ:

ಸ್ವಾತಂತ್ರ್ಯ ನಂತರ ಭಾಷಾವಾರು ಪ್ರಾಂತ್ಯ ರಚನೆಯು ಜಾರಿಗೊಂಡು, ಕನ್ನಡಿಗರ ರಾಜ್ಯಕ್ಕೆ ಪ್ರತ್ಯೇಕ ಅಸ್ತಿತ್ವ ದೊರೆತು, ಕನ್ನಡಿಗರ ನಾಡು, ನುಡಿ, ಸಂಸ್ಕತಿ ಕುರಿತ ಕನಸುಗಳು ಕುಡಿಯೊಡಿಯತೊಡಗಿದಂತೆ, ಕನ್ನಡ ಭಾಷೆ, ಕಲೆ ಮತ್ತು ಸಂಸ್ಕತಿಯ ಸಂರಕ್ಷಣೆ, ಸಂವರ್ಧನೆಗೆ ಪ್ರತ್ಯೇಕವಾದ ಇಲಾಖೆಯೊಂದು ಅತ್ಯಗತ್ಯವೆನಿಸಿತು. ಆದುದರಿಂದ ಕನ್ನಡ ಸಾಹಿತ್ಯ ಸಂಸ್ಕತಿಯ ಪುರೋಭಿವೃದ್ಧಿಗಾಗಿ 1951ರಲ್ಲಿ ಸಾಹಿತ್ಯ ಮತ್ತು ಸಂಸ್ಕತಿ ಅಭಿವೃದ್ಧಿ ಇಲಾಖೆಯನ್ನು ಸ್ಥಾಪಿಸಲಾಯಿತು. 1963ರಲ್ಲಿ ಸರ್ಕಾರವು ಸಾಹಿತ್ಯ ಮತ್ತು ಸಂಸ್ಕತಿ ಅಭಿವೃದ್ಧಿ ಇಲಾಖೆಯನ್ನು ರದ್ದುಗೊಳಿಸಿ ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಒಂದು ಶಾಖೆಯನ್ನಾಗಿ ರೂಪಿಸಿತು. 1968ರಲ್ಲಿ ಸಾಹಿತ್ಯ ಮತ್ತು ಸಂಸ್ಕತಿ ಅಭಿವೃದ್ಧಿ ಎಂಬ ಈ ಶಾಖೆಯನ್ನು ಪಠ್ಯ ಪುಸ್ತಕ ನಿರ್ದೇಶನಾಲಯಕ್ಕೆ ವರ್ಗಾಯಿಸಲಾಯಿತು.

ಪ್ರತ್ಯೇಕ ಇಲಾಖೆ

1977ರಲ್ಲಿ ರಾಜ್ಯದ ಸಾಹಿತ್ಯ ಮತ್ತು ಸಾಂಸ್ಕತಿಕ ವಿಷಯಗಳನ್ನು ನಿರ್ವಹಿಸುತ್ತಿದ್ದ ಪಠ್ಯ ಪುಸ್ತಕ ನಿರ್ದೇಶನಾಲಯದ ಸಾಹಿತ್ಯ ಮತ್ತು ಸಾಂಸ್ಕತಿಕ ಅಭಿವೃದ್ಧಿ ಘಟಕದ ಮತ್ತು ಅಂದು ರಾಜ್ಯದಲ್ಲಿ ಅಸ್ತಿತ್ವದಲ್ಲಿದ್ದ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಮತ್ತು ಕರ್ನಾಟಕ ಲಲಿತಕಲಾ ಅಕಾಡೆಮಿ - ಇವುಗಳ ಕಾರ್ಯದಲ್ಲಿ ಏಕರೂಪತೆಯನ್ನು ತಂದು ಅವುಗಳ ಕಾರ್ಯಚಟುವಟಿಕೆಗಳು ಯೋಜಿತವಾಗಿ, ಸಮನ್ವಿತವಾಗಿ ನಡೆಸುವ ದೃಷ್ಟಿಯಿಂದ, ಪ್ರತ್ಯೇಕ ನಿರ್ದೇಶನಾಲಯವೊಂದನ್ನು 1977ರಲ್ಲಿ

ಸರ್ಕಾರದ ಮಟ್ಟದಲ್ಲಿ ಶಿಕ್ಷಣ ಮತ್ತು ಯುವಜನ ಸೇವಾ ಇಲಾಖೆಯ ಅಧೀನದಲ್ಲಿ ಸಾಹಿತ್ಯ ಮತ್ತು ಸಾಂಸ್ಕತಿಕ ವ್ಯವಹಾರಗಳ ನಿರ್ದೇಶನಾಲಯವನ್ನು ಸ್ಥಾಪಿಸಲಾಯಿತು.

**ಇಲಾಖೆಯ ಧ್ಯೇಯೋದ್ದೇಶಗಳು**

ಕರ್ನಾಟಕದ ಭವ್ಯ ಪರಂಪರೆಯನ್ನು ಪ್ರತಿಬಿಂಬಿಸುವ ವಿವಿಧ ಕಲಾ ಪ್ರಕಾರಗಳನ್ನು ಗುರುತಿಸಿ, ಅಭಿವೃದ್ಧಿಪಡಿಸಿ ಪ್ರಚುರಪಡಿಸುವುದು. ಸ್ಥಳೀಯ ಪ್ರತಿಭೆಗಳ ಪ್ರದರ್ಶನಕ್ಕೆ ಸೂಕ್ತ ವಾತಾವರಣ ನಿರ್ಮಿಸಲು ತಕ್ಕ ಯೋಜನೆಗಳನ್ನು ರೂಪಿಸುವುದು. ಹಳೆಯ ಕಲಾ ಪ್ರಕಾರಗಳನ್ನು ಉಳಿಸಿ ಬೆಳೆಸಿ ಮತ್ತು ಪ್ರೋತ್ಸಾಹಿಸಿ ಸುಧಾರಿಸುವುದು. ಕರ್ನಾಟಕದಲ್ಲಿ ಸಾಂಸ್ಕತಿಕ ಪುನರುಜ್ಜೀವನಕ್ಕೆ ಪ್ರಯತ್ನಿಸುವುದು ಮತ್ತು ಅದರಲ್ಲಿ ವಿದ್ಯಾರ್ಥಿಗಳು ಮತ್ತು ಗ್ರಾಮೀಣ ಜನತೆ ಸೇರಿದಂತೆ ಎಲ್ಲ ವರ್ಗದ ಜನತೆಯನ್ನು ಒಳಗೊಳ್ಳುವುದು. ಅಕಾಡೆಮಿಗಳ ಕಾರ್ಯಚಟುವಟಿಕೆಗಳಿಗೆ ಹೊಸ ನಿರ್ದೇಶನವನ್ನು ಆಯಾಮವನ್ನು ನೀಡುವುದು. ದೇಶದಾದ್ಯಂತದ ಬೆಳವಣಿಗೆಯನ್ನು ಗಮನದಲ್ಲಿಟ್ಟುಕೊಂಡು ಅಕಾಡೆಮಿಗಳ ಚರ್ಚೆಗಳಿಗೆ ಮಾರ್ಗದರ್ಶನ ನೀಡುವುದು. ಕನ್ನಡ ಭಾಷೆಯ ಅಭಿವೃದ್ಧಿ ಮತ್ತು ಆಡಳಿತ ಕನ್ನಡದ ಜಾರಿಗಾಗಿ ನಿಯೋಜಿತವಾಗಿದ್ದ ಭಾಷಾ ಮತ್ತು ಕನ್ನಡ ಅಭಿವೃದ್ಧಿ ಇಲಾಖೆಯು ನಿರ್ವಹಿಸುತ್ತಿದ್ದ, ಕನ್ನಡ ಅಭಿವೃದ್ಧಿಗೆ ಸಂಬಂಧಪಟ್ಟ ಕೆಲಸಕಾರ್ಯಗಳನ್ನು ಸಾಹಿತ್ಯ ಮತ್ತು ಸಾಂಸ್ಕತಿಕ ವ್ಯವಹಾರಗಳ ಇಲಾಖೆಗೆ ವರ್ಗಾಯಿಸಿ, ಅದನ್ನು ಕನ್ನಡ ಮತ್ತು ಸಂಸ್ಕತಿ ನಿರ್ದೇಶನಾಲಯ ಎಂದು ಮರುನಾಮಕರಣ ಮಾಡಲಾಯಿತು. ಹೀಗೆ 1977ರ ಆಗಸ್ಟ್ 31ರಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅಸ್ತಿತ್ವಕ್ಕೆ ಬಂದಿತು.

**ಹೊಸ ಸಚಿವಾಲಯ**

ಸರ್ಕಾರದ ಮಟ್ಟದಲ್ಲಿ ಕನ್ನಡ ಮತ್ತು ಸಂಸ್ಕತಿ ವಿಷಯಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕ ಸಚಿವಾಲಯದ ಅಗತ್ಯ ಕಂಡು ಬಂದುದರಿಂದ 1993ರಲ್ಲಿ ಸರ್ಕಾರದ ಮಟ್ಟದಲ್ಲಿಯೂ ಕನ್ನಡ ಮತ್ತು ಸಂಸ್ಕತಿ ಇಲಾಖೆಯು ಸೃಜನೆಗೊಂಡಿತು.

**ಮುನ್ನಡೆ**

ಇಂದು ಕನ್ನಡ ಮತ್ತು ಸಂಸ್ಕತಿ ನಿರ್ದೇಶನಾಲಯವು ಬೃಹತ್ತಾಗಿ ಬೆಳೆದು ವ್ಯಾಪಕವಾಗಿ ತನ್ನ ಕಾರ್ಯಚಟುವಟಿಕೆಗಳನ್ನು ವಿಸ್ತರಿಸಿಕೊಂಡಿದೆ. ಜಿಲ್ಲಾ ಮಟ್ಟದಲ್ಲಿ, ಕಚೇರಿಗಳನ್ನು ಹೊಂದಿದೆ. ಗ್ರಾಮ/ತಾಲ್ಲೂಕು ಮಟ್ಟದಲ್ಲಿ ಹಾಗೂ ರಾಜ್ಯ ಮಟ್ಟದವರೆಗೆ ತನ್ನ ಚಟುವಟಿಕೆಗಳನ್ನು ನಡೆಸುತ್ತಲಿದೆ. ಆಡಳಿತ ಭಾಷೆಯಾಗಿ ಕನ್ನಡವನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸಲು ಅಗತ್ಯವಾದ ಕಾರ್ಯಕ್ರಮಗಳನ್ನು ರೂಪಿಸುವುದರ ಜೊತೆಗೆ ಸಾಂಸ್ಕತಿಕ ಪರಂಪರೆಯನ್ನು ಸಂರಕ್ಷಿಸುವ, ಸಂವರ್ಧಿಸುವ ಕಾರ್ಯವನ್ನು ಹೊತ್ತಿರುವ ಇಲಾಖೆಯು ಈ ನಿಟ್ಟಿನಲ್ಲಿ ಮುನ್ನಡೆಯುತ್ತಿದೆ.

ಇಲಾಖೆಯು ಹಲವಾರು ಯೋಜನೆಗಳ ಜೊತೆಗೆ **ಕನ್ನಡ ಮತ್ತು ಸಂಸ್ಕೃತಿಯ ಅಭಿವೃದ್ಧಿ** ಎಂಬ ಮುಖ್ಯ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದೆ. ಸದರಿ ಯೋಜನೆಯಡಿ ಮೂರು ಘಟಕಗಳಿವೆ. ಅಂದರೆ, **ಅ) ವಿಶೇಷ ಘಟಕ ಆ) ಗಿರಿಜನ ಉಪಯೋಜನೆ ಹಾಗೂ ಇ) ಸಾಮಾನ್ಯ ಯೋಜನೆ.** ಈ ಮೂರು

ಉಪಯೋಜನೆಗಳಡಿ ಸಂಘ ಸಂಸ್ಥೆಗಳಿಗೆ ಪ್ರೋತ್ಸಾಹ ಧನ ನೀಡಿ ಅವುಗಳ ಮೂಲಕ ಸಾಂಸ್ಕೃತಿಕ ವಾತಾವರಣವನ್ನುಂಟುಮಾಡುವುದು ಈ ಉಪ ಯೋಜನೆಗಳ ಉದ್ದೇಶವಾಗಿದೆ. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ದಿನಾಂಕ: 29.10.2015ರ ತಮ್ಮ ಪತ್ರದಲ್ಲಿ ಸದರಿ ಯೋಜನೆಯ ಕಳೆದ ಮೂರು ವರ್ಷಗಳ ಕಾಲಾವದಿಯಲ್ಲಿ ಅನುಷ್ಠಾನಗೊಳಿಸಿದ ಬಗ್ಗೆ ಮೌಲ್ಯಮಾಪನ ಮಾಡಲು ಕೋರಿರುವರು.

ಕಳೆದ ಮೂರು ವರ್ಷಗಳಲ್ಲಿ ಸಂಘ ಸಂಸ್ಥೆಗಳಿಗೆ ನೀಡಿದ ಧನಸಹಾಯದ ವಿವರ

ಸಾಮಾನ್ಯ ಧನಸಹಾಯ

| ವರ್ಷ | ಸಂಘ ಸಂಸ್ಥೆಗಳ ಸಂಖ್ಯೆ | ಮೊತ್ತ |
|---|---|---|
| 2012-13 | 616 | 13,76,12,000 |
| 2013-14 | 450 | 13,12,55,000 |
| 2014-15 | 679 | 14,33,75,000 |

ವಿಶೇಷಘಟಕ

| ವರ್ಷ | ಸಂಘ ಸಂಸ್ಥೆಗಳ ಸಂಖ್ಯೆ | ಮೊತ್ತ |
|---|---|---|
| 2012-13 | 214 | 2,61,80,000 |
| 2013-14 | 147 | 3,13,65,000 |
| 2014-15 | 269 | 7,17,75,000 |

ಗಿರಿಜನ ಉಪಯೋಜನೆ

| ವರ್ಷ | ಸಂಘ ಸಂಸ್ಥೆಗಳ ಸಂಖ್ಯೆ | ಮೊತ್ತ |
|---|---|---|
| 2012-13 | 50 | 63,25,000 |
| 2013-14 | 82 | 1,70,00,000 |
| 2014-15 | 34 | 65,00,000 |

2012–13 ರಿಂದ 2014–15ರ ವರೆಗೆ ಈ ಉಪಯೋಜನೆಗಳಡಿ ಅನುದಾನ ಪಡೆದ ಸಂಘ ಸಂಸ್ಥೆಗಳ ಜಿಲ್ಲಾವಾರು ಸಾಮಾನ್ಯ ಯೋಜನೆ, ವಿಶೇಷ ಘಟಕ ಯೋಜನೆ ಹಾಗೂ ಗಿರಿಜನ ಉಪಯೋಜನೆಯ ವಿವರಗಳನ್ನು ಅನುಕ್ರಮವಾಗಿ **ಅನುಬಂಧ–1, 2 ಮತ್ತು 3ರಲ್ಲಿ** ನೀಡಲಾಗಿದೆ.

4. **ಯೋಜನೆಯ ಸಂಯೋಜನೆಯ ವ್ಯವಸ್ಥೆ:**

ಸದರಿ ಯೋಜನೆಯನ್ನು ರಾಜ್ಯ ಮಟ್ಟದಲ್ಲಿ ಪ್ರತಿ ತಿಂಗಳು ಎಂಪಿಕ್ ಸಭೆಯಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು ಇಲಾಖೆಯ ಮುಖ್ಯಸ್ಥರು ಹಾಗೂ ಆರ್ಥಿಕ ಮತ್ತು ಯೋಜನಾ ಇಲಾಖೆಯ

ಅಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲಿನೆ ನಡೆಸುವರು. ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕಾಧಿರಿಗಳು ಇಲಾಖೆಯ ಸಹಾಯಕ ನಿರ್ದೇಶಕರುಗಳೊಡನೆ ಪ್ರತಿ ತಿಂಗಳು ಆರ್ಥಿಕ ಮತ್ತು ಭೌತಿಕ ಪ್ರಗತಿಯನ್ನು ಪರಿಶೀಲಿಸುವರು.

5. <u>ಅಧ್ಯಯನ ವ್ಯಾಪ್ತಿ:</u>

ಸದರಿ ಯೋಜನೆಯನ್ನು ರಾಜ್ಯದ ಎಲ್ಲಾ 30 ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

6. <u>ಈ ಉಪಯೋಜನೆಗಳ ಉದ್ದೇಶ ಹಾಗೂ ಗುರಿ:</u>

ಕರ್ನಾಟಕದ ಭವ್ಯ ಪರಂಪರೆಯನ್ನು ಪ್ರತಿಬಿಂಬಿಸುವ ವಿವಿಧ ಕಲಾ ಪ್ರಕಾರಗಳನ್ನು ಗುರುತಿಸಿ ಅಭಿವೃದ್ಧಿ ಪಡಿಸಿ ಪ್ರಚುರ ಪಡಿಸುವುದರ ಜೊತೆಗೆ ಗ್ರಾಮೀಣ ಜನತೆ ಸೇರಿದಂತೆ ಸ್ಥಳೀಯ ಕಲಾ ಪ್ರತಿಭೆಗಳನ್ನು ಗುರುತಿಸಿ ಪ್ರದರ್ಶನಕ್ಕೆ ಸೂಕ್ತ ವಾತವಾರಣ ಕಲ್ಪಿಸಲು ಮತ್ತು ಸಾಂಸ್ಕೃತಿಕ ಕಲೆಯನ್ನು ಪುನರುಜ್ಜೀವಗೊಳಿಸುವುದೇ ಈ ಯೋಜನೆಯ ಉದ್ದೇಶ. ಇದಕ್ಕೆ ಅನುವಾಗುವಂತಹ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸಮಾಜದಲ್ಲಿ ಹಮ್ಮಿಕೊಳ್ಳಲು ವಿವಿಧ ಯೋಜನೆಗಳನ್ನು ಅನುಷ್ಠಾನ ಮಾಡುವುದರ ಮೂಲಕ ಪ್ರೋತ್ಸಾಹ ನೀಡಲಾಗುತ್ತಿದೆ.

ರಾಜ್ಯದಲ್ಲಿ ಸರ್ಕಾರೇತರ ಸಂಘ ಸಂಸ್ಥೆಗಳು/ಟ್ರಸ್ಟ್‌ಗಳು ವಿವಿಧ ಕಾಯ್ದೆಯಡಿಯಲ್ಲಿ ನೊಂದಾಯಿಸಿ ಕಲಾ ಸೇವೆ ಮತ್ತು ಸಂಸ್ಕೃತಿಯನ್ನು ಬೆಳೆಸುವ ಮುಖ್ಯ ಧ್ಯೇಯೋದ್ದೇಶವನ್ನು ಹೊಂದಿ ನಿರಂತರ ಕಲಾ ಸೇವೆಯಲ್ಲಿ ತೊಡಗಿಸಿಕೊಂಡಿರುವ ಸಂಘ ಸಂಸ್ಥೆಗಳು ಸರ್ಕಾರದ ಜೊತೆಗೂಡಿ ಸಾರ್ವಜನಿಕರಿಗೆ ತಲುಪಿಸುವಲ್ಲಿ ತಮ್ಮನ್ನು ತೊಡಗಿಸಿಕೊಳ್ಳಲು ಯೋಜನೆಯ ಸೌಲಭ್ಯವನ್ನು ಒದಗಿಸಲಾಗುತ್ತಿದೆ. ಇಂತಹ ಸಂಘ ಸಂಸ್ಥೆಗಳು/ಟ್ರಸ್ಟ್‌ಗಳು ಕ್ರಿಯಾಶೀಲಾರಾಗಿ ವಿವಿಧ ಚಟುವಟಿಕೆಗಳನ್ನು ಹಮ್ಮಿಕೊಂಡು ಯಶಸ್ವಿಯಾಗಿ ಮತ್ತು ಅರ್ಥಪೂರ್ಣವಾಗಿ ನಡೆಸಿ ಪ್ರೇಕ್ಷಕರ ಮನಗಳಲ್ಲಿ ಕಲೆಯ ಛಾಪನ್ನು ಮೂಡಿಸಿ ಕನ್ನಡ ಮತ್ತು ಸಂಸ್ಕತಿ ಬೆಳವಣಿಗೆಯನ್ನು ವೃದ್ಧಿಸುವುದು ಈ ಯೋಜನೆಯ ಉದ್ದೇಶವಾಗಿದೆ.

<u>ಮಂಜೂರಾತಿ ಪ್ರಕ್ರಿಯೆ:</u>

ಸಾಂಸ್ಕೃತಿಕ / ಸಾಹಿತ್ಯಿಕ ಚಟುವಟಿಕೆಗಳಿಗಾಗಿ ಸ್ಥಾಪಿತವಾದ ಖಾಸಗಿ ಸಂಘ ಸಂಸ್ಥೆಗಳು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಧನಸಹಾಯ ಕೋರಿ 2012-13ನೇ ಸಾಲು ಹಾಗೂ ಇದಕ್ಕಿಂತ ಹಿಂದಿನ ವರ್ಷಗಳಲ್ಲಿ ಇಡೀ ವರ್ಷ ಅರ್ಜಿಗಳನ್ನು ಸಲ್ಲಿಸುತ್ತಿದ್ದವು. ಅರ್ಜಿಗಳನ್ನು ಸಲ್ಲಿಸಲು ಕಾಲಮಿತಿ ಇರಲಿಲ್ಲ. ಧನಸಹಾಯಕ್ಕಾಗಿ ಬಂದ ಮನವಿಗಳನ್ನು ಮಾರ್ಗಸೂಚಿಯನ್ವಯ ಪರಿಶೀಲಿಸಿ, ಧನಸಹಾಯವನ್ನು ಮಂಜೂರು ಮಾಡಲಾಗುತ್ತಿತ್ತು. ಇಲಾಖೆಯ ಮುಖ್ಯಸ್ಥರಿಗೆ ರೂ.1.00ಲಕ್ಷಗಳನ್ನು ಮಂಜೂರು ಮಾಡಲು ಅಧಿಕಾರವಿದ್ದು, ಅದರಂತೆ ರೂ.1.00ಲಕ್ಷದ ಮಿತಿಯೊಳಗೆ ಇಲಾಖೆಯ ಮುಖ್ಯಸ್ಥರು (ಆಯುಕ್ತರು/ ನಿರ್ದೇಶಕರು) ಸಂಘ ಸಂಸ್ಥೆಗಳಿಗೆ ಧನಸಹಾಯ ಮಂಜೂರು ಮಾಡುತ್ತಿದ್ದರು. ರೂ.1.00ಲಕ್ಷಕ್ಕಿಂತ ಮೇಲ್ಪಟ್ಟು

ಧನಸಹಾಯದ ಮಂಜೂರಾತಿಗಾಗಿ ಸರ್ಕಾರದ ಕಾರ್ಯದರ್ಶಿಗಳಿಗೆ ಶಿಫಾರಸ್ಸು ಮಾಡಲಾಗುತ್ತಿತ್ತು. ಸರ್ಕಾರದ ಆದೇಶದ ಪ್ರಕಾರ ಅಂತಹ ಸಂಘ ಸಂಸ್ಥೆಗಳಿಗೆ ಧನಸಹಾಯವನ್ನು ನೀಡಲಾಗುತ್ತಿತ್ತು.

2013–14ನೇ ಸಾಲಿನಲ್ಲಿ ಸಂಘ ಸಂಸ್ಥೆಗಳಿಗೆ ಧನಸಹಾಯ ನೀಡುವ ಕುರಿತಂತೆ ಹೊಸ ಮಾರ್ಗಸೂಚಿಯನ್ನು ಸರ್ಕಾರ ಹೊರಡಿಸಿತ್ತು. ಈ ಮಾರ್ಗಸೂಚಿ ಪ್ರಕಾರ ವರ್ಷದಲ್ಲಿ 2 ಸಲ ಅರ್ಜಿಗಳನ್ನು ಸಲ್ಲಿಸಲು ಕಾಲಮಿತಿಯನ್ನು ನಿರ್ದಿಷ್ಟಪಡಿಸಲಾಯಿತು. ರೂ.10.00ಲಕ್ಷಕ್ಕಿಂತ ಮೇಲ್ಪಟ್ಟ ಧನಸಹಾಯವನ್ನು ನಿರ್ಧರಿಸಲು ಇಲಾಖೆಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಯಿತು.

2014–15ನೇ ಸಾಲಿನಲ್ಲಿ ಮತ್ತೆ ಧನಸಹಾಯಕ್ಕೆ ಸಂಬಂಧಿಸಿದ ಮಾರ್ಗಸೂಚಿಗಳನ್ನು ಮಾರ್ಪಾಡು ಮಾಡಲಾಯಿತು. ಈ ಮಾರ್ಗಸೂಚಿಯಲ್ಲಿಯೂ ಇಲಾಖೆಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಧನಸಹಾಯ ಮಂಜೂರಾತಿ ಆಯ್ಕೆ ಸಮಿತಿಯನ್ನು ರಚಿಸಲಾಯಿತು. ಧನಸಹಾಯಕ್ಕಾಗಿ ಸಲ್ಲಿಕೆಯಾಗಿರುವ ಎಲ್ಲಾ ಅರ್ಜಿಗಳನ್ನು ಕಾರ್ಯದರ್ಶಿಗಳ ಅಧ್ಯಕ್ಷತೆ ಸಮಿತಿಯು ಸಂಘ ಸಂಸ್ಥೆಗಳ ದಾಖಲೆ ಹಾಗೂ ಚಟುವಟಿಕೆಗಳನ್ನು ಪರಿಶೀಲಿಸಿ, ಧನಸಹಾಯದ ಮೊತ್ತವನ್ನು ನಿಗದಿಪಡಿಸಿ ಮಂಜೂರು ಮಾಡಿತು.

ಈ ರೀತಿಯಾಗಿ 2012–13, 2013–14 ಮತ್ತು 2014–15ನೇ ಸಾಲಿನಲ್ಲಿ ಸರ್ಕಾರ ಹೊರಡಿಸಿದ ಮಾರ್ಗಸೂಚಿಯನ್ವಯ ಧನಸಹಾಯವನ್ನು ಸಂಘ ಸಂಸ್ಥೆಗಳ ಚಟುವಟಿಕೆಗಳಿಗಾಗಿ ಮಂಜೂರು ಮಾಡಿ ಅವುಗಳ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡಲಾಗಿದೆ.

7. **ಅಧ್ಯಯನದ ಉದ್ದೇಶಗಳು :**

**ಈ ಅಧ್ಯಯನದ ಉದ್ದೇಶಗಳು ಕೆಳಕಂಡಂತಿವೆ–**

ಅ. ಜಿಲ್ಲೆ ಹಾಗೂ ರಾಜ್ಯ ಮಟ್ಟದಲ್ಲಿ ಪ್ರೋತ್ಸಾಹ ಧನಸಹಾಯ ನೀಡಲು ಸಂಘ ಸಂಸ್ಥೆಗಳ ಆಯ್ಕೆ ಮಾಡುವಾಗ ಪಾರದರ್ಶಕತೆ/ಗುಣಮಟ್ಟವನ್ನು ಪರಿಗಣಿಸಲಾಗಿದೆಯೇ?

ಆ. ಸಂಘ ಸಂಸ್ಥೆಗಳಿಗೆ ನೀಡಿದ ಈ ಹಣವು ಸರಿಯಾದ ರೀತಿಯಲ್ಲಿ ವಿನಿಯೋಗಿಸಿ ಯೋಜನೆಯ ಉದ್ದೇಶವು ಈಡೇರಿದೆಯೇ? ಈ ಯೋಜನೆಯನ್ನು ಇನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿ ಫಲಶೃತಿ ಹೆಚ್ಚಿಸಲು ಕೈಗೊಳ್ಳಬೇಕಾದ ಕ್ರಮಗಳನ್ನು ತಿಳಿಯುವುದು.

ಇ. ಸಂಘ ಸಂಸ್ಥೆಗಳು ಕನ್ನಡ ಭಾಷೆ, ಸಾಹಿತ್ಯ, ಸಂಗೀತ, ನೃತ್ಯ, ಸಾಂಸ್ಕೃತಿಕ ಕಾರ್ಯಕ್ರಮ, ನಾಟಕ, ಜನಪದ, ಯಕ್ಷಗಾನ, ಚಿತ್ರಕಲೆ, ಶಿಲ್ಪಕಲೆ ಮುಂತಾದ ಸೃಜನಶೀಲ ಕಲಾಪ್ರಕಾರಗಳ ಚಟುವಟಿಕೆ ಕೈಗೊಂಡಿವೆಯೇ?

ಈ. ಸಂಘ ಸಂಸ್ಥೆಗಳು ಇಲಾಖೆಯಿಂದ ಅನುದಾನ ಪಡೆದ ನಂತರ ಇದನ್ನು ಸರಿಯಾಗಿ ವಿನಿಯೋಗಿಸುವರೆ ಹಾಗೂ ಯೋಜನೆಯ ಅಂದಾಜು ಪಟ್ಟಿಯಲ್ಲಿರುವ ಚಟುವಟಿಕೆಗಳಿಗೆ ಚೆಕ್ ಮೂಲಕ ಹಣವನ್ನು ಇತರ ಕಲಾವಿದರಿಗೆ ವಿತರಿಸಿ ವಿನಿಯೋಗಿಸಿದ ಬಗ್ಗೆ ಮೂರು

ತಿಂಗಳೊಳಗಾಗಿ ಇಲಾಖೆಗೆ ಹಣ ಬಳಕೆಯ ಪ್ರಮಾಣ ಪತ್ರ ಹಾಗೂ ಲೆಕ್ಕ ಪರಿಶೋಧಕ ಪತ್ರ ಇಲಾಖೆಗೆ ಸಲ್ಲಿಸಿರುವರೇ?

8. **ಮೌಲ್ಯಮಾಪನದಲ್ಲಿ ಉತ್ತರಿಸಬೇಕಾದ ಪ್ರಶ್ನೆಗಳು (ಎಲ್ಲಾ ಅಂಶಗಳನ್ನು ಒಳಗೊಂಡಿದ್ದರೂ ಸಮಗ್ರವಾಗಿಲ್ಲ) :**

1. ಧನ ಸಹಾಯ ಪಡೆಯುವ ಸಂಘ ಸಂಸ್ಥೆಗಳು ಯಾವ ಅಧಿನಿಯಮದಡಿ ನೊಂದಣಿ ಮಾಡಿಕೊಂಡಿರುತ್ತವೆ? ನೊಂದಣಿ ವಿಷಯದಲ್ಲಿ 1960 ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮದಡಿ ನೊಂದಣಿಯಾಗಿರುವ ಸಂಸ್ಥೆಗಳಿಗೆ ಮಾತ್ರ ಧನ ಸಹಾಯ ನೀಡಲಾಗುತ್ತಿದೆಯೇ ಅಥವಾ ಟ್ರಸ್ಟ್ ಕಾಯ್ದೆಯಡಿ ನೊಂದಣಿಯಾದ ಸಂಸ್ಥೆಗಳಿಗೂ ಧನ ಸಹಾಯ ನೀಡಲಾಗುತ್ತಿದೆಯೇ? ಹಾಗಿದ್ದಲ್ಲಿ ಟ್ರಸ್ಟ್‌ಗಳಿಗೆ ಧನ ಸಹಾಯ ನೀಡುವುದು ಎಷ್ಟರ ಮಟ್ಟಿಗೆ ಸೂಕ್ತ? ವಿವರ ನೀಡುವುದು.
2. ಧನ ಸಹಾಯ ಪಡೆಯುವ ಸಂಘ ಸಂಸ್ಥೆಗಳು ಸಾರ್ವಜನಿಕವಾಗಿ ಪ್ರದರ್ಶನವಾಗುವ ರೀತಿಯಲ್ಲಿ ಸಂಸ್ಥೆಯ ಅಂಚೆ ವಿಳಾಸ ನೊಂದಣಿ ಸಂಖ್ಯೆ ಇತ್ಯಾದಿ ವಿವರಗಳನ್ನೊಳಗೊಂಡ ನಾಮಫಲಕ ಹೊಂದಿವೆಯೇ? ಇಲ್ಲವಾದಲ್ಲಿ ವಿವರಗಳು ನೀಡುವುದು.
3. ಜಿಲ್ಲೆ ಹಾಗೂ ರಾಜ್ಯ ಮಟ್ಟದಲ್ಲಿ ಪ್ರೋತ್ಸಾಹ ಧನ ನೀಡಲು ಸಂಘ ಸಂಸ್ಥೆಗಳ ಆಯ್ಕೆ ಮಾಡುವಾಗ ಪಾರದರ್ಶಕತೆ ಅನುಸರಿಸಲಾಗಿದೆಯೇ? ಇಲ್ಲ ಎಂದಾದಲ್ಲಿ ಯಾಕೆ ಆಗಿಲ್ಲ?
4. ಪ್ರೋತ್ಸಾಹಧನವು ಆಯಾ ಕಲೆ, ಸಾಹಿತ್ಯ ಮತ್ತು ಸಾಂಸ್ಕೃತಿಕ ಉದ್ದೇಶದಿಂದಲೆ ರಚಿತವಾಗಿ ನಡೆಸುತ್ತಿರುವ ಚಟುವಟಿಕೆಗಳಿಗನುಗುಣವಾಗಿ ನಿಜವಾದ ಸಂಘ ಸಂಸ್ಥೆಗಳಿಗೆ ತಲುಪಿದೆಯೇ? ಅಥವಾ ವಿವಿಧೋದ್ದೇಶ ಚಟುವಟಿಕೆ ಹೊಂದಿರುವ ಸಂಘ ಸಂಸ್ಥೆ/ಟ್ರಸ್ಟ್‌ಗಳಿಗೆ ನೀಡಲಾಗಿದೆಯೇ?
5. ಈಗಾಗಲೇ ಹಲವಾರು ವರ್ಷಗಳಿಂದ ಈ ಯೋಜನೆಯನ್ನು ಜಾರಿಗೊಳಿಸಲಾಗುತ್ತಿರುವುದರಿಂದ ಇಲಾಖೆಗೆ ಈ ಕಾರ್ಯವನ್ನು ನಿರ್ವಹಿಸುವ ಸಂಘ ಸಂಸ್ಥೆಗಳನ್ನು ಅವುಗಳ ಚಟುವಟಿಕೆಯಲ್ಲಿ ಅರ್ಹತೆ ಹಾಗೂ ಹೆಚ್ಚಿನ ಅನುಭವದ ಆಧಾರದ ಮೇಲೆ ಧಾಖಲಿಸಿ (Empanelment) ಪಟ್ಟಿಯನ್ನು ತಯಾರಿಸಲಾಗಿದೆಯೇ? ಇಲ್ಲ ಎಂದಾದಲ್ಲಿ ಯಾಕೆ ತಯಾರಿಸಲಾಗಿಲ್ಲ? ವಿವರ ನೀಡುವುದು.
6. 2012–13 ರಿಂದ 2014–15ರ ಮೌಲ್ಯಮಾಪನ ಅವಧಿಯಲ್ಲಿ ಯಾವುದೇ ಸಂಘ ಸಂಸ್ಥೆಯು ಒಂದೇ ಆರ್ಥಿಕ ವರ್ಷದಲ್ಲಿ ಎರಡು ಬಾರಿ ಪ್ರೋತ್ಸಾಹ ಧನ ಪಡೆದಿರುವುದುಂಟೆ? ಹೌದು ಎಂದಾದಲ್ಲಿ, ಯಾಕೆ?
7. ಜಿಲ್ಲೆ ಮತ್ತು ರಾಜ್ಯ ಮಟ್ಟದಲ್ಲಿ ಸರ್ಕಾರದಿಂದ ನಾಮನಿರ್ದೇಶಿತಗೊಂಡ ಸದಸ್ಯರು ಸಂಘ ಸಂಸ್ಥೆ/ಟ್ರಸ್ಟ್‌ಗಳ ಸದಸ್ಯತ್ವ ಹೊಂದಿ ಪ್ರೋತ್ಸಾಹ ಧನ ಪಡೆದಿರುವ ಪ್ರಕರಣಗಳು ಇವೆಯೇ? ಹಾಗಿದ್ದಲ್ಲಿ ಇದು ಹಿತಾಸಕ್ತಿಯ ಸಂಘರ್ಷವಾಗುವುದಿಲ್ಲವೆ?

ಸಂಸ್ಥೆಯು ತನ್ನ ಬಳಿ ಇಟ್ಟುಕೊಂಡಿರುತ್ತವೆಯೇ? ವೆಚ್ಚದ ವಿವರಗಳು ಸಂಘ ಸಂಸ್ಥೆಯು ಸಮರ್ಪಕವಾಗಿ ನಿರ್ವಹಿಸಿಲ್ಲದಿದ್ದರೆ, ಇದಕ್ಕೆ ಕಾರಣವೇನು?

14. ಈ ಕಾರ್ಯಕ್ರಮಗಳ ಅನುಷ್ಠಾನದಿಂದ ಎಷ್ಟರಮಟ್ಟಿಗೆ ಕನ್ನಡ ಮತ್ತು ಸಂಸ್ಕೃತಿಯ ಅಭಿವೃದ್ಧಿಯಾಗಿದೆ? ನೀರಿಕ್ಷಿತ ಅಭಿವೃದ್ಧಿ ಆಗದಿದ್ದರೆ ಈ ಯೋಜನೆಗಳನ್ನು ಮುಂದುವರೆಸುವುದು ಸೂಕ್ತವೇ? ಒಂದು ವೇಳೆ ಮುಂದುವರೆಸಬೇಕಾದರೆ ಯೋಜನೆಯಲ್ಲಿ ಅಳವಡಿಸಬೇಕಾದ ಹೊಸ ವಿಧಾನಗಳು ಯಾವುವು? ವಿವರ ನೀಡುವುದು.

## 9. ಮೌಲ್ಯಮಾಪನದಲ್ಲಿ ಅಳವಡಿಸಬೇಕಾದ ಮಾದರಿ ವಿಧಾನ (Sampling Methodology)

ಒಟ್ಟು 11 ಕಲಾಪ್ರಕಾರಗಳನ್ನು ಕೈಗೊಳ್ಳಲು ಸಂಘ ಸಂಸ್ಥೆಗಳಿಗೆ ಸಾಮಾನ್ಯ ಯೋಜನೆ, ವಿಶೇಶ ಘಟಕ ಹಾಗೂ ಗಿರಿಜನ ಉಪಯೋಜನೆಗಡಿ ಧನ ಸಹಾಯ ನೀಡಲಾಗುತ್ತಿದೆ. ಈ 11 ಕಲಾಪ್ರಕಾರಗಳನ್ನು ಸಾಮಾನ್ಯ ಯೋಜನೆಯಡಿ 8 ವಿಧದಲ್ಲಿ ವಿಂಗಡಿಸಲಾಗಿದೆ. ಆದರೆ ವಿಷೇಶ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಗಳಡಿ 6 ಕಲಾ ಪ್ರಕಾರಗಳಿಗೆ ಮಾತ್ರ ಧನ ಸಹಾಯ ನೀಡಲಾಗಿದೆ. ಸಾಮಾನ್ಯ ಯೋಜನೆಯಲ್ಲಿ 901, ವಿಷೇಶ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಗಳಲ್ಲಿ ಅನುಕ್ರಮವಾಗಿ 425 ಮತ್ತು 98 ಸಂಘ ಸಂಸ್ಥೆಗಳ 2012-13 ರಿಂದ 2014-15ರವರೆಗೆ ಧನ ಸಹಾಯ ಪಡೆದಿವೆ. ಜಿಲ್ಲಾವಾರು ಕಲಾಪ್ರಕಾರಗಳ ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ. ***ಅನುಬಂಧ***ದಲ್ಲಿ ನೀಡಿರುವ ಮಾಹಿತಿಯಾನುಸಾರ ಸಾಮಾನ್ಯ ಯೋಜನೆ, ವಿಷೇಶ ಘಟಕ ಹಾಗೂ ಗಿರಿಜನ ಉಪಯೋಜನೆಯ ಮಾದರಿ ಸಂಘ ಸಂಸ್ಥೆಗಳನ್ನು ಮೌಲ್ಯಮಾಪನಕ್ಕೆ ಆಯ್ಕೆ ಮಾಡಲು ಈ ಕೆಳಕಂಡ ವಿಧಾನವನ್ನು ಅನುಸರಿಸಲಾಗಿದೆ.

**ಸಾಮಾನ್ಯ ಯೋಜನೆ:** ಪ್ರತಿ ಕಂದಾಯ ವಿಭಾಗದಿಂದ 2 ಜಿಲ್ಲೆಗಳನ್ನು ಆಯ್ಕೆ ಮಾಡಿದ್ದು ಅವುಗಳ ಪೈಕಿ ಒಂದನ್ನು ಅತೀ ಹೆಚ್ಚು ಸಂಘ ಸಂಸ್ಥೆಯುಳ್ಳ ಹಾಗೂ ಇನ್ನೊಂದನ್ನು ಅತೀ ಕಡಿಮೆ ಸಂಘ ಸಂಸ್ಥೆಯುಳ್ಳ ಜಿಲ್ಲೆಗಳಾಗಿವೆ. ಹೀಗಾಗಿ ಒಟ್ಟು 8 ಜಿಲ್ಲೆಗಳನ್ನು ಆಯ್ಕೆ ಮಾಡಲಾಗಿದೆ.

**ವಿಷೇಶ ಘಟಕ ಹಾಗೂ ಗಿರಿಜನ ಉಪಯೋಜನೆ:** ಪ್ರತಿ ಕಂದಾಯ ವಿಭಾಗದಲ್ಲಿ 3 ಜಿಲ್ಲೆಗಳನ್ನು ಮಾದರಿ ಜಿಲ್ಲೆಗಳಾಗಿ ಆಯ್ಕೆ ಮಾಡಲಾಗಿದೆ. ಸಾಮಾನ್ಯ ಯೋಜನೆಯಡಿ ಆಯ್ಕೆ ಮಾಡಿದ 2 ಜಿಲ್ಲೆಗಳನ್ನು ಮಾದರಿ ಜಿಲ್ಲೆಗಳೆಂದು ಪರಿಗಣಿಸಿದ್ದಲ್ಲಿ ಎಲ್ಲಾ ಕಲಾಪ್ರಕಾರಗಳ ಪ್ರತಿನಿಧಿತ್ವ ಬಾರದ ಕಾರಣ ವಿಷೇಶ ಘಟಕ ಹಾಗೂ ಗಿರಿಜನ ಉಪಯೋಜನೆಗಡಿ 3 ಜಿಲ್ಲೆಗಳನ್ನು ಆಯ್ಕೆ ಮಾಡಲಾಗಿದೆ. ಈ ರೀತಿ ಆಯ್ಕೆ ಮಾಡಿದ ಜಿಲ್ಲೆಗಳ ಹಾಗೂ ಸಂಘ ಸಂಸ್ಥೆಗಳ ವಿವರ ಈ ಕೆಳಕಂಡಂತಿವೆ.

| ಕ್ರ. ಸಂ. | ಜಿಲ್ಲೆಗಳ ಹೆಸರು | ಕಲಾಪ್ರಕಾರ (ಸಾಮಾನ್ಯ) | | | | | | | | |
|---|---|---|---|---|---|---|---|---|---|---|
| | | ಜಾನಪದ | ನೃತ್ಯ | ನಾಟಕ | ಸಂಗೀತ | ಯಕ್ಷಗಾನ/ ಬಯಲಾಟ/ ಗೊಂಬೆ ಪ್ರದರ್ಶನ | ಸಾಹಿತ್ಯ | ಚಿತ್ರಕಲೆ | ಸಂಕೀರ್ಣ/ ಜಾಗೃತಿ, ಪ್ರಶಸ್ತಿ ವಿತರಣೆ, ಗಣಕ ತರಬೇತಿ | ಒಟ್ಟು |
| 1 | ಬೆಂಗಳೂರು ನಗರ | 1 | 3 | 6 | 7 | 2 | 1 | 1 | 11 | 32 |
| 2 | ಕೋಲಾರ | 1 | 0 | 1 | 1 | | | | 1 | 4 |
| | ಒಟ್ಟು | 2 | 3 | 7 | 8 | 2 | 1 | 1 | 12 | 36 |
| 3 | ಉಡುಪಿ | 1 | 2 | 2 | 1 | 2 | | 1 | 2 | 11 |
| 4 | ಕೊಡಗು | 0 | 0 | 0 | 0 | | | | 3 | 3 |
| | ಒಟ್ಟು | 1 | 2 | 2 | 1 | 2 | 0 | 1 | 5 | 14 |
| 5 | ವಿಜಯಪುರ | 1 | 0 | 1 | 0 | 1 | | | 2 | 5 |
| 6 | ಧಾರವಾಡ | 1 | 1 | 2 | 3 | 1 | 1 | 1 | 4 | 14 |
| | ಒಟ್ಟು | 2 | 1 | 3 | 3 | 2 | 1 | 1 | 6 | 19 |
| 7 | ಕಲ್ಬುರ್ಗಿ | 2 | 0 | 1 | 2 | | | 1 | 4 | 10 |
| 8 | ಯಾದಗಿರಿ | 0 | 0 | 0 | 1 | | | | 4 | 5 |
| | ಒಟ್ಟು | 2 | 0 | 1 | 3 | 0 | 0 | 1 | 8 | 15 |
| | | 7 | 6 | 13 | 15 | 6 | 2 | 4 | 31 | 84 |

| ಕ್ರ. ಸಂ. | ಜಿಲ್ಲೆಗಳ ಹೆಸರು | ಕಲಾಪ್ರಕಾರ (ವಿಶೇಷ ಘಟಕ ಯೋಜನೆ) | | | | | | |
|---|---|---|---|---|---|---|---|---|
| | | ಜಾನಪದ | ನೃತ್ಯ | ನಾಟಕ | ಸಂಗೀತ | ಯಕ್ಷಗಾನ/ ಬಯಲಾಟ | ಸಂಕೀರ್ಣ | ಒಟ್ಟು |
| 1 | ಬೆಂಗಳೂರು ನಗರ | 7 | 1 | 2 | 2 | 0 | 2 | 14 |
| 2 | ರಾಮನಗರ | 5 | 0 | 1 | 0 | 0 | 0 | 6 |
| 3 | ತುಮಕೂರು | 2 | 0 | 1 | 2 | 0 | 0 | 5 |
| | ಒಟ್ಟು | 14 | 1 | 4 | 4 | 0 | 2 | 25 |
| 4 | ಹಾಸನ | 2 | 0 | 0 | 0 | 1 | 0 | 3 |

9 | Page

| | | | | | | | | |
|---|---|---|---|---|---|---|---|---|
| ೫ | ಮಂಡ್ಯ | 5 | 0 | 1 | 0 | 0 | 0 | 6 |
| ೬ | ಮೈಸೂರು | 1 | 0 | 2 | 0 | 0 | 0 | 3 |
| ಒಟ್ಟು | | 8 | 0 | 3 | 0 | 1 | 0 | 12 |
| 7 | ಬೆಳಗಾವಿ | 4 | 0 | 1 | 1 | 0 | 0 | 6 |
| ೮ | [redacted] | | | | | | | |
| ೯ | ಗದಗ್ | 1 | 0 | 1 | 1 | 1 | 0 | 4 |
| ಒಟ್ಟು | | 9 | 1 | 2 | 3 | 2 | 0 | 17 |
| 10 | ಬಳ್ಳಾರಿ | 2 | 0 | 1 | 1 | 1 | 0 | 5 |
| 11 | ಕಲ್ಬುರ್ಗಿ | 4 | 1 | 0 | 1 | 0 | 0 | 6 |
| ೧೨ | ಯಾದಗಿರಿ | 2 | 0 | 0 | 1 | 0 | 0 | 3 |
| ಒಟ್ಟು | | 8 | 1 | 1 | 3 | 1 | 0 | 14 |
| | | 39 | 3 | 10 | 10 | 4 | 2 | 68 |

| ಕ್ರ. ಸಂ. | ಜಿಲ್ಲೆಗಳ ಹೆಸರು | ಕಲಾಪ್ರಕಾರ (ಗಿರಿಜನ ಉಪಯೋಜನೆ) | | | | | | |
|---|---|---|---|---|---|---|---|---|
| | | ಜಾನಪದ | ನೃತ್ಯ | ನಾಟಕ | ಸಂಗೀತ | ಯಕ್ಷಗಾನ/ | ಸಂಕೀರ್ಣ | ಒಟ್ಟು |
| 1 | ಬೆಂಗಳೂರು ನಗರ | 1 | 2 | 1 | 3 | 0 | 0 | 7 |
| ೨ | ಚಿತ್ರದುರ್ಗ | 1 | 1 | 1 | 2 | 0 | 0 | 5 |
| ೩ | ತುಮಕೂರು | 1 | 0 | 1 | 1 | 0 | 0 | 3 |
| ಒಟ್ಟು | | 3 | 3 | 3 | 6 | 0 | 0 | 15 |
| 4 | ಉಡುಪಿ | 1 | 0 | 1 | 0 | 0 | 0 | 2 |
| ೫ | ಕೊಡಗು | 1 | 0 | 0 | 0 | 0 | 0 | 1 |
| ೬ | ಮೈಸೂರು | 1 | 0 | 0 | 0 | 1 | 0 | 2 |
| ಒಟ್ಟು | | 3 | 0 | 1 | 0 | 1 | 0 | 5 |
| 7 | ಬೆಳಗಾವಿ | 1 | | 2 | 0 | 0 | 0 | 3 |
| ೮ | [redacted] | | | | | | | |
| ೯ | ಹಾವೇರಿ | 1 | 0 | 1 | 0 | 0 | 0 | 2 |
| ಒಟ್ಟು | | 3 | 1 | 4 | 2 | 0 | 0 | 10 |
| 10 | ಬಳ್ಳಾರಿ | 0 | 0 | 1 | 1 | 0 | 0 | 2 |
| 11 | ಕಲ್ಬುರ್ಗಿ | 2 | 0 | 0 | 2 | 0 | 0 | 4 |

| | | | | | | | | |
|---|---|---|---|---|---|---|---|---|
| ೫ | ರಾಯಚೂರು | 1 | 0 | 1 | 1 | 0 | 0 | 3 |
| ಒಟ್ಟು | | 3 | 0 | 2 | 4 | 0 | 0 | 9 |
| | | **12** | **4** | **10** | **12** | **1** | **0** | **39** |

ಎರಡು ಸಮೂಹ ಚರ್ಚೆ (Focused Group Discussion)ಗಳನ್ನು ಕೈಗೊಳ್ಳಬೇಕಾಗಿದೆ. ಒಂದನ್ನು ಪ್ರತ್ಯೇಕ ಸಂಘ ಸಂಸ್ಥೆಗಳ ಪದಾಧಿಕಾರಿಗಳಿಂದ ಹಾಗೂ ಇನ್ನೊಂದನ್ನು ಜಿಲ್ಲಾಮಟ್ಟದ ಹಾಗೂ ರಾಜ್ಯ ಮಟ್ಟದ ಅಧಿಕಾರಿಗಳಿಂದ. ಆಯ್ಕೆಯಾದ ಎಲ್ಲಾ ಮಾದರಿ ಸಂಘ ಸಂಸ್ಥೆಗಳು ನೊಂದಾಯಿಸಿರುವ ಕಾಯ್ದೆ ವಿವರ ಅವುಗಳ ವರ್ಷವಾರು ಆಡಿಟ್ ವರದಿ (2012-13 ರಿಂದ 2014-15) ಸಂಘ ಸಂಸ್ಥೆಗಳು ನೊಂದಣಿಯಾದ ಧ್ಯೆಯೋದ್ದೇಶ, ಸದಸ್ಯರ ಸಂಖ್ಯೆ, ಸರ್ಕಾರದಿಂದ ಪಡೆದಿರುವ ಧನಸಹಾಯ ಹಾಗೂ ಭರಿಸಿದ ವೆಚ್ಚದ ಬಗ್ಗೆ ಮಾಹಿತಿ ಪಡೆದು ಜಿಲ್ಲೆ ಮತ್ತು ರಾಜ್ಯ ಮಟ್ಟದಲ್ಲಿರುವ ದಾಖಲೆಗಳೊಂದಿಗೆ ಹೊಂದಾಣಿಕೆ ಮಾಡಿ ಹಣ ಸದ್ಬಳಕೆಯಾದ ಬಗ್ಗೆ ನಿರ್ಣಯಿಸುವುದು. ಈ ಎಲ್ಲಾ ಸಾಕ್ಷಾದಾರದ ಮೇರೆಗೆ ಯೋಜನೆಗಳ ಅನುಷ್ಠಾನದ ಪ್ರಕ್ರಿಯೆ ಹಾಗೂ ಅನುಸರಿಸಬೇಕಾದ ಉತ್ತಮ ಅಂಶಗಳ ಬಗ್ಗೆ ವರದಿ ನೀಡುವುದು. ಇದಲ್ಲದೆ ವಿವಿಧ ಕಲಾಪ್ರಕಾರಗಳನ್ನು ಕೈಗೊಳ್ಳಲು ಸಂಘ ಸಂಸ್ಥೆಗಳು ಸಾಂಸ್ಥಿಕ ಸಾಮರ್ಥ್ಯ ಹಾಗೂ ಪರಿಣತಿ ಹೊಂದಿರುವ ಬಗ್ಗೆಯೂ ಸಹ ಮೌಲ್ಯಮಾಪನ ಮಾಡುವುದು.

ಸರ್ಕಾರದ ಧನ ಸಹಾಯ ಪಡೆಯದೆ ಕೆಲವು ಸಂಘ ಸಂಸ್ಥೆಗಳು ಕನ್ನಡ ಮತ್ತು ಸಂಸ್ಕೃತಿಯನ್ನು ವೃದ್ಧಿಸಲು ವಿವಿಧ ಕಲಾಪ್ರಕಾರಗಳನ್ನು ಕೈಗೊಂಡು ನಿರ್ವಹಿಸುತ್ತಿರುವ ಕೆಲ ಸಂಘ ಸಂಸ್ಥೆಗಳ (as a control group) ಕಾರ್ಯವನ್ನು ಧನ ಸಹಾಯ ಪಡೆದು ಕಾರ್ಯ ನಿರ್ವಹಿಸುತ್ತಿರುವ ಸಂಘ ಸಂಸ್ಥೆಗಳ ಜೊತೆಗೆ ತುಲನೆ ಮಾಡುವುದು.

**10. <u>ವರದಿ ಸಲ್ಲಿಸುವಿಕೆಯ ವೇಳಾಪಟ್ಟಿ:</u>**

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಈ ಯೋಜನೆಯಡಿ ಸಂಘ ಸಂಸ್ಥೆಗಳಿಗೆ ಬಿಡುಗಡೆ ಮಾಡಿದ ಜಿಲ್ಲಾವಾರು ಮಾಹಿತಿ ಹಾಗೂ ಕೇಂದ್ರ ಕಛೇರಿಯಲ್ಲಿ ಈ ಅಧ್ಯಯನಕ್ಕೆ ಸಂಬಂಧಿಸಿದ ಎಲ್ಲಾ ಮಾಹಿತಿ/ದತ್ತಾಂಶವನ್ನು ಹಾಗೂ 2012-13 ರಿಂದ 2014-15ರವರೆಗೆ ಹೊರಡಿಸಲಾದ ಸರ್ಕಾರಿ ಆದೇಶಗಳು ಹಾಗೂ ಮಾರ್ಗಸೂಚಿಗಳನ್ನು ನೇಮಕಗೊಳಿಸಲಾದ ಸಮಾಲೋಚಕರ ಸಂಸ್ಥೆಗೆ ಒದಗಿಸಬೇಕು. ಇದಲ್ಲದೆ ಯೋಜನೆಯ ಅನುಷ್ಠಾನದ ಪಾಲುಗಾರರೊಂದಿಗೆ ರಾಜ್ಯ ಹಾಗೂ ಜಿಲ್ಲಾಮಟ್ಟದಲ್ಲಿ ಗುಂಪು ಚರ್ಚೆ ನಡೆಸಲು ಅನುವು ಮಾಡಿಕೊಟ್ಟು ಅಧ್ಯಯನವನ್ನು ನಿಗದಿತ ಕಾಲಾವಧಿಯೊಳಗೆ ಪೂರ್ಣಗೊಳಿಸಲು ಇಲಾಖೆಯು ಸಹಕರಿಸಬೇಕು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಜಿಲ್ಲಾಮಟ್ಟದ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ಸೂಚನೆಗಳನ್ನು ನೀಡತಕ್ಕದ್ದು. ಅಧ್ಯಯನವನ್ನು, ಅನುಮೋದನೆಗೆ ತೆಗೆದುಕೊಳ್ಳುವ ಕಾಲಾವಧಿಯನ್ನು ಹೊರತುಪಡಿಸಿ 6 ತಿಂಗಳೊಳಗೆ ಪೂರ್ಣಗೊಳಿಸಲು ನಿರೀಕ್ಷಿಸಲಾಗುತ್ತದೆ.

ಸಮಾಲೋಚಕ ಸಂಸ್ಥೆ ಈ ಕೆಳಕಂಡ ಕಾಲಾವಧಿ ಮತ್ತು ಸಲ್ಲಿಸುವಿಕೆಗಳಿಗೆ ಬದ್ಧವಾಗಿರತಕ್ಕದ್ದು:

| | | |
|---|---|---|
| ಎ. ಕಾರ್ಯ ಯೋಜನೆಯ ಸಲ್ಲಿಕೆ | : | ಒಪ್ಪಂದಕ್ಕೆ ಸಹಿ ಹಾಕಿದ ದಿನಾಂಕದಿಂದ **ಒಂದು** ತಿಂಗಳು |
| ಬಿ. ಕ್ಷೇತ್ರ ಮಾಹಿತಿ ಸಂಗ್ರಹಣೆ | : | ಕಾರ್ಯಯೋಜನೆಯ ಅನುಮೋದನೆಯ ದಿನಾಂಕದಿಂದ **ಮೂರು** ತಿಂಗಳು |
| ಸಿ. ಕರಡು ವರದಿ ಸಲ್ಲಿಕೆ | : | ಕ್ಷೇತ್ರ ಮಾಹಿತಿ ಸಂಗ್ರಹಣೆಯ **ಒಂದು** ತಿಂಗಳ ನಂತರ |
| ಡಿ. ಅಂತಿಮ ವರದಿ ಸಲ್ಲಿಕೆ | : | ಕರಡು ವರದಿ ಸಲ್ಲಿಸಿದ ದಿನಾಂಕದಿಂದ **ಒಂದು** ತಿಂಗಳು |
| ಇ. ಒಟ್ಟಾರೆ ಅವಧಿ | : | 6 ತಿಂಗಳು |

### 11. ಕೋರ್ ತಂಡದ ಸದಸ್ಯರುಗಳ ಕನಿಷ್ಠ ವಿದ್ಯಾರ್ಹತೆ:

ಕೋರ್ ತಂಡದ ಕೆಳಗೆ ನಮೂದಿಸಿದ ತಾಂತ್ರಿಕ ವಿದ್ಯಾರ್ಹತೆ/ಅನುಭವಗಳನ್ನು ಹೊಂದಿರುವ ಸದಸ್ಯರುಗಳನ್ನು ಒಳಗೊಂಡಿರಬೇಕು.

(ಎ) ಕನ್ನಡ ಭಾಷೆಯಲ್ಲಿ ಪಿ.ಹೆಚ್.ಡಿ ಪದವಿ ಹೊಂದಿ ಸಂಬಂಧಪಟ್ಟ ಕ್ಷೇತ್ರದಲ್ಲಿ ಕನಿಷ್ಠ 10 ವರ್ಷಗಳ ಅನುಭವವುಳ್ಳವರು (ಪ್ರಧಾನ ಸಂಶೋಧಕರು)

(ಬಿ) ಕನಿಷ್ಠ 5 ವರ್ಷಗಳ ಅನುಭವಗಳೊಂದಿಗೆ ನಮೂದಿಸಿರುವ ಕಲಾಪ್ರಕಾರಗಳಲ್ಲಿ ಸ್ನಾತಕೋತ್ತರ ಪದವಿ (ಸದಸ್ಯರು-1)

(ಸಿ) ಸಾಮಾಜಿಕ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿ (ಸದಸ್ಯರು-2)

**ಅಥವಾ ಉಲ್ಲೇಖಿತ ನಿಯಮಗಳಲ್ಲಿ ನಿಗಧಿಪಡಿಸಿದ ಕಾಲಾವಧಿಯೊಳಗೆ ಮೌಲ್ಯಮಾಪನ ಅಧ್ಯಯನವನ್ನು ಪೂರ್ಣಗೊಳಿಸಬಹುದಾದ ಹೆಚ್ಚಿನ ಸಂಖ್ಯೆಗಳನ್ನು ಹೊಂದಿರಬಹುದಾಗಿದೆ.**

**ಈ ಮಾನದಂಡಗಳನ್ನು ಹೊಂದಿರದ ಸಮಾಲೋಚಕ ಮೌಲ್ಯಮಾಪನ ಸಂಸ್ಥೆಗಳನ್ನು ಮೌಲ್ಯಮಾಪನ ಕಾರ್ಯ ಕೈಗೊಳ್ಳಲು ಪರಿಗಣಿಸಲಾಗುವುದಿಲ್ಲ.**

### 12. ಮೌಲ್ಯಮಾಪನದ ಏಜೆನ್ಸಿಯ ಆಯ್ಕೆಯ ವಿಧಾನ:

ಕರ್ನಾಟಕ ಪಾರದರ್ಶಕತೆ ಮತ್ತು ಸಾರ್ವಜನಿಕ ಸಂಗ್ರಹಣೆ, ಕಾಯ್ದೆ ಮತ್ತು ನಿಯಮಗಳಲ್ಲಿರುವ ಅವಕಾಶಗಳ ಮೇರೆಗೆ, ಆದರೆ ಗುಣಮಟ್ಟಕ್ಕೆ ರಾಜಿಯಾಗದಂತೆ ಸಮಾಲೋಚಕ ಸಂಸ್ಥೆಯನ್ನು ಆಯ್ಕೆಮಾಡಲಾಗುತ್ತದೆ.

## 13. ಅಧ್ಯಯನದ ಬಗ್ಗೆ ಹೆಚ್ಚಿನ ವಿವರಗಳನ್ನು ಪಡೆಯಲು ಸಂಪರ್ಕಿಸಬಹುದಾದ ಅಧಿಕಾರಿಗಳು:

ಶ್ರೀ.ಕೆ.ಎ.ದಯಾನಂದ, ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ದೂರವಾಣಿ ಸಂಖ್ಯೆ: 22275540/9449842130, ಮಿಂಚಂಚೆ ವಿಳಾಸ:kanbhavblr@gmail.com ಮತ್ತು ಶ್ರೀ. ಬಲವಂತರಾವ್ ಪಾಟೀಲ್, ಜಂಟಿ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ದೂರವಾಣಿ ಸಂಖ್ಯೆ: 9448830127, ಇವರುಗಳನ್ನು ಅಧ್ಯಯನದ ಬಗ್ಗೆ ಮಾಹಿತಿ/ವಿವರಗಳನ್ನು ಪಡೆಯಲು ಸಂಪರ್ಕಿಸಬಹುದು.

## 14. ಮೌಲ್ಯಮಾಪನ ವರದಿಯಲ್ಲಿ ನಿರೀಕ್ಷಿಸಲಾಗುವ ಗುಣಮಟ್ಟ:

ಮೌಲ್ಯಮಾಪನ ವರದಿಯ ತಯಾರಿಕೆಯಲ್ಲಿ ಈ ಕೆಳಕಂಡ ಅಂಶಗಳನ್ನು (ಕೇವಲ ಸೇರಿಸಲ್ಪಟ್ಟಿದೆ ಮಾತ್ರ ಸಮಗ್ರವಾಗಿಲ್ಲ) ಖಡ್ಡಾಯವಾಗಿ ಪಾಲಿಸತಕ್ಕದ್ದು.

1. ಮೌಲ್ಯಮಾಪನ ವರದಿಯು ಮೇಲ್ನೋಟದಲ್ಲಿಯೇ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಅಧ್ಯಯನವೆಂದು ಸ್ಪಷ್ಟವಾಗಿ ಗೋಚರಿಸತಕ್ಕದ್ದು ಇದು ಸಮಾಲೋಚಕ ಸಂಸ್ಥೆಯಿಂದ ತಯಾರಿಲ್ಪಟ್ಟ ವರದಿ ಮಾತ್ರವಷ್ಟೆ ಇದು ಕೇವಲ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದಿಂದ ಆರ್ಥಿಕ ಸಹಾಯದಿಂದ ಸಮಾಲೋಚಕ ಸಂಸ್ಥೆಯಿಂದಲೇ ಪ್ರಾರಂಭಿಸಲಾದ ಅಧ್ಯಯನ ಕಾರ್ಯವೆಂದು ತಿಳಿಸಲು ಉದ್ದೇಶಿಸಿದಂತಿರಬಾರದು.
2. ಅಧ್ಯಯನದ ವರದಿಯು ಸಾಮಾನ್ಯವಾಗಿ ವಿಶ್ವ ಸಂಸ್ಥೆಯ ಮೌಲ್ಯಮಾಪನ ಮಾರ್ಗಸೂಚಿಗಳು (UNEG) "ಯುಎನ್ ಪದ್ಧತಿಯಲ್ಲಿಯ ಮೌಲ್ಯಮಾಪನ ಗುಣಮಟ್ಟ" ಮತ್ತು ಮೌಲ್ಯಮಾಪನದ ನೈತಿಕ ಗುಣಮಟ್ಟ"ಗಳನ್ನು ಪಾಲಿಸತಕ್ಕದ್ದು. ವರದಿಯು ಪೂರ್ಣವಾಗಿರಬೇಕು ಮತ್ತು ತಾರ್ಕಿಕವಾಗಿ, ಸ್ಪಷ್ಟವಾಗಿ ರಚಿಸತಕ್ಕದ್ದು. ಆದರೆ ಸರಳ ಭಾಷೆಯಲ್ಲಿರತಕ್ಕದ್ದು. ಉಲ್ಲೇಖಿತ ನಿಯಮಗಳಲ್ಲಿರುವ ಗುಣಮಟ್ಟಗಳನ್ನು ಒಳಗೊಂಡಿರುವುದಲ್ಲದೆ, ವರದಿಯನ್ನು ಈ ಕೆಳಕಂಡ ಕ್ರಮದಲ್ಲಿ ವ್ಯವಸ್ಥಿತಗೊಳಿಸತಕ್ಕದ್ದು.
   1. ಶೀರೋನಾಮೆ ಮತ್ತು ಆರಂಭಿಕ ಪುಟ
   2. ವಿಷಯಾನುಕ್ರಮಣಿಕೆ
   3. ಪ್ರಥಮಾಕ್ಷರಗಳು ಮತ್ತು ಸಂಕ್ಷಿಪ್ತಾಕ್ಷರಗಳ ಪಟ್ಟಿ.
   4. **ಕಾರ್ಯ ನಿರ್ವಹಣೆಯ ಸಾರಾಂಶ**: ಕಾರ್ಯಕ್ರಮ, ಮೌಲ್ಯಮಾಪನದ ಉದ್ದೇಶ ಮತ್ತು ವ್ಯಾಪ್ತಿ ಮೌಲ್ಯಮಾಪನದ ವಿಧಾನಶಾಸ್ತ್ರ, ಮುಖ್ಯ ಸಂಶೋಧನೆಗಳು, ನಿರ್ಬಂಧಗಳ ಮತ್ತು ಶಿಫಾರಸ್ಸುಗಳನ್ನು ವಿವರಿಸುವಂತಹ ಒಂದು ಅದ್ವಿತೀಯ ವಿಭಾಗ.

5. **<u>ವಲಯದ ಇತಿಹಾಸ</u>:** ಮೌಲ್ಯಮಾಪನ ಕೈಗೊಳ್ಳುವಂತಹ ಯೋಜನೆ/ಕಾರ್ಯಕ್ರಮವು ಒಳಗೊಂಡಿರುವ ವಲಯದ ಸಂಕ್ಷಿಪ್ತ ಇತಿಹಾಸವನ್ನು ಒಳಗೊಂಡಿರುವ ವಿಭಾಗ. ಇದು ವಿಶ್ವಾಸಾರ್ಹ ಮತ್ತು ಪ್ರಕಟಿತ ಮೂಲಗಳಿಂದ ಪಡೆದ ಇತ್ತೀಚಿನ ಮಾಹಿತಿಗಳನ್ನೊಳಗೊಂಡಿರಬೇಕು.
6. **<u>ಮೌಲ್ಯಮಾಪನ ಮಾಡತಕ್ಕ ಕಾರ್ಯಕ್ರಮದ ಗುರಿ ಮತ್ತು ಕಾರ್ಯನಿರ್ವಹಣೆ</u>:** ಈ ವಿಭಾಗವು ಕಾರ್ಯಕ್ರಮದ ನಿಗದಿತ ಗುರಿಗಳನ್ನು ಮತ್ತು ಮೌಲ್ಯಮಾಪನ ಅವಧಿಯ ಆರ್ಥಿಕ ಮತ್ತು ಭೌತಿಕ ಸಾಧನೆಗಳನ್ನು ಒಳಗೊಂಡಿರಬೇಕು ಹಾಗೂ ಇದು ಉದ್ದೇಶಿತ ಗುಂಪಿನ ವಿವರಣೆ, ಕಾರ್ಯಕ್ರಮದ ಉದ್ದೇಶ ಮತ್ತು ಫಲಾನುಭವಿಗಳ ಆಯ್ಕೆಯ ವಿಧಾನ (ಕಾರ್ಯಕ್ರಮದಲ್ಲಿ ಒಳಗೊಂಡಿದ್ದರೆ)ವನ್ನು ಒಳಗೊಂಡಿರಬೇಕು.
7. **ಬರಹಗಳು/ಹಿಂದಿನ ಮೌಲ್ಯಮಾಪನ ವರದಿಗಳ ವಿಮರ್ಶೆ**
8. **<u>ಮೌಲ್ಯಮಾಪನದ ವಿಧಾನಶಾಸ್ತ್ರ</u>:**-ಇದು ಮಾದರಿ ಗಾತ್ರ ಮಾದರಿಗಳ ವಿವರಗಳನ್ನು ಒಳಗೊಂಡಿರಬೇಕು.
9. ಮೌಲ್ಯಮಾಪನ ಅಧ್ಯಯನದಲ್ಲಿ ಕಂಡುಬಂದ ಅಂಶಗಳು.
10. ಮೌಲ್ಯಮಾಪನ ಅಧ್ಯಯನದ ಮಿತಿಗಳು/ನಿರ್ಬಂಧಗಳು.
11. **<u>ಮೌಲ್ಯಮಾಪನದಿಂದ ಹೊರಹೊಮ್ಮಿದ ಶಿಫಾರಸ್ಸುಗಳು</u>:**

ಈ ವಿಭಾಗವು ಕೆಳಕಂಡ ಅನುಬಂಧಗಳನ್ನು ಒಳಗೊಂಡಿರತಕ್ಕದ್ದು.

ಎ. ಅಧ್ಯಯನಕ್ಕೆ ಸಮ್ಮತಿಸಲಾದ ಉಲ್ಲೇಖಿತ ನಿಯಮಗಳು.

ಬಿ. ಸಮೀಕ್ಷೆಯ ಉಪಕರಣಗಳು ಮತ್ತು ಪ್ರಶ್ನಾವಳಿಗಳು.

ಸಿ. ವೈಯಕ್ತಿಕವಾಗಿ ಸಂದರ್ಶಿಸಲಾದ ವ್ಯಕ್ತಿಗಳು ಮತ್ತು ವಿಳಾಸಗಳ ಪಟ್ಟಿ.

ಡಿ. ಕೇಂದ್ರಿಕೃತ ಸಮೂಹ ಚರ್ಚೆಗೆ ಒಳಪಡಿಸಲಾದ ಸ್ಥಳಗಳು, ದಿನಾಂಕ ಮತ್ತು ವ್ಯಕ್ತಿಗಳ ಸಂಖ್ಯೆ.

ಇ. ವಿಷಯಧಾರಿತ ಅಧ್ಯಯನ/ಉತ್ತಮ ಅಭ್ಯಾಸಗಳ ಕ್ರೋಢೀಕರಣ.

ಎಫ್. ಕಾರ್ಯಕ್ರಮದಲ್ಲಿರುವ ಪ್ರಮುಖ ವ್ಯತ್ಯಾಸಗಳು/ಅನುಸರಣೀಯವಲ್ಲದ ವಿಷಯಗಳು/ ವಿಷಯಾಂತರಗಳು ಇವುಗಳನ್ನೊಳಗೊಂಡ ಕೋಷ್ಟಕ.

15. **<u>ಅಧ್ಯಯನದ ವೆಚ್ಚ ಬಿಡುಗಡೆಯ ವೇಳಾಪಟ್ಟಿ</u>:**

ವರದಿ ತಯಾರಿಕೆಯ ಪ್ರಗತಿ ಆಧಾರಿತ ಆಯವ್ಯಯ ಬಿಡುಗಡೆಯು ಈ ಕೆಳಗಿನಂತಿವೆ:-

- ಸಮಾಲೋಚನೆ ಶುಲ್ಕದ ಪ್ರಥಮ ಕಂತಿನಲ್ಲಿ ಒಟ್ಟಾರೆ ಶುಲ್ಕದ ಶೇಕಡ 30 ರಷ್ಟು ಪ್ರಮಾಣದ ಮೊತ್ತವನ್ನು ಆರಂಭಿಕ ವರದಿಯ ಅನುಮೋದನೆಯ ನಂತರ ಸಮಾಲೋಚಕರಿಗೆ ಮುಂಗಡವಾಗಿ ನೀಡಲಾಗುವುದು. ಆದರೆ ಮುಂಗಡ ಹಣ ನೀಡಿದ ದಿನಾಂಕದಿಂದ ಕನಿಷ್ಠ 12 ತಿಂಗಳ

ಅವಧಿಯವರೆಗೆ ಮಾನ್ಯತೆಯುಳ್ಳ ನಿಗಧಿತ ರಾಷ್ಟ್ರೀಕೃತ ಬ್ಯಾಂಕಿನಿಂದ ಸಮಾಲೋಚನೆ ಸಂಸ್ಥೆಯು ಬ್ಯಾಂಕ್ ಗ್ಯಾರಂಟಿ ನೀಡತಕ್ಕದ್ದು.

- ಎರಡನೇ ಕಂತಿನಲ್ಲಿ ಒಟ್ಟಾರೆ ಶುಲ್ಕದ ಶೇ. 50 ರಷ್ಟು ಮೊತ್ತವನ್ನು ಕರಡು ವರದಿ ಅನುಮೋದನೆಯಾದ ನಂತರ ಸಮಾಲೋಚಕರಿಗೆ ನೀಡಲಾಗುವುದು.

- ಮೂರನೇ ಮತ್ತು ಅಂತಿಮ ಕಂತಿನಲ್ಲಿ ಒಟ್ಟಾರೆ ಶುಲ್ಕದ ಶೇ.20 ರಷ್ಟು ಮೊತ್ತವನ್ನು, ಒಪ್ಪಂದದಲ್ಲಿ ನಿಗದಿಪಡಿಸಿದ ನಮೂನೆಯಲ್ಲಿ ಮತ್ತು ಸಂಖ್ಯೆಗಳಲ್ಲಿ ಅಂತಿಮ ವರದಿಯ ಹಾರ್ಡ್ ಮತ್ತು ಸಾಫ್ಟ್ ಪ್ರತಿಗಳನ್ನು ಸ್ವೀಕರಿಸಿದ ನಂತರ ಮತ್ತು ಪ್ರಾಥಮಿಕ ಮತ್ತು ಸೆಕೆಂಡರಿ ಮಾಹಿತಿಗಳನ್ನೊಳಗೊಂಡ ಮೂಲದಾಖಲೆಗಳು, ಸಂಸ್ಕರಿಸಿದ ಮಾಹಿತಿಗಳ ಫಲಿತಾಂಶ, ಅಧ್ಯಯನದ ವರದಿ ಮತ್ತು ಅಂತಿಮ ವರದಿಗೆ ಉಪಯೋಗಿಸಲಾದ ಎಲ್ಲಾ ಬರಹಗಳ ಸಾಫ್ಟ್ ಪ್ರತಿಗಳನ್ನು ಸ್ವೀಕರಿಸಿದ ನಂತರ ನೀಡಲಾಗುವುದು.

ಪ್ರತಿ ಪಾವತಿಯಲ್ಲಿಯೂ ಚಾಲ್ತಿಯಲ್ಲಿ ದರದನ್ವಯ ತೆರಿಗೆಯನ್ನು ಕಟಾಯಿಸಲಾಗುವುದು. ಇದರೊಂದಿಗೆ ಸಮಾಲೋಚಕರು ವೈಯಕ್ತಿಕವಾಗಿ ಶಾಸನಬದ್ಧ ತೆರಿಗೆಗಳನ್ನು ಭರಿಸತಕ್ಕದ್ದು.

ಇದನ್ನು ಆಂತರಿಕ ಮೌಲ್ಯಮಾಪನ ಎಂದು ಪರಿಗಣಿಸಲಾಗುತ್ತದೆ. ಅಂದರೆ ಅಧ್ಯಯನದ ವೆಚ್ಚವನ್ನು ಸಂಬಂಧಪಟ್ಟ ಇಲಾಖೆಯಿಂದಲೇ ಭರಿಸಲಾಗುತ್ತದೆ. ಅವರು ಮೌಲ್ಯಮಾಪನ ಕಾರ್ಯವನ್ನು ಕರ್ನಾಟಕ ಪಾರದರ್ಶಕತೆ ಮತ್ತು ಸಾರ್ವಜನಿಕ ಸಂಗ್ರಹಣೆ ಕಾಯ್ದೆ ಮತ್ತು ನಿಯಮಗಳಲ್ಲಿರುವ ವಿಧಾನದನ್ವಯ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದೊಂದಿಗೆ ಸಮಾಲೋಚಿಸಿ ಅರ್ಹ ಮೌಲ್ಯಮಾಪನ ಸಂಸ್ಥೆಗೆ ನೀಡತಕ್ಕದ್ದು. ಈ ಕಾರ್ಯವನ್ನು ಸಾಧ್ಯವಾದಷ್ಟು ಶೀಘ್ರವಾಗಿ, ಉಲ್ಲೇಖಿತ ನಿಯಮಗಳ ಅನುಮೋದನೆಯ 30 ದಿನಗಳೊಳಗಾಗಿ ಮಾಡತಕ್ಕದ್ದು. ಸಮಾಲೋಚಕ ಸಂಸ್ಥೆಯು ಆರಂಭಿಕ ವರದಿಯನ್ನು ಕಾರ್ಯವನ್ನು ವಹಿಸಿದ 30 ದಿನಗಳೊಳಗೆ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ತಾಂತ್ರಿಕ ಸಮಿತಿಯ ಮುಂದೆ ಪ್ರಾತ್ಯಕ್ಷಿಕೆಯನ್ನು ನೀಡತಕ್ಕದ್ದು.

**ಮೌಲ್ಯಮಾಪನದ ಈ ಎಲ್ಲಾ ಪ್ರಕ್ರಿಯೆಗಳು ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಪಿಡಿ/08/ಇವಿಎನ್ (2)/2011, ದಿನಾಂಕ: 11.07.2011 ಮತ್ತು ತದನಂತರದ ಆದೇಶಗಳ ಪತ್ರ ಮತ್ತು ವಿಷಯಗಳ ಪ್ರೇರಣೆಗೊಳಪಟ್ಟಿದೆ.**

ಮುಖ್ಯ ಮೌಲ್ಯಮಾಪನಾಧಿಕಾರಿ
ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ

# ಅನುಬಂಧ

| ಕ್ರ. ಸಂ. | ವಿಭಾಗ | ಜಿಲ್ಲೆಗಳ ಹೆಸರು | ಕಲಾಪ್ರಕಾರ (ಸಾಮಾನ್ಯ) | | | | | | | | | ಕಲಾಪ್ರಕಾರ (ಗಿರಿಜನ ಉಪಯೋಜನೆ) | | | | | | | ಕಲಾಪ್ರಕಾರ (ವಿಶೇಷ ಘಟಕ ಯೋಜನೆ) | | | | | | |
|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | | | ಜಾನಪದ | ನೃತ್ಯ | ನಾಟಕ | ಸಂಗೀತ | ಯಕ್ಷಗಾನ/ ಬಯಲಾಟ/ ಗೊಂಬೆ ಪ್ರದರ್ಶನ | ಸಾಹಿತ್ಯ | ಚಿತ್ರಕಲೆ | ಸಂಕೀರ್ಣ/ ಜಾಗೃತಿ, ಪ್ರಶಸ್ತಿ ವಿತರಣೆ, ಗಮಕ ತರಬೇತಿ | ಒಟ್ಟು | ಜಾನಪದ | ನೃತ್ಯ | ನಾಟಕ | ಸಂಗೀತ | ಯಕ್ಷಗಾನ/ ಬಯಲಾಟ | ಸಂಕೀರ್ಣ | ಒಟ್ಟು | ಜಾನಪದ | ನೃತ್ಯ | ನಾಟಕ | ಸಂಗೀತ | ಯಕ್ಷಗಾನ/ ಬಯಲಾಟ | ಸಂಕೀರ್ಣ | ಒಟ್ಟು |
| 1 | ಬೆಂಗಳೂರು | ಬೆಂಗಳೂರು ನಗರ | 7 | 47 | 61 | 75 | 9 | 6 | 2 | 107 | 314 | 3 | 4 | 3 | 9 | 0 | 0 | 19 | 73 | 1 | 8 | 10 | 0 | 2 | 94 |
| 2 | | ಬೆಂ. ಗ್ರಾಮಾಂತರ | 1 | 2 | 4 | 1 | | | | 8 | 16 | 1 | 0 | 1 | 1 | 0 | 0 | 3 | 18 | 0 | 1 | 0 | 0 | 0 | 19 |
| 3 | | ರಾಮನಗರ | 8 | 1 | 0 | 0 | | | | 11 | 20 | | | 1 | 0 | 0 | 0 | 1 | 73 | 0 | 1 | 0 | 0 | 0 | 74 |
| 4 | | ಚಿತ್ರದುರ್ಗ | 3 | 3 | 4 | 5 | | | | 4 | 19 | 5 | 1 | 2 | 5 | 0 | 0 | 13 | 13 | 0 | 0 | 1 | 0 | 0 | 14 |
| 5 | | ದಾವಣಗೆರೆ | 4 | 3 | 3 | 1 | | | | 3 | 14 | 1 | 0 | 0 | 2 | 0 | 0 | 3 | 4 | 0 | 0 | 1 | 0 | 0 | 5 |
| 6 | | ಕೋಲಾರ | 2 | 0 | 4 | 3 | | | | 3 | 12 | 0 | 1 | 0 | 0 | 0 | 0 | 1 | 10 | 0 | 2 | 0 | 0 | 0 | 12 |
| 7 | | ಚಿಕ್ಕಬಳ್ಳಾಪುರ | 2 | 4 | 3 | 2 | | | | 5 | 16 | 1 | 0 | 0 | 2 | 0 | 0 | 3 | 9 | 0 | 1 | 0 | 0 | 0 | 10 |
| 8 | | ಶಿವಮೊಗ್ಗ | 3 | 5 | 12 | 9 | 4 | | | 6 | 39 | 0 | 0 | 0 | 0 | 0 | 0 | 0 | 0 | 1 | 4 | 0 | 0 | 0 | 5 |
| 9 | | ತುಮಕೂರು | 3 | 3 | 9 | 4 | | 1 | 1 | 8 | 29 | 3 | 0 | 1 | 2 | 0 | 0 | 6 | 17 | 0 | 3 | 4 | 0 | 0 | 24 |
| | ಒಟ್ಟು | | 33 | 68 | 100 | 100 | 13 | 7 | 3 | 155 | 479 | 14 | 6 | 8 | 21 | 0 | 0 | 49 | 217 | 2 | 20 | 16 | 0 | 2 | 257 |
| 10 | ಮೈಸೂರು | ಚಿಕ್ಕಮಗಳೂರು | 2 | 0 | 1 | 1 | 1 | | 1 | 3 | 9 | 0 | 0 | 0 | 0 | 0 | 0 | 0 | 2 | 0 | 0 | 0 | 0 | 0 | 2 |

| | | | | | | | | | | | | | | | | | | | | | | | | | |
|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|
| 11 | | ದಕ್ಷಿಣ ಕನ್ನಡ | 1 | 9 | 5 | 4 | 3 | 1 | 1 | 13 | 37 | 0 | 0 | 0 | 0 | 0 | 0 | 0 | 2 | 0 | 0 | 0 | 0 | 0 | 2 |
| 12 | | ಉಡುಪಿ | 2 | 5 | 7 | 1 | 22 | | 1 | 4 | 42 | 2 | 0 | 2 | 0 | 0 | 0 | 4 | 1 | 1 | 0 | 0 | 0 | 0 | 2 |
| ಕ್ರ. ಸಂ | | ಜಿಲ್ಲೆಗಳ ಹೆಸರು | ಕಲಾಪ್ರಕಾರ (ಸಾಮಾನ್ಯ) | | | | | | | | | ಕಲಾಪ್ರಕಾರ (ಗಿರಿಜನ ಉಪಯೋಜನೆ) | | | | | | | ಕಲಾಪ್ರಕಾರ (ವಿಶೇಷ ಘಟಕ ಯೋಜನೆ) | | | | | | |
| | | | ಜಾನಪದ | ನೃತ್ಯ | ನಾಟಕ | ಸಂಗೀತ | ಯಕ್ಷಗಾನ/ ಬಯಲಾಟ/ ಗೊಂಬೆ ಪ್ರದರ್ಶನ | ಸಾಹಿತ್ಯ | ಚಿತ್ರಕಲೆ | ಸಂಕೀರ್ಣ/ ಜಾಗೃತಿ, ಪ್ರಶಸ್ತಿ ವಿತರಣೆ, ಗಣಕ ತರಬೇತಿ | ಒಟ್ಟು | ಜಾನಪದ | ನೃತ್ಯ | ನಾಟಕ | ಸಂಗೀತ | ಯಕ್ಷಗಾನ/ ಬಯಲಾಟ | ಸಂಕೀರ್ಣ | ಒಟ್ಟು | ಜಾನಪದ | ನೃತ್ಯ | ನಾಟಕ | ಸಂಗೀತ | ಯಕ್ಷಗಾನ/ ಬಯಲಾಟ | ಸಂಕೀರ್ಣ | ಒಟ್ಟು |
| 13 | | ಹಾಸನ | 3 | 2 | 4 | 0 | | | | 3 | 12 | 1 | 0 | 0 | 0 | 0 | 0 | 1 | 5 | 0 | 0 | 0 | 1 | 0 | 6 |
| 14 | | ಕೊಡಗು | 0 | 0 | 0 | 0 | | | | 3 | 3 | 1 | 0 | 0 | 0 | 0 | 0 | 1 | 0 | 0 | 0 | 1 | 0 | 0 | 1 |
| 15 | | ಮಂಡ್ಯ | 2 | 2 | 7 | 2 | | 2 | | 4 | 19 | 0 | 0 | 0 | 0 | 0 | 0 | 0 | 11 | 0 | 1 | 0 | 0 | 0 | 12 |
| 16 | | ಮೈಸೂರು | 2 | 5 | 7 | 14 | | | 1 | 8 | 37 | 1 | 0 | 0 | 0 | 1 | 0 | 2 | 3 | 0 | 4 | 0 | 0 | 0 | 7 |
| 17 | | ಚಾಮರಾಜನಗರ | 0 | 0 | 0 | 0 | | | | 0 | 0 | 0 | 0 | 0 | 0 | 0 | 0 | 0 | 1 | 0 | 3 | 0 | 0 | 0 | 4 |
| | | **ಒಟ್ಟು** | **12** | **23** | **31** | **22** | **26** | **3** | **4** | **38** | **159** | **5** | **0** | **2** | **0** | **1** | **0** | **8** | **25** | **1** | **8** | **1** | **1** | **0** | **36** |
| 18 | ಬೆಳಗಾವಿ | ಬೆಳಗಾವಿ | 11 | 1 | 5 | 3 | 2 | 1 | | 6 | 29 | 2 | | 3 | 0 | 0 | 0 | 5 | 12 | 0 | 2 | 2 | 0 | 0 | 16 |
| 19 | | ವಿಜಯಪುರ | 3 | 0 | 2 | 0 | 1 | | | 2 | 8 | 2 | 0 | 0 | 0 | 0 | 0 | 2 | 2 | 0 | 0 | 0 | 2 | 0 | 4 |
| 20 | | ಬಾಗಲಕೋಟೆ | 6 | 0 | 5 | 1 | | | | 6 | 18 | 1 | 1 | 2 | 3 | 0 | 0 | 7 | 13 | 1 | 0 | 2 | 1 | 0 | 17 |
| 21 | | ಧಾರವಾಡ | 2 | 2 | 6 | 14 | 1 | 2 | 1 | 13 | 41 | 3 | 0 | 0 | 0 | 0 | 0 | 3 | 15 | 0 | 0 | 0 | 0 | 0 | 15 |
| 22 | | ಗದಗ್ | 9 | 2 | 3 | 5 | | | | 2 | 21 | 1 | 0 | 0 | 0 | 0 | 0 | 1 | 2 | 0 | 1 | 2 | 1 | 0 | 6 |
| 23 | | ಹಾವೇರಿ | 2 | 0 | 1 | 6 | | | | 1 | 10 | 1 | 0 | 1 | 0 | 0 | 0 | 2 | 2 | 0 | 0 | 0 | 0 | 0 | 2 |
| 24 | | ಕಾರವಾರ | 1 | 2 | 2 | 5 | 16 | | | 10 | 36 | 1 | 0 | 0 | 0 | 0 | 0 | 1 | 1 | 0 | 0 | 0 | 0 | 1 | 2 |

| ಕ್ರ. ಸಂ | ಕಲ್ಬುರ್ಗಿ | ಜಿಲ್ಲೆಗಳ ಹೆಸರು | ಕಲಾಪ್ರಕಾರ (ಸಾಮಾನ್ಯ) | | | | | | | | | ಕಲಾಪ್ರಕಾರ (ಗಿರಿಜನ ಉಪಯೋಜನೆ) | | | | | | | ಕಲಾಪ್ರಕಾರ (ವಿಶೇಷ ಘಟಕ ಯೋಜನೆ) | | | | | | |
|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | | | ಜಾನಪದ | ನೃತ್ಯ | ನಾಟಕ | ಸಂಗೀತ | ಯಕ್ಷಗಾನ/ ಬಯಲಾಟ/ ಗೊಂಬೆ ಪ್ರದರ್ಶನ | ಸಾಹಿತ್ಯ | ಚಿತ್ರಕಲೆ | ಸಂಕೀರ್ಣ/ ಜಾಗೃತಿ, ಪ್ರಶಸ್ತಿ ವಿತರಣೆ, ಗಣಕ ತರಬೇತಿ | ಒಟ್ಟು | ಜಾನಪದ | ನೃತ್ಯ | ನಾಟಕ | ಸಂಗೀತ | ಯಕ್ಷಗಾನ/ ಬಯಲಾಟ | ಸಂಕೀರ್ಣ | ಒಟ್ಟು | ಜಾನಪದ | ನೃತ್ಯ | ನಾಟಕ | ಸಂಗೀತ | ಯಕ್ಷಗಾನ/ ಬಯಲಾಟ | ಸಂಕೀರ್ಣ | ಒಟ್ಟು |
| | ಒಟ್ಟು | | 34 | 7 | 24 | 34 | 20 | 3 | 1 | 40 | 163 | 11 | 1 | 6 | 3 | 0 | 0 | 21 | 47 | 1 | 3 | 6 | 4 | 1 | 62 |
| 25 | | ಬಳ್ಳಾರಿ | 2 | 0 | 7 | 4 | 1 | | 1 | 0 | 15 | 0 | 0 | 1 | 3 | 0 | 0 | 4 | 4 | 0 | 1 | 1 | 2 | 0 | 8 |
| 26 | | ಬೀದರ್ | 1 | 2 | 0 | 1 | | 2 | | 5 | 11 | 0 | 0 | 0 | 2 | 0 | 0 | 2 | 6 | 0 | 0 | 0 | 0 | 0 | 6 |
| 27 | | ಕಲ್ಬುರ್ಗಿ | 7 | 0 | 2 | 14 | | | 1 | 14 | 38 | 4 | 0 | 0 | 4 | 0 | 0 | 8 | 35 | 2 | 0 | 1 | 0 | 0 | 38 |
| 28 | | ಯಾದಗಿರಿ | 0 | 0 | 0 | 3 | | | | 5 | 8 | 1 | 0 | 0 | 0 | 0 | 0 | 1 | 8 | 0 | 0 | 1 | 0 | 0 | 9 |
| 29 | | ರಾಯಚೂರು | 2 | 0 | 6 | 2 | | | | 2 | 12 | 2 | 0 | 1 | 2 | 0 | 0 | 5 | 6 | 1 | 0 | 0 | 0 | 0 | 7 |
| 30 | | ಕೊಪ್ಪಳ | 1 | 0 | 5 | 0 | | | | 10 | 16 | 0 | 0 | 0 | 0 | 0 | 0 | 0 | 1 | 0 | 0 | 1 | 0 | 0 | 2 |
| | ಒಟ್ಟು | | 13 | 2 | 20 | 24 | 1 | 2 | 2 | 36 | 100 | 7 | 0 | 2 | 11 | 0 | 0 | 20 | 60 | 3 | 1 | 4 | 2 | 0 | 70 |
| | Grand Total | | 92 | 100 | 175 | 180 | 60 | 15 | 10 | 269 | 901 | 37 | 7 | 18 | 35 | 1 | 0 | 98 | 349 | 7 | 32 | 27 | 7 | 3 | 425 |

# ಅನುಬಂಧ 2: ಮೌಲ್ಯಮಾಪನದ ಪ್ರಶ್ನಾವಳಿಗಳು

## 1. ಸಂಘ/ಸಂಸ್ಥೆ/ ಟ್ರಸ್ಟ್‌ನ ಪ್ರಶ್ನಾವಳಿ

| | | |
|---|---|---|
| 1. | ಪ್ರತಿಕ್ರಿಯೆದಾರರ ಹೆಸರು | |
| 1.1 | ಸಂಪರ್ಕ ಸಂಖ್ಯೆ | ಮೊಬೈಲ್ ನಂ; |
| 1.2 | ಲಿಂಗ: | 1. ಪುರುಷ 2. ಮಹಿಳೆ 3. ಇತರೆ |
| 1.3. | ವಯಸ್ಸು | |
| 1.4 | ವಿದ್ಯಾರ್ಹತೆ: | |
| 1.5 | ಪದನಾಮ | 1. ಅಧ್ಯಕ್ಷರು 2. ಕಾರ್ಯದರ್ಶಿಗಳು 3. ಪದಾದಿಕಾರಿಗಳು 4. ಇತರೆ |
| 1.6 | ಸ್ಥಳ | |
| 1.7 | ತಾಲ್ಲೂಕು | |
| 1.8 | ಜಿಲ್ಲೆ | |
| 2. | ನಿಮ್ಮ ಸಂಘ/ಸಂಸ್ಥೆ/ ಟ್ರಸ್ಟ್‌ನ ಹೆಸರು | |
| 3. | ನೀವು ಎಷ್ಟು ವರ್ಷದಿಂದ ಸಂಘ/ ಸಂಸ್ಥೆ/ ಟ್ರಸ್ಟ್ ನಡೆಸುತ್ತಿದ್ದೀರಾ? | :______________________ |
| 4. | ನಿಮ್ಮ ಸಂಘ/ ಸಂಸ್ಥೆ/ ಟ್ರಸ್ಟ್ ಸಹಕಾರ ಸಂಘದಲ್ಲಿ ಯಾವಾಗ ನೋಂದಣಿಯಾಗಿದೆ? | |
| 5. | ನೀವು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಧನ ಸಹಾಯವನ್ನು ಪಡೆದುಕೊಂಡಿದ್ದೀರಾ ? | |
| | 1 = ಹೌದು 2 = ಇಲ್ಲ 3 = ಗೊತ್ತಿಲ್ಲ | |
| 5.1. | ಹೌದಾದರೆ, ನೀವು ಯಾವ ಯೋಜನೆಯ ಅಡಿಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಧನ ಸಹಾಯವನ್ನು ಪಡೆದುಕೊಂಡಿದ್ದೀರಾ ? | |
| | 1). ವಿಶೇಷ ಘಟಕದ ಯೋಜನೆಯ ಅಡಿಯಲ್ಲಿ 2). ಗಿರಿಜನ ಉಪಯೋಜನೆಯ ಅಡಿಯಲ್ಲಿ<br>3). ಸಾಮಾನ್ಯ ಯೋಜನೆ ಅಡಿಯಲ್ಲಿ 4). ಇತರೆ (ತಿಳಿಸಿ) | |
| 6. | ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ 2014–15 ರಿಂದ 2016–17 ವರೆಗೆ ಎಷ್ಟು ಧನ ಸಹಾಯವನ್ನು ಪಡೆದಿದ್ದೀರಾ?<br>ರೂ ಗಳಲ್ಲಿ.:____________________ | |
| 6.1 | 2014–15ನೇ ಸಾಲಿನಲ್ಲಿ: 1) 50 ಸಾವಿರದಿಂದ 1 ಲಕ್ಷ 2). 1 ಲಕ್ಷದಿಂದ– 1.5 ಲಕ್ಷ<br>3). 1.5 ಲಕ್ಷದಿಂದ– 2 ಲಕ್ಷ 4). 2 ಲಕ್ಷದಿಂದ ಮೇಲ್ಪಟ್ಟು | |
| 6.2 | 2015–16ನೇ ಸಾಲಿನಲ್ಲಿ: 1) 50 ಸಾವಿರದಿಂದ 1 ಲಕ್ಷ 2). 1 ಲಕ್ಷದಿಂದ– 1.5 ಲಕ್ಷ<br>3). 1.5 ಲಕ್ಷದಿಂದ– 2 ಲಕ್ಷ 4). 2 ಲಕ್ಷದಿಂದ ಮೇಲ್ಪಟ್ಟು | |
| 6.3 | 2016–17 ನೇ ಸಾಲಿನಲ್ಲಿ: 1) 50 ಸಾವಿರದಿಂದ 1 ಲಕ್ಷ 2). 1 ಲಕ್ಷದಿಂದ– 1.5 ಲಕ್ಷ<br>3). 1.5 ಲಕ್ಷದಿಂದ– 2 ಲಕ್ಷ 4). 2 ಲಕ್ಷದಿಂದ ಮೇಲ್ಪಟ್ಟು | |
| 7. | ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಡಿಯಲ್ಲಿ ಹಣ ಪಡೆದ ಮೇಲೆ ನಿಮ್ಮ ಸಂಘ–ಸಂಸ್ಥೆಯ ಕಡೆಯಿಂದ ಸಾಹಿತ್ಯಕವಾಗಿ ಏನಾದರು ಶಿಬಿರಗಳನ್ನು / ವಿಚಾರ ಸಂಕಿರಣಗಳನ್ನು ಏರ್ಪಡಿಸಿದ್ದೀರಾ? | |
| | 1. ಹೌದು 2. ಇಲ್ಲ 3. ಗೊತ್ತಿಲ್ಲ | |

| | |
|---|---|
| 7.1 | **ಹೌದಾದರೆ, ಅದು ಯಾವ ತರಹ ಇರುತ್ತದೆ?** |
| | 1) ಕಲೆಗಳನ್ನು ಕುರಿತು ವಿಚಾರ ಸಂಕಿರಣ 2) ಕಲಾಮೇಳ ಕುರಿತು ಚರ್ಚೆ<br>3) ಜಾನಪದ ಪ್ರಕಾರಗಳ ಕುರಿತು ವಿಚಾರ ಸಂಕಿರಣ 4) ಕಲಾವಿದರ ಕುರಿತು ಸಂವಾದ |
| 8. | **ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ನೀಡುವ ಧನ ಸಹಾಯವನ್ನು ಪಾರದರ್ಶಕವಾಗಿ ಬಳಸಿಕೊಳ್ಳುವಾಗ ಯಾವ ನಿಯಮಗಳನ್ನು ಅನುಸರಿಸುತ್ತೀರಾ?** |
| | 1). ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ನೀಡಿರುವ ಮಾರ್ಗಸೂಚಿಯಲ್ಲಿನ ನಿಯಮಗಳ ಪ್ರಕಾರ<br>2). ಲೆಕ್ಕ ಪರಿಶೋಧನಾ ಇಲಾಖೆಯ ನಿಯಮಗಳ ಪ್ರಕಾರ 3). ನಿಮ್ಮ ಸಂಸ್ಥೆಯ ನಿಯಮಗಳ ಪ್ರಕಾರ<br>4). ಸ್ವ-ಇಚ್ಛೆಯಿಂದ |
| 9. | **ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಧನ ಸಹಾಯವನ್ನು ಪಡೆದುಕೊಂಡ ಮೇಲೆ ಅದನ್ನು ಬಳಸಿಕೊಳ್ಳುವ ಮೊದಲೇ ಲೆಕ್ಕದ ಪುಸ್ತಕದಲ್ಲಿ ದಾಖಲೆ ಮಾಡಿಕೊಂಡಿರುತ್ತೀರಾ?** |
| | 1). ಪುಸ್ತಕದಲ್ಲಿ ದಾಖಲೆ ಮಾಡುತ್ತೇವೆ. 2). ಪ್ರತ್ಯೇಕ ಫೈಲ್‌ನಲ್ಲಿ ದಾಖಲೆ ಮಾಡುವುದು<br>3). ಪುಸ್ತಕದಲ್ಲಿ ದಾಖಲೆ ಮಾಡಿಕೊಂಡಿರುವುದಿಲ್ಲ. 4). ದಾಖಲೆ ಇಲ್ಲದೆ ಬಳಸುವುದು. |
| 10. | **ಒಂದು ವರ್ಷಕ್ಕೆ ಈ ಯೋಜನೆಗಳ ಹೆಸರಿನಲ್ಲಿ ಎಷ್ಟು ಬಾರಿ ಧನ ಸಹಾಯ ಪಡೆದು ಕೊಳ್ಳುತ್ತೀರಾ?** |
| | 1). ಒಂದು ಸಾರಿ 2). ಎರಡು ಸಾರಿ 3). ಮೂರು ಬಾರಿ 4). ಮೂರಕ್ಕಿಂತ ಹೆಚ್ಚು ಬಾರಿ |
| 11. | **ನೀವು ಧನ ಸಹಾಯ ಪಡೆದು ಕಲಾವಿದರಿಗೆ ಹಣ ವಿತರಿಸುವಾಗ ಯಾವ ರೀತಿ ನೀಡುತ್ತೀರಾ?** |
| | 1). ಚೆಕ್ ಮುಖಾಂತರ 2). ನಗದು ಮುಖಾಂತರ 3). ವಸ್ತುವಿನ ರೂಪದಲ್ಲಿ<br>4). ಹಣ್ಣು- ಹಂಪಲು 5). ಇತರೆ (ತಿಳಿಸಿ) |
| 12. | **ನಿಮ್ಮ ಸಂಘ ಸಂಸ್ಥೆಗಳ ಮುಖಾಂತರ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುವ ಉದ್ದೇಶವೇನು?** |
| | 1). ನಮ್ಮ ಸಂಘ-ಸಂಸ್ಥೆಯ ಶ್ರೇಯಸ್ಸಿಗಾಗಿ 2). ನನ್ನ ವೈಯಕ್ತಿಕ ಪ್ರಸಿದ್ಧಿಗಾಗಿ<br>3). ಕಲೆ ಮತ್ತು ಸಂಸ್ಕೃತಿಯ ಉಳಿವಿಗಾಗಿ 4). ಕಲಾವಿಧರ ಶ್ರೇಯಸ್ಸಿಗಾಗಿ |
| 13. | **ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಧನ ಸಹಾಯ ಪಡೆಯುವಾಗ ಏನಾದರು ಮಧ್ಯವರ್ತಿಗಳ ಪ್ರಭಾವವಾಗಿದೆಯಾ?** |
| | 1. ಹೌದು 2. ಇಲ್ಲ 3. ಗೊತ್ತಿಲ್ಲ |
| 13.1 | **ಹೌದಾದರೆ, ತಿಳಿಸಿ.** |
| | 1). ರಾಜಕಾರಣಿಗಳ ಪ್ರಭಾವ 2). ಅಧಿಕಾರಿಗಳ ಪ್ರಭಾವ 3). ಕಲಾವಿದರ ಪ್ರಭಾವ 4). ಯಾರ ಪ್ರಭಾವವೂ ಇರುವುದಿಲ್ಲ. |
| 14. | **ನೀವು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಡಿಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮಗಳು ಯಾವುದಾದರೂ ಮಾಧ್ಯಮದಲ್ಲಿ ಪ್ರಕಟವಾಗಿವೆಯಾ ?** |
| | 1. ಹೌದು 2. ಇಲ್ಲ 3. ಗೊತ್ತಿಲ್ಲ |
| 14.1 | **ಹೌದಾದರೆ, ತಿಳಿಸಿ.** |
| | 1) ದೂರದರ್ಶನದಲ್ಲಿ 2) ರೇಡಿಯೋಗಳಲ್ಲಿ 3) ಪತ್ರಿಕೆಗಳಲ್ಲಿ 4) ಆನ್‌ಲೈನಿನಲ್ಲಿ |
| 15. | **ನೀವು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಡಿಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮಗಳನ್ನು ಯಾವುದರಲ್ಲಿ ದಾಖಲೆ ಮಾಡಿದ್ದೀರಾ.?** |
| | 1).ವಿಡಿಯೋದರಲ್ಲಿ 2).ಛಾಯಚಿತ್ರಗಳಲ್ಲಿ 3).ಆಡಿಯೋ ರೆಕಾರ್ಡಿನಲ್ಲಿ 4).ಬರವಣಿಗೆಯಲ್ಲಿ |
| 16. | **ನೀವು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಡಿಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮಗಳಿಗೆ ಜನರನ್ನು ಹೇಗೆ ಸೇರಿಸುತ್ತೀರಾ?** |
| | 1). ಕಾರ್ಯಕ್ರಮದ ಬಗ್ಗೆ ಪತ್ರಿಕೆಗಳಲ್ಲಿ ಜಾಹಿರಾತು ನೀಡುವುದರ ಮೂಲಕ 2). ಆಮಂತ್ರಣ ಪತ್ರಿಕೆ ಹಂಚುವುದರ ಮೂಲಕ 3). ಮೌಖಿಕವಾಗಿ ಕರೆಯುವುದರ ಮೂಲಕ 4). ಈ ಮೇಲಿನ ಎಲ್ಲವೂ |
| 17. | **ನೀವು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಡಿಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮಗಳಿಗೆ ಯಾರಾದರು ರಾಜಕಾರಿಣಿಗಳನ್ನು ಮುಖ್ಯ ಅತಿಥಿಗಳನ್ನಾಗಿ ಕರೆದಿದ್ದೀರಾ?** |

| | |
|---|---|
| | 1). ಚುನಾಯಿತ ಲೋಕಸಭಾ ಸದಸ್ಯರು 2). ಚುನಾಯಿತ ವಿಧಾನಸಭಾ ಸದಸ್ಯರು |
| | 3). ಸ್ಥಳಿಯ ಚುನಾಯಿತ ಪ್ರತಿನಿಧಿಗಳು 4). ಇತರೆ (ತಿಳಿಸಿ) |
| 18. | **ನೀವು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಡಿಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮಗಳಿಗೆ ಈ ಇಲಾಖೆಯ ಅಧಿಕಾರಿಗಳನ್ನು ಮುಖ್ಯ ಅತಿಥಿಗಳನ್ನಾಗಿ ಕರೆದಿದ್ದೀರಾ?** |
| | 1. ಹೌದು 2. ಇಲ್ಲ 3. ಗೊತ್ತಿಲ್ಲ |
| 18.1 | **ಹೌದಾದರೆ, ತಿಳಿಸಿ.** |
| | 1). ನಿರ್ದೇಶಕರನ್ನು 2). ಸಹಾಯಕ ನಿರ್ದೇಶಕರನ್ನು 3). ಆಪ್ತ ಕಾರ್ಯದರ್ಶಿಗಳನ್ನು 4). ಇತರೆ ಅಧಿಕಾರಿಗಳನ್ನು |
| 19. | **ನೀವು ಯಾವ ರೀತಿಯ ಕಾರ್ಯಕ್ರಮಗಳನ್ನು ಏರ್ಪಡಿಸುತ್ತೀರಾ?** |
| | 1). ಜಾನಪದ ಕಲಾಮೇಳ ಏರ್ಪಡಿಸುವುದು 2). ಸಾಂಸ್ಕೃತಿಕ ಮೇಳ ಏರ್ಪಡಿಸುವುದು<br>3). ಹಾಡುಗಾರರನ್ನು ಸೇರಿಸುವುದು 4). ಇತರೆ (ತಿಳಿಸಿ) |
| 20. | **ನೀವು ಕಾರ್ಯಕ್ರಮಗಳನ್ನು ನಡೆಸಲು ಯಾವ ರೀತಿಯ ವೇದಿಕೆಯನ್ನು ಆಯ್ಕೆ ಮಾಡಿಕೊಳ್ಳುತ್ತೀರಾ?** |
| | 1). ಸಾರ್ವಜನಿಕವಾಗಿ ಈಗಾಗಲೇ ಇರುವಂತಹ ವೇದಿಕೆಯನ್ನು ಆಯ್ಕೆ ಮಾಡಿ ಅದಕ್ಕೆ ಅಲಂಕಾರ ಮಾಡುವುದು.<br>2). ಸರ್ಕಾರಿ ಕಟ್ಟಡಗಳಲ್ಲಿರುವ ವೇದಿಕೆಗಳನ್ನು ಬಳಸಿಕೊಳ್ಳುವುದು.<br>3). ಒಂದು ಜಾಗವನ್ನು ಪರಿಗಣಿಸಿ ಅಲ್ಲಿ ವೇದಿಕೆಯನ್ನು ಸಜ್ಜುಗೊಳಿಸುವುದು.<br>4) ಖಾಸಗಿ ವಲಯದಲ್ಲಿನ ವೇದಿಕೆಗಳನ್ನು ಬಳಸಿಕೊಳ್ಳುವುದು. 5). ಇತರೆ |
| 21. | **ನೀವು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಧನಸಹಾಯ ಪಡೆದು ಯಾವುದಾದರೂ ಶಿಬಿರಗಳನ್ನು ಏರ್ಪಡಿಸಿದ್ದೀರಾ?** |
| | 1. ಹೌದು 2. ಇಲ್ಲ 3. ಗೊತ್ತಿಲ್ಲ |
| 21.1 | **ಹೌದಾದರೆ, ತಿಳಿಸಿ.** |
| | 1). ಕಲಾವಿದರಿಗೆ ಜಾನಪದ ಕಲೆಗಳ ಉಳಿವಿನ ಬಗ್ಗೆ ಜಾಗೃತಿ ಮೂಡಿಸುವುದು.<br>2). ಕಲೆ ಮತ್ತು ಸಂಸ್ಕೃತಿ ಬಗ್ಗೆ ಜನರಿಗೆ ಜಾಗೃತಿ ಮೂಡಿಸುವುದು<br>3). ಜಾನಪದ ಸಾಹಿತ್ಯದ ಬಗ್ಗೆ ಸಂಪನ್ಮೂಲ ವ್ಯಕ್ತಿಗಳಿಂದ ಉಪನ್ಯಾಸ ನೀಡುವುದು<br>4). ಯುವಕರಿಗೆ ತರಬೇತಿ ನೀಡುವುದು |
| 22. | **ಯಾವ ಉದ್ದೇಶವನ್ನು ಇಟ್ಟುಕೊಂಡು ಕಾರ್ಯಕ್ರಮಗಳನ್ನು ಏರ್ಪಡಿಸುತ್ತೀರಾ?** |
| | 1). ಕಲೆ ಮತ್ತು ಸಂಸ್ಕೃತಿಯ ಉಳಿವಿಗಾಗಿ 2). ಕಲಾವಿದರ ಏಳಿಗೆಗಾಗಿ<br>3). ನಮ್ಮ ಸಂಸ್ಥೆಯ ಶ್ರೇಯಸ್ಸಿಗಾಗಿ 4). ಜಾನಪದ ಕಲಾಪ್ರಕಾರಗಳ ಪರಿಚಯಿಸುವುದಕ್ಕಾಗಿ |
| 23. | **ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ನೀಡಿದ ಹಣವನ್ನು ಹೇಗೆ ಸದ್ಬಳಕೆ ಮಾಡಿಕೊಂಡಿದ್ದೀರಾ?** |
| | 1). ಒಳ್ಳೆಯ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುವುದರ ಮೂಲಕ ಸದ್ಬಳಕೆ ಮಾಡಿಕೊಳ್ಳಲಾಗಿದೆ.<br>2). ಸಾರ್ವಜನಿಕರಿಗೆ ಅರಿವು ಮೂಡಿಸುವುದರ ಮುಖಾಂತರ ಹಣವನ್ನು ಸದ್ಬಳಕೆ ಮಾಡಿಕೊಳ್ಳಲಾಗಿದೆ.<br>3). ವಿಚಾರ ಸಂಕಿರಣಗಳನ್ನು ಹಮ್ಮಿಕೊಳ್ಳುವುದರ ಮೂಲಕ ಹಣವನ್ನು ಸದ್ಬಳಕೆ ಮಾಡಿಕೊಳ್ಳಗಾಗಿದೆ.<br>4). ಕಲಾವಿದರಿಗೆ ಪ್ರೋತ್ಸಾಹ ನೀಡುವುದರ ಮೂಲಕ ಹಣವನ್ನು ಸದ್ಬಳಕೆ ಮಾಡಿಕೊಳ್ಳಗಾಗಿದೆ.<br>5). ಮೇಲಿನ ಎಲ್ಲವು |
| 24. | Any Remarks (ಯಾವುದೇ ಟೀಕೆಗಳು): |

## 2. ಕಲಾವಿದರಿಂದ ಮಾಹಿತಿ ಪಡೆಯುವುದು (ಪ್ರಶ್ನಾವಳಿ)

1. **ಪ್ರತಿಕ್ರಿಯೆದಾರರ ಹೆಸರು** **1.1 ಮೊಬೈಲ್ ನಂ;**

1.2 **ಲಿಂಗ: 1. ಪುರುಷ 2. ಮಹಿಳೆ 3. ಇತರೆ** **1.3 ವಯಸ್ಸು**

1.4 **ವಿದ್ಯಾರ್ಹತೆ** **1.5 ಜಾತಿ:** **1.6 ಧರ್ಮ**

1.7. **ಕಲೆಯ ಪ್ರಕಾರ**

1.8 **ಯಾವುದಾದರು ಸಂಘ–ಸಂಸ್ಥೆಯೊಂದಿಗೆ ಒಡನಾಟ**

1.9 **ಸ್ಥಳ** 1.10 **ತಾಲ್ಲೂಕು** 1.11 **ಜಿಲ್ಲೆ**

2. **ಸಂಘ–ಸಂಸ್ಥೆಗಳು ನಿಮ್ಮನ್ನು ಯಾವ ರೀತಿ ಆಯ್ಕೆ ಮಾಡುತ್ತಾರೆ?**
1). ನಮ್ಮಲ್ಲಿರುವ ಕಲೆಯನ್ನು ಮೆಚ್ಚಿಕೊಂಡು ನಮ್ಮನ್ನು ಆಯ್ಕೆ ಮಾಡುತ್ತಾರೆ.
2). ಕಲೆಯಲ್ಲಿನ ಸಾಧನೆಯನ್ನು ಮೆಚ್ಚಿಕೊಂಡು ನಮ್ಮನ್ನು ಆಯ್ಕೆ ಮಾಡುತ್ತಾರೆ.
3). ಹಿಂದೆ ನೀಡಿರುವ ಕಾರ್ಯಕ್ರಮಗಳನ್ನು ನೋಡಿ ಮೆಚ್ಚಿಕೊಂಡು ನಮ್ಮನ್ನು ಆಯ್ಕೆ ಮಾಡುತ್ತಾರೆ.
4). ಪರಿಚಯ ಇರುವ ಕಾರಣಕ್ಕಾಗಿ ನಮ್ಮನ್ನು ಆಯ್ಕೆ ಮಾಡುತ್ತಾರೆ.
5) ಬೇರೆಯಯವರ ಪ್ರಭಾವದಿಂದ

3. **ಸಂಘ–ಸಂಸ್ಥೆಗಳು ನಿಮಗೆ ಸಂಭಾವನೆ ಹೇಗೆ ನೀಡುತ್ತಾರೆ?**
1). ಚೆಕ್ ಮೂಲಕ 2). ನಗದು ರೂಪದಲ್ಲಿ 3). ವಸ್ತುವಿನ ರೂಪದಲ್ಲಿ 4). ನೀಡಿರುವುದಿಲ್ಲ.

4. **ನೀವು ಕಾರ್ಯಕ್ರಮಕ್ಕೆ ಬಂದಾಗ ಸಂಘ–ಸಂಸ್ಥೆಗಳು ಊಟ–ವಸತಿ ಸೌಲಭ್ಯ ನೀಡಿರುತ್ತಾರೆಯೇ?**
1). ಊಟ–ವಸತಿ ಸೌಲಭ್ಯ ನೀಡುತ್ತಾರೆ. 2). ಊಟ–ವಸತಿ ಸೌಲಭ್ಯ ನೀಡುವುದಿಲ್ಲ.
3). ಬರಿ ಊಟ ನೀಡುತ್ತಾರೆ. 4). ಏನೂ ನೀಡುವುದಿಲ್ಲ.

5. **ಕಲಾವಿದರಾಗಿ, ನೀವು ಕಲೆಯನ್ನು ಯಾವ ಉದ್ದೇಶದಿಂದ ಸ್ವೀಕರಿಸುತ್ತೀರಾ?**
1). ಕಲೆಯ ಉಳಿವಿಗಾಗಿ ಸ್ವೀಕರಿಸುವುದು. 2). ಹೊಟ್ಟೆಯ ಪಾಡಿಗಾಗಿ ಸ್ವೀಕರಿಸುವುದು. 3). ಇದೊಂದು ವೃತ್ತಿಯಾಗಿ ಸ್ವೀಕರಿಸುವುದು. 4). ತಲಾತಲಾಂತರದಿಂದ ಪೂರ್ವಜರು ಮಾಡಿಕೊಂಡು ಬಂದಿರುವುದಕ್ಕಾಗಿ. 5). ಹವ್ಯಾಸಕ್ಕಾಗಿ 6). ಇತರೆ

6. **ನೇರವಾಗಿ ನಿಮಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯೊಂದಿಗೆ ಯಾವ ರೀತಿ ಸಂಬಂಧವಿದೆ.?**
1). ನಮಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯೊಂದಿಗೆ ಯಾವುದೇ ಸಂಬಂದವಿಲ್ಲ.
2). ನಮಗೆ ಸಂಘ–ಸಂಸ್ಥೆಗಳ ಮೂಲಕ ಸಂಬಂಧವಿದೆ.
3). ನಮಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬಗ್ಗೆ ಏನೂ ಗೊತ್ತಿಲ್ಲ.
4). ನಮ್ಮನ್ನು ಕರೆದಾಗ ಕಾರ್ಯಕ್ರಮ ನೀಡಲು ಬರುತ್ತೇವೆ. ಯಾವ ಸಂಸ್ಥೆ ಬಗ್ಗೆ ಏನೂ ಗೊತ್ತಿಲ್ಲ.

7. **ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ನೀಡಿದ ಹಣವನ್ನು ಸಂಘ–ಸಂಸ್ಥೆಗಳು ಯಾವ ರೀತಿ ಸದ್ಬಳಕೆ ಮಾಡಿಕೊಂಡಿದ್ದಾರೆ?**
1). ಕಾರ್ಯಕ್ರಮಗಳನ್ನು ಅರ್ಥಪೂರ್ಣವಾಗಿ ಯಶಸ್ವಿಗೊಳಿಸುವುದರ ಮೂಲಕ
2). ಪ್ರಾದೇಶಿಕವಾಗಿ ವಿಬಿನ್ನವಾದ ಕಾರ್ಯಕ್ರಮಗಳನ್ನು ನಡೆಸುವುದರ ಮೂಲಕ
3). ಹಣದ ಆಸೆಗಾಗಿ ಕಾರ್ಯಕ್ರಮ ನಡೆಸುವುದರ ಮೂಲಕ.
4). ಸರ್ಕಾರದ ಹಣವನ್ನು ಸ್ವಾರ್ಥಕ್ಕೆ ಬಳಸಿಕೊಳ್ಳವುದರ ಮೂಲಕ

8. **Any Remarks** (ಯಾವುದೇ ಟೀಕೆಗಳು) :

## 3. ಕಾರ್ಯಕ್ರಮಗಳಿಗೆ ಭಾಗವಹಿಸಿದ ಜನರೊಂದಿಗೆ ಮಾಹಿತಿ ಪಡೆಯುವುದು.

1. **ಪ್ರತಿಕ್ರಿಯೆದಾರರ ಹೆಸರು**

1.1 **ಸಂಪರ್ಕ ಸಂಖ್ಯೆ** **1.2 ಲಿಂಗ: 1. ಪುರಷ 2. ಮಹಿಳೆ 3.ಇತರೆ**

1.3 **ವಿದ್ಯಾರ್ಹತೆ** **1.4. ವಯಸ್ಸು :**

1.5 **ಜಾತಿ:** **1.6 ಧರ್ಮ**

1.7 **ಸ್ಥಳ** **1.8 ತಾಲ್ಲೂಕು** **1.9 ಜಿಲ್ಲೆ**

2. **ಸಂಘ–ಸಂಸ್ಥೆಗಳು ನಡೆಸುವ ಕಾರ್ಯಕ್ರಮಗಳು ಎಂತಹ ಗುಣಮಟ್ಟವನ್ನು ಹೊಂದಿರುತ್ತವೆ?**
   1). ಒಳ್ಳೆಯ ಗುಣಮಟ್ಟವನ್ನು ಹೊಂದಿವೆ 2). ಸಾದಾರಣ ಗುಣಮಟ್ಟವನ್ನು ಹೊಂದಿವೆ
   3). ಏನೂ ಚೆನ್ನಾಗಿ ಇರುವುದಿಲ್ಲ 4). ಕಳಪೆ ಗುಣಮಟ್ಟವನ್ನು ಹೊಂದಿವೆ

3. **ಸಂಘ–ಸಂಸ್ಥೆಗಳು ಕಲೆ ಮತ್ತು ಸಂಸ್ಕೃತಿಯನ್ನು ಪ್ರತಿಬಿಂಬಿಸುವಂತಹ ಕಾರ್ಯಕ್ರಮಗಳನ್ನು ನಡೆಸಿರುತ್ತಾರೆಯೇ?**
   1). ಹೌದು 2). ಇಲ್ಲ 3) ಗೊತ್ತಿಲ್ಲ

4. **ಜಾನಪದಕಲೆಯ ಉಳಿವಿಗೆ ಸಂಘ–ಸಂಸ್ಥೆಗಳು ಶ್ರಮಿಸುತ್ತಿವಿಯೇ? ತಿಳಿಸಿ.**
   1). ಶ್ರಮಿಸುತ್ತಿವೆ 2). ಅನುದಾನಕ್ಕಾಗಿ ಮಾತ್ರ 3). ಸಂಘ–ಸಂಸ್ಥೆಗಳ ಉಳಿವಿಗೆ. 4). ಶ್ರಮಿಸುವುದಿಲ್ಲ

5. **ಸಂಘ–ಸಂಸ್ಥೆಗಳು ಹಣವನ್ನು ಕಾರ್ಯಕ್ರಮಗಳಿಗೆ ಸದ್ಬಳಕೆ ಮಾಡಿಕೊಂಡಿದ್ದಾರೆಯೇ.?**
   1). ಹೌದು, ಬಳಸಿಕೊಂಡಿದ್ದಾರೆ. 2). ಒಳ್ಳೆಯದಕ್ಕೆ ಹಣ ಬಳಕೆಯಾಗಿದೆ.ಇಲ್ಲ,
   3). ಅಲ್ಪ– ಸ್ವಲ್ಪ ಹಣ ಸದ್ಬಳಕೆಯಾಗಿದೆ ಅಷ್ಟೇ. 4) ನಾಮಕಾವಸ್ತೆಗಾಗಿ ಕಾರ್ಯಕ್ರಮ ನಡೆಸಿರುತ್ತಾರೆ.

6. **Any Remarks** (ಯಾವುದೇ ಟೀಕೆಗಳು):

## 4. ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಸಂಬಂಧಿಸಿದ ಅಧಿಕಾರಿಗಳ ಜೊತೆ ಮಾಹಿತಿ ಸಂಗ್ರಹಿಸಲು ಸಿದ್ಧಪಡಿಸಿದ ಪ್ರಶ್ನಾವಳಿ

| | | |
|---|---|---|
| 1. | **ಪ್ರತಿಕ್ರಿಯೆದಾರರ ಹೆಸರು** | |
| 1.1 | **ಸಂಪರ್ಕ ಸಂಖ್ಯೆ** | **ಮೊಬೈಲ್ ನಂ;** |
| 1.2 | **ವಿದ್ಯಾರ್ಹತೆ** | |
| 1.3 | **ಜಾತಿ/ಧರ್ಮ** | |
| 1.4 | **ಸ್ಥಳ** | |
| 1.5 | **ತಾಲ್ಲೂಕು** | |
| 1.6 | **ಜಿಲ್ಲೆ** | |
| 2. | **ಪದನಾಮ** | |
| 3. | **ಕಲಾ ಪ್ರಕಾರ ಸಾಮಾನ್ಯ, ವಿಶೇಷ ಘಟಕ ಯೋಜನೆ, ಗಿರಿಜನ ಉಪಯೋಜನೆಯ ಅಡಿಯಲ್ಲಿ ಕಾರ್ಯಕ್ರಮಗಳನ್ನು ನಡೆಸಲು ಎಂತಹ ಸಂಘ–ಸಂಸ್ಥೆಗಳಿಗೆ ಹಣವನ್ನು ನೀಡುತ್ತೀರಾ?** | |
| | 1). ಕಲೆ, ಸಾಹಿತ್ಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸಲು ಹುಟ್ಟಿಕೊಂಡಂತಹ ಸಂಘ– ಸಂಸ್ಥೆಗಳಿಗೆ<br>2). ವಿವಿಧ ಉದ್ದೇಶಗಳಿಗೆ ಹುಟ್ಟಿಕೊಂಡಂತಹ ಸಂಘ–ಸಂಸ್ಥೆಗಳಿಗೆ<br>3). ಖಾಸಗಿಯಾಗಿ ಹುಟ್ಟಿಕೊಂಡಂತಹ ಸಂಘ–ಸಂಸ್ಥೆಗಳಿಗೆ<br>4). ಟ್ರಸ್ಟಿನ ಹೆಸರು ಬಳಸಿಕೊಂಡು ವ್ಯಕ್ತಿಯೊಬ್ಬ ಸಾರ್ವಜನಿಕವಾಗಿ ನಡೆಸಿದಂತಹ ಕಾರ್ಯಕ್ರಮಗಳನ್ನು ಪರಿಗಣಿಸಿ. | |
| 4. | **ಸಾಮಾನ್ಯ ಯೋಜನೆ, ವಿಶೇಷ ಘಟಕ, ಗಿರಿಜನ ಉಪಯೋಜನೆಯ ಮೂಲ ಉದ್ದೇಶವೇನು?** | |
| | 1). ದೇಶಿ ಸಂಸ್ಕೃತಿಯನ್ನು ಉಳಿಸಿ ಬೆಳಸಿ, ಇನ್ನೂ ಉನ್ನತ ಮಟ್ಟಕ್ಕೆ ತೆಗೆದುಕೊಂಡು ಹೋಗುವ ಉದ್ದೇಶ.<br>2) ಕಲಾವಿಧರ ಕಲೆಗೆ ಹೆಚ್ಚು ಒತ್ತು ಕೊಟ್ಟು ಅವರಿಗೆ ಹೆಚ್ಚಿನ ಆರ್ಥಿಕ ಸೌಲಭ್ಯ ದೊರಕಿಸಿಕೊಡುವ ಉದ್ದೇಶ.<br>3). ಜಾನಪದ ಕಲಾಪ್ರಕಾರಗಳು ನಶಿಸಿ ಹೋಗದಂತೆ ನೋಡಿಕೊಂಡು ಮುಂದಿನ ಪೀಳಿಗೆಗೆ ಉಳಿಸಿಕೊಂಡು ಹೋಗುವ ಉದ್ದೇಶಕ್ಕಾಗಿ.<br>4). ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಎಲ್ಲಾ ಜಾತಿವರ್ಗದವರಿಗೆ ನೀಡುವ ಪ್ರೋತ್ಸಹಧನ ಸಮಾನವಾಗಿ ಸಿಗಲಿ ಎನ್ನುವ ಉದ್ದೇಶಕ್ಕಾಗಿ. | |
| 5. | **ಸಂಘ–ಸಂಸ್ಥೆಗಳಲ್ಲಿ ಎಂತಹ ಬದಲಾವಣೆಯನ್ನು ನೀವು ಗುರುತಿಸಿ ಪ್ರೋತ್ಸಾಹ ನೀಡಿರುತ್ತೀರಾ.?** | |
| | 1). ತುಂಬಾ ಜವಾಬ್ದಾರಿಯಿಂದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿರುವುದನ್ನು ಗುರುತಿಸಿ.<br>2). ಕಲಾವಿಧರನ್ನು ಗೌರವದಿಂದ ಕಂಡು ಅವರಿಗೆ ಧನ ಸಹಾಯ ನೀಡಿರುವುದನ್ನು ಗುರುತಿಸಿ.<br>3). ಜಾನಪದ ಕಲಾ ಪ್ರಕಾರಗಳಿಗೆ ಹೆಚ್ಚಿನ ಆದ್ಯತೆ ಕೊಟ್ಟಿರುವುದನ್ನು ಗುರುತಿಸಿ.<br>4). ಪ್ರೇಕ್ಷಕರನ್ನು ಗಮನದಲ್ಲಿಟ್ಟುಕೊಂಡು ಕಾರ್ಯಕ್ರಮಗಳನ್ನು ಬಿತ್ತರಿಸುವುದನ್ನು ಗುರುತಿಸಿ. | |
| 6. | **ಕೆಲವು ಸಂಘಟನೆಗಳು ಹಲವು ಕಾರ್ಯಕ್ರಮಗಳನ್ನು ವರ್ಷ ಪೂರ್ತಿ ಬೇರೆಯವರಿಗಿಂತ ಹೆಚ್ಚಾಗಿ ಮಾಡುತ್ತಾರೆ. ಹಾಗಾದರೆ, ನೀವು ಇಂತಹ ಸಂಘ–ಸಂಸ್ಥೆಗಳಿಗೆ ಯಾವಾಗ ಪ್ರೋತ್ಸಾಹ ಧನ ನೀಡುತ್ತೀರಾ?**<br>1). ಇಂತಹ ಸಂಘಟನೆಗಳು ವರ್ಷದಲ್ಲಿ ಯಾವಾಗ ಕೇಳಿದರು ಪ್ರೋತ್ಸಾಹ ಧನ ನೀಡಲು ಬಯಸುತ್ತೇವೆ. | |
| | 2). ನಾವು ಅರ್ಜಿಯನ್ನು ಕರೆದಾಗ ಯಾರು ಅರ್ಜಿಯನ್ನು ಸಲ್ಲಿಸಿರುತ್ತಾರೋ ಅಂತಹ ಸಂಘ–ಸಂಸ್ಥೆಗಳಿಗೆ ಮಾತ್ರ ಪ್ರೋತ್ಸಾಹ ಧನ ನೀಡುತ್ತೇವೆ.<br>3). ವಿಶೇಷ ಸಂಘ–ಸಂಸ್ಥೆಗಳೆಂದು ಪರಿಗಣಿಸಿ ಅವುಗಳಿಗೆ ತಕ್ಷಣವೇ ಪ್ರೋತ್ಸಾಹ ಧನ ನೀಡುತ್ತೇವೆ.<br>4). ಮಾರ್ಗಸೂಚಿ ಪ್ರಕಾರ ಈ ಸಂಸ್ಥೆಗಳು ಅರ್ಹತೆ ಹೊಂದಿದ್ದರೆ ಅಂತಹ ಸಂಸ್ಥೆಗಳಿಗೆ ಪ್ರೋತ್ಸಾಹ ಧನ | |

| | | |
|---|---|---|
| 7. | **ಕೆಲವು ಸಂಘ-ಸಂಸ್ಥೆಗಳು ಯಾವುದೇ ಕಾರ್ಯಕ್ರಮಗಳನ್ನು ಮಾಡಿರುವುದಿಲ್ಲ, ಆದರೆ ಆ ಸಂಘ-ಸಂಸ್ಥೆಗಳು ಒಳ್ಳೆಯ ಸಾಮರ್ಥ್ಯ ಹೊಂದಿ ದೊಡ್ಡ ಹೆಸರು ಮಾಡಿರುತ್ತವೆ. ಇಂತಹ ಸಂಸ್ಥೆಗಳಿಗೆ ನೀವು ಪ್ರೋತ್ಸಾಹ ನೀಡಲು ಮುಂದೆ ಬರುತ್ತೀರಾ?**<br>1). ನಮ್ಮ ಮಾರ್ಗಸೂಚಿ ಪ್ರಕಾರ ಇಂತಹ ಸಂಸ್ಥೆಗಳು ಅರ್ಹತೆ ಹೊಂದಿದ್ದರೆ ಮಾತ್ರ ಪರಿಗಣಿಸುತ್ತೇವೆ.<br>2). ಆ ಸಂಸ್ಥೆಯ ಇನ್ನಿತರ ಸಾಮರ್ಥ್ಯವನ್ನು ಪರಿಗಣಿಸಿ ಪ್ರೋತ್ಸಾಹ ನೀಡುತ್ತೇವೆ.<br>3) ಯಾವುದೇ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಮಾಡದೇ ಇದ್ದ ಪಕ್ಷದಲ್ಲಿ ಅಂತಹ ಸಂಸ್ಥೆಗಳನ್ನು ಪರಿಗಣಿಸುವುದಿಲ್ಲ<br>4). ಆ ಸಂಸ್ಥೆ ಎಂತಹ ಸಾಮರ್ಥ್ಯ ಹೊಂದಿದ್ದರೂ ಅದು ಇಲ್ಲಿ ಗೌಣವಾಗುತ್ತದೆ. | |
| 8. | **ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿನ ಇಂತಹ ಯೋಜನೆಗಳ ಲಾಭವನ್ನು ಪಡೆಯುವುದಕ್ಕಾಗಿಯೇ ಕೆಲವು ಸಂಘ-ಸಂಸ್ಥೆಗಳು ಹುಟ್ಟಿಕೊಂಡಿವೆ. ಹಾಗಾದರೆ, ಯಾವ ಜಿಲ್ಲೆಯಲ್ಲಿ ಇಂತಹ ಸಂಘ-ಸಂಸ್ಥೆಗಳು ಅತಿ ಹೆಚ್ಚು ಇವೆ? ಕ್ರಮವಾಗಿ ತಿಳಿಸಿ.** | |
| | 1). | ಸಂಖ್ಯೆ: |
| | 2). | ಸಂಖ್ಯೆ: |
| | 3). | ಸಂಖ್ಯೆ: |
| | 4). | ಸಂಖ್ಯೆ: |
| 9. | **ನೀವು ವರ್ಷದಲ್ಲಿ ಸರಾಸರಿ ಎಷ್ಟು ಸಂಘ-ಸಂಸ್ಥೆಗಳಿಗೆ ಪ್ರೋತ್ಸಾಹ ಧನ ನೀಡುತ್ತಾ ಬಂದಿದ್ದೀರಾ?:**<br>1). 01 ರಿಂದ 100 2). 101 ರಿಂದ 150 3). 151 ರಿಂದ250 4). 251 ಕ್ಕಿಂತ ಅಧಿಕ | |
| 10. | **ಸಂಘ-ಸಂಸ್ಥೆಗಳು ಅದರ ಕಾರ್ಯಕ್ರಮದ ವರದಿಯನ್ನು ತಯಾರಿಸಿ ಸಂಬಂಧಿಸಿದ ಅಧಿಕಾರಿಗಳಿಗೆ ಕಳುಹಿಸುತ್ತಾರೆ.ಆ ವರದಿಯ ಮೇಲೆ ನೀವು ಯಾವ ರೀತಿಯ ಕ್ರಮವನ್ನು ತೆಗೆದುಕೊಳ್ಳುತ್ತೀರಾ?**<br>1). ನಮ್ಮ ಮಾರ್ಗಸೂಚಿಯ ಪ್ರಕಾರ ವರದಿ ಸರಿ ಇತ್ತು ಅಂದರೆ ಒಪ್ಪಿಕೊಳ್ಳುವುದು.<br>2). ವರದಿ ಸರಿ ಇರಲಿಲ್ಲ ಎಂದು ಗಮನಕ್ಕೆ ಬಂದರೆ ತಿರಸ್ಕರಿಸುವುದು.<br>3). ಪುನಃ ಮತ್ತೊಮ್ಮೆ ವರದಿ ತಯಾರಿಸಿ ಸಲ್ಲಿಸುವದಕ್ಕೆ ಸಲಹೆ ನೀಡುವುದು.<br>4). ಕಪ್ಪು ಪಟ್ಟಿಯಲ್ಲಿ ಸೇರಿಸುವುದು. | |
| 11. | **ನೀವು ಆಯ್ಕೆ ಮಾಡಿರುವ ಸಂಘ-ಸಂಸ್ಥೆಗಳಲ್ಲಿ ಎಷ್ಟು ಸಂಘ-ಸಂಸ್ಥೆಗಳ ಮೇಲೆ ದೂರು ಸ್ವೀಕರಿಸಿದ್ದೀರಾ?: ನಂ:.________** | |
| | 1). 01 ರಿಂದ 50 2). 51 ರಿಂದ 100 3). 101 ರಿಂದ 150 4). 151 ಕ್ಕಿಂತ ಅಧಿಕ. | |
| 12. | **ಸಂಘ-ಸಂಸ್ಥೆಗಳ ಮೇಲೆ ಮಾಹಿತಿ ಹಕ್ಕಿನ ಅಡಿಯಲ್ಲಿ ಕಳೆದ ಈ ಮೂರು ವರ್ಷದಲ್ಲಿ ಎಷ್ಟು ಅರ್ಜಿಗಳನ್ನು ಜಿಲ್ಲೆಗಳಿಂದ ಸ್ವೀಕರಿಸಿದ್ದೀರಾ? ಕ್ರಮವಾಗಿ ತಿಳಿಸಿ. ____________________** | |
| | 1).50 ರಿಂದ 100 2).51 ರಿಂದ 75 3).76 ರಿಂದ 100 4).101 ಕ್ಕಿಂತ ಅಧಿಕ. | |
| 13. | **ನೀವು ಎಂತಹ ಸವಾಲುಗಳನ್ನ ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ಎದುರಿಸಿದ್ದೀರಾ?** | |
| | 1).ಸಂಘ-ಸಂಸ್ಥೆಗಳ ಅಧಿಕಾರಿಗಳ ಒತ್ತಡ 2).ಸ್ಥಳೀಯ ರಾಜಕಾರಿಣಿಗಳ ಒತ್ತಡ 3).ಕಲಾವಿಧರ ಒತ್ತಡ 4).ಮೇಲಿನ ಎಲ್ಲವೂ | |
| 14. | **ಶೇಕಡಾವಾರು ಎಷ್ಟು ಸಂಘ-ಸಂಸ್ಥೆಗಳು ಪುನಃ ಲಾಭವನ್ನು ಪಡೆದುಕೊಂಡಿವೆ? ತಿಳಿಸಿ. ನಂಬರ್‌ಗಳು ____________________** | |
| | 1). ಶೇಕಡಾವಾರು 10 ರಿಂದ 20 2). ಶೇಕಡಾವಾರು 21 ರಿಂದ 30<br>3). ಶೇಕಡಾವಾರು 31 ರಿಂದ 40 4). ಶೇಕಡಾವಾರು 41 ರಿಂದ 50 | |
| 15. | **ನೀವು ಸಂಘ-ಸಂಸ್ಥೆಗಳಿಗೆ ಪ್ರತಿ ವರ್ಷ ಇಂತಹ ಕಾರ್ಯಕ್ರಮ ನಡೆಸಬೇಕೆಂದು ಮುಚ್ಚಳಿಕೆ ಬರೆಸಿಕೊಳ್ಳುತ್ತೀರಾ? ತಿಳಿಸಿ.** | |
| | 1). ಹೌದು 2).ಇಲ್ಲ | |
| 16. | **ನಿಮ್ಮ ಇಲಾಖೆಯಿಂದ ಧನ ಸಹಾಯ ಪಡೆಯುವ ಸಂಘ-ಸಂಸ್ಥೆಗಳು ಯಾವ ಅಧಿನಿಯಮದಡಿ ನೋಂದಣಿ ಮಾಡಿಕೊಂಡಿವೆ.** | |
| | 1). ಕರ್ನಾಟಕ ಸಹಕಾರ-ಸಂಘಗಳ 1960ರ ಅಧಿನಿಯಮದ ಅಡಿ 2). ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿಯಮದ ಅಡಿ<br>3). ಖಾಸಗಿಯಾಗಿ ನೋಂದಣಿ ಮಾಡಿರುವುದು 4). ಟ್ರಸ್ಟ್ ಕಾಯ್ದೆಯ ಅಡಿ ನೋಂದಣಿ ಮಾಡಿಸಿರುವುದು | |
| 17. | **ನೀವು ಇಲಾಖೆಯಿಂದ ಸಂಘ-ಸಂಸ್ಥೆಗಳಿಗೆ ಧನ ಸಹಾಯ ನೀಡುವಾಗ ಯಾವ ರೀತಿಯ ಮಾನದಂಡವನ್ನು ಅನುಸರಿಸುತ್ತೀರಾ?** | |
| | 1). ಸಂಘ-ಸಂಸ್ಥೆಗಳ ನೋಂದಣಿ ಪರಿಶೀಲಿಸುವುದು 2). ಸಂಘ-ಸಂಸ್ಥೆಗಳ ಕಾರ್ಯಕ್ರಮಗಳ ಪರಿಶೀಲನೆ<br>3). ಗುಣಾತ್ಮಕ ಕಾರ್ಯಕ್ರಮಗಳ ಪರಿಶೀಲನೆ 4). ಈ ಮೇಲಿನ ಎಲ್ಲವುಗಳು | |
| 18. | **ಯೋಜನೆಯ ಉದ್ದೇಶ ಈಡೇರಿದೆಯೇ ಅಥವಾ ಇಲ್ಲವೇ ಎಂಬುದನ್ನು ನೀವು ಹೇಗೆ ತಿಳಿದುಕೊಳ್ಳುತ್ತೀರಾ?** | |

| | |
|---|---|
| | 1). ಕಾರ್ಯಕ್ರಮದ ಬಗ್ಗೆ ಪ್ರೇಕ್ಷಕರಿಂದ ಪ್ರತಿಕ್ರಿಯೆ ಸಂಗ್ರಹಿಸುವುದು<br>2). ಕಾರ್ಯಕ್ರಮ ಯಶಸ್ವಿಯಾಗಿರುವುದರ ಬಗ್ಗೆ ಆಯೋಜಕರಿಂದ ಸ್ಪಷ್ಟೀಕರಣ ಪಡೆದುಕೊಳ್ಳುವುದು<br>3). ಇಲಾಖೆಯ ವತಿಯಿಂದ ಒಬ್ಬ ಪ್ರತಿನಿಧಿಯನ್ನು ಕಾರ್ಯಕ್ರಮಕ್ಕೆ ಕಳುಹಿಸಿಕೊಡುವುದು.<br>4). ಮೂಲ ಉದ್ದೇಶಗಳ ಪರಿಶೀಲನೆ ಮಾಡುವುದು |
| 19. | **ಈ ಯೋಜನೆಯನ್ನು ಇನ್ನೂ ಉತ್ತಮ ಮಟ್ಟದಲ್ಲಿ ತೆಗೆದುಕೊಂಡು ಹೋಗಬೇಕೆಂದು ನಿಮಗೆ ಅನ್ನಿಸಿದರೆ ಏನು ಮಾಡುತ್ತೀರಾ?**<br>1). ಹೆಚ್ಚಿನ ಹಣಕಾಸು ನೆರವು ನೀಡುವುದು 2). ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹೆಚ್ಚಿನದಾಗಿ ಬೆಳಸುವುದು<br>3). ಸೃಜನಶೀಲತೆಗೆ ಹೆಚ್ಚಿನ ಸಹಕಾರ ನೀಡುವುದು 4). ಅಧಿಕಾರಿಗಳಿಗೆ ಸಂಪೂರ್ಣ ಸ್ವತಂತ್ರ ನೀಡುವುದು |
| 20. | **ಸಂಘ–ಸಂಸ್ಥೆಗಳು ಕಾರ್ಯಕ್ರಮ ಆಯೋಜಿಸುವಲ್ಲಿ ಸಾಂಸ್ಕೃತಿಕವಾಗಿ ಎಂತಹ ವಿಚಾರಗಳ ಕಡೆ ಹೆಚ್ಚಿನ ಆದ್ಯತೆ ನೀಡುತ್ತಿವೆ?** |
| | 1). ಪ್ರಾದೇಶಿಕ ಜಾನಪದ ಪ್ರಕಾರಗಳಿಗೆ ಹೆಚ್ಚಿನ ಆದ್ಯತೆ |
| | 2). ಸಂಘ–ಸಂಸ್ಥೆಗಳು ಕೇಳಿರುವ ಕಾರ್ಯಕ್ರಮಗಳನ್ನು ಒಪ್ಪಿಕೊಳ್ಳುವುದು |
| | 3). ಇಲಾಖೆಯೇ ಇಂತಹ ಕಾರ್ಯಕ್ರಮ ಮಾಡಿ ಅಂತ ಹೇಳುವುದು |
| | 4). ಯೋಜನೆಯ ಅಡಿಯಲ್ಲಿ ಇರುವ ಯಾವುದಾದರು ಒಂದು ಕಾರ್ಯಕ್ರಮ ನಡೆಸಲು ಹೇಳುವುದು. |
| 21. | **ಇಲಾಖೆಯ ಕಡೆಯಿಂದ ಕೆಳಗಿನವುಗಳಲ್ಲಿ ಯಾವ ಕಾರ್ಯಕ್ರಮಕ್ಕೆ ಮೊದಲು ಆದ್ಯತೆ ನೀಡುತ್ತೀರಾ? ಶ್ರೇಣಿ** |
| | 1).ಸಂಗೀತ :<br>2).ನೃತ್ಯ :<br>3).ಯಕ್ಷಗಾನ :<br>4).ಜಾನಪದ ನೃತ್ಯ :<br>5).ಇತರೆ (ತಿಳಿಸಿ) |
| 22. | **ಇಲಾಖೆಯ ಅಧಿಕಾರಿಗಳಾಗಿ ಕೆಳಗಿನವುಗಳಲ್ಲಿ ಯಾವುದನ್ನು ಹೆಚ್ಚಿನದಾಗಿ ಪರಿಗಣಿಸುತ್ತೀರಾ?** |
| | 1).ಚಿತ್ರಕಲೆ 2).ಶಿಲ್ಪಕಲೆ 3).ಸೃಜನಶೀಲವಾದ ಕಲಾತ್ಮಕ ರಚನೆ 4).ವ್ಯಂಗ್ಯ ಚಿತ್ರಕ್ಕೆ 5). ಇತರೆ (ತಿಳಿಸಿ) |
| 23. | **ನೀವು ನೀಡಿರುವ ಧನಸಹಾಯವನ್ನು ಸಂಘ–ಸಂಸ್ಥೆಗಳು ಹೇಗೆ ಬಳಸಿರುತ್ತಾರೆ?** |
| | 1). ನಗದು ವ್ಯವಹಾರ 2). ಚೆಕ್ ಮೂಲಕ ವಿತರಣೆ<br>3). ಒಂದೇ ಚೆಕ್‌ನಲ್ಲಿ ಹಣ ಡ್ರಾ ಮಾಡಿ ನಗದು ವ್ಯವಹಾರ 4). ಕೆಲವುಕಡೆ ಚೆಕ್ ಬಳಕೆ, ಇನ್ನು ಕೆಲವುಕಡೆ ನಗದು ವ್ಯವಹಾರ |
| 24. | **ಸಂಘ – ಸಂಸ್ಥೆಗಳು ನಿಮ್ಮ ಇಲಾಖೆಯಿಂದ ಹಣ ಪಡೆದ ಮೇಲೆ ಮೂರು ತಿಂಗಳೊಳಗೆ ಹಣ ಬಳಕೆಯ ಪ್ರಮಾಣಪತ್ರ ನೀಡಬೇಕು ಎಂದು ನಿಯಮ ಇದೆ. ಸಾಮಾನ್ಯವಾಗಿ ಹೇಗೆ ನೀಡಿದ್ದಾರೆ?** |
| | 1). ಮೂರು ತಿಂಗಳೊಳಗೆ 2). ಮೂರು ತಿಂಗಳಾದ ಮೇಲೆ<br>3). ಕಾರ್ಯಕ್ರಮ ಮುಗಿದು ಒಂದು ತಿಂಗಳೊಳಗೆ 4). ನೀಡದೆ ಇರುವವರು 5). ಎಲ್ಲಾ ತರಹ |
| 25. | **ಮೂರು ತಿಂಗಳಾದರೂ ಹಣ ಬಳಕೆಯ ಪ್ರಮಾಣ ಪತ್ರ ನೀಡದೆ ಇದ್ದವರ ಮೇಲೆ ಏನು ಕಾನೂನು ಕ್ರಮ ತೆಗೆದುಕೊಂಡಿದ್ದೀರಾ?** |
| | 1). ಹಣ ಹಿಂತಿರುಗಿಸು ತಿಳಿಸುವುದು 2). ಸ್ವಲ್ಪ ಸಮಯಾವಕಾಶ ನೀಡುವುದು<br>3). ದೂರು ನೀಡುವುದು. 4). ನಿಮ್ಮ ಇಲಾಖೆಯ ಮೇಲಿನ ಅಧಿಕಾರಿಗಳ ಗಮನಕ್ಕೆ ತರುವುದು |
| 26. | **ನಿಮ್ಮ ಇಲಾಖೆಯ ಅಡಿಯಲ್ಲಿ, ಹಣ ಪಡೆದ ಸಂಸ್ಥೆಗಳಲ್ಲಿ ಎಷ್ಟು ಸಂಸ್ಥೆಗಳು ಸರಿಯಾದ ಸಮಯಕ್ಕೆ ಹಣ ಬಳಕೆಯ ಪ್ರಮಾಣ ಪತ್ರ ಮತ್ತು ಲೆಕ್ಕ ಪರಿಶೋಧಕ ಪತ್ರ ನೀಡಿರುತ್ತಾರೆ. : ನಂಬರ್‌ಗಳು** |
| | 1). 01 ರಿಂದ 25 2). 25 ರಿಂದ 50 3). 50 ರಿಂದ 75 4). 75 ರಿಂದ 100 |
| 27. | **ಕರ್ನಾಟಕ ಸಹಕಾರ–ಸಂಘಗಳ ಅಧಿನಿಯಮದಡಿ ನೋಂದಣೆ ಮಾಡಿಸಿಕೊಂಡಿರುವ ಸಂಸ್ಥೆಗಳೆಲ್ಲವನ್ನು ಪರಿಗಣನೆಗೆ ತೆಗೆದುಕೊಳ್ಳುವಾಗ ಯಾವ ಮಾನದಂಡವನ್ನು ಅನುಸರಿಸುತ್ತೀರಾ?** |
| | 1). ಅಧಿಕಾರಿಗಳು ಮತ್ತು ರಾಜಕಾರಣಿಗಳ ಪ್ರಭಾವ 2). ಮೊದಲು ಅರ್ಜಿಸಲ್ಲಿಸಿದವರಿಗೆ ಹೆಚ್ಚಿನ ಆದ್ಯತೆ<br>3). ಹಿರಿಯತನದ ಸದಸ್ಯತ್ವದ ಆಧಾರದ ಮೇಲೆ<br>4). ಹಿರಿಯ ಕಿರಿಯ ಎನ್ನುವ ಬೇದವಿಲ್ಲದೆ ಎಲ್ಲಾ ಸಂಘಸಂಸ್ಥೆಗಳನ್ನು ಆಯಾ ವರ್ಷಕ್ಕೆ ಪರಿಗಣಿಸುವುದು 5). ಇತರೆ |

| | |
|---|---|
| 28. | **ಹಲವು ವರ್ಷಗಳಿಂದ ಈ ಯೋಜನೆ ಜಾರಿಯಲ್ಲಿರುವುದರಿಂದ ಈ ಯೋಜನೆಯ ಅನುಕೂಲವನ್ನು ಪಡೆದುಕೊಂಡಿರುವ ಸಂಘ-ಸಂಸ್ಥೆಗಳ ಶ್ರೇಷ್ಟತೆ ಮತ್ತು ಗುಣಮಟ್ಟದ ಆಧಾರದ ಮೇಲೆ ಸಂಘ-ಸಂಸ್ಥೆಗಳ ಪಟ್ಟಿಯನ್ನು ತಯಾರಿಸಿದ್ದೀರಾ?**<br>1. ಹೌದು 2. = ಇಲ್ಲ |
| | **28.1. ಹೌದಾದರೆ :ಅದು ಯಾವ ರೀತಿ?** |
| | 1). ಜೇಷ್ಠತೆಯ ಆಧಾರದ ಮೇಲೆ 2). ಗುಣಮಟ್ಟದ ಆಧಾರದ ಮೇಲೆ<br>3). ಅವುಗಳ ಕಾರ್ಯವೈಖರಿಯ ಮೇಲೆ 4). ಸಾರ್ವಜನಿಕರ ಅಭಿಪ್ರಾಯದ ಆಧಾರದ ಮೇಲೆ |
| 29. | **ಸಂಘ-ಸಂಸ್ಥೆಗಳಿಗೆ ಒಂದೇ ವರ್ಷದಲ್ಲಿ ಎರಡು ಬಾರಿ ಪ್ರೋತ್ಸಾಹ ಧನವನ್ನು ನೀಡಿದ್ದರೆ ಯಾವ ಉದ್ದೇಶದಿಂದ ನೀಡಿದ್ದೀರಿ?** |
| | 1). ಅಧಿಕಾರಿಗಳ ಒತ್ತಡಕ್ಕೆ ಮಣಿದು 2). ಸಂಘ-ಸಂಸ್ಥೆಯ ಕಾರ್ಯಕ್ರಮಗಳನ್ನು ಮೆಚ್ಚಿ<br>3). ಕಲಾವಿಧರ ಹಿತದೃಷ್ಟಿಯಿಂದ 4). ಸಾಂಸ್ಕೃತಿಕ ಕಾರ್ಯಕ್ರಮಗಳ ಮೇಲಿನ ಪ್ರೀತಿಯಿಂದ |
| 30. | **ಸರ್ಕಾರದಿಂದ ನಾಮ ನಿರ್ದೇಶಿತಗೊಂಡ ಸದಸ್ಯರುಗಳು, ಸಂಘ-ಸಂಸ್ಥೆ ಟ್ರಸ್ಟ್‌ಗಳ ಸದಸ್ಯತ್ವ ಹೊಂದಿ ಪ್ರೋತ್ಸಾಹ ಧನ ಪಡೆದಿದ್ದಾರೆ ಎನ್ನುವ ಮಾಹಿತಿ ಇದೆಯೇ?** |
| | 1). ಹೌದು 2). ಇಲ್ಲ |
| 30.1 | **ಸಂಘ-ಸಂಸ್ಥೆಗಳು ಸುಳ್ಳು ಮಾಹಿತಿ ನೀಡಿ ಕಾರ್ಯಕ್ರಮ ಆಯೋಜಿಸದೆ ಹಣವನ್ನು ದುರುಪಯೋಗ ಮಾಡಿಕೊಂಡಿರುವುದರ ಬಗ್ಗೆ ಮಾಹಿತಿ ಬಂದರೆ ಏನು ಮಾಡುತ್ತೀರಾ?** |
| | 1). ಮಂಜೂರು ಮಾಡಿದ ಹಣವನ್ನು ಹಿಂದಕ್ಕೆ ಪಡೆಯುವುದು 2). ಅಂಥ ಸಂಸ್ಥೆಗಳನ್ನು ಮುಂದಿನ ದಿನಗಳಲ್ಲಿ ತಿರಸ್ಕರಿಸುವುದು<br>3). ಆರಕ್ಷಕ ಠಾಣೆಯಲ್ಲಿ ದೂರು ದಾಖಲಿಸುವುದು 4). ಕಪ್ಪು ಪಟ್ಟಿಯಲ್ಲಿ ಸೇರಿಸುವುದು |
| 31. | **ಸಂಘ-ಸಂಸ್ಥೆಗಳು ಏರ್ಪಡಿಸಿರುವ ಕಾರ್ಯಕ್ರಮಗಳಿಗೆ ಕಲಾವಿದರು ಭಾಗವಹಿಸುತ್ತಾರೆ. ಅವರಿಗೆ ಆತಿಥ್ಯ ವ್ಯವಸ್ಥೆ ನೀಡಿರುವುದಿಲ್ಲವೆಂಬ ಮಾಹಿತಿ ಇದೆ. ಅದಕ್ಕೆ ನೀವು ಯಾವ ಕ್ರಮ ಕೈಗೊಂಡಿದ್ದೀರಾ?** |
| | 1). ಕಲಾವಿದರಿಗೆ ನೇರವಾಗಿ ಚೆಕ್ ಮೂಲಕ ಹಣ ಕೊಡಲು ಮಾಹಿತಿ ನೀಡಿರುತ್ತೇವೆ<br>2). ಊಟ-ವಸತಿಯನ್ನು ಕಲಾವಿದರಿಗೆ ನೀಡಬೇಕು 3). ಸಾರಿಗೆ-ವ್ಯವಸ್ಥೆ ಕಲ್ಪಿಸಬೇಕು 4). ಈ ಮೇಲಿನ ಎಲ್ಲವೂ |
| 32. | **ಕಾರ್ಯಕ್ರಮಕ್ಕೆ ಭಾಗವಹಿಸಿದ ಕಲಾವಿದರಿಗೆ ಗೌರವಧನ ನೀಡಿರುವುದಿಲ್ಲವೆಂಬುದರ ಬಗ್ಗೆ ದೂರುಗಳು ಏನಾದರು ಬಂದಿವೆಯಾ?**<br>1).ಹೌದು 2). ಇಲ್ಲ |
| 32.1 | **ಹೌದಾದರೆ- ಯಾವ ಕ್ರಮ ಕೈಗೊಂಡಿದ್ದೀರಾ?** |
| | 1). ಸಂಬಂಧಿಸಿದವರನ್ನು ಕರೆದು ಕಲಾವಿಧರಿಗೆ ಗೌರವ ಧನ ನೀಡಲು ಸಲಹೆ ನೀಡುತ್ತೇವೆ<br>2). ಮುಂದಿನ ಕಾರ್ಯಕ್ರಮಗಳಿಗೆ ಪರಿಗಣಿಸುವುದಿಲ್ಲ. 3). ಅವರ ನೋಂದಣಿಯನ್ನು ರದ್ದು ಮಾಡಿಸುತ್ತೇವೆ.<br>4). ಕಪ್ಪು ಪಟ್ಟಿಯಲ್ಲಿ ಸೇರಿಸುವುದು |
| 33. | **ಸಂಘ-ಸಂಸ್ಥೆಗಳು ಸರ್ಕಾರದಿಂದ ಪಡೆದ ಧನಸಹಾಯವನ್ನು ಕಲಾವಿದರು ಸಾಹಿತಿಗಳು ಮತ್ತು ಗಣ್ಯ ವ್ಯಕ್ತಿಗಳಿಗೆ ಸಂಭಾವನೆಯನ್ನು ಯಾವ ರೀತಿ ನೀಡಿದ್ದಾರೆ.** |
| | 1). ಚೆಕ್ ಮುಖಾಂತರ 2). ನಗದು ಮುಖಾಂತರ 3). ವಸ್ತುವಿನ ರೂಪದಲ್ಲಿ 4). ಯಾವುದು ಇಲ್ಲ |
| 34. | **ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಇಂತಹ ಕಾರ್ಯಕ್ರಮಗಳಿಗೆ ಹಣವನ್ನು ವೆಚ್ಚ ಮಾಡುವುದರಿಂದ ಏನಾದರೂ ಅಭಿವೃದ್ಧಿ ಕಾಣಲು ಸಾಧ್ಯವಾಗಿದೆಯೇ?** |
| | 1). ಸಾಂಸ್ಕೃತಿಕ ಬದಲಾವಣೆ 2). ಕಲಾವಿದರ ಉತ್ಸಾಹ ಹೆಚ್ಚಾಗಿದೆ<br>3). ಮೂಲ ಸಂಸ್ಕೃತಿಯ ಪ್ರತೀಕಗಳು ಉಳಿಯಲು ಸಾಧ್ಯವಾಗುತ್ತದೆ 4). ಈ ಮೇಲಿನ ಎಲ್ಲವೂ ಸೇರಿವೆ |
| 35. | **ಒಂದು ವೇಳೆ ಯೋಜನೆಗಳನ್ನು ಮುಂದುವರೆಸಬೇಕಾದರೆ ಯೋಜನೆಯಲ್ಲಿ ಅಳವಡಿಸಬೇಕಾದ ಹೊಸ ವಿಧಾನಗಳಾವುವು ತಿಳಿಸಿ?** |
| | 1). ಸರ್ಕಾರವು ಇನ್ನು ಹೆಚ್ಚಿನ ಹಣಬಿಡುಗಡೆ ಮಾಡಿ ಪ್ರೋತ್ಸಾಹಿಸಬೇಕು<br>2). ಸಂಘ-ಸಂಸ್ಥೆಗಳಿಗೆ ಉತ್ತೇಜನ ನೀಡಬೇಕಾಗುತ್ತದೆ 3). ಕಲಾವಿದರಿಗೆ ಹೆಚ್ಚಿನ ಆರ್ಥಿಕ ನೆರವು ನೀಡಬೇಕು<br>4). ಅಭಿವೃದ್ಧಿಯ ಹೆಸರಿನಲ್ಲಿ ಆಗುವಂತಹ ಅನಾಹುತವನ್ನು ತಡೆಗಟ್ಟಬೇಕು 5) ಇತರೆ (ತಿಳಿಸಿ) |

| | |
|---|---|
| 36. | **ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ನೀಡುವ ಹಣವನ್ನು ಸಂಘ–ಸಂಸ್ಥೆಗಳು ಪಡೆದು ಯಾವ ರೀತಿ ಸದ್ಬಳಕೆ ಮಾಡಿಕೊಂಡಿದ್ದಾರೆ ಎಂಬುದನ್ನು ಹೇಗೆ ಪತ್ತೆ ಹಚ್ಚುತ್ತೀರಾ ತಿಳಿಸಿ.**<br>1).ಸಂಘ–ಸಂಸ್ಥೆಗಳು ನೀಡಿದ ವರದಿಯ ಆಧಾರದ ಮೇಲೆ 2).ಲೆಕ್ಕಪರಿಶೋಧಕರ ವರದಿಯ ಆಧಾರದ ಮೇಲೆ<br>3).ಕಲಾವಿದರ ಅಭಿಪ್ರಾಯದ ಆಧಾರದ ಮೇಲೆ 4). ಮಾಧ್ಯಮಗಳು ನೀಡಿದ ವರದಿಯ ಆಧಾರದ ಮೇಲೆ |
| 37. | Any Remarks (ಯಾವುದೇ ಟೀಕೆಗಳು) |

# ಅನುಬಂಧ 3: ಕಾರ್ಯ ಕ್ಷೇತ್ರದ ಫೋಟೋಗಳು







Latitude: 13.332927
Longitude: 74.748648
Accuracy: 25.6m
Time: 07-31-2019 11:13
Note: 1
Powered by Notecam


Latitude: 13.341103
Longitude: 74.749533
Accuracy: 25.9m
Time: 07-29-2019 12:38
Note: 1
Powered by NoteCam





**2014–15 ರಿಂದ 2016–17 ನೇ ಸಾಲಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಸಾಹಿತ್ಯಪರ, ಸಾಂಸ್ಕೃತಿಕಪರ ಮತ್ತು ಕನ್ನಡಪರ ಕಾರ್ಯಕ್ರಮಗಳಿಗೆ ನೀಡಿದ ಪ್ರೋತ್ಸಾಹಧನವನ್ನು ಸಂಘಸಂಸ್ಥೆಗಳು ಸದ್ಬಳಕೆ ಮಾಡಿಕೊಂಡಿರುವುದರ ಬಗ್ಗೆ ಮೌಲ್ಯಮಾಪನ**

---


**ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ**
**#542 5ನೇ ಮಹಡಿ 2ನೇ ಹಂತ**
**ಡಾ. ಬಿ.ಆರ್ ಅಂಬೇಡ್ಕರ್ ವೀಧಿ**
**ಬಹುಮಹಡಿ ಕಟ್ಟಡ**
**ಬೆಂಗಳೂರು – 560 001**

**ಜಾಲತಾಣ: kmea.karnataka.gov.in**
**ದೂರವಾಣಿ ಸಂಖ್ಯೆ: 080 2203 2561**
**ಇ ಮೇಲ್ ಐಡಿ: keagok@karnataka.gov.in**